ಹಿಂದೂ ಆರ್ಯಸಂಘ ಪರಿಷ್ಕರಣ.

9

POST-PUBERTY MARRIAGE

OF

THE HINDU ARYAN WOMAN.

ಋತುಮತೀವಿವಾಹ.

Ritumati Vivaha

ಎಸ್. ವೆಂಕೋಬರಾವ್, ಬಿ. ಎ.

S. VENKOBA RAU, B.A.,

Mysore Medical Service.

MYSORE:

THE GRADUATES' TRADING ASSOCIATION PRESS.

1909

ಕ್ರಯ ೮ ಆಣೆ.

PRINTED BY J. M. MYSOREVALLA
AT THE G.T.A. PRINTING WORKS, MRSORE.

PREFACE.

In compliance with the author's request, I have proposed to write this preface by way of introducing to the public his treatise on "*Marriage of girls after puberty.*" His study, like my own, of the marriageable age of girls as laid down in the Shâstras was stimulated by the discussion of the subject in the Mysore Ârya-dharmojjîvinî Sabhâ about two years ago. The main results of his investigation are of the same tenor as those of mine presented in my "Vedic Law of Marriage," while his method of treatment, though slightly different, is in a way complementary to the one I have adopted. By insisting on a rigorous application of the recognised principles of Vedic Exegesis to the interpretation of the shàstric texts bearing on marriage, I have made out that the true law of marriage is the one embodied in the Vedic Mantras which constitute the scriptures of highest authority, and which clearly imply that woman as well as man should be married only after attaining the age of maturity when she may be able to realise the responsibilities of the householder's life, and capable, by previous training, of fully discharging the duties pertaining to it. By an exhaustive collation of the Shruti and the Smriti texts bearing on marriage, Mr. Venkoba Rao has shewn that it is the marriage of girls after puberty which is distinctly prescribed by scriptures of highest authority, and that, when all texts are duly considered, the marriage of girls after puberty has a decidedly greater support of authority than the

law of early marriage. He has, moreover, clearly stated, and satisfactorily answered from his own standpoint of view, all the objections which the modern orthodox upholders of early marriage with whom he has discussed the subject raised against the adult marriage of women. One merit of his treatise deserves notice: it is written, unlike most other treatises on the subject, in the vernacular of the province and is therefore likely to command a wider circle of readers among the people whom the subject of his treatment concerns most.

Those who have taken to a study of the Shâstras on the question of marriage are confronted with texts pointing both to the early marriage of girls and to the marriage of adult women. The Vedic Mantras used in connection with the marriage ritual, and the ritual itself as laid down in the Grihya Sûtras, clearly indicate that the ancient practice was to marry girls after puberty; whereas the Smritis, especially the later ones, specifically prescribe an early age before puberty as the marriageable age of girls. From these data of conflicting texts, several conclusions have been drawn :

(1) The Shruti and the Smriti being in conflict with each other regarding the marriageable age of girls and woman's status at the time of marriage and during her subsequent married life, the age of girls at the time of marriage and woman's status in married life are immaterial in the eye of the Shâstras. All that the Shâstras mean is that man and woman should lead a married life if, impelled by their natural instincts, they would come together for purposes of begetting children.

(2) The current law of early marriage laid down in the latest Smritis has been enjoined by sages who were masters of the Veda, and it must therefore be the one which is in accordance with the Veda. Though the Mantras apparently point to the adult marriage of women, still they must be interpreted in consonance with the law of early marriage. Such would be the true meaning of the Mantras, as sanctioned by sages.—This is the position of the modern so-called orthodox pandit.

(3) The Vedic Mantras and the marriage ritual laid down in the Grihya-Sûtras no doubt point to the ancient practice of adult marriage of women. It may be that at the time the sages thought that adult marriage of women was conducive to the best interests of the people. But later on, when the people have changed their modes of life, the sages in their wisdom have laid down in the modern Smritis laws suited to the present times and which cannot be changed without their sanction. No ordinary man of the world has any right to change the existing law. Sages alone can do so.

(4) The Shrutis and the Smritis are mere records of the customs and the laws which prevailed at the times to which they relate. As framed by ordinary leaders of society of the day, they might have held sway at the particular historical periods and among the particular communities concerned. One is not more binding upon us than another, on the ground of its being more ancient or modern. What is expedient for the time and seems conducive to social progress is the law which we should follow. There is no force in

the contention that we must be guided by the Shástras in these matters, or that what is laid down in the Vedas is, because of that fact, more binding on us than what is enjoined in the Smriti, when the latter happens to be in conflict with the former.

As against these conclusions, I maintain that if we would progress on right lines we should be guided by the laws laid down in the Vedas. The whole social fabric of the vast Hindu community rests on the wide foundations of the Shâstras, whereof the strongest part is the Veda. The genuine shâstras embody truths and laws whose wisdom is being daily demonstrated by the findings of the advancing modern science. We will not therefore be wise in wrenching our society away from its present foundations of a mighty antiquity which have stood the test of times and building it upon new foundations of our own laying. But what we call Shâstras are made up of texts of different values. The genuine portions of them embody truths and laws of highest value, which may justly claim to have been derived from the fountain source of Divine Wisdom ; while again there are spurious additions and interpolations fathered upon the sages of lofty wisdom, but clearly indicative of the prejudices and idiosyncrasies of their real unscrupulous authors and quite unworthy of the holy names of the sages to whom they are attributed. Such additions and interpolations are found both in the Shruti and the Smriti. The geniune texts in our scriptures can be surely recognised through their content, bearing their clear mark as records of truths which the sages saw with their unprejudiced and unsophisticated minds, having no previously

settled dogmas to uphold. Most of the *Mantras* connected with the marriage ritual are genuine, and in the form of these *mantras* the Rishis and other lofty beings, our ancient law-givers, gave utterance to the aspirations of the Aryan race and the laws as to the mode of life which the Aryan man and woman should lead as married householders. It is from these *mantras* that we should derive for our guidance the laws of marriage and married life, if we would fulfil the destiny marked out for the Aryan race by its pioneer leaders of far-reaching divine wisdom. Any law or custom which conflicts with these laws should be set aside as un-shâstric and therefore unwholesome.

The genuine laws of marriage, which are also the most rational as agreeing with the facts and laws of nature we know of, are those embodied in the Vedic Mantras, which must be understood in their natural sense, not with special reference to the laws laid down in the Smritis by authors who belonged to different schools, each laying stress on distinctive dogmas on some more or less important social and religious questions. These Mantras, when interpreted in their natural sense, give us to understand that at the time of marriage man and woman should both alike be of mature age and understanding, capable of setting up and managing an independent household from the very day of marriage. The law of early marriage for girls laid down in the Smritis now in force must be an aberration from the true Vedic Law, caused by the growing moral and spiritual weakness of the people as described in the Itihásas and Purânas.

Certainly, no specific age for marriage is prescribed in the Vedas whether for man or for woman. Such a

direction would mean either that every man and woman should as a matter of course marry and lead a married life, irrespective of their natural inclinations, or that, if they would marry at all, they should marry at a particular age or ages. Neither of these is comprehended in the import of the Vedic Law of marriage. The marriageable age has to be determined in quite a different way. It must be determined from the way in which the law of marriage operates and from the life laid down for the married couple to lead from the day of marriage onward. The very idea of marriage relation and the ideal life of the married couple held forth in the Vedic *Mantras* are inconceivable unless the parties to marriage are fully grown-up adult man and woman.

Let us now see how the law of marriage operates in the course of human life. No Vedic injunction is called for to urge a man and a woman to unite together for the purpose of reproduction any more than in the case of lower animals. All men and women, with rare exceptions, have the sexual instinct implanted in them, which in time grows strong enough to bring about their union for procreative purposes. When the natural instinct prompts this union, then the Law steps in and teaches the man or the woman how, as a self-conscious intelligent being capable of purposeful action, he or she may improve the relation and make the best of it. The Vedic Law recommends that, instead of mating together like the brute creation at particular seasons for mere procreative purposes when impelled by instinct, man and woman must make up their minds to live together a constant and well-regulated life of activity in a joint household in life-long companionship.

This vow, ratified in the sacred presence of divine personages invoked to witness and bless the union, constitutes what is called marriage. The law further enjoins that, prior to entering on married life, man and woman must have undergone a training for the life through a systematic course of moral, intellectual and spiritual culture and of physical austerities, and that, after marriage, they should live together in perfect harmony and love, —with a view to realise man's oneness with the Divine—working in unison in all concerns of life with common hopes and aspirations, discharging in full as one individual their duties to their fellow-creatures and to all sentient existence above and below man,—nay, embodying in their life the very Divine Law of self-sacrifice and love. These regulations will hold good only when the parties to marriage at the time of marriage have been impelled to live as man and wife by their natural instincts ; and they cannot certainly apply when either of them is naturally averse to such a union and incapable of married life or does not fully understand the meaning of the marriage relation and the responsibilities of married life. It would therefore seem to be unnatural as well as unjust to marry boys and girls early in life before they have attained the age of maturity and thereby compel them, when grown up, to live as man and wife when either party happens by nature to be averse to such a life. We do occasionally come across men and women who are averse to a married life and inclined to a single life of spiritual devotion.

According to the Vedic Law of marriage, as stated above, woman, as well as man, should by the time of marriage be quite alive to the responsibilities of married life and should

have been duly trained for a proper discharge of the duties devolving on her as a householder. The ideal marriageable woman, according to the Vedic Law, is one whose spiritual nature has been illumined by communion with Divine Soma,—the Lord of the manifested world,—whose emotions have been purified and sweetened by the ambrosia of her devotion to the Divine Lord, and whose sense-organs and physical body have been washed, nurtured and vivified by the waters of purified emotion and vitality,—as witness the words with which the Aryan bridegroom, when leading his bride to the altar or to the nuptial bed, accosts her in the following words :—

सोमः प्रथमो विविदे गन्धर्वो विविद उत्तरः ।
तृतीयो अग्निष्टे पतिस्तुरीयस्ते मनुष्यजः ॥
सोमोऽददद्गन्धर्वाय गन्धर्वोऽददग्नये ।
रयिं च पुत्रांश्चादादग्निर्मह्यमथो इमाम् ॥

Soma had thee first, next had thee Gandharva ;
Thy third lord was Agni, the son of man being thy fourth one.
Soma gave thee to Gandharva, to Agni did Gandharva give ;
Wealth and progeny has Agni given to me, and thee here.

And at the conclusion of his address he expresses satisfaction that she has come to him with all this physical, moral and spiritual wealth, ready to bring forth progeny.

Such were the qualifications the Aryan man looked for in the woman who was to be his life-partner. Does it need saying that to grow into a lady of this culture, she must have passed through a regular course of intellectual, moral and spiritual discipline ? Then, as the Vedic Law demands, she would be really able, from the very day of marriage, to reign in her new household as its queen and

to direct with a masterly hand all its domestic and spiritual concerns. As a matter of fact, in the halcyon days of Aryan civilization, it was ruled that woman should be given the same Vedic culture as man and subjected to the same moral, intellectual, spiritual as well as physical discipline in early youth, and that she should marry only after puberty when she had duly finished the prescribed course of study and discipline. She might not even marry at all, preferring a single life of exclusive spiritual devotion and culture to the semi-secular life of a householder. This insistence on early Vedic cuture for woman as for man shows that under Vedic Law of Marriage the adult woman, not the child-girl, is regarded as eligible for marriage. It was the Aryan man and the Aryan woman of the ancient days, trained in this way, who, united in holy wedlock to lead the ideal life of married householders, gave birth to the Brahmarshis and Ràjarshis of whom we read in the Itihàsas and Purános, those mighty giants of great moral and spiritual powers who carried all before them.

The current laws and customs of marriage and married life mark a wide departure from the Vedic ideal pictured above. A deep study of the literature bearing on the subject enables us to trace the causes of this departure. The causes are said to be the growing sensualism and greed of Dvåpara and Kali,—the ages of intellectual doubt and darkness as well as moral turpitude,—which led to the neglect of the true laws of spiritual progress. The people in general have strayed far away from the ancient path of simple living and high thinking, and have become immersed in a life of ease and luxury. Woman, who is physically the weaker of the two sexes, has been practically enslaved

and denied all intellectual culture, destined to be a ministrant to man's sensual needs. If anywhere in these days she has come to occupy a dominant position in the household, it is because the sensualistic man has come to feel that he cannot do without her and has thus in turn become her slave.

If we as a people would grow strong and secure a place in the vanguard of the future civilization, we should closely follow the Vedic ideals of life. Abandoning the narrow road of selfishness paved with ease and luxury and leading to the abyss of misery, we, men and women, must gird our loins and run towards the well-nigh forgotten path of strenuous work and lofty spiritual aspirations, leading to the dimly visible goal on high of Divine power and wisdom and all-embracing love. May the Lord of all give us light and strength and so help us !

MYSORE,
6th July 1909.

A. MAHADEVA SASTRI.

PREFACE.

In the following pages the important question whether the Post-puberty Marriage of the Hindu Aryan Woman is sastric or not is fully discussed and a conclusion arrived at after a careful study of the Srutis, and other sacred books on the subject combined with a searching inquiry and deep argument with many orthodox Pandits.

Owing to an unfortunate circumstance errors have crept in in the printing and the readers are requested to go through the errata list that is prefixed and have it in view before they commence the study of the subject proper. An impartial study is solicited, which alone can make clear the soundness or otherwise of the conclusion laid down here. Any corrections criticisms, and suggestions on the subject will be thankfully received.

This book is published on behalf of the Aryadharmojjivini Sabha of Mysore, which some time back held several meetings and evinced much interest in discussing the questions, whether according to the Sastras marriage is compulsary or optional with the Hindu Aryan Woman and whether She is permitted to marry after puberty. Both these questions, it will be found, have been appropriately answered here.

With deep gratitude the Author expresses his indebtedness to Sardar M. KANTARAJ URS, B.A., Deputy Commissioner, Mysore District, for the liberality and kindness with which he bore the whole cost of the printing and publication of this work. The Author is also much indebted to the undermentioned gentlemen for the help they kindly rendered in various ways in bringing this book to completion :—

M.R.Ry. M. Venkatakrishnaya, A. Mahadeva Sastry, B.A., A. Govinda Acharya, R. Shama Sastry, B.A., Pandit B. Srikanta Sastry, and several others.

MYSORE,
8th July 1909.

S. V.

ವಿಜ್ಞಾಪನೆ.

ಹಿಂದೂ ಆರ್ಯಮಂಡಲಿಯಲ್ಲಿ ಋತುಮತೀವಿವಾಹವು ಶಾಸ್ತ್ರಸಮ್ಮತವೆ ಅಲ್ಲವೆ ಎಂಬುದು ವಿಸ್ತಾರವಾಗಿ ವಿಚಾರಿಸಲ್ಪಟ್ಟು ಅನೇಕರಾದ ವಿದ್ವಾಂಸರುಗಳ ಸಂಗಡ ಚರ್ಚಿಸಿ ಶ್ರುತಿಸ್ಮೃತ್ಯಾದಿಗಳನ್ನು ಪರಿಶೀಲಿಸಿ ಸಿದ್ಧಾಂತವು ಇಲ್ಲಿಮಾಡಲ್ಪಟ್ಟಿರುವುದು.

ಕಾರಣಾಂತರದಿಂದ ಈ ಪುಸ್ತಕದಲ್ಲಿ ತಪ್ಪುಗಳು ಬೀಳಲವಕಾಶವಾಯಿತು. ಗ್ರಂಥಾರಂಭಕ್ಕೆ ಮೊದಲೇ ಕಾಣಿಸಿರುವ ಶುದ್ಧಿಪತ್ರವನ್ನು ನೋಡಿ ತಪ್ಪುಗಳನ್ನು ತಿದ್ದಿಕೊಂಡು ವಾಚಕಮಹಾಶಯರು ಈ ಗ್ರಂಥವನ್ನವಲೋಕಿಸಬೇಕಾಗಿ ಪ್ರಾರ್ಥನೆ. ನಿಷ್ಪಕ್ಷಪಾತದಿಂದ ಇದನ್ನು ಆಮೂಲಾಗ್ರವಾಗಿ ನೋಡಿ ಇಲ್ಲಿ ಕಾಣಿಸಿರುವ ಸಿದ್ಧಾಂತವು ಸಮಂಜಸವೆಂದು ತೋರಿದರೆ ಅದನ್ನು ಅನುಮೋದಿಸತಕ್ಕದು. ತಪ್ಪುಗಳು ಅಥವಾ ಆಕ್ಷೇಪಗಳೇನಾದರು ಇದ್ದರೆ ಅವನ್ನು ದಯವಿಟ್ಟು ತಿಳಸಬೇಕಾಗಿ ಪ್ರಾರ್ಥನೆ.

ಈ ಪುಸ್ತಕವು ಮೈಸೂರಿನ ಆರ್ಯಧರ್ಮೋಜ್ಜೀವಿನೀ ಸಭೆಯವರಿಗೋಸ್ಕರ ಅಚ್ಚುಹಾಕಿಸಿ ಪ್ರಕಟಸಲ್ಪಟ್ಟಿರುತ್ತದೆ. ಈ ಸಭೆಯವರು ಕೆಲವುಕಾಲದ ಹಿಂದೆ ಅನೇಕಾವೃತ್ತಿ ಸಭೆ ಸೇರಿಸಿ, ಶಾಸ್ತ್ರಪ್ರಕಾರ ಹಿಂದೂ ಆರ್ಯಸ್ತ್ರೀಯರಿಗೆ ವಿವಾಹವು ನಿರ್ಬಂಧವೋ ಅಥವಾ ಐಚ್ಛಿಕವೋ ಎಂಬುದನ್ನೂ ಋತುಮತಿಗಳಾದ ಬಳಿಕ ಅವರಿಗೆ ವಿವಾಹವಾಗಬಹುದೆ ಎಂಬುದನ್ನೂ ವಿಶೇಷವಾಗಿ ಚರ್ಚಿಸಿದರು. ಈ ಎರಡು ಪ್ರಶ್ನೆಗಳಿಗೂ ಈ ಗ್ರಂಥದಲ್ಲಿ ಸದುತ್ತರಗಳು ಕಾಣಿಸಲ್ಪಟ್ಟಿರುವುವು.

ಈ ಪುಸ್ತಕವನ್ನು ಅಚ್ಚು ಹಾಕಿಸಿ ಪ್ರಕಟಿಸುವ ಯಾವತ್ತು ಖರ್ಚನ್ನು ಬಹಳ ಉದಾರ ಮನಸ್ಸಿನಿಂದಲೂ ದಯೆಯಿಂದಲೂ ವಹಿಸಿಕೊಂಡದ್ದಕ್ಕಾಗಿ, ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಾದ ಸರದಾರ್ ಶ್ರೀ. ಎಮ್. ಕಾಂತರಾಜಅರಸ್, ಬಿ. ಎ., ಯವರನ್ನು ಬಹಳವಾಗಿ ವಂದಿಸುತ್ತೇನೆ. ಮತ್ತು ಈ ವಿಷಯದಲ್ಲಿ ಇತರ ವಿಧವಾಗಿ ಸಹಾಯ ಮಾಡಿದ್ದಕ್ಕಾಗಿ ಕೆಳಗೆ ಕಾಣಿಸಲ್ಪಟ್ಟ ಮಹನೀಯರನ್ನೂ ತುಂಬಾ ವಂದಿಸುತ್ತೇನೆ.-

ಮ|| ರಾ|| ಶ್ರೀ—ಎಮ್. ವೆಂಕಟಕೃಷ್ಣಯ್ಯನವರು ; ಎ. ಮಹದೇವಶಾಸ್ತ್ರಿ, ಬಿ. ಎ., ಯವರು ; ಎ. ಗೋವಿಂದಾಚಾರ್ಯರವರು ; ಆರ್. ಶಾಮಾಶಾಸ್ತ್ರಿ, ಬಿ. ಎ., ಯವರು ; ಪಂಡಿತ ಬಿ. ಶ್ರೀಕಂಠಶಾಸ್ತ್ರಿಗಳವರು, ಮತ್ತು ಇತರರು.

ಮೈಸೂರು,
8—7—1909.

S. V.

ವಿಷಯಾನುಕ್ರಮಣಿಕೆ.

ಶುದ್ಧಿಪತ್ರ.

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೨	೧೬	ಜ್ಜೀವವೂ	ಜ್ಜೀವವೂ
೩	೨೪	ಮಾನಹಾನಿ	ಒಲಹಾನಿ
೫	೧೯-೨೦	ಆಚರಿಸಲಾಗುವುದಿಲ್ಲ. ಎಂದು	ಆಚರಿಸಲಾಗುವುದಿಲ್ಲ ಎಂದು
೭	೬-೮	ಎಂಟು ವಷದವಳು. ......ರಜಸ್ವಲೆಯು.	ಎಂಟುವರ್ಷ ವಯಸ್ಸಿನಲ್ಲಿ ಗೌರಿ ಯೂ ಒಂಭತ್ತರಲ್ಲಿ ರೋಹಿಣಿ ಯೂ ಹತ್ತರಲ್ಲಿ ಕನ್ಯೆಯೂ ಅದ ರಮೇಲೆ ರಜಸ್ವಲೆಯೂ ಆಗು ವಳು.
೧೦	೩೦	ವಯುಸ್ಸುಳ	ವಯಸ್ಸುಳ್ಳ
೧೨	೧೭	ತೆಗೆದುಕೊಳು,	ತೆಗೆದುಕೊಳ್ಳು
,,	೧೮	ಮುತ್ತಾತ್ಕ	ಮುತ್ತಾತ.
೧೪	೧೬	ಮಾರ್ಕಂಡೇಯಃ	ಮಾರ್ಕಂಡೇಯ
,,	೧೭	ಸಾಕನ್ಯಾ	ಯಾಕನ್ಯಾ
೨೦	೨೯	ದಾನಮಾಡಬೇಕು. ಎಂದೂ	ದಾನಮಾಡಬೇಕು ಎಂದೂ
೨೩	೨೯-೩೦	ನಿರೀಕ್ಷಿಸಬೇಕು.ಎಂದು	ನಿರೀಕ್ಷಿಸಬೇಕು ಎಂದು
೨೬	೧೪	ಸಂಜ್ಯೆವುಳ್ಳ	ಸಂಖ್ಯೆಯುಷ್ಟು
೨೭	೧೩	ಕನ್ಯೆಯೆು	ಕನ್ಯೆಯು
,,	೨೬	ಕೃತ್ವಾ	ಕೃತ್ವಾ
೩೧	೨೫-೨೬	ತಿರಸ್ಕರಿಸಲಾವಶ್ಯಕ	ತಿರಸ್ಕರಿಸಲವಕಾಶ
,,	೨೮-೨೯	ಇದಲ್ಲದೆ ಋತುಮತೀವಿ . ವಾಹವು	ಇದಲ್ಲದೆ ಬೇರೇ ಕಾರಣಗಳಿಂದಲೂ ಋತುಮತೀವಿವಾಹವು
,,	೨೯	ಹೇಳಲಾಸ್ಪದವಿಲ್ಲ.	ಹೇಳಲಾಸ್ಪದವಿಲ್ಲ. ಶಾಸ್ತ್ರಗಳಲ್ಲಿಉ ಕ್ತವಾದ ಕನ್ಯಾಲಕ್ಷಣ ಕನ್ಯಾ ದೂಷಣಾದಿ ಕೆಲವು ವಿಷಯ ಗಳನ್ನು ಪರಿಶೀಲಿಸಿದರೆ, ಅದು ಶಾಸ್ತ್ರಸಮ್ಮತವೆಂದೇ ತೋರು ವುದು. ಆ ವಿಷಯಗಳು ಈಗ ತಿಳಿಸಲ್ಪಡುವುವು.
೩೨	೧೩-೧೪	ಸಂಭೋೀವಿಲ್ಲದವಳು,	ಸಂಭೋಗವಿಲ್ಲದವಳು.

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೩೬	೧೦	ಬುದಿ	ಬುದ್ಧಿ
೩೯	೫-೬	ಯುವತಿಯರ ನಡತೆಗಳ	ಚಿಕ್ಕ ಹುಡುಗಿಯರ
೪೦	೧೯	ಸಂಭೋಗ.	ಸಂಭೋಗ.
೪೧	೨೮	ಸಾಕ್ಷಾತ್ಸಹೋದರಿ	ಸಾಕ್ಷಾತ್ಸಹೋದರಿ
೪೯	ಆದಿಯಲ್ಲಿ ಸೇರಿಸಬೇಕು —		ಬೃಹತ್ಪರಾಶರ ಸಂಹಿತೆ, ಅಧ್ಯಾಯ ೪.
,,	೧೦	ನೇಯ ಪಂಕ್ತಿಯಾದಬಳಿಕ ಸೇರಿಸಬೇಕು.—	ಪೂರ್ವದಲ್ಲಿ ಸ್ತ್ರೀಯರು ಮದಿವೆಯಾದಕೂಡಲೆ ಗಂಡನ ಮನೆಯಲ್ಲಿ ವಾಸಿಸುತ್ತಾ, ಆತನೊಂದಿಗೆ ಗೃಹಸ್ಥಾಶ್ರಮ ಧರ್ಮಗಳನ್ನಾಚರಿಸುವ ಪದ್ಧತಿ ಇದ್ದಿತು. ಹೀಗೆ ಮಾಡಲು ಋತುಮತಿಯರು ಯೋಗ್ಯರೇ ಹೊರತು ಪ್ರೈನೆರೆಯದ ಸಣ್ಣ ಹುಡುಗಿಯರು ಯೋಗ್ಯರಲ್ಲ. ಪ್ರಾಜಾಪತ್ಯ ವಿವಾಹದಲ್ಲಿ ಸೂಚಿತವಾದುವು ಈ ಧರ್ಮಗಳೇ ಆಗಿರುತ್ತವೆ. ಆದುದರಿಂದ ವಿವಾಹ ಸಮಯದಲ್ಲಿ ಸ್ತ್ರೀಯರು ಋತುಮತಿಯರಾಗಿರಬೇಕೆಂಬ ಧ್ವನಿಯು ತೋರುವುದು.
,,	೧೯	ಪೈಶಾಚಶ್ಚಾಷ್ಟಮೋಧಮಃ	ಪೈಶಾಚಶ್ಚಾಷ್ಟಮೋಧಮಃ
,,	೨೮	ತಿಳಿಯಲ್ಪಡುತಕ್ಕದು,	ತಿಳಿಯಲ್ಪಡುತಕ್ಕದು.
೫೨	೩೧	ಪಾಪಯೋನಿಷ	ಪಾಪಯೋನಿಷು
೫೫	೨೬	ವಿವಾಹ	ವಿವಾಹ
೫೬	೨೮	ನೆಯ ಪಂಕ್ತಿಯ ನಂತರ ಸೇರಿಸತಕ್ಕದು:—	

ಔರಸಃಕ್ಷೇತ್ರಜಶ್ಚೈವ ಪುತ್ರಿಕಾಪುತ್ರ ಏವಚ।
ಕಾನೀನಶ್ಚ ಸಹೋಢಶ್ಚ ಗೂಢೋತ್ಪನ್ನಸ್ತಥೈವಚ॥
ಪೌನರ್ಭವೋಪವಿದ್ಧಶ್ಚ ಲಬ್ಧಃಕ್ರೀತಃಕೃತಸ್ತಥಾ।
ಸ್ವಯಂಚೋಪಗತಃಪುತ್ರಾ ದ್ವಾದಶೈತ ಉದಾಹೃತಾಃ॥
ಏಷಾಂಷಡ್ಬಂಧುದಾಯಾದಾಃ ಷಡದಾಯಾದಬಾಂಧವಾಃ।
ಪೂರ್ವಃಪೂರ್ವಃಸ್ಮೃತಃಶ್ರೇಯಾನ್ ಜಘನ್ಯೋಯೋಯಉತ್ತರಃ॥

೫೭	೫	ವಿವಾಹಿತಳಾದ	ಅವಿವಾಹಿತಳಾದ
೫೭	೨೭	ಶ್ರೇಷನು	ಶ್ರೇಷ್ಠನು
೫೮	೨೫	ತಂದೆಯಮನೆಯಲ್ಲಿರುವಾಗ	ತಂಡೆಯಮನೆಯಲ್ಲಿ ಮದಿವೆಯಿಲ್ಲದಿರುವಾಗ

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೬೩	೨೪	ನಿನ್ನನ್ನುಹೊಂದಿದನು	ನಿನ್ನನ್ನು ಮೊದಲು ಹೊಂದಿದನು
೭೧	೩-೪	ಗೃಹೀಯಾತ್	ಗೃಹ್ಣೀಯಾತ್
೭೧	೨೪	ರ್ಷಾರಲವಃ	ಕ್ಷಾರಲವಣ
೭೧	೨೯	ವಂತ್ರಲಿಂಗಾತ್.	ಮಂತ್ರಲಿಂಗಾತ್. ಸೂ॥
೭೨	೨೮	ಯಿದಾ	ಸೂತ್ರಂ—ಯದಾ
೭೩	೨೯	ಬಹ್ಮಚರ್ಯ	ಬ್ರಹ್ಮಚರ್ಯ
೭೬	೧೪	ನಾಲ್ಕನೆಯು	ಸೂತ್ರ.—ನಾಲ್ಕನೆಯ
೭೯	೭	ಬಲಗಾಲಿನಿಂಧ	ಬಲಗಾಲಿನಿಂದ
೮೦	೪	ಷಾರಲವಣ	ಕ್ಷಾರಲವಣ
,,	೬	ಪಕ	ಪಕ್ವ
,,	೧೭	ವತವನ್ನು	ವ್ರತವನ್ನು
೮೨		೭೪	೮೨
೮೩		೭೫	೮೩
೮೬		೭೮	೮೬
೮೭		೭೯	೮೭
೮೮	೨೧	ತಿಷತೆ	ತಿಷ್ಠತೆ
೯೨	೩೧	ದಂಡೋತಾಮನ	ದಂಡೋತ್ಥಾಪನ
೯೫	೬	ತೊಡೆಯುನ್ನು	ಸಂತೋಷದಿಂದ ತೊಡೆಯನ್ನು
,,	೨೭	ತ್ವಷನು	ತ್ವಷ್ಟನು
೯೭	೩೧	ನವಗನನಿತ್ರೀ	ನಗನ್ನನಿತ್ರೀ
೯೮	೧	ಗಚತೀತಿ	ಗಚ್ಛತೀತಿ
೯೯	೩೧	ಸ್ತ್ರೀಯು	ಸ್ತ್ರೀಯು
೧೦೭	೪	ಇದರೆ	ಇದ್ದರೆ
೧೦೮	೧೭	ಕನೆ	ಕನ್ಯೆ
,,	೨೯	ತದೋತ್ರಾ	ತದ್ಗೋತ್ರಾ
೧೦೯	೧೫	ಪುತ್ರಾಸ್ತ	ಪುತ್ರಾಸ್ತು
೧೧೦	೧	ವರ್ಷದದಲ್ಲಿಯೂ	ವರ್ಷದಲ್ಲಿಯೂ
೧೧೩	೫೭	ಏವಾಹವನ್ನು	ವಿವಾಹವನ್ನು
,,	೫೯	ಲೋಕೇಚಮಸಃ	ಚಮಸಃ ॥ ಲೋಕೇ
೧೫೦	೧೯	ಬಟಿ	ಬಟ್ಟೆ

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೧೨೨	೨೨	ದೃಷ್ಟ್ಯಃ	ದೃಷ್ಟ್ಯಃ
೧೨೩	೨	ಗಮನೇ।	ಗಮನೇ
೧೨೬	೩	ಸ್ಥೂಲಾಂಗ್ಫ	ಸ್ಥಲಾಂಗ
,,	೨೪	ಐಚಿಕ	ಐಚ್ಛಿಕ
,,	೨೫	ಶಾಸ,	ಶಾಸ್ತ್ರ
೧೨೮	೯	ಪದ್ಯತ	ಪಶ್ಯತ
೧೨೯	೧೪	ನಿಶಿತ್ಯ	ನಿಶ್ಚಿತ್ಯ
೧೩೩	೩೨	ಭಿಷಾಟನ	ಭಿಕ್ಷಾಟನ
೧೩೪	೧೦	ವರಂ	ವನಂ
೧೩೫	೭	ಪ್ರಕರಣ ೧೪.	ಪ್ರಕರಣ ೧೫.
೧೪೯	೫	ಗೃಹಸರಾದ	ಗೃಹಸ್ಥರಾದ
೧೫೨	೪	ಸ್ತೋತ್ರವನು	ಸ್ತೋತ್ರವನ್ನು
೧೬೧	೨೫	ಸಂಭೋಗವನೂ	ಸಂಭೋಗವನ್ನೂ
೧೬೬	೨೭	ಗ್ರಾಹ್ಯ	ಗ್ರಾಹ್ಯಃ
೧೭೧	೫	ಗೊತಾಗುತ್ತದೆ	ಗೊತ್ತಾಗುತ್ತದೆ
೧೭೮	೯	ಹಸಿವೆಂದು	ಹಸಿವೆಯೆಂದು
೧೮೦	೧೬	ಸ್ಮೃತಿಯಲ್ಲಿ	ಶ್ರುತಿಯಲ್ಲಿ

ಶ್ರೀಃ

ಋತುಮತೀವಿವಾಹ.

ಪ್ರಕರಣ. ೧.

ಪೀಠಿಕೆ.

ಹಿಂದೂ ಆರ್ಯರೆನಿಸುವ ನಾವು ಈಗಿನ ಕಾಲಕ್ಕೆ ತಕ್ಕಂತೆ ಇಲ್ಲ. ಬಹಳ ಹಿಂದೆ ಬಿದ್ದಿರುವೆವು. ನಮ್ಮಲ್ಲಿ ಅನೇಕ ಕೊರತೆಗಳುಂಟು. ಇವನ್ನು ಹೋಗಲಾಡಿಸಿಕೊಂಡ ಹೊರತು ನಮ್ಮ ಏಳಿಗೆಗೂ ಅಭಿವೃದ್ಧಿಗೂ ಅವಕಾಶವಿಲ್ಲ. ಈ ಕೊರತೆಗಳಲ್ಲಿ ಬಾಲ್ಯವಿವಾಹವು ಒಂದಾಗಿರುವುದು.

ಬಾಲ್ಯವಿವಾಹದಿಂದಾಗುವ ಕೇಡುಗಳು ಇಲ್ಲಿ ಸಂಕ್ಷೇಪವಾಗಿ ತಿಳಿಸಲ್ಪಡುವುವು. ಈ ಬಾಲ್ಯವಿವಾಹದಿಂದ ಸ್ತ್ರೀಪುರುಷರಿಗೆ ವಿದ್ಯಾನಾಶ, ಬಲನಾಶ, ಆರೋಗ್ಯನಾಶ, ಆಯುಷ್ಯಹಾನಿ, ಧನಹಾನಿ, ಇವುಗಳು ಉಂಟಾಗುವುವು. ದುರ್ಬಲರಾದ ಮಕ್ಕಳು ಹುಟ್ಟುವರು. ಕ್ರಮೇಣ ಜನಾಂಗವೇ ದುರ್ಬಲವಾಗಿ ಹೋಗುವುದು.

ಇದಲ್ಲದೆ ವಿದ್ಯೆಕಲಿತು ಪೂರೈಸುವುದಕ್ಕೆ ಮೊದಲೇ ಹುಡುಗರಿಗೆ ಮದುವೆ ಮಾಡಿ ಅವರ ತಲೆಯ ಮೇಲೆ ಸಂಸಾರಭಾರವನ್ನು ಹೊರಿಸಿದರೆ, ಅವರು ಜೀವನವನ್ನು ಸಂಪಾದಿಸಲಾರದೆ ದರಿದ್ರರಾಗಿ ದುಃಖಕ್ಕೆ ಗುರಿಯಾಗುವರು. ಬೇಗನೆ ಮಕ್ಕಳು ಹುಟ್ಟುವುದರಿಂದ ಸಂಸಾರಭಾರವು ಮತ್ತಷ್ಟು ಹೆಚ್ಚಿ ಮಕ್ಕಳ ಪೋಷಣೆಗೂ ವಿದ್ಯಾಭ್ಯಾಸಕ್ಕೂ ತಕ್ಕ ಅನುಕೂಲತೆಯಿಲ್ಲದೆ ಬಹಳ ಕಷ್ಟಪಡಬೇಕಾಗುವುದು.

ಸ್ತ್ರೀಯರಿಗೂ ಪುರುಷರಿಗೂ ವಿವಾಹವಿಷಯದಲ್ಲಿ ಸ್ವಾತಂತ್ರ್ಯವಿರಬೇಕು. ವಿವಾಹವು ಇಂಥಾದ್ದು, ಅದರ ಜವಾಬುದಾರಿಯು ಇಂಥಾದ್ದು, ಎಂದು ತಿಳಿದುಕೊಂ

ಡ ಬಳಿಕ ಇಷ್ಟವಿದ್ದವರು ಮದುವೆಮಾಡಿಕೊಳ್ಳಬಹುದು. ಇದನ್ನು ತಿಳಿಯುವು ದಕ್ಕೆ ಮೊದಲೇ ಹುಡುಗರಿಗೆ ವಿವಾಹವನ್ನು ಮಾಡಿ ಅವರ ಸ್ವಾತಂತ್ರ್ಯವನ್ನಪಹರಿಸಿದರೆ, ಮುಂದಕ್ಕೆ ಅವರಲ್ಲಿ ಅನೇಕರಿಗೆ ಬಹಳ ದುಃಖವು ಪ್ರಾಪ್ತವಾಗಬಹುದು. ಸ್ವಾತಂತ್ರ್ಯಾಪಹಾರವು ನಿಂದ್ಯವಾದುದೆಂದು ಹೇಳಬೇಕಾದ ಅವಶ್ಯಕತೆಯಿಲ್ಲ.

ಈಗ ಸ್ತ್ರೀಯರಿಗೆ ಕ್ಲುಪ್ತಕಾಲದಲ್ಲಿ ವಿವಾಹಮಾಡಬೇಕೆಂದು ನಿರ್ಬಂಧವಿರುವುದು. ಇಂಥ ಸಂಪ್ರದಾಯವು ಬಹಳ ತೊಂದರೆಗಳಿಗೆ ಕಾರಣವಾಗಿರುವುದು. ಕ್ಲುಪ್ತಕಾಲದೊಳಗೆ ಸ್ತ್ರೀಯರಿಗೆ ಯೋಗ್ಯರಾದ ವರರು ಸಿಕ್ಕದಿದ್ದರೆ, ಅವರನ್ನು ಕುಂಟ ಮೂರ್ಖ ಕೆಟ್ಟನಡತೆಯುವ ಹೆಚ್ಚಾಗಿ ವಯಸ್ಸಾದವ ಮುಂತಾದವರಿಗೆ ಕೊಟ್ಟು ಮದುವೆಮಾಡಬೇಕಾಗುವುದು. ಇದರಿಂದ ತಾಯಿತಂದೆಗಳಿಗೂ ಹುಡುಗಿಯರಿಗೂ ದುಃಖವೇ ಹೊರತು ಬೇರೆಯಿಲ್ಲ. ಸ್ತ್ರೀಪುರುಷರು ಪ್ರಾಯದವರಾದಬಳಿಕ ಅನ್ಯೋನ್ಯಪ್ರೀತಿಯಿಂದ ಮದುವೆಯಾಗುವುದೇ ಸುಖದಾಯಕವಾದ ಉತ್ತಮವಿವಾಹವಾಗಿರುವುದು.

ಸ್ತ್ರೀಯರಿಗೆ ಚಿಕ್ಕವಯಸ್ಸಿನಲ್ಲಿಯೇ ವಿವಾಹಮಾಡಿದರೆ, ಬಾಲವಿಧವೆಯರಾಗುವ ಸಂಭವವು ಹೆಚ್ಚು. ಈಗಿನ ಪದ್ಧತಿಯ ಪ್ರಕಾರ ಅವರಿಗೆ ಪುನರ್ವಿವಾಹವಿಲ್ಲ. ಆದುದರಿಂದ ಪುನರ್ವಿವಾಹವನ್ನು ಅಪೇಕ್ಷಿಸುವ ಸ್ತ್ರೀಯರೂ ಕೂಡ ಯಾವಜ್ಜೀವವೂ ವೈಧವ್ಯವನ್ನನುಭವಿಸುತ್ತ ಕಷ್ಟಪಡಬೇಕಾಗುವುದು.

ಈಗಿನ ಸಂಪ್ರದಾಯದ ಪ್ರಕಾರ ಸ್ತ್ರೀವಿವಾಹಕ್ಕೆ ಮಾತ್ರ ಕಾಲನಿರ್ಬಂಧವುಂಟು; ಗಂಡಸರಿಗೆ ಕಾಲನಿರ್ಬಂಧವಿಲ್ಲ. ಇದರಿಂದ ಹೆಣ್ಣಿನ ತಾಯಿತಂದೆಗಳು ವರನನ್ನು ಸಂಪಾದಿಸಲಿಕ್ಕೆ ಬಹಳ ಕಷ್ಟಪಡಬೇಕಾಗುತ್ತದೆ. ಈಗ ಧರ್ಮಬುದ್ಧಿಯು ಕಡಮೆಯಾಗಿರುವುದು. ನಮ್ಮ ಕನ್ಯೆಯರನ್ನು ಮದುವೆಮಾಡಿಕೊಳ್ಳಿರೆಂದು ಹೆಣ್ಣಿನವರು ಕೇಳಿದಾಗ, ಗಂಡುಹುಡುಗರೂ ಅವರ ಕಡೆಯವರೂ ತಾವೀಗ ಮದುವೆ ಮಾಡಿಕೊಳ್ಳುವುದಿಲ್ಲವೆಂದು ಉತ್ತರಕೊಡುವರು. ಅವರನ್ನು ಬಲವಾಗಿ ಪ್ರಾರ್ಥಿಸಿದರೆ, ಬಲವಾಗಿ ವರದಕ್ಷಿಣೆಯನ್ನು ಕೇಳುವರು. ಇಲ್ಲದಿದ್ದರೆ ತಮ್ಮ ವಿದ್ಯಾಭ್ಯಾಸಕ್ಕೆ ಸಹಾಯಮಾಡಬೇಕೆಂದು ಹೇಳುವರು.

ಈಗಿನ ಕಾಲದಲ್ಲಿ ಅನೇಕರಿಗೆ ತಮ್ಮ—ಮತ್ತು ತಮ್ಮ ಹೆಂಡತಿಮಕ್ಕಳ—ಜೀವನವನ್ನು ಜರುಗಿಸುವುದೇ ಕಷ್ಟವಾಗಿರುತ್ತದೆ. ಇಂಥ ಸಂದರ್ಭದಲ್ಲಿ ಬಾಲ್ಯವಿವಾಹದ ದೆಸೆಯಿಂದ ಸೊಸೆ ಮೊಮ್ಮಕ್ಕಳ ಸಂರಕ್ಷಣಭಾರವೂ ಅವರ ಮೇಲೆ ಬಿದ್ದು, ಸಂಸಾರದ ತೊಂದರೆಯು ಹೆಚ್ಚಿ, ಅವರು ಬಹಳ ಒದ್ದಾಡಬೇಕಾಗುವುದು. ಇದಲ್ಲದೆ ಮೊಮ್ಮಕ್ಕಳ ಉಪನಯನ ಮದುವೆ ಮುಂತಾದುವುಗಳ ಖರ್ಚು ಕೆಲವರ ತಲೆಯ ಮೇಲೆ ಬೀಳುವುದು.

ದೌರ್ಭಾಗ್ಯದಿಂದ ಮೊದಲನೆಯ ಹೆಂಡತಿಯು ಸತ್ತರೆ, ಪುನರ್ವಿವಾಹವನ್ನ ಪೇಕ್ಷಿಸುವ ೩೫-೪೫ ವರ್ಷದ ವಯಸ್ಸಿನ ಗಂಡಸರು ಈಗಿನ ಪದ್ಧತಿಗನುಸಾರವಾಗಿ ಯಥಾಪ್ರಕಾರ ೮-೧೦ ವರ್ಷದ ಹುಡುಗಿಯನ್ನು ಮದುವೆಮಾಡಿಕೊಳ್ಳಬೇಕಾ ಗುತ್ತದೆ. ಇದರಿಂದ ದಾಂಪತ್ಯಾನುಕೂಲತೆಯು ಕಡಮೆಯೆಂದು ಹೇಳಬೇಕಾದು ದಿಲ್ಲ. ಇದಲ್ಲದೆ ದೈವಯೋಗದಿಂದ ಹೆಚ್ಚಾಗಿ ಮಕ್ಕಳಾದರೆ, ವಾರ್ಧಕ್ಯದಲ್ಲಿ ಅವ ರು ಆ ದೊಡ್ಡ ಸಂಸಾರಭಾರವನ್ನು ನಿರ್ವಹಿಸಲು ಬಹು ಕಷ್ಟಪಡಬೇಕಾಗುವುದು.

ಹುಡುಗಿಯರು ತಮಗೆ ಯೋಗ್ಯವಾದ ವಿದ್ಯೆಯನ್ನು ಕಲಿತು ಪೂರೈಸಿ ಯೌ ವನದಶೆಗೆ ಬಂದು ಗೃಹಕೃತ್ಯವನ್ನು ಮಾಡಲು ಅರ್ಹರಾದಬಳಿಕವೂ, ಗಂಡು ಹುಡುಗರು ಅವರಿಗೆ ಶಕ್ಯ ವಿದ್ಯೆಯನ್ನು ಕಲಿತು ಪೂರೈಸಿ ಯೌವನಸ್ಥಿತಿಗೆ ಬಂದು ಸಂಪಾದಿಸಲಾರಂಭಿಸಿ ತಮ್ಮ-ಮತ್ತು ತಮ್ಮ ಹೆಂಡತಿಯರ-ಮತ್ತು ಮುಂದೆ ಹುಟ್ಟ ಬಹುದಾದ ಮಕ್ಕಳ—ಸಂರಕ್ಷಣೆಮಾಡಲಿಕ್ಕೆ ಯೋಗ್ಯರಾದಬಳಿಕವೂ, ಅವರು ಮ ದುವೆಮಾಡಿಕೊಂಡು, ತಂದೆತಾಯಿಗಳ ಮೇಲೆ ತಮ್ಮ ಭಾರವನ್ನು ಹಾಕದೆ, ಬೇರೆ ಸಂಸಾರ ಮಾಡಿಕೊಂಡು, ತಮ್ಮ ಜೀವನವನ್ನು ತಾವು ಸಂಪಾದಿಸುತ್ತ ಇದ್ದುಕೊಂ ಡಿರುವುದು ಸಕಲರಿಗೂ ಲಾಭಕರವಾದ—-ಕ್ಷೇಮಕರವಾದ—ಸ್ವಾಭಾವಿಕವಾದ— ಮಾರ್ಗವಾಗಿರುವುದೆಂದು ನಮ್ಮ ಮತವಾಗಿರುವುದು.

ಹೀಗೆ ಬಾಲ್ಯದಲ್ಲಿ ನಿರ್ಬಂಧದಿಂದ ವಿವಾಹಮಾಡುವ ಸಂಪ್ರದಾಯವನ್ನು ಬಿಟ್ಟು, ಸ್ತ್ರೀಯರಿಗೂ ಪುರುಷರಿಗೂ ಯೌವನದಶೆಯಲ್ಲಿ ಮದುವೆಮಾಡಿಕೊಳ್ಳಲಿ ಕ್ಕೆ ಅವಕಾಶಕೊಟ್ಟರೆ, ಮೇಲೆ ಸೂಚಿಸಿರುವ ತೊಂದರೆಗಳೂ ಕಷ್ಟಗಳೂ ಎಷ್ಟೋ ಮಟ್ಟಿಗೆ ಕಡಮೆಯಾಗಿ ಆರ್ಯಜನಾಂಗದವರು ಸ್ವಲ್ಪಮಟ್ಟಿಗೆ ಉತ್ತಮಸ್ಥಿತಿಗೆ ಬರ ಲಿಕ್ಕೆ ಮಾರ್ಗವುಂಟಾಗುವುದರಲ್ಲಿ ಸಂದೇಹವಿಲ್ಲ.

ಆದರೆ ಬಾಲ್ಯವಿವಾಹಪಕ್ಷದವರು ಕೆಲವು ಆಕ್ಷೇಪಗಳನ್ನು ಮಾಡುವರು. ಅವನ್ನೀಗ ವಿಚಾರಮಾಡಬೇಕು:—

೧. ಬಾಲ್ಯವಿವಾಹವನ್ನುಮಾಡಿ ನಿಷೇಕಪ್ರಸ್ತವನ್ನುಮಾತ್ರ ಸ್ತ್ರೀಯರು ಯೌವನವತಿಯರಾದಬಳಿಕ ಬೆಳೆಸಿದರೆ, ಮೇಲೆ ಹೇಳಿಧ ವಿದ್ಯಾಹಾನಿ ಮಾನಹಾನಿ ಮುಂತಾದುವುಗಳಿಗೆ ಅವಕಾಶವಿರುವುದಿಲ್ಲ. ಬಾಲ್ಯವಿವಾಹದಿಂದ ಇಂಥಾ ಕೇಡು ಗಳು ಸಂಭವಿಸುವುದಿಲ್ಲ; ಬೇಗನೆ ನಿಷೇಕಮಾಡುವುದರಿಂದಲೇ ಅವು ಪ್ರಾಪ್ತವಾ ಗುವುವು.

೨. ಚಿಕ್ಕ ವಯಸ್ಸಿನಿಂದಲೇ ಹುಡುಗಿಯರಿಗೋಸ್ಕರ ವರಗಳನ್ನು ಹುಡು ಕುತ್ತಿದ್ದರೂ ಯೋಗ್ಯರಾದವರು ಸಿಕ್ಕುವುದು ಕಷ್ಟವಾಗಿರುವುದು. ಋತುಮ ತಿಯರಾದಮೇಲೆ ವರರು ಸಿಕ್ಕದೆಹೋದರೆ ಸ್ತ್ರೀಯರು ಮದುವೆಯಿಲ್ಲದೆ ಇರಬೇಕಾ ಗುವುದು.

೩. ಬಾಲ್ಯದಲ್ಲಿಯೇ ವಿವಾಹವನ್ನು ಮಾಡಿದರೆ, ಹುಡುಗಹುಡುಗಿಯರಿಗೆ ಆಗಿನಿಂದಲೂ ಗಂಡಹೆಂಡತಿರೆಂಬ ಭಾವನೆಯುಂಟಾಗಿ ಪರಸ್ಪರ ಪ್ರೀತಿಯು ಹೆಚ್ಚಿ ಮುಂದೆ ಸುಖಕ್ಕೆ ಕಾರಣವಾಗುವುದು. ತಾಯಿತಂದೆಗಳು ಯೋಗ್ಯರಾದ ಕನ್ಯಾವರರನ್ನು ಹುಡುಕಿ ಮದುವೆಮಾಡುವರೇ ಹೊರತು ಅನ್ಯಥಾ ಇಲ್ಲ.

೪. ಸ್ತ್ರೀಯರು ಋತುಮತಿಗಳಾಗಿ ಮದುವೆಯಿಲ್ಲದೆ ತೌರುಮನೆಯಲ್ಲಿಯೇ ಇದ್ದರೆ, ದುರ್ಮಾರ್ಗದಲ್ಲಿ ಬಿದ್ದು ಕೆಟ್ಟುಹೋಗಬಹುದು.

ಈಗ ಈ ಆಕ್ಷೇಪಗಳಿಗೆ ಉತ್ತರವನ್ನು ಹೇಳುವೆವು:—

೧. ವಿದ್ಯಾಭ್ಯಾಸಂಗಕ್ಕೆ ಚಿತ್ತೈಕಾಗ್ರತೆಯು ಬೇಕು. ಇತರ ವಿಧವಾದ ಯಾವ ಕ್ಲೇಶವೂ ಸ್ವಲ್ಪವೂ ಇರಕೂಡದು. ಗಂಡಹೆಂಡತಿಯೆಂಬ ಸಂಸಾರಸಂಬಂಧವಾದ ಚಿಂತೆಯೂ ವಿವಾಹಸಂಬಂಧದ ತೊಂದರೆಗಳೂ ವಿದ್ಯಾಭ್ಯಾಸದಲ್ಲಿಟ್ಟಿರುವ ಅವಧಾನವನ್ನು ಬೇರೆ ಕಡೆಗೆ ತಿರುಗಿಸುವುವು. ಆದುದರಿಂದಲೇ "ವಿವಾಹೋ ವಿದ್ಯಾನಾಶಾಯ ಸರ್ವನಾಶಾಯ ಶೋಭನಂ" ಎಂಬ ವಚನವು ಹುಟ್ಟಿರುವುದು. ಸಂಸಾರದ ಚಿಂತೆಯು ವಿದ್ಯಾಭ್ಯಾಸಂಗವನ್ನು ಹಾಳುಮಾಡುವುದು ಸತ್ಯವು. ಇದರಿಂದ ಮುಂದಕ್ಕೆ ಬಹಳವಾದ ತೊಂದರೆಗಳು ಸಂಭವಿಸುವುವು.

೨. ಸ್ತ್ರೀಯರ ಮನಸ್ಸಿಗೆ ಯೋಗ್ಯರಾದ ವರರು ಸಿಕ್ಕದಿದ್ದರೆ, ಅವರು ವೈರಾಗ್ಯವನ್ನು ಹೊಂದಿ ಸಾಯುವಪರ್ಯಂತವೂ ಬ್ರಹ್ಮಚಾರಿಣಿಯರಾಗಿರತಕ್ಕುದು. ಅಸಮರ್ಪಕರಾದ ಗಂಡಂದಿರನ್ನು ಕಟ್ಟಿಕೊಂಡು ಒದ್ದಾಡುತ್ತ ದುಃಖಪಡುವುದಕ್ಕಿಂತಲೂ ಬ್ರಹ್ಮಚರ್ಯವು ಸ್ತ್ರೀಯರಿಗೆ ಪರಮೋತ್ತಮವಾದುದು. ಪುರುಷರೂ ಕೂಡ ತಮ್ಮ ಮನಸ್ಸಿಗೆ ಸಮರ್ಪಕರಾದ ಹೆಂಡತಿಯರು ಸಿಕ್ಕದಿದ್ದರೆ, ವಿರಕ್ತರಾಗಿ ಯಾವಜ್ಜೀವವೂ ಬ್ರಹ್ಮಚಾರಿಗಳಾಗಿರತಕ್ಕುದು.

೩. ಬಾಲ್ಯವಿವಾಹದಿಂದ ಗಂಡಹೆಂಡತಿಯರಿಗೆ ಪರಸ್ಪರವಾಗಿ ಪ್ರೀತಿಯು ಹೆಚ್ಚುವುದೆಂದು ಹೇಳಲಾಗುವುದಿಲ್ಲ. ಅದರಿಂದ ಬಹಳಮಟ್ಟಿಗೆ ವಿದ್ಯಾಭ್ಯಾಸಕ್ಕೆ ಬಾಧೆಯುಂಟಾಗುವುದೇನೋ ಸತ್ಯವು. ಸ್ತ್ರೀಪುರುಷರು ಬುದ್ಧಿಬಂದಮೇಲೆ ಚೆನ್ನಾಗಿ ಪರ್ಯಾಲೋಚಿಸಿ ಅವರವರಿಗೆ ಯೋಗ್ಯರೆಂದು ಕಂಡುಬಂದವರನ್ನು ಮದುವೆಯಾಗುವುದೇ ಪರಸ್ಪರಪ್ರೀತಿಗೂ ಸುಖಕ್ಕೂ ಕಾರಣವಾಗುವುದು. ಅರಿಯದೆ ನಡೆದ ವಿಷಯವು ಪ್ರಾಯಿಕವಾಗಿ ಕೆಟ್ಟುಹೋಗುವ ಸಂಭವವು ಹೆಚ್ಚು. ತಾಯಿತಂದೆಗಳಿಗೆ ಮಕ್ಕಳ ವಿಷಯದಲ್ಲಿ ಸಮರ್ಪಕವೆಂದು ತೋರಿಬರುವ ದಾಂಪತ್ಯವು ಮಕ್ಕಳಿಗೆ ಸಮರ್ಪಕವಾಗುವುದೆಂದು ಹೇಳಲಾಗುವುದಿಲ್ಲ. ಇದಲ್ಲದೆ ಮಕ್ಕಳು ಮುಂದಕ್ಕೆ ವೈರಾಗ್ಯದಲ್ಲಿ ಅಭಿರುಚಿಯುಳ್ಳವರಾಗಬಹುದು. ಅಂಥವರಿಗೆ ಅರಿಯದೆ ಮಾಡಿದ ಮದುವೆಯೂ ಸಂಸಾರಭಾರವೂ ಬಹುದುಃಖರೂಪವಾಗಿ ಪರಿಣಮಿಸದೆ ಇರಲಾರವು.

೪. ಋತುಮತಿಗಳಾದ ಸ್ತ್ರೀಯರನ್ನು ಆಹಾರವಿಹಾರಾದಿ ವಿಷಯಗಳಲ್ಲಿ ಸರಿಯಾಗಿಟ್ಟುಕೊಂಡು ಸಂರಕ್ಷಣೆಮಾಡುತ್ತ ಬಂದರೆ, ಅವರು ಕೆಟ್ಟುಹೋಗಲಿಕ್ಕೆ ಅವಕಾಶವಿಲ್ಲ. ಸ್ತ್ರೀಯರನ್ನು ಕೆಡಿಸುವವರು ಪುರುಷರಲ್ಲವೆ! ಹಾಗಾದರೆ ಗಂಡಸರು ತಮ್ಮ ನಡತೆಯನ್ನು ಮೊದಲು ಸರಿಮಾಡಿಕೊಳ್ಳಬೇಕು. ಬಾಲ್ಯದಲ್ಲಿ ವಿವಾಹಿತರಾದ ಎಷ್ಟೋ ಸ್ತ್ರೀಯರು ವಿಧವೆಯರಾಗಿರುವರು. ಅವರಲ್ಲನೇಕರು ಇನ್ನೂ ಪ್ರಾಯದವರಾಗಿದ್ದರೂ ನಮ್ಮ ಈಗಿನ ಆಚರಣೆಯ ಪ್ರಕಾರ ಅವರಿಗೆ ಪುನರ್ವಿವಾಹವಿಲ್ಲ. ಅವರು ಕೆಟ್ಟುಹೋಗದಂತೆ ಅವರ ತಾಯಿತಂದೆಗಳೂ ಇತರ ಪೋಷಕರೂ ನೋಡಿಕೊಳ್ಳುವುದಿಲ್ಲವೆ? ಅವರಲ್ಲಿ ಎಷ್ಟೋ ಸ್ತ್ರೀಯರು ಸಾಧ್ವಿಗಳಾಗಿಲ್ಲವೆ? ಅನ್ಯಮತದವರಲ್ಲಿಯೂ ಅನ್ಯಜನಾಂಗದವರಲ್ಲಿಯೂ ಸ್ತ್ರೀಯರು ಋತುಮತಿಗಳಾಗಿ ಎಷ್ಟೋ ವರ್ಷಗಳ ಮೇಲೆ ವಿವಾಹಮಾಡಿಕೊಳ್ಳುವ ಪದ್ಧತಿಯುಂಟು. ಕೆಲವರು ಸ್ತ್ರೀಯರು ಯಾವಜ್ಜೀವವೂ ಮದುವೆಯಿಲ್ಲದೆಯೇ ಇರುವರು. ಇವರು ಕೆಟ್ಟುಹೋಗದೆ ಸುಶೀಲೆಯರಾಗಿರುವುದಿಲ್ಲವೆ! ಆದಪ್ರಯುಕ್ತ ಋತುಮತೀವಿವಾಹದಿಂದ ಕೇಡುಂಟಾಗುವುದೆಂದು ಹೇಳಲಾಸ್ಪದವಿಲ್ಲ.

ಬಾಲ್ಯವಿವಾಹಪಕ್ಷದವರು ಇನ್ನೊಂದುಬಗೆಯ ಆಕ್ಷೇಪವನ್ನು ಮಾಡುವರು. ಏನೆಂದರೆ:—ನೀವು ಬಾಲ್ಯವಿವಾಹ ಪದ್ಧತಿಯು ಕೆಟ್ಟದ್ದೆಂದೂ ಋತುಮತೀವಿವಾಹವು ಒಳ್ಳೆಯದೆಂದೂ ಎಷ್ಟು ಉಪಾಯಗಳನ್ನೂ ಯುಕ್ತಿಗಳನ್ನೂ ಹೇಳಿದಾಗ್ಯೂ ಪ್ರಯೋಜನವಿಲ್ಲ. ಅವನ್ನು ನಾವು ಒಪ್ಪುವುದಿಲ್ಲ; ನಾವು ಶಾಸ್ತ್ರೈಕಶರಣರು. ಋತುಮತೀವಿವಾಹವು ಶಾಸ್ತ್ರನಿಷಿದ್ಧವಾಗಿಯೂ ಬಾಲ್ಯವಿವಾಹವು ಶಾಸ್ತ್ರಸಮ್ಮತವಾಗಿಯೂ ಇರುವವು. ಆದುದರಿಂದ ಋತುಮತೀವಿವಾಹವನ್ನು ಆಚರಿಸಲಾಗುವುದಿಲ್ಲ. ಎಂದು ವಾದಿಸುವರು.

ಇವರ ಈ ಆಕ್ಷೇಪವು ಸರಿಯೆ? ಋತುಮತೀವಿವಾಹವು ಶಾಸ್ತ್ರನಿಷಿದ್ಧವೆ? ಎಂಬುದನ್ನು ಇಲ್ಲಿ ಚರ್ಚಿಸಿ ನಿರ್ಣಯಿಸುವುದೇ ನಮ್ಮ ಮುಖ್ಯೋದ್ದೇಶವಾಗಿರುವುದು. ಈ ವಿಷಯವು ಸ್ವಲ್ಪವಿಸ್ತಾರವಾಗಿ ವಿಚಾರಮಾಡಲ್ಪಡುವುದು.

ಪ್ರಕರಣ ೨.

ನಿಷೇಧಕ ವಚನಗಳು.

ಋತುಮತೀವಿವಾಹವು ಶಾಸ್ತ್ರನಿಷಿದ್ಧವೆಂದು ಸಾಧಿಸುವುದಕ್ಕೋಸ್ಕರ ವಿರೋಧಿಪಕ್ಷದವರು ಅನೇಕವಚನಗಳನ್ನು ಉದಾಹರಿಸುವರು. ಅವುಗಳಲ್ಲಿ ಕೆಲವು ಇಲ್ಲಿ ಕಾಣಿಸಲ್ಪಡುವವು.

ಸಂವರ್ತಸ್ಮೃತಿ.

ಅಷ್ಟವರ್ಷಾ ಭವೇದ್ಗೌರೀ ನವವರ್ಷಾ ತು ರೋಹಿಣೀ।
ದಶವರ್ಷಾ ಭವೇತ್ಕನ್ಯಾ ಅತಊರ್ಧ್ವಂ ರಜಸ್ವಲಾ ॥ ೬೫ ॥
ಮಾತಾ ಚೈವ ಪಿತಾ ಚೈವ ಜ್ಯೇಷ್ಠೋ ಭ್ರಾತಾ ತಥೈವ ಚ।
ತ್ರಯಸ್ತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ ॥ ೬೬ ॥
ತಸ್ಮಾದ್ವಿವಾಹಯೇತ್ಕನ್ಯಾಂ ಯಾವನ್ನರ್ತುಮತೀ ಭವೇತ್ ।
ವಿವಾಹೋ ಹ್ಯಷ್ಟವರ್ಷಾಯಾಃ ಕನ್ಯಾಯಾಸ್ತು ಪ್ರಶಸ್ಯತೇ ॥ ೬೭ ॥

ಅರ್ಥ.—ಸ್ತ್ರೀಯು ಎಂಟು ವರ್ಷ ವಯಸ್ಸಿನಲ್ಲಿ ಗೌರಿಯೂ ಒಂಭತ್ತರಲ್ಲಿ ರೋಹಿಣಿಯೂ ಹತ್ತರಲ್ಲಿ ಕನ್ಯೆಯೂ ಅದರ ಮೇಲೆ ರಜಸ್ವಲೆಯೂ ಆಗುವಳು. ತಾಯಿ, ತಂದೆ, ಅಣ್ಣ, ಈ ಮೂರು ಜನರೂ ರಜಸ್ವಲೆಯಾದ ಕನ್ಯೆಯನ್ನು ನೋಡಿ ನರಕವನ್ನು ಹೊಂದುವರು. ಆದುದರಿಂದ ಋತುಮತಿಯಾಗುವುದಕ್ಕೆ ಮೊದಲೇ ಕನ್ಯೆಗೆ ಮದುವೆಮಾಡಬೇಕು. ಎಂಟುವರ್ಷದ ಕನ್ಯೆಗೆ ವಿವಾಹವು ಪ್ರಶಸ್ತವಾಗಿರುವುದು.

ಇಲ್ಲಿ ಎಂಟು ವರ್ಷದವಳು ಗೌರಿ, ಒಂಭತ್ತುವರ್ಷದವಳು ರೋಹಿಣಿ, ಹತ್ತುವರ್ಷದವಳು ಕನ್ಯೆ, ಹತ್ತುವರ್ಷಕ್ಕೆ ಮೇಲ್ಪಟ್ಟವಳು ರಜಸ್ವಲೆ, ಎಂದು ಪರಿಭಾಷೆಮಾಡಲ್ಪಟ್ಟಿದೆ. ಆದರೆ ಈ ಪಾರಿಭಾಷಿಕ ಪದಗಳು ಸರಿಯಾಗಿ ಪ್ರಯೋಗಿಸಲ್ಪಟ್ಟಿಲ್ಲ. ಎಂಟು ವರ್ಷದವಳಿಗೆ ಗೌರೀಶಬ್ದಕ್ಕೆ ಬದಲಾಗಿ ಪುನಃ ಕನ್ಯಾಶಬ್ದವು ಪ್ರಯೋಗಿಸಲ್ಪಟ್ಟಿದೆ. ಇದಲ್ಲದೆ ರಜಸ್ವಲೆಗೂ ಕನ್ಯಾಶಬ್ದವು ಪ್ರಯೋಗಿಸಲ್ಪಟ್ಟಿದೆ.

ಬೃಹದ್ಯಮಸ್ಮೃತಿ, ಅಧ್ಯಾಯ ೩.

ಪಿತುರ್ಗೇಹೇ ತು ಯಾ ಕನ್ಯಾ ಪಶ್ಯತ್ಯಸಂಸ್ಕೃತಾ ರಜಃ।
ಭ್ರೂಣಹತ್ಯಾ ಪಿತುಸ್ತಸ್ಯಾಃ ಕನ್ಯಾ ಸಾ ವೃಷಲೀ ಸ್ಮೃತಾ ॥ ೧೮ ॥
ಯಸ್ತಾಂ ವಿವಾಹಯೇತ್ಕನ್ಯಾಂ ಬ್ರಾಹ್ಮಣೋ ಮದಮೋಹಿತಃ।
ಅಸಂಭಾಷ್ಯೋ ಹ್ಯಪಾಂಕ್ತೇಯಃ ಸವಿಪ್ರೋ ವೃಷಲೀಪತಿಃ ॥ ೧೯ ॥
ಪ್ರಾಪ್ತೇ ದ್ವಾದಶಮೇ ವರ್ಷೇ ಕನ್ಯಾಂ ಯೋ ನ ಪ್ರಯಚ್ಛತಿ।
ಮಾಸಿಮಾಸಿ ರಜಸ್ತಸ್ಯಾಃ ಪಿತಾ ಪಿಬತಿ ಶೋಣಿತಂ ॥ ೨೦ ॥
ಅಷ್ಟವರ್ಷಾ ಭವೇದ್ಗೌರೀ ನವವರ್ಷಾ ಚ ರೋಹಿಣೀ।
ದಶವರ್ಷಾ ಭವೇತ್ಕನ್ಯಾ ಅತಊರ್ಧ್ವಂ ರಜಸ್ವಲಾ ॥ ೨೧ ॥
ಮಾತಾ ಚೈವ ಪಿತಾ ಚೈವ ಜ್ಯೇಷ್ಠಭ್ರಾತಾ ತಥೈವ ಚ।
ತ್ರಯಸ್ತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ ॥ ೨೨ ॥

ಅರ್ಥ:—ತಂದೆಯ ಮನೆಯಲ್ಲಿ ಮದುವೆಯಿಲ್ಲದೆ ಯಾವ ಕನ್ಯೆಯು ಋತುಮತಿಯಾಗುವಳೋ, ಅವಳ ತಂದೆಗೆ ಭ್ರೂಣಹತ್ಯಾದೋಷವು ಬರುವುದು. ಅವಳು ವೃಷಲಿಯೆನ್ನಿಸುವಳು. ಅವಳನ್ನು ಮದುವೆಯಾಗುವ ಮದಮೋಹಿತನಾದ ಬ್ರಾಹ್ಮಣನು ಸಂಭಾಷಣೆಗೂ ಪಂಕ್ತಿಗೂ ಅರ್ಹನಲ್ಲ. ಆ ವಿಪ್ರನು ವೃಷಲೀಪತಿಯೆನ್ನಿಸುವನು. ಹನ್ನೆರಡನೆಯ ವರ್ಷವು ಪ್ರಾಪ್ತವಾದಾಗ್ಯೂ ಕನ್ಯಾದಾನಮಾಡದ ತಂದೆಯು ಪ್ರತಿತಿಂಗಳಲ್ಲಿಯೂ ಅವಳ ರಜೋರಕ್ತವನ್ನು ಕುಡಿಯುವನು. ಎಂಟು ವರ್ಷದವಳು ರೋಹಿಣಿಯು, ಹತ್ತು ವರ್ಷದವಳು ಕನ್ಯೆಯಾಗುವಳು, ಅದರ ಮೇಲೆ ರಜಸ್ವಲೆಯು. ತಾಯಿ, ತಂದೆ, ಮತ್ತು ಅಣ್ಣ, ಈ ಮೂರು ಜನರೂ ರಜಸ್ವಲೆಯಾದ ಕನ್ಯೆಯನ್ನು ನೋಡಿ ನರಕವನ್ನು ಹೊಂದುವರು.

ಇಲ್ಲಿಯೂ ಪಾರಿಭಾಷಿಕಪದಗಳು ಸರಿಯಾಗಿ ಪ್ರಯೋಗಿಸಲ್ಪಟ್ಟಿಲ್ಲ.

ಅಂಗಿರಸ್ಸ್ಮೃತಿ.

ಪಿತುರ್ವೇಶ್ಮನಿ ಯಾ ಕನ್ಯಾ ರಜಸ್ತು ಸಮುಪಸ್ಪೃಶೇತ್ ।
ಭ್ರೂಣಹತ್ಯಾ ಪಿತುಸ್ತಸ್ಯಾಃ ಸಾ ಕನ್ಯಾ ವೃಷಲೀ ಸ್ಮೃತಾ ॥ ೧೨೬ ॥
ಮಾತಾ ಚೈವ ಪಿತಾ ಚೈವ ಜ್ಯೇಷ್ಠೋ ಭ್ರಾತಾ ತಥೈವ ಚ ।
ತ್ರಯಸ್ತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ ॥ ೧೨೭ ॥
ಉದ್ವಹೇದ್ಯಸ್ತು ತಾಂ ಕನ್ಯಾಂ ಬ್ರಾಹ್ಮಣೋ ಮದಮೋಹಿತಃ ।
ಅಸಂಭಾಷ್ಯೋ ಹ್ಯಪಾಂಕ್ತೇಯಃ ಸವಿಪ್ರೋ ವೃಷಲೀಪತಿಃ ॥ ೧೨೮ ॥

ಅರ್ಥ.—ಯಾವ ಕನ್ಯೆಯು ತಂದೆಯ ಮನೆಯಲ್ಲಿ ಋತುಮತಿಯಾಗುವಳೋ, ಆವಳ ತಂದೆಗೆ ಭ್ರೂಣಹತ್ಯಾದೋಷವು ಬರುವುದು. ಮತ್ತು ಆ ಕನ್ಯೆಯು ವೃಷಲಿಯೆನ್ನಿಸುವಳು. ತಾಯಿ, ತಂದೆ, ಮತ್ತು ಅಣ್ಣ, ಈ ಮೂರು ಜನರೂ ರಜಸ್ವಲೆಯಾದ ಕನ್ಯೆಯನ್ನು ನೋಡಿ ನರಕವನ್ನು ಹೊಂದುವರು. ಯಾವ ಬ್ರಾಹ್ಮಣನು ಮದಮೋಹಿತನಾಗಿ ಆ ಕನ್ಯೆಯನ್ನು ಮದುವೆಯಾಗುವನೋ, ಅವನು ಸಂಭಾಷಣೆಗೂ ಪಂಕ್ತಿಗೂ ಯೋಗ್ಯನಲ್ಲ. ಮತ್ತು ಆ ಬ್ರಾಹ್ಮಣನು ವೃಷಲೀಪತಿಯೆನ್ನಿಸುವನು.

ಪರಾಶರ ಸಂಹಿತೆ, ಅಧ್ಯಾಯ. ೭.

ಅಷ್ಟವರ್ಷಾ ಭವೇದ್ಗೌರೀ ನವವರ್ಷಾ ತು ರೋಹಿಣೀ ।
ದಶವರ್ಷಾ ಭವೇತ್ಕನ್ಯಾ ಅತ ಊರ್ಧ್ವಂ ರಜಸ್ವಲಾ ॥ ೪ ॥
ಪ್ರಾಪ್ತೇತು ದ್ವಾದಶೇ ವರ್ಷೇ ಯಃ ಕನ್ಯಾಂ ನ ಪ್ರಯಚ್ಛತಿ ।
ಮಾಸಿಮಾಸಿ ರಜಸ್ತಸ್ಯಾಃ ಪಿಬಂತಿ ಪಿತರಃ ಸ್ವಯಂ ॥ ೫ ॥
ಮಾತಾ ಚೈವ ಪಿತಾ ಚೈವ ಜ್ಯೇಷ್ಠೋ ಭ್ರಾತಾ ತಥೈವ ಚ ।
ತ್ರಯಸ್ತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ ॥ ೬ ॥

ಯಸ್ತಾಂ ಸಮುದ್ವಹೇತ್ ಕನ್ಯಾಂ ಬ್ರಾಹ್ಮಣೋಽಜ್ಞಾನಮೋಹಿತಃ।
ಅಸಂಭಾಷ್ಯೋ ಹ್ಯಪಾಂಕ್ತೇಯಃ ಸವಿಪ್ರೋ ವೃಷಲೀಪತಿಃ ॥ ೭॥
ಯಃ ಕರೋತ್ಯೇಕರಾತ್ರೇಣ ವೃಷಲೀಸೇವನಂ ದ್ವಿಜಃ ।
ಸಭೈಕ್ಷಭುಗ್ಜಪನ್ನಿತ್ಯಂ ತ್ರಿಭಿರ್ವರ್ಷೈರ್ವಿಶುಧ್ಯತಿ ॥ ೮ ॥

ಅರ್ಥ—ಎಂಟುವರ್ಷವಯಸ್ಸಿನವಳು ಗೌರಿಯಾಗುವಳು. ಒಂಭತ್ತು ವರ್ಷದವಳು ರೋಹಿಣಿಯು. ಹತ್ತು ವರ್ಷದವಳು ಕನ್ಯೆಯಾಗುವಳು. ಅದಕ್ಕೆ ಮೇಲ್ಪಟ್ಟ ವಯಸ್ಸುಳ್ಳವಳು ರಜಸ್ವಲೆಯು. ಹನ್ನೆರಡನೆಯ ವರ್ಷವು ಪ್ರಾಪ್ತವಾದಾಗ್ಯೂ ಯಾವನು ಕನ್ಯೆಯನ್ನು ದಾನಮಾಡುವುದಿಲ್ಲವೋ, ಅವನ ಪಿತೃಗಳು ಪ್ರತಿ ತಿಂಗಳಲ್ಲಿಯೂ ಅವಳ ರಜಸ್ಸನ್ನು ತಾವೇ ಕುಡಿಯುವರು. ತಾಯಿ, ತಂದೆ, ಮತ್ತು ಅಣ್ಣ, ಈ ಮೂರುಜನರೂ ರಜಸ್ವಲೆಯಾದ ಕನ್ಯೆಯನ್ನು ನೋಡಿ ನರಕವನ್ನು ಹೊಂದುವರು. ಯಾವ ಬ್ರಾಹ್ಮಣನು ಅಜ್ಞಾನಮೋಹಿತನಾಗಿ ಆ ಕನ್ಯೆಯನ್ನು ಮದುವೆಯಾಗುತ್ತಾನೋ, ಅವನು ಸಂಭಾಷಣೆಗೂ ಪಂಕ್ತಿಗೂ ಯೋಗ್ಯನಲ್ಲ. ಮತ್ತು ಆ ವಿಪ್ರನು ವೃಷಲೀಪತಿಯೆನ್ನಿಸುವನು. ಯಾವ ದ್ವಿಜನು ಒಂದು ರಾತ್ರಿ ವೃಷಲೀ ಸಂಭೋಗವನ್ನು ಮಾಡುವನೋ, ಅವನು ಮೂರುವರ್ಷಗಳ ಪರ್ಯಂತ ಭಿಕ್ಷೆಬೇಡುತ್ತ ಜೀವಿಸುವವನಾಗಿ ನಿರಂತರ ಜಪಮಾಡಿದರೆ ಶುದ್ಧನಾಗುವನು.

ಈ ಸ್ಮೃತಿಯಲ್ಲಿಯೂ ಪಾರಿಭಾಷಿಕಪದಗಳು ಸರಿಯಾಗಿ ಪ್ರಯೋಗಿಸಲ್ಪಟ್ಟಿಲ್ಲ. ಹತ್ತುವರ್ಷದವಳು ಕನ್ಯೆಯೂ, ಅದಕ್ಕೆ ಮೇಲ್ಪಟ್ಟ ವಯಸ್ಸಿನವಳು ರಜಸ್ವಲೆಯೂ, ಎಂದು ಪರಿಭಾಷೆಮಾಡಿ, ಪುನಃ ಹನ್ನೆರಡುವರ್ಷದವಳಿಗೆ ಕನ್ಯಾಶಬ್ದವು ಪ್ರಯೋಗಿಸಲ್ಪಟ್ಟಿದೆ.

ವ್ಯಾಸಸ್ಮೃತಿ, ಅಧ್ಯಾಯ. ೨.

ಯದಿ ಸಾ ದಾತೃವೈಕಲ್ಯಾದ್ರಜಃ ಪಶ್ಯೇತ್ಕುಮಾರಿಕಾ ।
ಭ್ರೂಣಹತ್ಯಾಶ್ಚ ಯಾವತ್ಯಃ ಪತಿತಃ ಸ್ಯಾತ್ತದಪ್ರದಃ ॥ ೭॥

ಅರ್ಥ—ದಾನಮಾಡತಕ್ಕವನ ವೈಕಲ್ಯದ ದೆಸೆಯಿಂದ ಕುಮಾರಿಕೆಯು ಋತುಮತಿಯಾದರೆ, ಅವನು ಪತಿತನಾಗುವನು. ಮತ್ತು ಅವಳನ್ನು ದಾನಮಾಡುವ ವರೆಗೂ ಭ್ರೂಣಹತ್ಯಾಪಾಪಗಳು ಬರುವುವು.

ಶಂಖಸ್ಮೃತಿ, ಅಧ್ಯಾಯ. ೫.

ಪಿತೃವೇಶ್ಮನಿ ಯಾ ಕನ್ಯಾ ರಜಃ ಪಶ್ಯತ್ಯಸಂಸ್ಕೃತಾ ।
ತಸ್ಯಾಂ ಮೃತಾಯಾಂ ನಾಶೌಚಂ ಕದಾಚಿದಪಿ ಶಾಮ್ಯತಿ ॥ ೮ ॥

ಅರ್ಥ—ಮದುವೆಯಿಲ್ಲದೆ ತಂದೆಯ ಮನೆಯಲ್ಲಿ ಯಾವ ಕನ್ಯೆಯು ಋತುಮತಿಯಾಗುವಳೋ, ಅವಳು ಸತ್ತರೆ ಸೂತಕವು ಎಂದಿಗೂ ಹೋಗುವುದಿಲ್ಲ.

ಲಘುಶಾತಾತಪಸ್ಮೃತಿ.

ಪಿತೃವೇಶ್ಮನಿ ಯಾ ಕನ್ಯಾ ರಜಃ ಪಶ್ಯತ್ಯಸಂಸ್ಕೃತಾ ।
ಭ್ರೂಣಹತ್ಯಾ ಪಿತುಸ್ತಸ್ಯಾಃ ಸಾ ಕನ್ಯಾ ವೃಷಲೀ ಸ್ಮೃತಾ ॥೬೫॥

ಅರ್ಥ—ಮದುವೆಯಿಲ್ಲದೆ ತಂದೆಯ ಮನೆಯಲ್ಲಿ ಯಾವ ಕನ್ಯೆಯು ಋತುಮತಿಯಾಗುವಳೋ, ಅವಳ ತಂದೆಗೆ ಭ್ರೂಣಹತ್ಯಾದೋಷವು ಬರುವುದು ; ಮತ್ತು ಆ ಕನ್ಯೆಯು ವೃಷಲಿಯೆನ್ನಿಸುವಳು.

ವಸಿಷ್ಠಸ್ಮೃತಿ, ಅಧ್ಯಾಯ ೧೭.

ಪ್ರಯಚ್ಛೇನ್ನಗ್ನಿಕಾಂ ಕನ್ಯಾಂ ಋತುಕಾಲಭಯಾತ್ ಪಿತಾ ।
ಋತುಮತ್ಯಾಂ ಹಿ ತಿಷ್ಠಂತ್ಯಾಂ ದೋಷಃ ಪಿತರಮೃಚ್ಛತಿ ॥ ೬೨ ॥
ಯಾವಂತಃ ಕನ್ಯಾಮೃತವಃ ಸ್ಪೃಶಂತಿ ತುಲ್ಯೈಃ ಸಕಾಮಾಮಭಿಯಾಚ್ಯಮಾನಾಂ । ಭ್ರೂಣಾನಿ ತಾವಂತಿ ಹತಾನಿ ತಾಭ್ಯಾಂ ಮಾತಾಪಿತೃಭ್ಯಾಮಿತಿ ಧರ್ಮವಾದಃ ॥ ೬೩ ॥

ಅರ್ಥ—ಋತುಕಾಲಭಯದ ದೆಸೆಯಿಂದ ತಂದೆಯು ನಗ್ನಿಕೆಯಾದ ಕನ್ಯೆಯನ್ನೇ ದಾನಮಾಡಬೇಕು. ಅವಳು ಋತುಮತಿಯಾಗಿ ಮನೆಯಲ್ಲಿ ನಿಂತರೆ ತಂದೆಗೆ ದೋಷವು ಬರುವುದು. ಕನ್ಯೆಯು ಯಾವ ಪರ್ಯಂತ ಮದುವೆ ಮಾಡಿಕೊಳ್ಳಲಿಚ್ಛೆಯುಳ್ಳವಳಾಗಿಯೂ, ಸಮಾನಜಾತಿಯವರಿಂದ ವಿವಾಹಾರ್ಥವಾಗಿ ಯಾಚಿಸಲ್ಪಡುವವಳಾಗಿಯೂ, ಮತ್ತು ಪ್ರತಿ ತಿಂಗಳಲ್ಲಿಯೂ ಋತುಮತಿಯಾಗುವವಳಾಗಿಯೂ ಇರುವಳೋ, ಅಷ್ಟು ಭ್ರೂಣಗಳು ಅವಳ ತಾಯಿತಂದೆಗಳಿಂದ ನಾಶಮಾಡಲ್ಪಡುವುವೆಂದು ಧರ್ಮವಾದವಿರುವುದು.

ಲಘ್ವಾಶ್ವಲಾಯನಸ್ಮೃತಿ, ನಿಂದ್ಯಪ್ರಕರಣ.

ರಜಸ್ವಲಾ ಚ ಯಾ ಕನ್ಯಾ ಯದಿ ಸ್ಯಾದವಿವಾಹಿತಾ ।
ವೃಷಲೀ ವಾರ್ಷಲೇಯಃ ಸ್ಯಾತ್ ಜಾತಸ್ತಸ್ಯಾಂ ಸ ಚೈವ ಹಿ ॥ ೫ ॥

ಅರ್ಥ--ವಿವಾಹವಿಲ್ಲದೆ ಋತುಮತಿಯಾದವಳು ವೃಷಲಿಯಾಗುವಳು. ಅವಳಲ್ಲಿ ಹುಟ್ಟಿದವನು ವಾರ್ಷಲೇಯನೆನ್ನಿಸುವನು.

ಪ್ರಜಾಪತಿಸ್ಮೃತಿ.

ಪಿತುರ್ಗೇಹೇ ತು ಯಾ ಕನ್ಯಾ ರಜಃ ಪಶ್ಯತ್ಯಸಂಸ್ಕೃತಾ ।
ಸಾ ಕನ್ಯಾ ವೃಷಲೀ ಜ್ಞೇಯಾ ತತ್ಪತಿರ್ವೃಷಲೀಪತಿಃ ॥ ೮೫ ॥

ಅರ್ಥ—ಮದುವೆಯಿಲ್ಲದೆ ತಂದೆಯ ಮನೆಯಲ್ಲಿ ಋತುಮತಿಯಾಗುವ ಕನ್ಯೆಯು ವೃಷಲಿಯೆಂದೂ, ಅವಳ ಗಂಡನು ವೃಷಲೀಪತಿಯೆಂದೂ ತಿಳಿಯಲ್ಪಡತಕ್ಕವರು.

ಪರಾಶರಮಾಧವೀಯ, ಮರೀಚಿ.

ಗೌರೀಂ ದದನ್ನಾಕಪೃಷ್ಠಂ ವೈಕುಂಠಂ ರೋಹಿಣೀಂ ದದತ್ ।
ಕನ್ಯಾಂ ದದದ್ಬ್ರಹ್ಮಲೋಕಂ ರೌರವಂ ತು ರಜಸ್ವಲಾಂ ॥

ಅರ್ಥ—ಗೌರಿಯನ್ನು ದಾನಮಾಡಿದವನು ಸ್ವರ್ಗವನ್ನೂ, ರೋಹಿಣಿಯನ್ನು ದಾನಮಾಡಿದವನು ವೈಕುಂಠವನ್ನೂ, ಕನ್ಯೆಯನ್ನು ದಾನಮಾಡಿದವನು ಬ್ರಹ್ಮಲೋಕವನ್ನೂ, ರಜಸ್ವಲೆಯನ್ನು ದಾನಮಾಡಿದವನು ರೌರವನರಕವನ್ನೂ ಹೊಂದುವರು.

ಗೌತಮಧರ್ಮಶಾಸ್ತ್ರ, ಅಧ್ಯಾಯ ೧೮.

ಪ್ರದಾನಂ ಪ್ರಾಗೃತೋಃ ॥೨೧॥ ಅಪ್ರಯಚ್ಛನ್ ದೋಷೀ ॥೨೨॥
ಪ್ರಾಗ್ವಾಸಃಪ್ರತಿಪತ್ತೇರಿತ್ಯೇಕೇ ॥೨೩॥

ಅರ್ಥ—ಋತುಮತಿಯಾಗುವದಕ್ಕೆ ಮೊದಲು ಕನ್ಯಾದಾನ ಮಾಡತಕ್ಕದು. ದಾನಮಾಡದವನು ದೋಷಿಯಾಗುವನು. ಕನ್ಯೆಯು ವಸ್ತ್ರಧಾರಣೆಮಾಡುವದಕ್ಕೆ ಮೊದಲೇ ಪ್ರದಾನಮಾಡಲ್ಪಡಬೇಕೆಂದು ಕೆಲವರ ಮತವು.

ತಾತ್ಪರ್ಯ—ವಸ್ತ್ರಧಾರಣೆಗೆ ಮೊದಲು— ಎಂದರೆ ಹುಡುಗಿಯು ಮೈಮೇಲೆ ಬಟ್ಟೆ ಹಾಕಿಕೊಳ್ಳಬೇಕೆಂಬ ತಿಳುವಳಿಕೆಯಿಲ್ಲದೆ ವಸ್ತ್ರರಹಿತಳಾಗಿ ತಿರುಗಾಡುವಷ್ಟು ಚಿಕ್ಕ ವಯಸ್ಸಿನಲ್ಲಿ—ಕನ್ಯಾದಾನಮಾಡಬೇಕೆಂದರ್ಥವು.

ಮನುಸ್ಮೃತಿ. ಅಧ್ಯಾಯ. ೯.

ಕಾಲೇಽದಾತಾ ಪಿತಾ ವಾಚ್ಯೋ ವಾಚ್ಯಶ್ಚಾನುಪಯನ್ ಪತಿಃ ।
ಮೃತೇ ಭರ್ತರಿ ಪುತ್ರಸ್ತು ವಾಚ್ಯೋ ಮಾತುರರಕ್ಷಿತಾ ॥೪॥
ಉತ್ಕೃಷ್ಟಾಯಾಭಿರೂಪಾಯ ವರಾಯ ಸದೃಶಾಯ ಚ ।
ಅಪ್ರಾಪ್ತಾಮಪಿ ತಾಂ ತಸ್ಮೈ ಕನ್ಯಾಂ ದದ್ಯಾದ್ಯಥಾವಿಧಿ ॥೮೮॥
ತ್ರಿಂಶದ್ವರ್ಷೋ ವಹೇತ್ ಕನ್ಯಾಂ ಹೃದ್ಯಾಂ ದ್ವಾದಶವಾರ್ಷಿಕೀಂ ।
ತ್ರ್ಯಷ್ಟವರ್ಷೋಽಷ್ಟವರ್ಷಾಂ ವಾ ಧರ್ಮೇ ಸೀದತಿ ಸತ್ವರಃ ॥೯೪॥

ಅರ್ಥ--ಪ್ರದಾನಮಾಡಬೇಕಾದ ಕಾಲದಲ್ಲಿ ಕನ್ಯೆಯನ್ನು ದಾನಮಾಡದ ತಂದೆಯು ನಿಂದ್ಯನಾಗುವನು, ಋತುಕಾಲದಲ್ಲಿ ಪತ್ನೀಗಮನಮಾಡದ ಪತಿಯು ನಿಂದ್ಯನಾಗುವನು, ಗಂಡಸತ್ತ ತಾಯಿಯನ್ನು ರಕ್ಷಿಸದ ಮಗನೂ ನಿಂದ್ಯನಾಗುವನು. ಕನ್ಯೆಗೆ ವಿವಾಹಕ್ಕೆ ಯೋಗ್ಯವಾದ ವಯಸ್ಸು ಪ್ರಾಪ್ತವಾಗದೆ ಇದ್ದಾಗ್ಯೂ ಆಕೆಯನ್ನು ಸಜಾತೀಯನಾದ, ರೂಪವಂತನಾದ, ಉತ್ಕೃಷ್ಟನಾದ, ವರನಿಗೆ ವಿಧಿಪ್ರಕಾರ ದಾನಮಾಡಬಹುದು. ಮೂವತ್ತು ವರ್ಷಗಳ ವಯಸ್ಸುಳ್ಳವನು ಹನ್ನೆರಡು ವರ್ಷ ವಯಸ್ಸಿನ ಮನೋಹಾರಿಣಿಯಾದ ಕನ್ಯೆಯನ್ನೂ, ಇಪ್ಪತ್ತನಾಲ್ಕು

ವರ್ಷದವನು ಎಂಟು ವರ್ಷದವಳನ್ನು ಮದುವೆಯಾಗಬಹುದು ; ಅಥವಾ ಧರ್ಮವು ಲೋಪವಾಗುತ್ತಿರಲು ತ್ವರೆಯುಳ್ಳವನಾಗಬಹುದು.

ಕಳಗಿನ ಶ್ಲೋಕದ ಉತ್ತರಾರ್ಧಕ್ಕೆ ಬೇರೆ ಅರ್ಥಗಳು:—(೧) ಅಥವಾ ಧರ್ಮವು ಲೋಪವಾಗುತ್ತಿರಲು ತ್ವರಿತನಾದ ಇಪ್ಪತ್ತನಾಲ್ಕು ವರ್ಷದವನು ಎಂಟು ವರ್ಷದವಳನ್ನು ಮದುವೆಯಾಗಬಹುದು; (೨) ಅಥವಾ ಇಪ್ಪತ್ತನಾಲ್ಕು ವರ್ಷದವನು ಎಂಟು ವರ್ಷದವಳನ್ನು ಮದುವೆಯಾಗಬಹುದು. ತ್ವರೆಯುಳ್ಳವನಾದರೆ—ಎಂದರೆ ಇನ್ನೂ ಬೇಗನೆ ಮದುವೆಮಾಡಿಕೊಂಡರೆ—ಧರ್ಮದಲ್ಲಿ ಲೋಪವುಳ್ಳವನಾಗುವನು.

ಬೌಧಾಯನ ಸ್ಮೃತಿ, ಪ್ರಶ್ನ ೪, ಅಧ್ಯಾಯ ೧.

ದದ್ಯಾದ್ಗುಣವತೇ ಕನ್ಯಾಂ ನಗ್ನಿಕಾಂ ಬ್ರಹ್ಮಚಾರಿಣೇ।
ಅಪಿವಾ ಗುಣಹೀನಾಯ ನೋಪರುಂಧ್ಯಾದ್ರಜಸ್ವಲಾಂ ॥ ೧೧ ॥

ಅರ್ಥ—ಗುಣವಂತನಾದ ಬ್ರಹ್ಮಚಾರಿಗೆ ನಗ್ನಿಕೆಯಾದ ಕನ್ಯೆಯನ್ನು ದಾನಮಾಡಬೇಕು. ಅಥವಾ ಗುಣಹೀನನಿಗಾದರೂ ಕೊಡಬೇಕು. ರಜಸ್ವಲೆಯನ್ನು ತಡೆಯಬಾರದು.

ನಗ್ನಿಕೆಯೆಂಬ ಪದಕ್ಕೆ ವಸ್ತ್ರರಹಿತಳಾಗಿರುವ ಚಿಕ್ಕಹುಡುಗಿ—ಅಥವಾ ಋತುವಾಗದವಳು—ಎಂದೂ ಋತುಮತಿಯಾದವಳೆಂದೂ ಸಹ ಅರ್ಥಗಳಿರುವುವು. ಮೇಲಿನ ಶ್ಲೋಕದಲ್ಲಿ ಈಯೆರಡು ಅರ್ಥಗಳನ್ನೂ ಅನ್ವಯಿಸಬಹುದಾಗಿದೆ.

ಛಾಂದೋಗ್ಯೋಪನಿಷತ್ತು, ೧—೧೦—೧.

ಮಟಚೀಹತೇಷು ಕುರುಷ್ವಾಟಿಕ್ಯಾ ಸಹ ಜಾಯಯೋಷಸ್ತಿರ್ಹ ಚಾಕ್ರಾಯಣಇಭ್ಯಗ್ರಾಮೇ ಪ್ರದ್ರಾಣಕಉವಾಸ ॥

ಅರ್ಥ—ಕುರುದೇಶದಲ್ಲಿ ಕಲ್ಮಳೆಯಿಂದ ಕ್ಷಾಮಬಾಧೆಯುಂಟಾಗಿರಲು ಉಷಸ್ತಿಚಾಕ್ರಾಯಣನು ದರಿದ್ರನಾಗಿ ಅಟಿಕಿಯಾದ ತನ್ನ ಹೆಂಡತಿಯೊಡನೆ ಇಭ್ಯಗ್ರಾಮದಲ್ಲಿ ವಾಸಮಾಡಿದನು.

ಭಾಷ್ಯ—ಆಟಿಕ್ಯಾ = ಅನುಪಜಾತಪಯೋಧರಾದಿ ಸ್ತ್ರೀವ್ಯಂಜನಯಾ ॥

ಅರ್ಥ—ಅಟಿಕಿಯೆಂದರೆ ಪಯೋಧರಾದಿ ಸ್ತ್ರೀಚಿಹ್ನೆಗಳುಂಟಾಗದವಳು—ಎಂದರೆ ಋತುವಾಗದವಳು.

ಪಾಠಾಂತರ :—ಅಥಕ್ಯಾ = ಅಸನ್ನಾರ್ತವಾ ಯೋಷಿದಾಥಕೀತ್ಯಭಿಧೀಯತೆ ॥

ಅರ್ಥ—ಆಥಕಿಯೆಂದರೆ ಋತುವಾಗುವಕಾಲ ಸಮೀಪಿಸಿರತಕ್ಕವಳು.

ಈ ಮೇಲಿನ ಭಾಷ್ಯಪಾಠಾಂತರಗಳಿಂದ ಉಷಸ್ತಿಚಾಕ್ರಾಯಣನ ಹೆಂಡತಿಯು ಋತುಮತಿಯಾಗದ ಹುಡುಗಿಯಾಗಿದ್ದಳೆಂದು ತೋರುತ್ತದೆ. ಆದರೆ ಆಟ

ಕೀಶಬ್ದಕ್ಕೆ ಪ್ರಯಾಣಮಾಡಲು ಯೋಗ್ಯಳೆಂದು ಬೇರೆ ಅರ್ಥವೂ ಇರುವುದು. ಇದಲ್ಲದೆ 'ಆಟಕಿ' ಅಥವಾ 'ಆಟಕೆ' ಎಂದು ಉಷಸ್ತಿಚಾಕ್ರಾಯಣನ ಹೆಂಡತಿಯ ಹೆಸರೆಂದೂ ಕೆಲವರು ಹೇಳುವರು. ಈ ಅರ್ಥಗಳಿಂದ ಆಕೆಯು ಚಿಕ್ಕಹುಡುಗಿಯಾಗಿದ್ದಳೋ ಯೌವನವತಿಯಾಗಿದ್ದಳೋ ಎಂಬುದು ಸ್ಪಷ್ಟವಾಗುವುದಿಲ್ಲ. ಪರಾಶರಮಾಧವೀಯದಲ್ಲಿ ಯಮ, ಅಥವಾ ಸಂವರ್ತ.

ಅಷ್ಟವರ್ಷಾ ಭವೇದ್ಗೌರೀ ನವಮೇ ನಗ್ನಿಕಾ ಭವೇತ್ ।
ದಶಮೇ ಕನ್ಯಕಾ ಪ್ರೋಕ್ತಾ ದ್ವಾದಶೇ ವೃಷಲೀ ಸ್ಮೃತಾ ॥

ಅರ್ಥ—ಎಂಟು ವರ್ಷದವಳು ಗೌರಿಯಾಗುವಳು, ಒಂಭತ್ತರಲ್ಲಿ ನಗ್ನಿಕೆಯು, ಹತ್ತನೆಯ ವರ್ಷದಲ್ಲಿ ಕನ್ಯಕೆಯೆಂದು ಹೇಳಲ್ಪಡುವಳು, ಹನ್ನೆರಡರಲ್ಲಿ ವೃಷಲಿಯೆಂದು ಸ್ಮರಿಸಲ್ಪಡುವಳು.

ಪೈಠೀನಸಿ.

ಯಾವನ್ನೋದ್ಭಿದ್ಯೇತೇ ಸ್ತನೌ, ತಾವದೇವ ದೇಯಾ ।
ಅಥ ಋತುಮತೀ ಭವತಿ, ತದಾ ದಾತಾ ಪ್ರತಿಗ್ರಹೀತಾ ಚ ನರಕಮಾಪ್ನೋತಿ; ಪಿತೃಪಿತಾಮಹಪ್ರಪಿತಾಮಹಾಶ್ಚ ವಿಷ್ಠಾಯಾಂ ಜಾಯಂತೇ. ತಸ್ಮಾನ್ನಗ್ನಿಕಾ ದಾತವ್ಯಾ ॥

ಅರ್ಥ—ಕುಚೋದ್ಗಮವಾಗುವುದಕ್ಕೆ ಮೊದಲೇ ಕನ್ಯೆಯು ದಾನಮಾಡಲ್ಪಡತಕ್ಕವಳು. ಋತುಮತಿಯಾಗಿದ್ದರೆ, ದಾನಮಾಡುವವನೂ ತೆಗೆದುಕೊಳ್ಳುವವನೂ ಸಹ ನರಕವನ್ನು ಹೊಂದುವರು; ಮತ್ತು ತಂದೆ, ತಾತ, ಮುತ್ತಾತ್ತ ಇವರು ಮಲದಲ್ಲಿ ಹುಟ್ಟುವರು. ಆದುದರಿಂದ ನಗ್ನಿಕೆಯನ್ನೇ ದಾನಮಾಡಬೇಕು.

ಗೃಹ್ಯಸಂಗ್ರಹ.

ತಸ್ಮಾದವ್ಯಂಜನೋಪೇತಾಮರಜಾಮಪಯೋಧರಾಂ ।
ಅಭುಕ್ತಾಂ ಚೈವ ಸೋಮಾದ್ಯೈಃ ಪ್ರಶಂಸಂತಿ ತು ಕನ್ಯಕಾಂ ॥

ಅರ್ಥ— ಆದುದರಿಂದ ಕ್ಷಿ ರೋಮಕುಚರಜೋದರ್ಶನವಿಲ್ಲದವಳಾಗಿಯೂ ಸೋಮಾದಿಗಳಿಂದ ಭೋಗಿಸಲ್ಪಡದವಳಾಗಿಯೂ ಇರುವ ಕನ್ಯೆಯು ವಿವಾಹಕ್ಕೆ ಪ್ರಶಸ್ತಳಾಗಿರುವಳು.

ನಿರ್ಣಯಸಿಂಧುವಿನಲ್ಲಿ ಭಾರತವಚನ.

ದಶವರ್ಷೋಽಷ್ಟವರ್ಷಾಂ ವಾ ಧರ್ಮೇ ಸೀದತಿ ಸತ್ವರಃ ।
ಅತೋಽಪ್ರವೃತ್ತೇ ರಜಸಿ ಕನ್ಯಾಂ ದದ್ಯಾತ್ ಪಿತಾ ಸಕೃತ್ ॥
ಸಪ್ತಸಂವತ್ಸರಾದೂರ್ಧ್ವಂ ವಿವಾಹಃ ಸಾರ್ವವರ್ಣಿಕಃ ।
ಕನ್ಯಾಯಾಃ ಶಸ್ಯತೇ ರಾಜನ್ನನ್ಯಥಾ ಧರ್ಮಗರ್ಹಿತಃ ॥

ಅರ್ಥ—ಅಥವಾ ಧರ್ಮವು ಲೋಪವಾಗುತ್ತಿರಲು ತ್ವರಿತನಾದ ಹತ್ತು ವರ್ಷದವನು ಎಂಟು ವರ್ಷದವಳನ್ನು ಮದುವೆಯಾಗಬಹುದು. ಎಲೈ ರಾಜನೆ, ರಜೋದರ್ಶನವಾಗುವುದಕ್ಕೆ ಮೊದಲು ತಂದೆಯು ಒಂದಾವರ್ತಿ ಕನ್ಯಾದಾನ ಮಾಡಬೇಕು. ಸರ್ವ ವರ್ಣಗಳಲ್ಲಿಯೂ ಕನ್ಯೆಗೆ ಏಳು ವರ್ಷಗಳಾದ ಬಳಿಕ ವಿವಾಹವು ವಿಧಿಸಲ್ಪಟ್ಟಿದೆ. ಅನ್ಯಥಾ ಆಚರಿಸಿದರೆ ಧರ್ಮನಿಂದೆಯುಂಟಾಗುತ್ತದೆ.

ನಿರ್ಣಯಸಿಂಧು, ಪರಾಶರ ಮಾಧವೀಯ.

ಜನ್ಮತೋ ಗರ್ಭಾಧಾನಾದ್ವಾ ಪಂಚಮಾಬ್ದಾತ್ ಪರಂ ಶುಭಂ ।
ಕುಮಾರೀವರಣಂ ದಾನಂ ಮೇಖಲಾಬಂಧನಂ ತಥಾ ॥

ಅರ್ಥ—ಜನ್ಮದಿಂದಾಗಲೀ ಗರ್ಭಾಧಾನದಿಂದಾಗಲೀ ಐದು ವರ್ಷಗಳಾದ ಬಳಿಕ ಕುಮಾರೀವರಣವೂ ದಾನವೂ ಮತ್ತು ಮೇಖಲಾಬಂಧನವೂ ಪರಮಶುಭಕರವಾಗಿರುವುವು.

ನಿರ್ಣಯಸಿಂಧು, ಯಮ.

ತಸ್ಮಾದುದ್ವಾಹಯೇತ್ಕನ್ಯಾಂ ಯಾವನ್ನರ್ತುಮತೀ ಭವೇತ್ ॥

ಅರ್ಥ—ಆದಕಾರಣ ಋತುಮತಿಯಾಗುವುದಕ್ಕೆ ಮೊದಲೇ ಕನ್ಯೆಗೆ ಮದುವೆಮಾಡಬೇಕು.

ನಿರ್ಣಯಸಿಂಧು, ಹಾರೀತ.

ಪಿತುರ್ಗೇಹೇ ತು ಯಾ ಕನ್ಯಾ ರಜಃ ಪಶ್ಯತ್ಯಸಂಸ್ಕೃತಾ ।
ಸಾ ಕನ್ಯಾ ವೃಷಲೀ ಜ್ಞೇಯಾ ತತ್ಪತಿರ್ವೃಷಲೀಪತಿಃ ॥

ಅರ್ಥ—ಮದುವೆಯಿಲ್ಲದೆ ತಂದೆಯ ಮನೆಯಲ್ಲಿಯೇ ಋತುಮತಿಯಾದ ಕನ್ಯೆಯು ವೃಷಲಿಯೆಂದೂ ಅವಳನ್ನು ಮದುವೆಯಾದವನು ವೃಷಲೀಪತಿಯೆಂದೂ ತಿಳಿಯಲ್ಪಡತಕ್ಕವರು.

ನಿರ್ಣಯಸಿಂಧು, ದೇವಲ-ಅತ್ರಿ-ಕಶ್ಯಪರು.

ಪಿತುರ್ಗೇಹೇ ತು ಯಾ ಕನ್ಯಾ ರಜಃ ಪಶ್ಯತ್ಯಸಂಸ್ಕೃತಾ ।
ಭ್ರೂಣಹತ್ಯಾ ಪಿತುಸ್ತಸ್ಯಾಃ ಸಾ ಕನ್ಯಾ ವೃಷಲೀ ಸ್ಮೃತಾ ॥
ಯಸ್ತಾಂ ಸಮುದ್ವಹೇತ್ಕನ್ಯಾಂ ಬ್ರಾಹ್ಮಣೋ ಜ್ಞಾನದುರ್ಬಲಃ ।
ಅಶ್ರಾದ್ಧೇಯಮಪಾಂಕ್ತೇಯಂ ತಂ ವಿದ್ಯಾದ್ವೃಷಲೀಪತಿಂ ॥

ಅರ್ಥ—ಮದುವೆಯಿಲ್ಲದೆ ತಂದೆಯ ಮನೆಯಲ್ಲಿ ಯಾವ ಕನ್ಯೆಯು ಋತುಮತಿಯಾಗುವಳೋ, ಅವಳ ತಂದೆಗೆ ಭ್ರೂಣಹತ್ಯಾದೋಷವು ಬರುವುದು. ಆ ಕನ್ಯೆಯು ವೃಷಲಿಯೆಂದು ತಿಳಿಯಲ್ಪಡುವಳು. ಜ್ಞಾನದುರ್ಬಲನಾದ ಯಾವ ಬ್ರಾ

ಹ್ಮಣನು ಆ ಕನ್ಯೆಯನ್ನು ಮದುವೆಯಾಗುವನೋ, ಅವನು ಶ್ರಾದ್ಧಕ್ಕೂ ಪಂಕಿಗೂ ಅಯೋಗ್ಯನೆಂದೂ ವೃಷಲೀಪತಿಯೆಂದೂ ತಿಳಿಯಬೇಕು.

ಅಂಗಿರ.

ಅಷ್ಟವರ್ಷಾ ಭವೇದ್ಗೌರೀ ನವವರ್ಷಾ ತು ರೋಹಿಣೀ ।
ದಶಮೇ ಕನ್ಯಕಾ ಪ್ರೋಕ್ತಾ ಅತಊರ್ಧ್ವಂ ರಜಸ್ವಲಾ ॥
ತಸ್ಮಾತ್ ಸಂವತ್ಸರೇ ಪ್ರಾಪ್ತೇ ದಶಮೇ ಕನ್ಯಕಾ ಬುಧೈಃ ।
ಪ್ರದಾತವ್ಯಾ ಪ್ರಯತ್ನೇನ ನ ದೋಷಃ ಕಾಲದೋಷತಃ ॥

ಅರ್ಥ—ಎಂಟುವರ್ಷದವಳು ಗೌರಿಯಾಗುವಳು. ಒಂಭತ್ತು ವರ್ಷದವಳು ರೋಹಿಣಿಯು. ಹತ್ತನೆಯ ವರ್ಷದಲ್ಲಿ ಕನ್ಯಕೆಯೆಂದು ಹೇಳಲ್ಪಡುವಳು ಅದಕ್ಕೆ ಮೇಲ್ಪಟ್ಟ ವಯಸ್ಸಿನವಳು ರಜಸ್ವಲೆಯು. ಅದಕಾರಣ ಹತ್ತನೆಯ ವರ್ಷ ಬರುತ್ತಲೇ ಹುಡುಗಿಯು ಬುದ್ಧಿವಂತರಿಂದ ಪ್ರಯತ್ನಪೂರ್ವಕವಾಗಿ ಪ್ರದಾನ ಮಾಡಲ್ಪಡತಕ್ಕವಳು. ಕಾಲದೋಷದ ದೆಶೆಯಿಂದ ದೋಷವೇನೂ ಇಲ್ಲ.

ಎಂದರೆ ದಾನಮಾಡಲಿಕ್ಕೆ ಶುಭಮುಹೂರ್ತವಿಲ್ಲದೆ ಇದ್ದಾಗ್ಗೂ ಹತ್ತುವರ್ಷದವಳನ್ನು ದಾನಮಾಡಿದರೆ ದೋಷವಿಲ್ಲ. ರಜಸ್ವಲೆಯಾಗುವುದರಿಂದ ಹತ್ತು ವರ್ಷ ತುಂಬಿದ ಬಳಿಕ ದಾನಮಾಡಬಾರದು. ಹಾಗೆ ಮಾಡಿದರೆ ದೋಷವು ಬರುವುದು.

ಹೇಮಾದ್ರಿಧರ್ಮಶಾಸ್ತ್ರ ಪ್ರಾಯಶ್ಚಿತ್ತಾಧ್ಯಾಯ. ಮಾರ್ಕಂಡೇಯಃ.

ಸಾ ಕನ್ಯಾ ಪಿತೃವೇಶ್ಮಸ್ಥಾ ಯದಿ ಪುಷ್ಪವತೀ ಭವೇತ್ ।
ಅಸಂಸ್ಕೃತಾ ಪರಿತ್ಯಾಜ್ಯಾ ನ ಪಶ್ಯೇತ್ತಾಂ ಕದಾಚನ ॥
ವಿವಾಹೇ ಚ ನ ಯೋಗ್ಯಾ ಸ್ಯಾಲ್ಲೋಕದ್ವಯವಿಗರ್ಹಿತಾ ।
ಏತಾಂ ಪರಿಣಯನ್ವಿಪ್ರೋ ನ ಯೋಗ್ಯೋ ಹವ್ಯಕವ್ಯಯೋಃ ॥

ಗೌತಮಃ.

ಯದಾ ರಹಃ ಪುಷ್ಪವತೀ ದ್ವಿಜಸ್ತಾಮುದ್ವಹೇದ್ಯದಿ ।
ಕಾಲಾಂತರೇ ಯದಾ ಜ್ಞಾತಾ ತದಾ ತಾಂ ಸಂಪರಿತ್ಯಜೇತ್ ॥
ಯದೀಚ್ಛೇದಾತ್ಮನಶ್ಶುದ್ಧಿಂ ತದಾ ಚಾಂದ್ರಾಯಣಂ ಚರೇತ್ ।
ಕಾಮಾತುರಸ್ತದಾ ವರ್ತೇತ್ಸ ಚಂಡಾಲಸಮೋ ಭವೇತ್ ॥

ಅರ್ಥ—ಮಾರ್ಕಂಡೇಯ ವಚನ:—ಮದುವೆಯಿಲ್ಲದೆ ತಂದೆಯ ಮನೆಯಲ್ಲಿರುವ ಕನ್ಯೆಯು ಋತುಮತಿಯಾದರೆ, ಅವಳನ್ನು ತ್ಯಜಿಸಬೇಕು. ಅವಳನ್ನೆಂದಿಗೂ ನೋಡಬಾರದು. ಅವಳು ವಿವಾಹಕ್ಕೆ ಯೋಗ್ಯಳಲ್ಲ. ಎರಡು ಲೋಕಗಳಲ್ಲಿಯೂ ನಿಂದ್ಯಳು. ಅವಳನ್ನು ಮದುವೆಯಾದ ವಿಪ್ರನು ಹವ್ಯಕವ್ಯಗಳಿಗೆ ಯೋಗ್ಯನಲ್ಲ. ಗೌತಮವಚನ:—ರಹಸ್ಯದಲ್ಲಿ ಋತುಮತಿಯಾದವಳನ್ನು ಮದುವೆ

ಯಾದ ದ್ವಿಜನು ಕಾಲಾಂತರದಲ್ಲಿ ಅವಳ ವಿಷಯವು ತಿಳಿಯಲು ಆಗ ಅವಳನ್ನು ತ್ಯಜಿಸಬೇಕು. ಆತ್ಮಶುದ್ಧಿಯನ್ನಪೇಕ್ಷಿಸಿದರೆ ಚಾಂದ್ರಾಯಣವನ್ನು ಮಾಡಬೇಕು. ಕಾಮಾತುರನಾಗಿದ್ದುದಾದರೆ ಅವನು ಚಂಡಾಲನಿಗೆ ಸಮನಾಗುವನು.

ಹೇಮಾದ್ರಿಧರ್ಮಶಾಸ್ತ್ರ, ಪ್ರಾಯಶ್ಚಿತ್ತಾಧ್ಯಾಯ. ದೇವಲ.

ವಿವಾಹೇ ವಿತತೇ ತಂತ್ರೇ ಹೋಮಕಾಲ ಉಪಸ್ಥಿತೇ ।
ವಧೂಃ ಪಶ್ಯೇದ್ಯದಾ ಪುಷ್ಪಂ ಪ್ರಥಮಂ ದೋಷಸಂಭವಂ ॥
ಸಾ ವಧೂಃ ಶೂದ್ರಕನ್ಯಾ ಸ್ಯಾತ್ ತತ್ಪತಿರ್ವೃಷಲೋಪಮಃ ।
ತಯೋಃ ಪುತ್ರಸ್ತು ವೃಷಲಃ ತೇ ಯಾಂತಿ ನರಕಂ ಧ್ರುವಂ ॥

ಮರೀಚಿಃ.

ವಿವಾಹದಿವಸಾದ್ರಾಜನ್ನಾರಭ್ಯ ಪ್ರಥಮಾರ್ತವಾ ।
ವಧೂರ್ಯಾ ಶೇಷಹೋಮಾತ್ಪ್ರಾಗುಭೌ ನರಕಗಾಮಿನೌ ॥

ಅರ್ಥ—ದೇವಲವಚನ—ವಿವಾಹತಂತ್ರವು ಉಪಕ್ರಮಿಸಿ ಹೋಮಕಾಲವು ಬಂದಿರಲು ವಧುವು ದೋಷಕ್ಕೆ ಕಾರಣವಾದ ಪ್ರಥಮ ರಜಸ್ಸನ್ನು ಕಂಡರೆ, ಅವಳು ಶೂದ್ರಕನ್ಯೆಯಾಗುವಳು. ಅವಳ ಗಂಡನು ಶೂದ್ರನಿಗೆ ಸಮನಾಗುವನು. ಅವರ ಮಗನು ಶೂದ್ರನಾಗುವನು. ಅವರು ಸತ್ಯವಾಗಿ ನರಕವನ್ನು ಹೊಂದುವರು. ಮರೀಚಿ ವಚನ—ರಾಜನೆ! ವಿವಾಹದಿವಸ ಪ್ರಾರಂಭಿಸಿ ಶೇಷಹೋಮವಾಗುವದರೊಳಗಾಗಿ ವಧುವು ಪ್ರಥಮ ಋತುಮತಿಯಾದರೆ, ವಧೂವರರಿಬ್ಬರೂ ನರಕವನ್ನು ಹೊಂದುವರು.

ಸ್ಮೃತ್ಯಂತರ.

ಯಾವನ್ನೋದ್ಭಿದ್ಯೇತೇ ಕುಚೌ ತಾವದ್ದೇಯಾ ॥

ಅರ್ಥ—ಕುಚಗಳು ವೃದ್ಧಿಹೊಂದುವುದರೊಳಗಾಗಿ ದಾನಮಾಡಲ್ಪಡತಕ್ಕವಳು.

ಪರಾಶರಮಾಧವೀಯ, ಬೃಹಸ್ಪತಿ.

ತ್ರಿಂಶದ್ವರ್ಷೋ ದಶಾಬ್ದಾಂ ತು ಭಾರ್ಯಾಂ ವಿಂದೇತ ನಗ್ನಿಕಾಂ ।
ಏಕವಿಂಶತಿವರ್ಷೋ ವಾ ಸಪ್ತವರ್ಷಾಮವಾಪ್ನುಯಾತ್ ॥

ಅರ್ಥ—ಮೂವತ್ತು ವರ್ಷದವನು ನಗ್ನಿಕೆಯಾದ ಹತ್ತು ವರ್ಷದ ಭಾರ್ಯೆಯನ್ನು ಹೊಂದತಕ್ಕದು. ಅಥವಾ ಇಪ್ಪತ್ತೊಂದು ವರ್ಷದವನು ಏಳುವರ್ಷದವಳನ್ನು ಹೊಂದಬಹುದು.

ವಿವಾಹತತ್ವಾರ್ಣವದಲ್ಲಿ ಕಾಶ್ಯಪವಚನ.

ಅಷ್ಟವರ್ಷಾ ಭವೇದ್ಗೌರೀ ದಶವರ್ಷಾ ತು ನಗ್ನಿಕಾ ।
ದ್ವಾದಶೇ ತು ಭವೇತ್ಕನ್ಯಾ ಅತಊರ್ಧ್ವಂ ರಜಸ್ವಲಾ ॥

ಅರ್ಥ—ಎಂಟುವರ್ಷದವಳು ಗೌರಿಯೂ, ಹತ್ತುವರ್ಷದವಳು ನಗ್ನಿಕೆಯೂ, ಹನ್ನೆರಡು ವರ್ಷದವಳು ಕನ್ಯೆಯೂ, ಅದಕ್ಕೆ ಮೇಲ್ಪಟ್ಟ ವಯಸ್ಸಿನವಳು ರಜಸ್ವಲೆಯೂ ಆಗುವರು.

ಸಂಸ್ಕಾರರತ್ನಮಾಲೆಯಲ್ಲಿ ದೇವಲವಚನ.

ಸಪ್ತಾಬ್ದಾ ಕನ್ಯಕಾನಾಮ್ನಾ ಶೈಶವೀ ಸ್ಯಾಚ್ಛುಭಾನ್ವಿತಾ ।
ಯಾಽಷ್ಟವರ್ಷಾ ಭವೇದ್ಗೌರೀ ಪುತ್ರಪೌತ್ರಪ್ರವರ್ಧಿನೀ ॥
ರೋಹಿಣೀ ನವವರ್ಷಾ ಸ್ಯಾದ್ಧನಧಾನ್ಯವಿವರ್ಧಿನೀ ।
ಊರ್ಧ್ವಂ ದಶಾಬ್ದಾದ್ಯಾ ಕನ್ಯಾ ಪ್ರಾಗ್ರಜೋದರ್ಶನಾತ್ತು ಸಾ ॥
ಗಾಂಧಾರೀ ಸ್ಯಾತ್ಸಮುದ್ವಾಹ್ಯಾ ಚಿರಂ ಜೀವಿತುಮಿಚ್ಛತಾ ॥

ಅರ್ಥ—ಶಿಶುವಾದ ಏಳುವರ್ಷದವಳು ಕನ್ನಿಕೆಯೆಂದು ಹೆಸರುಳ್ಳವಳಾಗಿಯೂ ಶುಭಾನ್ವಿತಳಾಗಿಯೂ ಇರುವಳು. ಎಂಟುವರ್ಷದವಳು ಗೌರಿಯಾಗಿಯೂ ಪುತ್ರ ಪೌತ್ರ ಪ್ರವರ್ಧಿನಿಯಾಗಿಯೂ ಆಗುವಳು. ಒಂಭತ್ತು ವರ್ಷದವಳು ಧನಧಾನ್ಯವರ್ಧಿನಿಯಾದ ರೋಹಿಣಿಯು. ಹತ್ತುವರ್ಷದಿಂದ ರಜೋದರ್ಶನಕ್ಕೆ ಮುಂಚೆ ಗಾಂಧಾರಿಯಾಗುವಳು. ಇವಳು ಚಿರಜೀವವನ್ನಪೇಕ್ಷಿಸುವನಿಂದ ಮದುವೆಮಾಡಿಕೊಳ್ಳಲ್ಪಡತಕ್ಕವಳು.

ಕಾಶೀಖಂಡ, ಅಧ್ಯಾಯ ೩೯.

ಕನ್ಯಾಂ ಭುಂಕ್ತೇ ರಜಃಕಾಲೇಗ್ನಿಶ್ಶಶೀ ರೋಮದರ್ಶನೇ ।
ಸ್ತನೋದ್ಭೇದೇ ಚ ಗಂಧರ್ವಸ್ತತ್ಪ್ರಾಗೇವ ಪ್ರದೀಯತೇ ॥ ೧ ॥

ಅರ್ಥ—ಕನ್ಯೆಯನ್ನು ರಜಃಕಾಲದಲ್ಲಿ ಅಗ್ನಿಯೂ, ರೋಮದರ್ಶನವಾದ ಮೇಲೆ ಸೋಮನೂ, ಸ್ತನಗಳು ವೃದ್ಧಿಹೊಂದಿದ ಬಳಿಕ ಗಂಧರ್ವನೂ ಭೋಗಿಸುವರು. ಇದಕ್ಕೆ ಮೊದಲೇ ಕನ್ಯೆಯು ದಾನಮಾಡಲ್ಪಡಬೇಕು.

ವಿಧಾನಪಾರಿಜಾತ.

ಊಢಾನಾಂ ವತ್ಸರಾರ್ಧೇನ ಮಾಸೇ ಪಕ್ಷೇ ತಥಾ ಖಲು ।
ರಜಸೋ ದರ್ಶನಂ ಸ್ತ್ರೀಣಾಂ ಸರ್ವದೈವಾಶುಭಾವಹಂ ॥

ಅರ್ಥ—ಮದುವೆಯಾದ ಸ್ತ್ರೀಯರಿಗೆ ಆರು ತಿಂಗಳುಗಳಲ್ಲಿ, ಒಂದು ತಿಂಗಳಲ್ಲಿ, ಅಥವಾ ಹದಿನೈದು ದಿವಸಗಳಲ್ಲಿ, ಆಗುವ ಋತುದರ್ಶನವು ಸರ್ವದಾ ಅಶುಭವನ್ನುಂಟುಮಾಡುವಂಥಾದ್ದಾಗಿರುವುದು.

ಹೀಗೆ ಇನ್ನೂ ಬೇರೆ ನಿಷೇಧಕವಚನಗಳನ್ನು ಬಾಲ್ಯವಿವಾಹಪಕ್ಷದವರು ಉದಾಹರಿಸುವರು.

ಈ ರೀತಿಯಾದ ವಚನಗಳ ಆಧಾರದ ಮೇಲೆ ವಿರೋಧಿಪಕ್ಷದವರು ಋತುಮತೀವಿವಾಹವು ಶಾಸ್ತ್ರನಿಷಿದ್ಧವೆಂದೂ ಅನೃತುಮತೀವಿವಾಹವು ಶಾಸ್ತ್ರಸಮ್ಮತವೆಂದೂ ವಾದಿಸುವರು.

ಹುಡುಗಿಯರಿಗೆ ಹತ್ತುವರ್ಷ ವಯಸ್ಸು ತುಂಬುವುದರೊಳಗಾಗಿ ವಿವಾಹವನ್ನು ಮಾಡುವುದು ಉತ್ತಮಪಕ್ಷ—ಮತ್ತು ಶುಭಕರ. ತಪ್ಪಿದರೆ ಹನ್ನೆರಡು ವರ್ಷಗಳೊಳಗಾಗಿ ಮದುವೆ ಮಾಡಬೇಕು. ವಸ್ತ್ರಧಾರಣೆಮಾಡಬೇಕೆಂಬ ಜ್ಞಾನವಿಲ್ಲದೆ, ಇರುವಂಥ ಚಿಕ್ಕ ವಯಸ್ಸಿನ ಹೆಣ್ಣು ಮಗುವಿಗೂ ಮದುವೆಮಾಡಬಹುದು. ಎಂಟು—ಒಂಭತ್ತು-ಹತ್ತು ವರ್ಷಗಳ ಹುಡುಗಿಯರನ್ನು ದಾನಮಾಡುವವರು ಸ್ವರ್ಗ-ವೈಕುಂಠ-ಬ್ರಹ್ಮ ಲೋಕಗಳನ್ನು ಪಡೆಯುವರು. ಎಂಟು ವರ್ಷದವಳ ವಿವಾಹವು ಪ್ರಶಸ್ತವಾದುದು. ಸ್ತ್ರೀಯರಿಗೆ ಹನ್ನೆರಡು ವರ್ಷಗಳ ಮೇಲೆ ವಿವಾಹವನ್ನು ಮಾಡಬಾರದು. ಅವಿವಾಹಿತಳಾದ ಋತುಮತಿಯು ಸತ್ತರೆ ಆ ಸಂಬಂಧವಾದ ಆಶೌಚವು ಎಂದಿಗೂ ಹೋಗುವುದಿಲ್ಲ. ಮದುವೆಯಿಲ್ಲದವಳು ಋತುವಾದರೆ, ಆಕೆಯ ತಂದೆ-ತಾಯಿ—ಅಣ್ಣಂದಿರಿಗೆ ಭ್ರೂಣಹತ್ಯಾದೋಷವು ಬರುವುದು, ಅವರು ಆಕೆಯ ರಜೋರಕ್ತವನ್ನು ಕುಡಿಯುವರು, ಪತಿತರಾಗುವರು, ಮತ್ತು ನರಕವನ್ನು ಹೊಂದುವರು. ಆಕೆಯ ಪಿತೃಗಳೂ ರಜೋರಕ್ತವನ್ನು ಕುಡಿಯುವರು. ಅವಿವಾಹಿತಳಾದ ಋತುಮತಿಯು ವೃಷಲಿಯೆನ್ನಿಸುವಳು. ಅವಳು ವಿವಾಹಕ್ಕೆ ಯೋಗ್ಯಳಲ್ಲ. ಅವಳನ್ನು ನೋಡಬಾರದು, ತ್ಯಜಿಸಬೇಕು. ಅವಳು ಎರಡು ಲೋಕಗಳಲ್ಲಿಯೂ ನಿಂದ್ಯಳಾಗುವಳು; ಮತ್ತು ನರಕವನ್ನು ಹೊಂದುವಳು. ಋತುಮತೀವಿವಾಹವು ಅಶುಭವಾದುದು. ಋತುಮತಿಯಾದವಳನ್ನು ಮದುವೆಮಾಡಿಕೊಂಡವನು ವೃಷಲೀಪತಿಯೆನ್ನಿಸುವನು. ಅವನು ಪಂಕ್ತಿಗೂ ಸಂಭಾಷಣೆಗೂ ಯೋಗ್ಯನಲ್ಲ. ಅವನನ್ನು ಹವ್ಯಕವ್ಯಗಳಿಗೆ ಕರೆಯಬಾರದು. ಅವಳನ್ನು ಬಿಟ್ಟು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ, ಅವನು ಚಂಡಾಲನಿಗೆ ಸಮನಾಗುವನು, ಮತ್ತು ನರಕವನ್ನು ಹೊಂದುವನು. ಅಂಥವಳಲ್ಲಿ ಹುಟ್ಟಿದ ಹುಡುಗರೂ ಕೂಡ ವೃಷಲರಾಗುವರು, ಮತ್ತು ನರಕವನ್ನು ಹೊಂದುವರು.

ಶಾಸ್ತ್ರವಚನಗಳು ಹೀಗಿರುವುದರಿಂದ, ಶಾಸ್ತ್ರವಿರುದ್ಧವಾದ—ಅಶುಭವಾದ-ಪಾಪಕರವಾದ ನಿಂದ್ಯವಾದ- ನರಕಪತನಾರ್ಹವಾದ- ಈ ಋತುಮತೀವಿವಾಹವನ್ನು ಸಜ್ಜನರು ತ್ಯಜಿಸಿ, ಶಾಸ್ತ್ರಸಮ್ಮತವಾದ-ಶುಭವಾದ-ಪುಣ್ಯಕರವಾದ—ಶ್ಲಾಘ್ಯವಾದ—ದಿವ್ಯಲೋಕಪ್ರಾಪಕವಾದ- ಅನೃತುಮತೀವಿವಾಹವನ್ನೇ ಆಚರಿಸತಕ್ಕುದೆಂದು ಪ್ರತಿಪಕ್ಷದವರು ಹೇಳುವರು.

ಪ್ರಕರಣ ೩.

—:o:—

ಅನುಮೋದಕ ವಚನಗಳು.

———

ಹೀಗೆ ಪ್ರತಿಪಕ್ಷದವರು ಉದಾಹರಿಸುವ ಈ ನಿಷೇಧಕ ವಚನಗಳು ಮಾತ್ರ ಇದ್ದು ಋತುಮತೀವಿವಾಹವನ್ನು ಅನುಮೋದಿಸುವ ಶಾಸ್ತ್ರವಚನಗಳು ಇಲ್ಲದಿದ್ದರೆ, ಅವರು ಹೇಳುವಂತೆ ನಾವೂ ಒಪ್ಪಿಕೊಂಡು ಋತುಮತೀವಿವಾಹವನ್ನು ತಿರಸ್ಕರಿಸಬಹುದಾಗಿತ್ತು. ಆದರೆ ಹಾಗೆ ಮಾಡಲು ಅವಕಾಶವಿಲ್ಲ. ಋತುಮತೀವಿವಾಹಾನುಮೋದಕಗಳಾದ ಶಾಸ್ತ್ರವಚನಗಳು ಬಹಳವಾಗಿರುವುವು. ಅವುಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸುವೆವು.

ಬೌಧಾಯನ ಸ್ಮೃತಿ, ಪ್ರಶ್ನ ೪, ಅಧ್ಯಾಯ ೧.

ತ್ರೀಣಿ ವರ್ಷಾಣ್ಯೃತುಮತೀಂ ಯಃ ಕನ್ಯಾಂ ನ ಪ್ರಯಚ್ಛತಿ ।
ಸ ತುಲ್ಯಂ ಭ್ರೂಣಹತ್ಯಾಯಾಃ ದೋಷಮೃಚ್ಛತ್ಯಸಂಶಯಂ ॥ ೧೨ ॥
ತ್ರೀಣಿ ವರ್ಷಾಣ್ಯೃತುಮತೀ ಕಾಂಕ್ಷೇತ ಪಿತೃಶಾಸನಂ ।
ತತಶ್ಚತುರ್ಥೇ ವರ್ಷೇ ತು ವಿಂದೇತ ಸದೃಶಂ ಪತಿಂ ।
ಅವಿದ್ಯಮಾನೇ ಸದೃಶೇ ಗುಣಹೀನಮಪಿ ಶ್ರಯೇತ್ ॥ ೧೪ ॥

ಅರ್ಥ — ಋತುಮತಿಯಾದ ಕನ್ಯೆಯನ್ನು ಮೂರು ವರ್ಷಗಳಲ್ಲಿ ಯಾವನು ದಾನಮಾಡುವುದಿಲ್ಲವೋ, ಅವನು ಭ್ರೂಣಹತ್ಯೆಗೆ ಸಮಾನವಾದ ದೋಷವನ್ನು ಹೊಂದುವುದರಲ್ಲಿ ಸಂದೇಹವಿಲ್ಲ. ಋತುಮತಿಯಾದವಳು ಮೂರು ವರ್ಷಗಳ ಪರ್ಯಂತ ತಂದೆಯ ಅಪ್ಪಣೆಯನ್ನು ನಿರೀಕ್ಷಿಸತಕ್ಕದು. ಆ ಬಳಿಕ ನಾಲ್ಕನೆಯ ವರ್ಷದಲ್ಲಾದರೋ, ತನಗೆ ಸದೃಶನಾದ ಪತಿಯನ್ನು ಹೊಂದಬಹುದು. ಸಮಾನನಾದವನು ಇಲ್ಲದಿದ್ದರೆ ಗುಣಹೀನನನ್ನಾದರೂ ಹೊಂದಬಹುದು.

ಮನುಸ್ಮೃತಿ, ಅಧ್ಯಾಯ ೯.

ಕಾಮಮಾಮರಣಾತ್ತಿಷ್ಠೇದ್ಗೃಹೇ ಕನ್ಯರ್ತುಮತ್ಯಪಿ ।
ನ ಚೈವೈನಾಂ ಪ್ರಯಚ್ಛೇತ್ತು ಗುಣಹೀನಾಯ ಕರ್ಹಿಚಿತ್ ॥ ೮೯ ॥
ತ್ರೀಣಿ ವರ್ಷಾಣ್ಯುದೀಕ್ಷೇತ ಕುಮಾರ್ಯೃತುಮತೀ ಸತೀ ।
ಊರ್ಧ್ವಂ ತು ಕಾಲಾದೇತಸ್ಮಾದ್ವಿಂದೇತ ಸದೃಶಂ ಪತಿಂ ॥ ೯೦ ॥

ಅದೀಯಮಾನಾ ಭರ್ತಾರಮಧಿಗಚ್ಛೇದ್ಯದಿ ಸ್ವಯಂ ।
ನೈನಃ ಕಿಂಚಿದವಾಪ್ನೋತಿ ನ ಚ ಯಂ ಸಾಧಿಗಚ್ಛತಿ ॥ ೯೧॥
ಅಲಂಕಾರಂ ನಾದದೀತ ಪಿತ್ರ್ಯಂ ಕನ್ಯಾ ಸ್ವಯಂವರಾ ।
ಮಾತೃಕಂ ಭ್ರಾತೃದತ್ತಂ ವಾ ಸ್ತೇನಾ ಸ್ಯಾದ್ಯದಿ ತಂ ಹರೇತ್ ॥ ೯೨॥
ಪಿತ್ರೇ ನ ದದ್ಯಾಚ್ಛುಲ್ಕಂ ತು ಕನ್ಯಾಮೃತುಮತೀಂ ಹರನ್ ।
ಸ ಹಿ ಸ್ವಾಮ್ಯಾದತಿಕ್ರಾಮೇದೃತೂನಾಂ ಪ್ರತಿರೋಧನಾತ್ ॥ ೯೩ ॥

ಅರ್ಥ.—ಕನ್ಯೆಯು ಋತುಮತಿಯಾದಾಗ್ಯೂ ಸಾಯುವಪರ್ಯಂತ ಧಾರಾಳವಾಗಿ ಮನೆಯಲ್ಲಿಯೇ ಇರಲಿ. ಗುಣಹೀನನಿಗೆ ಅವಳನ್ನೆಂದಿಗೂ ಮದುವೆಮಾಡಿಕೊಡಬಾರದು. ಋತುಮತಿಯಾದ ಕುಮಾರಿಯು ಮೂರು ವರ್ಷಗಳ ಪರ್ಯಂತ ಕಾದಿರಲಿ. ಆಮೇಲೆ ಕಾಲವಾದುದರಿಂದ ಸದೃಶನಾದ ಪತಿಯನ್ನು ಹೊಂದಲಿ. ಪೋಷಕರಿಂದ ದಾನಮಾಡಲ್ಪಡದ ಕನ್ಯೆಯು ತಾನೇ ಮದುವೆ ಮಾಡಿಕೊಂಡರೆ ಅವಳನ್ನು ಮದುವೆಯಾದವನು ದೋಷವನ್ನು ಸ್ವಲ್ಪವಾದರೂ ಹೊಂದುವುದಿಲ್ಲ. ಅವಳೂ ಪಾಪವನ್ನು ಹೊಂದುವುದಿಲ್ಲ. ಸ್ವಯಂವರ ಮಾಡಿಕೊಳ್ಳುವ ಕನ್ಯೆಯು ತಂದೆ ತಾಯಿ ಮತ್ತು ಸಹೋದರರು ಕೊಟ್ಟಂಥ ಅಲಂಕಾರವನ್ನು ತೆಗೆದುಕೊಳ್ಳಬಾರದು. ಅದನ್ನು ತೆಗೆದುಕೊಂಡರೆ ಅವಳು ಕಳ್ಳಳಾಗುವಳು. ಋತುಮತಿಯಾದ ಕನ್ಯೆಯನ್ನು ಮದುವೆಯಾಗುವವನು ಆವಳ ತಂದೆಗೆ ಶುಲ್ಕವನ್ನು ಕೊಡಬಾರದು. ಋತುಪ್ರತಿರೋಧನದ ದೆಶೆಯಿಂದ ತಂದೆಯು ಸ್ವಾಮಿತ್ವದಿಂದ ಅತಿಕ್ರಮಿಸುವವನು (ಎಂದರೆ ಸ್ವಾಮಿತ್ವವನ್ನು ಕಳೆದುಕೊಳ್ಳುವನು).

ಗೌತಮಧರ್ಮಶಾಸ್ತ್ರ, ಅಧ್ಯಾಯ ೧೮.

ತ್ರೀನ್ಕುಮಾರ್ಯೃತೂನತೀತ್ಯ ಸ್ವಯಂ ಯುಂಜೀತಾನಿಂದಿತೇನೋತ್ಸೃಜ್ಯ ಪಿತ್ರ್ಯಾನಲಂಕಾರಾನ್ ॥ ೨೦॥

ಅರ್ಥ—ಮೂರು ಋತುಗಳಾದಬಳಿಕ ಕುಮಾರಿಯು ತಂದೆಯ ಮನೆಯವರು ಕೊಟ್ಟಿದ್ದ ಅಲಂಕಾರಗಳನ್ನು ಬಿಟ್ಟು ನಿರ್ದೋಷಿಯಾದ ಪತಿಯನ್ನು ತಾನೇ ವರಿಸಬಹುದು.

ವಾಸಿಷ್ಠಧರ್ಮಶಾಸ್ತ್ರ, ಅಧ್ಯಾಯ ೧೭.

ಕುಮಾರ್ಯೃತುಮತೀ ತ್ರೀಣಿವರ್ಷಾಣ್ಯುಪಾಸೀತ ॥ ೬೭ ॥
ತ್ರಿಭ್ಯೋವರ್ಷೇಭ್ಯಃ ಪತಿಂವಿಂದೇತ್ತುಲ್ಯಂ ॥ ೬೮ ॥

ಅರ್ಥ.—ಋತುಮತಿಯಾದ ಕುಮಾರಿಯು ಮೂರು ವರ್ಷಗಳ ಪರ್ಯಂತ ಕಾದಿರಬೇಕು. ಮೂರು ವರ್ಷಗಳಾದಬಳಿಕ ಅವಳು ತನಗೆ ಸಮಾನನಾದ ಪತಿಯನ್ನು ಹೊಂದಬಹುದು.

ವಿಷ್ಣುಸ್ಮೃತಿ, ಅಧ್ಯಾಯ ೨೪.

ಋತುತ್ರಯಮುಪಾಸ್ಯೈವ ಕನ್ಯಾ ಕುರ್ಯಾತ್ಸ್ವಯಂವರಂ ।
ಋತುತ್ರಯೇ ವ್ಯತೀತೇ ತು ಪ್ರಭವತ್ಯಾತ್ಮನಃ ಸದಾ ॥ ೪೦॥
ಪಿತೃವೇಶ್ಮನಿ ಯಾ ಕನ್ಯಾ ರಜಃ ಪಶ್ಯತ್ಯಸಂಸ್ಕೃತಾ ।
ಸಾ ಕನ್ಯಾ ವೃಷಲೀ ಜ್ಞೇಯಾ ಹರಂಸ್ತಾಂ ನ ವಿದುಷ್ಯತಿ ॥ ೪೧॥

ಅರ್ಥ.—ಕನ್ಯೆಯು ಮೂರು ಋತುಗಳಾದಬಳಿಕ ಸ್ವಯಂವರವನ್ನು ಮಾಡಿಕೊಳ್ಳಬಹುದು. ಮೂರು ಋತುಗಳು ಕಳೆದ ಬಳಿಕ ಅವಳು ತನ್ನ ವಿಷಯದಲ್ಲಿ ಯಾವಾಗಲೂ ಸ್ವತಂತ್ರಳಾಗುವಳು. ಮದುವೆಯಿಲ್ಲದೆ ತಂದೆಯ ಮನೆಯಲ್ಲಿ ಋತುಮತಿಯಾದ ಕನ್ಯೆಯು ವೃಷಲಿಯೆಂದು ತಿಳಿಯಲ್ಪಡತಕ್ಕವಳು. ಅವಳನ್ನು (ಪಾಲಕರ ಅನುಮತಿ ಇಲ್ಲದೆ) ಮದುವೆಯಾದವನು ದೂಷ್ಯನಾಗುವುದಿಲ್ಲ.

ಮೇಲೆ ಉದಾಹರಿಸಲ್ಪಟ್ಟ ಅಂಗಿರಸಸ್ಮೃತಿ ಮೊದಲಾದುವುಗಳಲ್ಲಿ ವೃಷಲಿಯನ್ನು ಮದುವೆಯಾದವನಿಗೆ ದೋಷವು ಹೇಳಲ್ಪಟ್ಟಿರುವುದು. ವಿಷ್ಣುಸ್ಮೃತಿಯಲ್ಲಾದರೋ ಅಂಥವನಿಗೆ ದೋಷವಿಲ್ಲೆಂದು ಉಕ್ತವಾಗಿರುವುದು.

ನಾರದಸ್ಮೃತಿ, ೧೨ ನೆಯ ವ್ಯವಹಾರಪದ.

ಯದಾ ತು ನೈವ ಕಶ್ಚಿತ್ ಸ್ಯಾತ್ ಕನ್ಯಾ ರಾಜಾನಮಾಶ್ರಯೇತ್ ।
ಅನುಜ್ಞಯಾ ತಸ್ಯ ವರಂ ಪ್ರತೀತ್ಯ ವರಯೇತ್ ಸ್ವಯಂ ॥ ೨೦॥
ಕನ್ಯಾ ನರ್ತುಮುಪೇಕ್ಷೇತ ಬಾಂಧವೇಭ್ಯೋ ನಿವೇದಯೇತ್ ।
ತೇ ಚೇನ್ನದದ್ಯುಸ್ತಾಂ ಭರ್ತ್ರೇ ತೇ ಸ್ಯುರ್ಭ್ರೂಣಹಭಿಃ ಸಮಾಃ ॥ ೨೧॥
ಅತಃ ಪ್ರವೃತ್ತೇ ರಜಸಿ ಕನ್ಯಾಂ ದದ್ಯಾತ್ಪಿತಾ ಸಕೃತ್ ।
ಮಹದೇನಃ ಸ್ಪೃಶೇದೇನಮನ್ಯಥೈವಂ ವಿಧಿಃ ಸತಾಂ ॥ ೨೨॥

ಅರ್ಥ.—ದಾನ ಮಾಡುವವರು ಯಾರೂ ಇಲ್ಲದಿದ್ದರೆ ಕನ್ಯೆಯು ರಾಜನನ್ನು ಆಶ್ರಯಿಸಿ ಆತನ ಅಪ್ಪಣೆಯನ್ನು ಪಡೆದು ತಾನೇ ವರನನ್ನು ಹುಡುಕಿ ಮದುವೆ ಮಾಡಿಕೊಳ್ಳಬಹುದು. ಕನ್ಯೆಯು ಋತುವನ್ನು ಉಪೇಕ್ಷೆಮಾಡದೆ ಬಂಧುಗಳಿಗೆ ತಿಳಿಸಬೇಕು. ಅವರು ಅವಳನ್ನು ಮದುವೆ ಮಾಡಿಕೊಡದಿದ್ದರೆ ಭ್ರೂಣಹತ್ಯಾಪಾಪಿಗಳಿಗೆ ಸಮರಾಗುವರು. ಆದುದರಿಂದ ರಜಸ್ಸು ಉಂಟಾಗಲು ತಂದೆಯು ಕನ್ಯೆಯನ್ನು ಒಂದಾವರ್ತಿ ದಾನಪೂರ್ವಕವಾಗಿ ಮದುವೆಮಾಡಿಕೊಡಬೇಕು. ಅನ್ಯಥಾ ಆದರೆ ಮಹಾಪಾಪವು ಬರುವುದೆಂದು ಸತ್ಪುರುಷರ ವಿಧಿಯಿರುವುದು.

ಇಲ್ಲಿ ೨೨ ನೆಯ ಶ್ಲೋಕದ ಪೂರ್ವಾರ್ಧಕ್ಕೆ ಕನ್ಯೆಗೆ ಒಂದಾವರ್ತಿ ರಜಸ್ಸುಂಟಾಗಲು ತಂದೆಯು ಅವಳನ್ನು ದಾನಮಾಡಬೇಕು. ಎಂದೂ ಅರ್ಥವಾಗುವುದು.

ಗೋಭಿಲಪುತ್ರಗೃಹ್ಯಾಸಂಗ್ರಹ, ಪ್ರಪಾಠಕ ೨.

ನಗ್ನಿಕಾಂ ತು ವದೇತ್ ಕನ್ಯಾಂ ಯಾವನ್ನರ್ತುಮತೀ ಭವೇತ್ ।
ಋತುಮತೀ ತ್ವನಗ್ನಿಕಾ ತಾಂ ಪ್ರಯಚ್ಛೇತ್ತ್ವನಗ್ನಿಕಾಂ ॥೧೩॥

ಚಂದ್ರಕಾಂತತರ್ಕಾಲಂಕಾರಭಾಷ್ಯಂ—ಯಾವನ್ನ ಋತುಮತೀ ರಜಸ್ವಲಾ ಭವೇತ್, ತಾವತ್ ಕನ್ಯಾಂ ನಗ್ನಿಕಾಂ ವದೇತ್ । ಋತುಮತೀ ಪುನರನಗ್ನಿಕಾ ಭವತಿ । ತಾಂ ಕನ್ಯಾಮನಗ್ನಿಕಾಮೃತುಮತೀಮಪಿ ದದ್ಯಾತ್ । ತದೇವಮನಗ್ನಿಕಾಮಪಿ ದದ್ಯಾತ್, ನಗ್ನಿಕಾಪುನಃ ಶ್ರೇಷ್ಠಾ, ನ ಪುರನಗ್ನಿಕಾಯಾ ವಿವಾಹಏವ ನ ಭವತೀತ್ಯಭಿಪ್ರಾಯಃ । ಮನುರಪಿ—

ಕಾಮಮಾಮರಣಾತ್ತಿಷ್ಠೇದ್ಗೃಹೇ ಕನ್ಯರ್ತುಮತ್ಯಪಿ ।
ನ ಚೈವೈನಾಂ ಪ್ರಯಚ್ಛೇತ್ತು ಗುಣಹೀನಾಯ ಕರ್ಹಿಚಿತ್ ॥
ಇತಿ ಸ್ಮರನ್ ಋತುಮತ್ಯಾಅಪಿ ವಿವಾಹಮನುಜಾನಾತಿ ॥

ಶ್ಲೋ॥ ಅಪ್ರಾಪ್ತಾ ರಜಸೋ ಗೌರೀ ಪ್ರಾಪ್ತೇ ರಜಸಿ ರೋಹಿಣೀ ।
ಅವ್ಯಂಜಿತಾ ಭವೇತ್ಕನ್ಯಾ ಕುಚಹೀನಾ ಚ ನಗ್ನಿಕಾ ॥೧೪॥

ಭಾಷ್ಯಂ—ರಜಸಿ ಪ್ರಾಪ್ತೇ ರೋಹಿಣೀ ; ಅನೇನಾಪಿ ಪ್ರಾಪ್ತರಜಸ್ಕಾಯಾಅಪಿ ವಿವಾಹಂ ದರ್ಶಯತಿ ॥

ಅರ್ಥ.—ಕನ್ಯೆಯು ಯಾವ ಪರ್ಯಂತ ಋತುಮತಿಯಾಗಿರುವುದಿಲ್ಲವೋ, ಆ ಪರ್ಯಂತ ಅವಳನ್ನು ನಗ್ನಿಕೆಯೆಂದು ಹೇಳಬೇಕು. ಋತುಮತಿಯಾದರೋ, ಅನಗ್ನಿಕೆಯೆನ್ನಿಸುವಳು. ಆ ಅನಗ್ನಿಕೆಯನ್ನೂ (ಎಂದರೆ ಋತುಮತಿಯನ್ನೂ) ಮದುವೆಮಾಡಿಕೊಡಬಹುದು.

ಚಂದ್ರಕಾಂತ ತರ್ಕಾಲಂಕಾರಭಾಷ್ಯ.—ಯಾವ ಪರ್ಯಂತ ಋತುಮತಿಯಾಗುವುದಿಲ್ಲವೋ, ಆ ಪರ್ಯಂತ ಕನ್ಯೆಯನ್ನು ನಗ್ನಿಕೆಯೆಂದು ಹೇಳಬೇಕು. ಋತುಮತಿಯು ಪುನಃ ಅನಗ್ನಿಕೆಯಾಗುವಳು. ಆ ಅನಗ್ನಿಕೆಯನ್ನೂ, ಎಂದರೆ ಋತುಮತಿಯನ್ನೂ ಕೂಡ ದಾನಮಾಡಬಹುದು. ಈ ಪ್ರಕಾರ ಅನಗ್ನಿಕೆಯನ್ನೂ ದಾನಮಾಡಬೇಕು. ಆದರೆ ನಗ್ನಿಕೆಯು ಶ್ರೇಷ್ಠಳು. ಅನಗ್ನಿಕೆಗೆ ವಿವಾಹವೇ ಇಲ್ಲವೆಂದು ಅಭಿಪ್ರಾಯವಲ್ಲ. ಮನುವು ಕೂಡ ಹೀಗೆ ಹೇಳಿರುವನು:—“ಕನ್ಯೆಯು ಋತುಮತಿಯಾದಾಗ್ಯೂ ಸಾಯುವಪರ್ಯಂತ ಮನೆಯಲ್ಲಿಯೇ ಧಾರಾಳವಾಗಿರಬಹುದು ; ಗುಣಹೀನನಿಗೆ ಅವಳನ್ನೆಂದಿಗೂ ಕೊಡಬಾರದು.” ಈ ವಚನದಿಂದ ಋತುಮತಿಯಾದವಳಿಗೂ ಕೂಡ ವಿವಾಹವನ್ನು ಮನುವು ಅಪ್ಪಣೆಕೊಡಿಸಿರುವನು.

ಮೂಲದ ಅರ್ಥ.—ಋತುವನ್ನು ಹೊಂದದವಳು ಗೌರಿಯು, ಋತುಹೊಂದಿದವಳು ರೋಹಿಣಿಯು, ಗುಹ್ಯಪ್ರದೇಶದಲ್ಲಿ ರೋಮವಿಲ್ಲದವಳು ಕನ್ಯೆಯಾಗುವಳು, ಕುಚಹೀನಳು ನಗ್ನಿಕೆಯು.

ಭಾವಾರ್ಥ.—ರಜಸ್ಸು ಪ್ರಾಪ್ತವಾಗಿರಲು ರೋಹಿಣಿಯೆನಿಸುವಳು. ಈ ವಚನದಿಂದ ಋತುಮತಿಗೂ ವಿವಾಹವುಂಟೆಂದು ತೋರಿಸುವನು.

ಯಾಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ.

ಅಪ್ರಯಚ್ಛನ್ ಸಮಾಪ್ನೋತಿ ಭ್ರೂಣಹತ್ಯಾಮೃತಾವೃತೌ ।
ಗಮ್ಯಂ ತ್ವಭಾವೇ ದಾತೄಣಾಂ ಕನ್ಯಾ ಕುರ್ಯಾತ್ ಸ್ವಯಂವರಂ ॥ ೬೪ ॥

ಅರ್ಥ—ಕನ್ಯೆಯನ್ನು ದಾನಮಾಡದವನು ಪ್ರತಿ ಋತುವಿನಲ್ಲಿಯೂ ಭ್ರೂಣ ಹತ್ಯಾಪಾಪವನ್ನು ಹೊಂದುವನು. ದಾತೃಗಳಿಲ್ಲದಿದ್ದರೆ ಕನ್ಯೆಯು ಯೋಗ್ಯವಾದ ಸ್ವಯಂವರವನ್ನು ಮಾಡಿಕೊಳ್ಳಬಹುದು.

ವ್ಯಾಸಸ್ಮೃತಿ, ಅಧ್ಯಾಯ ೨.

ಪಿತೃಪಿತಾಮಹಭ್ರಾತೃಷು ಪಿತೃವ್ಯಜ್ಞಾತಿಮಾತೃಷು ।
ಪೂರ್ವಾಭಾವೇ ಪರೋ ದದ್ಯಾತ್ ಸರ್ವಾಭಾವೇ ಸ್ವಯಂ ವ್ರಜೇತ್ ॥ ೬ ॥

ಅರ್ಥ—ತಂದೆ, ಅವನ ತಂದೆ, ಅಣ್ಣ, ಚಿಕ್ಕಪ್ಪ, ಜ್ಞಾತಿ, ತಾಯಿ ಇವರಲ್ಲಿ ಮೊದಲುಮೊದಲಿನವರು ಇಲ್ಲದಿದ್ದರೆ, ಉಳಿದವರು ಕನ್ಯೆಯನ್ನು ದಾನಮಾಡಬೇಕು. ಯಾರೂ ಇಲ್ಲದಿದ್ದರೆ ಕನ್ಯೆಯು ಸ್ವಯಂವರ ಮಾಡಿಕೊಳ್ಳಬೇಕು.

ನಿರ್ಣಯಸಿಂಧುವಿನಲ್ಲಿ ಯಮವಚನ.

ಕನ್ಯಾ ದ್ವಾದಶ ವರ್ಷಾಣಿ ಯಾಽಪ್ರದತ್ತಾ ವಸೇದ್ಗೃಹೇ ।
ಭ್ರೂಣಹತ್ಯಾ ಪಿತುಸ್ತಸ್ಯಾಃ ಸಾ ಕನ್ಯಾ ವರಯೇತ್ಸ್ವಯಂ ॥
ಏವಂ ಚೋಪನತಾಂ ಪತ್ನೀಂ ನಾವಮನ್ಯೇತ್ಕದಾಚನ ।
ನ ತು ತಾಂ ಬಂಧಕೀಂ ವಿದ್ಯಾನ್ಮನುಃ ಸ್ವಾಯಂಭವೋಽಬ್ರವೀತ್ ॥

ಅರ್ಥ.—ಹನ್ನೆರಡು ವರ್ಷಗಳಾದಾಗ್ಯೂ ದಾನಮಾಡಲ್ಪಡದೆ ಯಾವ ಕನ್ಯೆಯು ಮನೆಯಲ್ಲಿರುವಳೋ, ಅವಳ ತಂದೆಗೆ ಭ್ರೂಣಹತ್ಯಾ ಪಾಪವು ಬರುವುದು. ಅವಳು ಸ್ವಯಂವರವನ್ನು ಮಾಡಿಕೊಳ್ಳಬೇಕು. ಹೀಗೆ ಮದುವೆಯಾದ ಪತ್ನಿಯನ್ನೆಂದಿಗೂ ಅವಮಾನಿಸಬಾರದು; ಮತ್ತು ಅವಳು ವ್ಯಭಿಚಾರಿಣಿಯೆಂದು ಭಾವಿಸಕೂಡದು; ಎಂದು ಸ್ವಾಯಂಭುವಮನುವು ಹೇಳಿರುವನು.

ಮಹಾಭಾರತ, ಆನುಶಾಸನಿಕಪರ್ವ, ಅಧ್ಯಾಯ ೪೪.

ತ್ರೀಣಿ ವರ್ಷಾಣ್ಯುದೀಕ್ಷೇತ ಕನ್ಯಾ ಋತುಮತೀ ಸತೀ ।
ಚತುರ್ಥೇ ತ್ವಥ ಸಂಪ್ರಾಪ್ತೇ ಸ್ವಯಂ ಭರ್ತಾರಮರ್ಜಯೇತ್ ॥

ಅಧ್ಯಾಯ ೧೦೪.

ಮಹಾಕುಲೇ ಪ್ರಸೂತಾಂ ಚ ಪ್ರಶಸ್ತಾಂ ಲಕ್ಷಣೈಸ್ತಥಾ ।
ವಯಸ್ಥಾಂ ಚ ಮಹಾಪ್ರಾಜ್ಞಃ ಕನ್ಯಾಮಾವೋಢುಮರ್ಹತಿ ॥

ಅರ್ಥ.—ಋತುಮತಿಯಾದ ಕನ್ಯೆಯು ಮೂರು ವರ್ಷಗಳ ಪರ್ಯಂತ ಕಾದಿರಬೇಕು. ನಾಲ್ಕನೆಯ ವರ್ಷವು ಬರುತ್ತಲೆ ಅವಳು ಗಂಡನನ್ನು ತಾನೇ ಸಂಪಾದಿಸಬೇಕು. ಮಹಾಪ್ರಾಜ್ಞನು ಮಹಾಕುಲದಲ್ಲಿ ಹುಟ್ಟಿದವಳಾಗಿಯೂ ಲಕ್ಷಣಗಳಿಂದ ಪ್ರಶಸ್ತಳಾಗಿಯೂ ತರುಣಿಯಾಗಿಯೂ ಇರುವ ಕನ್ಯೆಯನ್ನು ಮದುವೆಯಾಗಲು ಅರ್ಹನಾಗುತ್ತಾನೆ.

ನಿರ್ಣಯಸಿಂಧುವಿನಲ್ಲಿ ಮಹಾಭಾರತ ವಚನ.

ತ್ರಿಂಶದ್ವರ್ಷಃ ಷೋಡಶಾಬ್ದಾಂ ಭಾರ್ಯಾಂ ವಿಂದೇತ ನಗ್ನಿಕಾಂ ॥

ಅರ್ಥ.—ಮೂವತ್ತು ವರ್ಷದವನು ಹದಿನಾರು ವರ್ಷದ ನಗ್ನಿಕೆಯಾದ ಹೆಂಡತಿಯನ್ನು ಹೊಂದಬೇಕು. ಇಲ್ಲಿ ನಗ್ನಿಕೆಯೆಂದರೆ ಋತುಮತಿಯಾದವಳೆಂದು ಅರ್ಥವು.

ಮತ್ಸ್ಯಪುರಾಣ, ಅಧ್ಯಾಯ ೨೨೭.

ರಜಸ್ತೃತೀಯಂ ಯಾ ಕನ್ಯಾ ಸ್ವಗೃಹೇ ಪ್ರತಿಪದ್ಯತೆ ।
ಅದಂಡ್ಯಾ ಸಾ ಭವೇದ್ರಾಜ್ಞಾ ವರಯಂತೀ ಪತಿಂ ಸ್ವಯಂ ॥

ಅರ್ಥ.—ತನ್ನ ಮನೆಯಲ್ಲಿ ಯಾವ ಕನ್ಯೆಯು ಮೂರು ಋತುಗಳನ್ನು ಹೊಂದುವಳೋ, ಅವಳು ಸ್ವಯಂವರ ಮಾಡಿಕೊಂಡರೆ ರಾಜನ ಶಿಕ್ಷೆಗೆ ಗುರಿಯಾಗತಕ್ಕವಳಲ್ಲ.

ನಿರ್ಣಯಸಿಂಧು, ರಾಜಮಾರ್ತಾಂಡ.

ರಾಹುಗ್ರಸ್ತೇ ತಥಾ ಶುದ್ಧೇ ಪಿತ್ರ್ಯಾಣಾಂ ಪ್ರಾಣಸಂಶಯೇ ।
ಅತಿಪ್ರೌಢಾ ಚ ಯಾ ಕನ್ಯಾ ಚಂದ್ರಲಗ್ನಬಲೇ ನ ತು ॥

ಅರ್ಥ.—ಸೂರ್ಯಚಂದ್ರರುಗ್ರಸ್ತರಾಗಿ ಮುಕ್ತರಾದನಂತರದಲ್ಲಿಯೂ ತಾಯಿತಂದೆಗಳ ಪ್ರಾಣಸಂಶಯದಲ್ಲಿಯೂ ಅತಿಪ್ರೌಢಳಾದ ಕನ್ಯೆಗೂ ಚಂದ್ರಲಗ್ನಬಲಗಳು ನೋಡಲ್ಪಡುವುದಿಲ್ಲ. ಎಂದರೆ ಅವುಗಳನ್ನು ಲಕ್ಷ್ಯಕ್ಕೆ ತರದೆ ವಿವಾಹ ಮಾಡಬೇಕೆಂದರ್ಥವು.

ನಿರ್ಣಯಸಿಂಧುವಿನಲ್ಲಿ ಮಹಾಮಹೋಪಾಧ್ಯಾಯ ಕಮಲಾಕರಭಟ್ಟವಚನ.

ತಥಾಪಿ ದಾತುರಭಾವೇ ದ್ವಾದಶಷೋಡಶಾಬ್ದೇ ಜ್ಞೇಯೇ 'ತ್ರೀಣಿ ವರ್ಷಾಣ್ಯೃತುಮತೀ ಕಾಂಕ್ಷೇತ ಪಿತೃಶಾಸನಂ' ಇತಿ ಪರಾಶರಮಾಧವೀಯೇ ಬೋಧಾಯನೋಕ್ತೇಶ್ಚ॥

ಅರ್ಥ.—ಹೀಗಾದಾಗ್ಯೂ ಪರಾಶರಮಾಧವೀಯದಲ್ಲಿ, ಋತುಮತಿಯಾದವಳು ಮೂರು ವರ್ಷಗಳ ಪರ್ಯಂತ ತಂದೆಯ ಅಪ್ಪಣೆಯನ್ನು ನಿರೀಕ್ಷಿಸಬೇಕು. ಎಂದು ಬೋಧಾಯನೋಕ್ತಿಯೂ ಇರುವುದರಿಂದ, ದಾತರಿಲ್ಲದಿದ್ದರೆ ಕನ್ಯೆಯರಿಗೆ ಹನ್ನೆರಡು ಹದಿನಾರು ವರ್ಷಗಳ ಪರ್ಯಂತ ವಿವಾಹಕ್ಕೆ ಕಾಲವೆಂದು ತಿಳಿಯತಕ್ಕದು.

ಪುನಃ ನಿರ್ಣಯಸಿಂಧು, ಕಮಲಾಕರಭಟ್ಟ.

ವ್ಯಂಜನೈಸ್ತು ಸಮುತ್ಪನ್ನೈಃ ಸೋಮೋ ಭುಂಜೀತಕನ್ಯಕಾಂ ।
ಪಯೋಧರೈಸ್ತು ಗಂಧರ್ವೋ ರಜಸಾಗ್ನಿಃ ಪ್ರಕೀರ್ತಿತಃ ॥
ತಸ್ಮಾದವ್ಯಂಜನೋಪೇತಾಮರಜಾಮಪಯೋಧರಾಂ ।
ಅಭುಕ್ತಾಂ ಚೈವ ಸೋಮಾದ್ಯೈಃ ಕನ್ಯಕಾ ತು ಪ್ರಶಸ್ಯತೇ ॥

ಇತಿತುಗೃಹ್ಯಸಂಗ್ರಹೇಉಕ್ತಂ, 'ತುರೀಯಸ್ತೇ ಮನುಷ್ಯಜಾಃ' ಇತಿ ಶ್ರುತಿ ವಿರುದ್ಧಂ ॥

ಅರ್ಥ.—ಗುಹ್ಯಪ್ರದೇಶದಲ್ಲಿ ರೋಮಗಳು ಹುಟ್ಟುತ್ತಲೆ ಸೋಮನೂ ಕುಚಗಳು ಬೆಳೆದಮೇಲೆ ಗಂಧರ್ವನೂ ರಜೋದರ್ಶನವಾದಬಳಿಕ ಅಗ್ನಿಯೂ ಕನ್ಯೆಯನ್ನು ಭೋಗಿಸುವರು. ಆದುದರಿಂದ ರೋಮ ಕುಚ ರಜೋದರ್ಶನವಿಲ್ಲದವಳಾಗಿಯೂ ಸೋಮಾದಿಗಳಿಂದ ಭೋಗಿಸಲ್ಪಡದವಳಾಗಿಯೂ ಇರುವ ಕನ್ಯೆಯು (ವಿವಾಹಕ್ಕೆ) ಪ್ರಶಸ್ತಳಾದವಳು ಎಂದು ಗೃಹ್ಯಸಂಗ್ರಹದಲ್ಲಿ ಉಕ್ತವಾಗಿರುವುದು. ಆದರೆ ವೇದದಲ್ಲಿ, "ನಿನಗೆ ನಾಲ್ಕನೆಯ ಗಂಡನು ಮನುಷ್ಯನು." ಎಂದು ಹೇಳಿರುವುದರಿಂದ ಈ ಗೃಹ್ಯಸಂಗ್ರಹದ ವಚನವು ಶ್ರುತಿವಿರುದ್ಧವಾಗಿರುವುದು.

ತಾತ್ಪರ್ಯ.—ವೇದವಾಕ್ಯಪ್ರಕಾರ ಸೋಮ ಗಂಧರ್ವ ಅಗ್ನಿಗಳಿಂದ ಪರಿಗ್ರಹಿಸಲ್ಪಟ್ಟ ಬಳಿಕವೇ ಕನ್ಯೆಯರನ್ನು ಮನುಷ್ಯರು ಮದುವೆಯಾಗತಕ್ಕದು. ಅದಕ್ಕೆ ಮೊದಲು ಕೂಡದು. ಆದುದರಿಂದ ಇಲ್ಲಿ ಋತುಮತೀ ವಿವಾಹವು ಸೂಚಿತವಾಗುವದು.

ಆಪಸ್ತಂಬ ಸ್ಮೃತಿ, ಅಧ್ಯಾಯ ೩.

ವಿವಾಹೇ ವಿತತೇ ಯಜ್ಞೇ ಸಂಸ್ಕಾರೇ ಚ ಕೃತೇ ಯದಾ ।
ರಜಸ್ವಲಾ ಭವೇತ್ಕನ್ಯಾ ಸಂಸ್ಕಾರಸ್ತು ಕಥಂ ಭವೇತ್ ॥ ೯ ॥
ಸ್ನಾಪಯಿತ್ವಾ ತದಾ ಕನ್ಯಾಮನ್ಯೈರ್ವಸ್ತ್ರೈರಲಂಕೃತಾಂ ।
ಪುನರ್ಮೇಧ್ಯಾಹುತಿಂ ಹುತ್ವಾ ಶೇಷಕರ್ಮ ಸಮಾಚರೇತ್ ॥ ೧೦ ॥

ಅರ್ಥ—ವಿವಾಹಹೋಮವು ಪ್ರಾರಂಭವಾಗಿ ಸಂಸ್ಕಾರವಾದನಂತರ ಕನ್ಯೆಯು ರಜಸ್ವಲೆಯಾದರೆ ಸಂಸ್ಕಾರವು ಹೇಗಾಗಬೇಕು? ಆಗ ಕನ್ಯೆಗೆ ಸ್ನಾನಮಾಡಿಸಿ ಬೇರೆ ವಸ್ತ್ರಗಳಿಂದ ಅಲಂಕರಿಸಿ ಪುನಃ ಮೇಧ್ಯಾಹುತಿಯನ್ನು ಮಾಡಿ ಉಳಿದ ಕರ್ಮವನ್ನಾಚರಿಸಬೇಕು.

ವೃದ್ಧಾತ್ರಿಸ್ಮೃತಿ, ಅಧ್ಯಾಯ ೫.

ವಿವಾಹೇ ವಿತತೇ ತಂತ್ರೇ ಹೋಮಕಾಲಉಪಸ್ಥಿತೇ ।
ಕನ್ಯಾಮೃತುಮತೀಂ ದೃಷ್ಟ್ವಾ ಕಥಂ ಕುರ್ವಂತಿ ಯಾಜ್ಞಿಕಾಃ ॥

ಹವಿಷ್ಮತ್ಯಾ ಸ್ನಾಪಯಿತ್ವಾ ತ್ವನ್ಯವಸ್ತ್ರೈರಲಂಕೃತಾಂ ।
ಯುಂಜಾನಾಮಾಹುತಿಂ ಕೃತ್ವಾ ತತಃ ಕರ್ಮ ಪ್ರವರ್ತತೇ ॥

ಅರ್ಥ.—ವಿವಾಹಕರ್ಮವು ಉಪಕ್ರಮವಾಗಿ ಹೋಮಕಾಲವು ಬಂದಿರಲು ಕನ್ಯೆಯು ಋತುಮತಿಯಾದರೆ ಯಾಜ್ಞಿಕರು ಹೇಗೆ ಮಾಡುವರು? ಕನ್ಯೆಗೆ, ಹವಿಷ್ಮತೀಮಂತ್ರದಿಂದ ಸ್ನಾನಮಾಡಿಸಿ ಬೇರೆ ವಸ್ತ್ರಗಳಿಂದ ಅಲಂಕರಿಸಿ ಯುಂಜಾನಮಂತ್ರದಿಂ ಆಹುತಿಕೊಟ್ಟು ಆ ಬಳಿಕ ಉಳಿದ ಕರ್ಮವು ಮಾಡಲ್ಪಡುವುದು.

ಲಘ್ವಾತ್ರಿಸಂಹಿತೆ, ಅಧ್ಯಾಯ, ೫.

ವಿವಾಹೇ ವಿತತೇ ತಂತ್ರೇ ಹೋಮಕಾಲ ಉಪಸ್ಥಿತೇ ।
ಕನ್ಯಾಮೃತುಮತೀಂ ದೃಷ್ಟ್ವಾ ಕಥಂ ಕುರ್ವಂತಿ ಯಾಜ್ಞಿಕಾಃ ॥
ಹವಿಷ್ಮತ್ಯಾ ಸ್ನಾಪಯಿತ್ವಾ ಅನ್ಯವಸ್ತ್ರೈರಲಂಕೃತಾಂ ।
ಯುಂಜಾನಾಮಾಹುತಿಂ ಕೃತ್ವಾ ತತಃ ಕರ್ಮ ಪ್ರವರ್ತತೇ ॥

ಅರ್ಥ.—ವಿವಾಹಕರ್ಮವು ಉಪಕ್ರಮವಾಗಿ ಹೋಮಕಾಲವು ಬಂದಿರಲು ಕನ್ಯೆಯು ಋತುಮತಿಯಾದರೆ ಯಾಜ್ಞಿಕರು ಹೇಗೆ ಮಾಡುವರು? ಕನ್ಯೆಗೆ ಹವಿಷ್ಮತೀಮಂತ್ರದಿಂದ ಸ್ನಾನಮಾಡಿಸಿ ಬೇರೆ ವಸ್ತ್ರಗಳಿಂದ ಅಲಂಕರಿಸಿ ಯುಂಜಾನಮಂತ್ರದಿಂದ ಆಹುತಿಕೊಟ್ಟು ಬಳಿಕ ಕರ್ಮವು ಮಾಡಲ್ಪಡುವುದು.

ಮದನ ಪಾರಿಜಾತ. ಸ್ತಬಕ, ೨.

ವಿವಾಹೇ ವಿತತೇ ತಂತ್ರೇ ಹೋಮಕಾಲ ಉಪಸ್ಥಿತೇ ।
ಕನ್ಯಾಯಾ ಋತುರಾಗಚ್ಛೇತ್ಕಥಂ ಕುರ್ವಂತಿ ಯಾಜ್ಞಿಕಾಃ ॥
ಸ್ನಾಪಯಿತ್ವಾ ತು ತಾಂ ಕನ್ಯಾಮರ್ಚಯಿತ್ವಾ ಯಥಾವಿಧಿ ।
ಯುಂಜಾನಾಮಾಹುತಿಂ ದತ್ವಾ ತತಸ್ತಂತ್ರಂ ಪ್ರವರ್ತಯೇತ್ ॥

ಅರ್ಥ.— ವಿವಾಹಕರ್ಮವು ಉಪಕ್ರಮವಾಗಿ ಹೋಮಕಾಲವು ಬಂದಿರಲು ಕನ್ಯೆಗೆ ಋತುವು ಪ್ರಾಪ್ತವಾದರೆ ಯಾಜ್ಞಿಕರು ಹೇಗೆ ಮಾಡುವರು? ಯಥಾವಿಧಿಯಾಗಿ ಆವಳಿಗೆ ಸ್ನಾನಮಾಡಿಸಿ ಅಲಂಕರಿಸಿ 'ಯುಂಜಾನ' ಆಹುತಿಯನ್ನು ಕೊಟ್ಟು ಆ ಬಳಿಕ ತಂತ್ರವು ಮಾಡಲ್ಪಡುವುದು.

ನಿರ್ಣಯಸಿಂಧು, ಆಶ್ವಲಾಯನ.

ಕನ್ಯಾಮೃತುಮತೀಂ ಶುದ್ಧಾಂ ಕೃತ್ವಾ ನಿಷ್ಕೃತಿಮಾತ್ಮನಃ ।
ಶುದ್ಧಿಂ ಚ ಕಾರಯಿತ್ವಾ ತಾಮುದ್ವಹೇದನೃಶಂಸಧೀಃ ॥
ಪಿತಾ ಋತೂನ್ ಸ್ವಪುತ್ರ್ಯಾಸ್ತು ಗಣಯೇದಾದಿತಃ ಸುಧೀಃ ।
ದಾನಾವಧಿ ಗೃಹೇ ಯತ್ನಾತ್ ಪಾಲಯೇಚ್ಚ ರಜೋವತೀಂ ॥
ದದ್ಯಾತ್ತದೃತುಸಂಖ್ಯಾಗಾಃ ಶಕ್ತಃ ಕನ್ಯಾಪಿತಾ ಯದಿ ।

ದಾತವ್ಯೈಕಾಪಿ ನಿಸ್ವೇನ ದಾನೇ ತಸ್ಯಾಯಥಾವಿಧಿ॥
ದದ್ಯಾದ್ವಾಬ್ರಾಹ್ಮಣೇಷ್ವನ್ನಮತಿನಿಸ್ವಃ ಸದಕ್ಷಿಣಂ।
ತಸ್ಯಾತೀತರ್ತುಸಂಖ್ಯೇಷು ವರಾಯ ಪ್ರತಿಪಾದಯೇತ್ ॥
ಉಪೋಷ್ಯ ತ್ರಿದಿನಂ ಕನ್ಯಾಂ ರಾತ್ರೌ ಪೀತ್ವಾ ಗವಾಂ ಪಯಃ।
ಅದೃಷ್ಟರಜಸೇ ದದ್ಯಾತ್ಕನ್ಯಾಯೈ ರತ್ನಭೂಷಣಂ ॥
ತಾಮುದ್ವಹನ್ವರಶ್ಚಾಪಿ ಕೂಷ್ಮಾಂಡೈರ್ಜುಹುಯಾದ್ದ್ವಿಜಃ॥

ಅರ್ಥ.—ಋತುಮತಿಯಾದ ಕನ್ಯೆಯನ್ನೂ ತನ್ನನ್ನೂ ಶುದ್ಧಿಮಾಡಿಕೊಂಡು ಸುಮನಸ್ಕನಾಗಿ ಅವಳನ್ನು ಮದುವೆಮಾಡಿಕೊಡಬೇಕು. ತಂದೆಯು ಒಳ್ಳೆಯ ಬುದ್ಧಿಯುಳ್ಳವನಾಗಿ, ಮಗಳ ಋತುಗಳನ್ನು ಮೊದಲಿನಿಂದಲೂ ಎಣಿಸಿಕೊಂಡು, ಅವಳನ್ನು ದಾನಮಾಡುವ ಪರ್ಯಂತ ಮನೆಯಲ್ಲಿಟ್ಟುಕೊಂಡು, ಪ್ರಯತ್ನದಿಂದ ಕಾಪಾಡಬೇಕು. ತಂದೆಯು ಶಕ್ತನಾದರೆ, ಅವಳು ಋತುವಾಗಿರುವಷ್ಟು ಸಂಖ್ಯಾತವಾದ ಗೋವುಗಳನ್ನು ದಾನಮಾಡಬೇಕು. ಯಥಾವಿಧಿಯಾಗಿ ಅವಳಿಗೆ ಮದುವೆಮಾಡುವಾಗ, ದರಿದ್ರನಾದ ತಂದೆಯು ಒಂದು ಗೋವನ್ನಾದರೂ ದಾನಮಾಡಬೇಕು. ಅತಿ ದರಿದ್ರನಾದರೆ, ಅವಳಿಗೆ ಆಗಿರುವ ಋತುಗಳ ಸಂಖ್ಯೆವುಳ್ಳ ಬ್ರಾಹ್ಮಣರಿಗೆ ದಕ್ಷಿಣೆಸಹಿತವಾಗಿ ಅನ್ನದಾನವನ್ನಾದರೂ ಮಾಡಿಸಿ ಅವಳನ್ನು ವರನಿಗೆ ಕೊಡಬೇಕು. ಕನ್ಯೆಯು ಮೂರುದಿವಸ ಪರ್ಯಂತ ಉಪವಾಸವನ್ನು ಮಾಡಬೇಕು. ರಾತ್ರಿಯಲ್ಲಿ ಆಕಳ ಹಾಲನ್ನು ಕುಡಿಯಬೇಕು. ಋತುಮತಿಯಲ್ಲದ ಕನ್ಯೆಗೆ ರತ್ನಭೂಷಣವನ್ನು ದಾನಮಾಡಬೇಕು. ಋತುಮತಿಯಾದ ಕನ್ಯೆಯನ್ನು ಮದುವೆಮಾಡಿಕೊಳ್ಳುವ ದ್ವಿಜನೂಕೂಡ ಕೂಷ್ಮಾಂಡಹವನವನ್ನು ಮಾಡಬೇಕು.

ಬೋಧಾಯನ ಗೃಹ್ಯಸೂತ್ರ, ಪ್ರಶ್ನ ೪, ಅಧ್ಯಾಯ, ೧.

ಅಥ ಯದಿ ಕನ್ಯೋಪಸಾದ್ಯಮಾನಾ ವೋಹ್ಯಮಾನಾ ವಾ ರಜಸ್ವಲಾ ಸ್ಯಾತ್, ತಾಮನುಮಂತ್ರಯತೇ ॥ ಪುಮಾಂಸೌ ಮಿತ್ರಾವರುಣೌ ಪುಮಾಂಸಾವಶ್ವಿನಾಉಭೌ । ಪುಮಾನಿಂದ್ರಶ್ಚ ಸೂರ್ಯಶ್ಚ ಪುಮಾಂಸಂ ವರ್ಧಯತಾಂ ಇತಿ ॥ ೧೦ ॥

ಅರ್ಥ.—(ಕನ್ಯಾಪ್ರದಾನವಾದ ಬಳಿಕ ಗಂಡನಮನೆಗೆ ಪ್ರವೇಶಹವನಕ್ಕೆ) ವಧುವನ್ನು ಕೈಹಿಡಿದುಕೊಂಡಾಗಲಿ ಗಾಡಿಯಲ್ಲಿ ಕೂರಿಸಿಕೊಂಡಾಗಲಿ ಕರೆದುಕೊಂಡು ಹೋಗುವಾಗ ಅವಳು ಮುಟ್ಟಾದರೆ ಗಂಡನು ಅವಳನ್ನು ಕುರಿತು ಈ ಮಂತ್ರವನ್ನು ಹೇಳುವನು.—ಪುರುಷರಾದ ಮಿತ್ರಾವರುಣರೂ, ಪುರುಷರಾದ ಇಬ್ಬರು ಅಶ್ವಿನಿ ದೇವತೆಗಳೂ, ಪುರುಷನಾದ ಇಂದ್ರನೂ, ಮತ್ತು ಸೂರ್ಯನೂ ಕೂಡ ಪುರುಷನಾದ ನನ್ನನ್ನು ವೃದ್ಧಿಪಡಿಸಲಿ.

ಬೋಧಾಯನಗೃಹ್ಯಶೇಷಸೂತ್ರ ಪ್ರಶ್ನ, ೪, ಅಧ್ಯಾಯ, ೧.

ಅಥ ವಿವಾಹ್ಯಕನ್ಯಾರಜಸ್ವಲಾಪ್ರಾಯಶ್ಚಿತ್ತಾದಿವಿಧಿಂ ವ್ಯಾಖ್ಯಾಸ್ಯಾಮಃ
ವಿವಾಹೇ ವಿತತೇ ಯಜ್ಞೇ ಹೋಮಕಾಲಉಪಸ್ಥಿತೇ।
ಕನ್ಯಾಮೃತುಮತೀಂ ದೃಷ್ಟ್ವಾ ಕಥಂ ಕುರ್ವಂತಿ ಯಾಜ್ಞಿಕಾಃ ॥ ೧ ॥
ಯಜುಃಪವಿತ್ರೈಸ್ಸಾವಿತ್ರ್ಯಾ ಪ್ರೋಕ್ಷಯೇತ್ಪೂತವಾರಿಭಿಃ।
ಅನೇನ ಚಾನುವಾಕೇನ ಪವಮಾನಸ್ಸುವಾದಿನಾ ॥ ೨ ॥
ಸ್ನಾಪಯಿತ್ವಾಥ ವಿದ್ವದ್ಭಿರನ್ಯವಸ್ತ್ರಾದ್ಯಲಂಕೃತಾಂ।
ಪೂರ್ಣಾಹುತ್ಯಥ ಮಿಂದಾಭ್ಯಾಂ ಮಹಾವ್ಯಾಹೃತಿಭಿಸ್ಸಹ ॥ ೩ ॥
ಹುತ್ವಾ ತಂತುಮತೀಂ ಚೈವ ವ್ಯಾಹೃತಿಭಸ್ತಥೈವ ಚ।
ಅನಾಜ್ಞಾತಂ ಚ ವಿದ್ವದ್ಭಿಶ್ಶೇಷಂ ಕಾರ್ಯಂ ಸಮಾಚರೇತ್ ॥ ೪ ॥
ಪ್ರಧಾನಹೋಮೇ ನಿರ್ವೃತ್ತೇ ಮಲವದ್ವಾಸಸೀ ಭವೇತ್।
ತ್ರ್ಯಹೇ ಪರ್ಯವೇತೇಥ ಶೇಷಕಾರ್ಯಂ ಸಮಾಚರೇತ್ ॥ ೫ ॥

ಅರ್ಥ.—ವಿವಾಹ್ಯಳಾದ ಕನ್ಯೆಯು ರಜಸ್ವಲೆಯಾದರೆ ಅದಕ್ಕೆ ಪ್ರಾಯಶ್ಚಿತ್ತಾದಿ ವಿಧಿಯನ್ನು ಹೇಳುತ್ತೇವೆ. ವಿವಾಹಕರ್ಮವು ಉಪಕ್ರಮವಾಗಿ ಹೋಮಕಾಲವು ಬಂದಿರಲು ಋತುಮತಿಯಾದ ಕನ್ಯೆಯನ್ನು ನೋಡಿ ಯಾಜ್ಞಿಕರು ಹೇಗೆಮಾಡುವರು? ಯಜುರ್ವೇದ ಋಕ್ಕುಗಳಿಂದಲೂ ಸಾವಿತ್ರಿಯಿಂದಲೂ ಪವಮಾನಋಕ್ಕಿನಿಂದಲೂ ಪರಿಶುದ್ಧವಾದ ಜಲಗಳಿಂದ ಪ್ರೋಕ್ಷಿಸಬೇಕು. ಆಮೇಲೆ ವಿಧಿಜ್ಞರಿಂದ ಅವಳನ್ನು ಸ್ನಾನಮಾಡಿಸಿ, ಬೇರೆ ವಸ್ತ್ರಾದಿಗಳಿಂದ ಅಲಂಕರಿಸಿ, ಆಬಳಿಕ ಮಿಂದಾಮಂತ್ರಗಳಿಂದಲೂ ಮಹಾವ್ಯಾಹೃತಿಗಳಿಂದಲೂ ಪೂರ್ಣಾಹುತಿಯನ್ನು ಕೊಟ್ಟು, ವ್ಯಾಹೃತಿಹೋಮವನ್ನು ತಂತುಮತೀಹವನವನ್ನು ಮಾಡಿ ಅನಾಜ್ಞಾತ ಜಪವನ್ನು ಮಾಡಿ, ಉಳಿದ ಕಾರ್ಯವನ್ನು ಆಚರಿಸಬೇಕು. ಕನ್ಯೆಯು ಪ್ರಧಾನಹವನವು ಮುಗಿದಬಳಿಕ ರಜಸ್ವಲೆಯಾದರೆ, ಮೂರುದಿವಸಗಳು ಕಳೆದಮೇಲೆ ಶೇಷಕಾರ್ಯವನ್ನು ಮಾಡಬೇಕು.

ನಿರ್ಣಯಸಿಂಧು, ಕಮಲಾಕರಭಟ್ಟ.

ಅಥ ದ್ವಾದಶರಾತ್ರಮಲಂಕೃತ್ಯ ಪ್ರಾಶಯೇತ್ಪಂಚಗವ್ಯಮಥ
ಶುದ್ಧಾಂ ಕೃತ್ವಾ ವಿವಹೇತ್ ॥

ಅರ್ಥ.—ಹನ್ನೆರಡು ರಾತ್ರಿಗಳ ಪರ್ಯಂತ ಋತುಮತಿಯಾದ ಕನ್ಯೆಯನ್ನು ಅಲಂಕರಿಸಿ ಪಂಚಗವ್ಯವನ್ನು ಕುಡಿಸಿ ಶುದ್ಧಿಮಾಡಿ ವಿವಾಹಮಾಡಬೇಕು.

ಧರ್ಮಸಿಂಧು, ಕಾಶೀನಾಥೋಪಾಧ್ಯಾಯ, ಪರಿಚ್ಛೇದ ೩—೬೩.

ಅಥ ಕನ್ಯಾರಜೋದೋಷನಿರ್ಣಯಃ. ವಿವಾಹಾತ್ಪೂರ್ವಂ ಕನ್ಯಾಯಾಃ
ರಜೋದರ್ಶನೇ ಮಾತೃಪಿತೃ ಭ್ರಾತೄಣಾಂ ನರಕಪಾತಃ, ಕನ್ಯಾಯಾಃ

ವೃಷಲೀತ್ವಂ, ತದ್ಭರ್ತುರ್ವೃಷಲೀಪತಿತ್ವಂ. ಅತ್ರ ಶುದ್ಧಿಪ್ರಕಾರಃ:—ಕನ್ಯಾದಾತಾ ಋತುಸಂಖ್ಯಯಾ ಗೋದಾನಾನಿ ಏಕಂ ವಾ ಗೋದಾನಂ ಯಥಾಶಕ್ತಿ ಬ್ರಾಹ್ಮಣಭೋಜನಂ ವಾ ಕೃತ್ವಾ ಕನ್ಯಾದಾನೇ ಯೋಗ್ಯೋಭವೇತ್; ಕನ್ಯಾತೂಪವಾಸತ್ರಯಾಂತೇ ಗವ್ಯಪಯಃಪಾನಂ ಕೃತ್ವಾವಿಪ್ರಕುಮಾರ್ಯೈ ಸರತ್ನಭೂಷಣಂ ದತ್ವೋದ್ವಾಹಯೋಗ್ಯಾ ಭವತಿ; ವರಶ್ಚ ಕೂಷ್ಮಾಂಡಹೋಮಪೂರ್ವಕಂ ತಾಮ್ಮುದ್ವಹ್ನ ದೂಷೀಸ್ಯಾದಿತಿ.

ಅರ್ಥ.—ಕನ್ಯಾ ರಜೋದೋಷನಿರ್ಣಯವು.— ಮದುವೆಯಾಗುವುದಕ್ಕೆ ಮೊದಲು ಕನ್ಯೆಗೆ ರಜೋದರ್ಶನವಾದರೆ ತಾಯಿ ತಂದೆ ಮತ್ತು ಸಹೋದರರಿಗೆ ನರಕಪಾತವು ಉಂಟಾಗುವುದು, ಕನ್ಯೆಗೆ ವೃಷಲೀತ್ವವೂ ಅವಳನ್ನು ಮದುವೆಯಾದವನಿಗೆ ವೃಷಲೀಪತಿತ್ವವೂ ಬರುವುದು. ಈ ವಿಷಯದಲ್ಲಿ ಶುದ್ಧಿಯಾಗುವ ರೀತಿಯು ಹೇಳಲ್ಪಡುವುದು.- ಕನ್ಯಾದಾತನು ಋತುಸಂಖ್ಯಾಕವಾದ ಗೋವುಗಳನ್ನಾಗಲಿ ಒಂದು ಗೋವನ್ನಾಗಲಿ ದಾನಮಾಡಿದರೂ ಅಥವಾ ಯಥಾಶಕ್ತಿಯಾಗಿ ಬ್ರಾಹ್ಮಣಭೋಜನಮಾಡಿಸಿದರೂ ಕನ್ಯಾದಾನಮಾಡಲು ಯೋಗ್ಯನಾಗುವನು. ಕನ್ಯೆಯು ಮೂರು ಉಪವಾಸಗಳನ್ನು ಮಾಡಿದಬಳಿಕ ಆಕಳ ಹಾಲನ್ನು ಕುಡಿದು ಬ್ರಾಹ್ಮಣ ಕನ್ಯೆಯರಿಗೆ ರತ್ನ ಭೂಷಣವನ್ನು ದಾನಮಾಡಿದರೆ ವಿವಾಹಕ್ಕೆ ಯೋಗ್ಯಳಾಗುವಳು. ವರನು ಕೂಷ್ಮಾಂಡಹೋಮಪೂರ್ವಕವಾಗಿ ಅವಳನ್ನು ಮದುವೆಯಾದರೆ ದೋಷಿಯಾಗುವುದಿಲ್ಲ.

ಧರ್ಮಸಿಂಧು, ಪರಿಚ್ಛೇದ ೩—೬೨.

ವಿವಾಹಹೋಮಕಾಲೇ ರಜೋದೋಷೇ ತಾಂ ಸ್ನಾಪಯಿತ್ವಾ ಯುಂಜಾನೇತಿ ತೈತ್ತಿರೀಯಮಂತ್ರೇಣ ಪ್ರಾಯಶ್ಚಿತ್ತಂ ಹುತ್ವಾ ಹೋಮತಂತ್ರಂ ಸಮಾಪಯೇತ್ ॥

ಅರ್ಥ.—ವಿವಾಹಹೋಮಕಾಲದಲ್ಲಿ ಕನ್ಯೆಗೆ ರಜೋದೋಷವುಂಟಾಗಲು ಆವಳಿಗೆ ಸ್ನಾನಮಾಡಿಸಿ 'ಯುಂಜಾನ' ಎಂಬ ತೈತ್ತಿರೀಯ ಮಂತ್ರದಿಂದ ಪ್ರಾಯಶ್ಚಿತ್ತಹವನಮಾಡಿ ಹೋಮಮಂತ್ರವನ್ನು ಮುಗಿಸಬೇಕು.

ಧರ್ಮಸಿಂಧು, ಪರಿಚ್ಛೇದ ೩—೬೩.

ಯದಾ ತು ದಾತ್ರಭಾವಾದ್ರಜೋದರ್ಶನಂ, ತದಾ ಕನ್ಯಾ ವರ್ಷತ್ರಯಂ। ಪ್ರತೀಕ್ಷ್ಯ ಸ್ವಯಂ ವರಂ ವೃಣುಯಾತ್ । ನಾತ್ರ ವರಸ್ಯಾಪಿ ದೋಷಃ । ಇತಿ ಕನ್ಯಾರಜೋದೋಷನಿರ್ಣಯಃ ॥

ಅರ್ಥ.—ದಾನಮಾಡುವರಿಲ್ಲದೆ ಇರುವುದರಿಂದ ಕನ್ಯೆಗೆ ರಜೋದರ್ಶನವುಂಟಾಗಲು ಅವಳು ಮೂರುವರ್ಷಗಳ ಪರ್ಯಂತ ಕಾದಿದ್ದು, ಆಮೇಲೆ ತಾನೇ ವರ

ನನ್ನು ಹುಡುಕಿಕೊಂಡು ಮದುವೆಮಾಡಿಕೊಳ್ಳಬಹುದು. ಈ ಸಂದರ್ಭದಲ್ಲಿ ವರನಿಗೂ ದೋಷವಿಲ್ಲ. ಹೀಗೆ ಕನ್ಯಾರಜೋದೋಷ ನಿರ್ಣಯವುಮಾಡಲ್ಪಟ್ಟಿರುವುದು.

ಧರ್ಮಸಿಂಧು, ಪರಿಚ್ಛೇದ ೩—೭೦

ಕನ್ಯಾವಿವಾಹಕಾಲಃ:—ಜನ್ಮತೋ ಗರ್ಭತೋ ವಾ ಪಞ್ಚಮವರ್ಷಪ್ರಭೃತಿ ಅಷ್ಟವರ್ಷಪರ್ಯಂತಂ ಕನ್ಯಾವಿವಾಹೇಉಚಿತಃಕಾಲಃ, ನವಮದಶಮಯೋರ್ಮಧ್ಯಮಃ, ಏಕಾದಶವರ್ಷೇಽಧಮಃ, ದ್ವಾದಶಾದೌ ಪ್ರಾಯಶ್ಚಿತ್ತಾವಹಃ॥

ಅರ್ಥ.— ಕನ್ಯಾವಿವಾಹಕಾಲವು.— ಜನ್ಮದಿಂದಾಗಲಿ ಗರ್ಭದಿಂದಾಗಲಿ ಐದನೆಯ ವರ್ಷದಿಂದ ಎಂಟನೆಯ ವರ್ಷ ಪರ್ಯಂತ ಕನ್ಯಾವಿವಾಹಕ್ಕೆ ಉಚಿತಕಾಲವು ಒಂಭತ್ತು ಮತ್ತು ಹತ್ತನೆಯ ವರ್ಷಗಳಲ್ಲಿ ಮಧ್ಯಮಕಾಲವು, ಹನ್ನೊಂದನೆಯ ವರ್ಷದಲ್ಲಿ ಅಧಮಕಾಲವು ಹನ್ನೆರಡನೆಯ ವರ್ಷ ಮೊದಲುಗೊಂಡ ಕಾಲವು ಪ್ರಾಯಶ್ಚಿತ್ತಮಾಡಿ ವಿವಾಹಮಾಡತಕ್ಕ ಕಾಲವಾಗಿರುವುದು.

ಪರಾಶರಮಾಧವೀಯ, ವೈದ್ಯನಾಥದೀಕ್ಷಿತೀಯ, ಮತ್ತು ಮದನಪಾರಿಜಾತ.

ತ್ರೀಣಿ ವರ್ಷಾಣ್ಯೃತುಮತೀ ಕಾಂಕ್ಷೇತ ಪಿತೃಶಾಸನಂ ।
ತತಶ್ಚತುರ್ಥೇ ವರ್ಷೇ ತು ವಿಂದೇತ ಸದೃಶಂ ಪತಿಂ ॥

ಅರ್ಥ.—ಋತುಮತಿಯಾದವಳು ಮೂರು ವರ್ಷಗಳ ಪರ್ಯಂತ ತಂದೆಯ ಅಪ್ಪಣೆಯನ್ನು ನಿರೀಕ್ಷಿಸಬೇಕು. ಆಮೇಲೆ ನಾಲ್ಕನೆಯ ವರ್ಷದಲ್ಲಿ ತನಗೆ ಸಮಾನನಾದ ಪತಿಯನ್ನು ಹೊಂದಬಹುದು.

ಧರ್ಮಸಿಂಧು, ಪರಿಚ್ಛೇದ ೩—೭೩.

ಸರ್ವಾಭಾವೇ ಕನ್ಯಾ ಸ್ವಯಂ ವರಂ ವೃಣುಯಾತ್ ॥

ಅರ್ಥ.—ದಾನಮಾಡುವವರು ಯಾರೂ ಇಲ್ಲದಿದ್ದರೆ ಕನ್ಯೆಯು ಸ್ವಯಂವರವನ್ನು ಮಾಡಿಕೊಳ್ಳಬಹುದು.

ಹೇಮಾದ್ರಿಧರ್ಮಶಾಸ್ತ್ರ, ಪ್ರಾಯಶ್ಚಿತ್ತಾಧ್ಯಾಯ.

ಗೌತಮಃ। ವಿವಾಹಶೇಷಹೋಮಾತ್ಪ್ರಾಗ್ವಧೂರ್ಯಾ ಪ್ರಥಮಾರ್ತವಾ
ತತ್ಪತಿಸ್ನಾ ವಧೂಶ್ಚೋಭೌಪ್ರಾಯಶ್ಚಿತ್ತಮಿಹಾರ್ಹತಃ ॥

ಗರ್ಗಃ। ಸ್ನಾಪಯಿತ್ವಾ ಪರೀಧಾಯ ಪೂರ್ವವಚ್ಛುದ್ಧವಾಸಸಾ।
ಪೂರ್ವವಜ್ಜುಹುಯಾದ್ವಹ್ನೌ ತತಶ್ಚೇಂದ್ರಾಯಣಂ ಪೃಥಕ್ ॥
ಕೃತ್ವಾ ತೌ ಪಾಪಶುದ್ಧೌ ಸ್ತಾಮನ್ಯಥಾ ದೋಷಸಂಭವಾ।
ತದಾನೀಂ ನ ಪರಿತ್ಯಾಜ್ಯಾ ಪೂರ್ವಂ ಪುಷ್ಪವತೀ ನ ಚೇತ್ ॥

ನ ಯೋಗ್ಯಾ ಹವ್ಯಕವ್ಯೇಷು ಸಾ ನಾರೀ ವೃಷಲೀ ಭವೇತ್।
ಪ್ರಾಯಶ್ಚಿತ್ತಂ ತದಾ ಕೃತ್ವಾ ಕರ್ಮ ಕುರ್ವನ್ನ ದೋಷಭಾಕ್ ॥

ಅರ್ಥ.—ಗೌತಮವಚನ; - ವಿವಾಹಶೇಷಹೋಮಕ್ಕೆ ಮೊದಲು ಪ್ರಥಮ ಋತುಮತಿಯಾಗುವ ವಧುವೂ ಅವಳ ಗಂಡನೂ ಇಬ್ಬರೂ ಈ ವಿಷಯದಲ್ಲಿ ಪ್ರಾಯಶ್ಚಿತ್ತಕ್ಕೆ ಅರ್ಹರಾಗುವರು; ಎಂದರೆ ಪ್ರಾಯಶ್ಚಿತ್ತದಿಂದ ಶುದ್ಧಿಹೊಂದುವರು. ಗರ್ಗವಚನ.—ಸ್ನಾನಮಾಡಿಸಿ ಮೊದಲಿನಂತೆ ಶುದ್ಧವಸ್ತ್ರವನ್ನುಡಿಸಿ ಅಗ್ನಿಯಲ್ಲಿ ಮೊದಲಿನಂತೆ ಹೋಮಮಾಡಬೇಕು. ಆಮೇಲೆ ಪ್ರತ್ಯೇಕವಾಗಿ ಚಾಂದ್ರಾಯಣ ಮಾಡಿದರೆ ವಧೂವರರಿಬ್ಬರೂ ಪಾಪದಿಂದ ಶುದ್ಧರಾಗುವರು. ಅನ್ಯಥಾ ಮಾಡಿದರೆ ದೋಷಿಗಳಾಗುವರು. ಪೂರ್ವದಲ್ಲಿ ಪುಷ್ಪವತಿಯಾಗದಿದ್ದ ಪಕ್ಷದಲ್ಲಿ—ಎಂದರೆ ಪ್ರಥಮಋತುಮತಿಯಾಗಿದ್ದರೆ—ಆ ವಧುವು ಪ್ರಾಯಶ್ಚಿತ್ತವಾದ ಬಳಿಕ ತ್ಯಾಜ್ಯಳಾಗುವುದಿಲ್ಲ. ಋತುಮತಿಯಾದವಳು ಹವ್ಯಕವ್ಯಗಳಿಗೆ ಯೋಗ್ಯಳಲ್ಲ, ಅವಳು ವೃಷಲಿಯಾಗುವಳು. ಆಗ ಪ್ರಾಯಶ್ಚಿತ್ತವನ್ನು ಮಾಡಿ ವಿವಾಹಕರ್ಮವನ್ನು ಮಾಡಿದರೆ ದೋಷಿಯಾಗುವುದಿಲ್ಲ.

ಮನುಸ್ಮೃತಿ, ಅಧ್ಯಾಯ ೯, ಶ್ಲೋಕ ೮೯, ಮೇಧಾತಿಥಿವ್ಯಾಖ್ಯಾನ.

ಪ್ರಾಗೃತೋಃ ಕನ್ಯಾಯಾಃ ನ ದಾನಂ, ಋತಾವಪಿ ಯಾವದ್ಗುಣ
ವಾನ್ವರೋ ನ ಲಭ್ಯತೇ ॥

ಅರ್ಥ.—ಋತುವಾಗುವುದಕ್ಕೆ ಮೊದಲು ಕನ್ಯಾದಾನವು ಕೂಡದು. ಋತುವಾದಬಳಿಕವೂ ಕೂಡ ಗುಣವಂತನಾದ ವರನು ಸಿಕ್ಕುವವರೆಗೂ ಮದುವೆ ಮಾಡಕೂಡದು.

ಯಾಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ, ಶ್ಲೋಕ೬೪ ಅಪರಾರ್ಕವ್ಯಾಖ್ಯಾನ.

ದೃಷ್ಟೇ ತು ತಸ್ಮಿನ್ಪಿತ್ರಾದಿಷು ಸ್ವತ್ಸ್ವಪಿಸ್ವಯಮೇವ ಕನ್ಯಾವರಂ ಕುರ್ಯಾತ್।

ಅರ್ಥ.—ಪಿತ್ರಾದಿಗಳು ಇದ್ದಾಗ್ಗೂ ಕೂಡ ರಜೋದರ್ಶನವಾಗಲು, ಕನ್ಯೆಯು ಸ್ವಯಂವರವನ್ನು ಮಾಡಿಕೊಳ್ಳತಕ್ಕದು.

ಪರಾಶರಮಾಧವೀಯದಲ್ಲಿ ಮಾಧವವಚನ.

ದೃಷ್ಟೇ ತು ರಜಸಿ ಸತ್ಸ್ವಪಿ ಪಿತ್ರಾದಿಷು ಕಂಚಿತ್ಕಾಲಂ ಪಿತುಃ ಶಾಸನಂ
ಪ್ರತೀಕ್ಷ್ಯ ತದುಪೇಕ್ಷಣೇನ ಸ್ವಯಮೇವ ವರಂ ವರಯೇತ್ ॥

ಅರ್ಥ.—ಋತುದರ್ಶನವಾದರೆ ತಂದೆ ಮೊದಲಾದವರಿದ್ದಾಗ್ಗೂ ಕೆಲವುಕಾಲ ಪರ್ಯಂತ ಅವರ ಅಪ್ಪಣೆಯನ್ನು ನಿರೀಕ್ಷಿಸಿ ಅವರು ಉಪೇಕ್ಷಿಸಿದಲ್ಲಿ ಕನ್ಯೆಯು ತಾನೇ ವರನನ್ನು ವರಿಸಬಹುದು.

ಬೃಹತ್ಪರಾಶರಸಂಹಿತೆ, ಅಧ್ಯಾಯ ೪.

ಅಧಿಕಾರೀ ಯದಾ ನ ಸ್ಯಾತ್ತದಾಧೀನಾನೃಪಸ್ಯ ಸಾ ।
ತದ್ಗಿರಾ ಚ ಸ್ವಯಂ ರಮ್ಯಂ ಕನ್ಯಾಪಿ ವರಯೇದ್ವರಂ ॥

ಅರ್ಥ.—ದಾನಮಾಡುವ ಅಧಿಕಾರಿಯು ಇಲ್ಲದಾಗ ಕನ್ಯೆಯು ರಾಜಾನುಮತಿಯಿಂದ ಯೋಗ್ಯನಾದ ವರನನ್ನು ತಾನೇ ವರಿಸತಕ್ಕದು.

ಮದನ ಪಾರಿಜಾತ, ಸ್ತಬಕ ೨.

ಪಿತ್ರಾದಿಷು ಸತ್ಸ್ವಪಿ ಕಾಲವಿಶೇಷೇ—ರಜೋಯೋಗಾನಂತರಂ ।
ಚತುರ್ಥವರ್ಷೇ— ವಿದ್ಯತಏವ ಸ್ವಯಂವರಃ ॥
ಯದಾಹ ಬೋಧಾಯನಃ ॥
ತ್ರೀಣಿ ವರ್ಷಾಣ್ಯೃತುಮತೀ ಕಾಂಕ್ಷೇತ ಪಿತೃಶಾಸನಂ ।
ತತಶ್ಚತುರ್ಥೇ ವರ್ಷೇ ತು ವಿಂದೇತ ಸದೃಶಂ ಪತಿಂ ॥

ಅರ್ಥ.—ತಂದೆ ಮುಂತಾದವರು ಇದ್ದಾಗ್ಗೂ ಕೂಡ ಕಾಲವಿಶೇಷದಲ್ಲಿ ಎಂದರೆ ರಜೋಯೋಗವಾದ ಬಳಿಕ ನಾಲ್ಕನೆಯ ವರ್ಷದಲ್ಲಿ ಸ್ವಯಂವರವು ಉಂಟು. ಬೋಧಾಯನನು ಹಾಗೆಯೇ ಹೇಳಿರುವನು,—ಋತುಮತಿಯಾದ ಕನ್ಯೆಯು ಮೂರು ವರ್ಷಗಳ ಪರ್ಯಂತ ತಂದೆಯ ಅಪ್ಪಣೆಯನ್ನು ನಿರೀಕ್ಷಿಸಬೇಕು. ಆಮೇಲೆ ನಾಲ್ಕನೆಯ ವರ್ಷದಲ್ಲಿ ತನಗೆ ಸದೃಶನಾದ ಪತಿಯನ್ನು ಹೊಂದಬಹುದು.

ಮದನಪಾರಿಜಾತ, ಸ್ತಬಕ ೨.

ಬೋಧಾಯನಃ ।

ದದ್ಯಾದ್ಗುಣವತೇ ಕನ್ಯಾಂ ನಗ್ನಿಕಾಂ ಧರ್ಮಚಾರಿಣೀಂ ।
ಅಪಿವಾ ಗುಣಹೀನಾಯ ನೋಪರುಂಧ್ಯಾದ್ರಜಸ್ವಲಾಂ ॥

ಅರ್ಥ.—ಬೋಧಾಯನ ವಚನ.—ಧರ್ಮಚಾರಿಣಿಯಾದ ಋತುಮತಿಯಾದ ಕನ್ಯೆಯನ್ನು ಗುಣವಂತನಿಗೆ ವಿವಾಹ ಮಾಡಿಕೊಡಬೇಕು. ಅಥವಾ ಗುಣಹೀನನಿಗಾದರೂ ಕೊಡಬೇಕು. ಋತುಮತಿಯನ್ನು ತಡೆಯುಕೂಡದು.

ಹೀಗೆ ಋತುಮತೀವಿವಾಹಕ್ಕೆ ಅನುಜ್ಞಾಪ್ರದಾಯಕವಾದ ಶಾಸ್ತ್ರವಚನಗಳು ಇನ್ನೂ ಅನೇಕವಾಗಿರುವುವು. ಆದ ಪ್ರಯುಕ್ತ ಆ ವಿವಾಹವನ್ನು ತಿರಸ್ಕರಿಸಲಾವಶ್ಯಕವಿಲ್ಲ. ಈ ಶಾಸ್ತ್ರವಚನಗಳ ಪ್ರಕಾರ ಅದನ್ನು ಪುರಸ್ಕರಿಸಬಹುದಾಗಿದೆ. ಮೇಲಿನ ವಚನಗಳಿಂದ, ಕೆಲವರು ಶಾಸ್ತ್ರಕಾರರು ಪ್ರಾಯಶ್ಚಿತ್ತಮಾಡಿ ಋತುಮತೀವಿವಾಹವನ್ನಾಚರಿಸಲಿಕ್ಕೂ ಅಪ್ಪಣೆ ಕೊಡಿಸಿರುವುದು ವ್ಯಕ್ತವಾಗುವುದು. ಇದಲ್ಲದೆ ಋತುಮತೀವಿವಾಹವು ಶಾಸ್ತ್ರನಿಷಿದ್ಧವೆಂದು ಹೇಳಲಾಸ್ಪದವಿಲ್ಲ.

ಪ್ರಕರಣ ೪.

ಕನ್ಯಾಲಕ್ಷಣ.

ಅನೇಕ ಶಾಸ್ತ್ರಕಾರರಿಂದ ಬೋಧಿಸಲ್ಪಟ್ಟ ಕನ್ಯಾಲಕ್ಷಣವನ್ನು ಪರ್ಯಾಲೋಚಿಸಿದರೆ, ಋತುಮತೀವಿವಾಹವು ಸೂಚಿತವಾಗಿರುವುದೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಈ ವಿಷಯದಲ್ಲಿ ಕೆಲವು ಶಾಸ್ತ್ರವಚನಗಳು ಇಲ್ಲಿ ಉದಾಹರಿಸಲ್ಪಡುವುವು.

ಮನುಸ್ಮೃತಿ, ಅಧ್ಯಾಯ ೩.

ಅಸಪಿಂಡಾ ಚ ಯಾ ಮಾತುರಸಗೋತ್ರಾ ಚ ಯಾ ಪಿತುಃ ।

ಸಾ ಪ್ರಶಸ್ತಾ ದ್ವಿಜಾತೀನಾಂ ದಾರಕರ್ಮಣ್ಯಮೈಥುನೀ ॥ ೫ ॥

ಅರ್ಥ.—ವರನ ತಾಯಿಗೆ ಅಸಪಿಂಡಳಾಗಿಯೂ ತಂದೆಗೆ ಅಸಮಾನಗೋತ್ರಳಾಗಿಯೂ ಮೈಥುನವಿಲ್ಲದವಳಾಗಿಯೂ ಇರುವಂಥ ಸ್ತ್ರೀಯು ದ್ವಿಜಾತಿಯರಿಗೆ ಮದುವೆಗೆ ಪ್ರಶಸ್ತಳಾಗಿರುವಳು.

ನಂದನವ್ಯಾಖ್ಯಾನ.—

ಅಮೈಥುನೀ ಅಕ್ಷತಯೋನಿಃ ॥

ಅರ್ಥ.—ಅಮೈಥುನಿಯೆಂದರೆ ಅಕ್ಷತಯೋನಿ; ಎಂದರೆ ಪುರುಷಸಂಭೋಗವಿಲ್ಲದವಳು,

ಕೆಲವು ಪುಸ್ತಕಗಳಲ್ಲಿ 'ದಾರಕರ್ಮಣ್ಯಮೈಥುನೀ' ಎಂಬುದಕ್ಕೆ ಬದಲಾಗಿ 'ದಾರಕರ್ಮಣಿ ಮೈಥುನೇ' ಎಂದು ಪಾಠಾಂತರವಿರುವುದು. ಇದರ ಅರ್ಥವೇನೆಂದರೆ:—ಮದುವೆಯಲ್ಲಿಯೂ ಮೈಥುನದಲ್ಲಿಯೂ ಎಂದು. ಇದು ಸಮಂಜಸವಾದ ಪ್ರಯೋಗವಲ್ಲ. ಮದುವೆಯೆಂದು ಹೇಳಿದರೆ ಮೈಥುನವೂ ದ್ಯೋತಿತವಾಗುವುದರಿಂದ ಮದುವೆ ಮತ್ತು ಮೈಥುನ ಎಂಬೀ ಎರಡು ಪದಗಳನ್ನು ಜೊತೆಯಲ್ಲಿ ಪ್ರಯೋಗಿಸುವ ಆವಶ್ಯಕವಿಲ್ಲ. ಇದರಿಂದ ಪುನರುಕ್ತಿದೋಷವು ಬರುವುದು.

ವೃದ್ಧಗೌತಮಸ್ಮೃತಿ, ಅಧ್ಯಾಯ ೪.

ಕನ್ಯಾ ಚಾಕ್ಷತಯೋನಿಃ ಸ್ಯಾತ್ ಕುಲೀನಾ ಪಿತೃಮಾತೃತಃ ॥

ಅರ್ಥ.— ತಂದೇ ತಾಯಿಗಳ ಕಡೆಯಿಂದ ಸದ್ವಂಶದವಳಾಗಿಯೂ ಅಕ್ಷತಯೋನಿಯಾಗಿಯೂ ಇರುವಳೇ ಕನ್ಯೆಯು. ಅಕ್ಷತಯೋನಿಯೆಂದರೆ ಪುರುಷಸಂಭೋಗವಿಲ್ಲದವಳು.

ಯಾಜ್ಞವಲ್ಕ್ಯಸ್ಮೃತಿ, ಅಧ್ಯಾಯ ೧.

ಅವಿಪ್ಲುತಬ್ರಹ್ಮಚರ್ಯೋ ಲಕ್ಷಣ್ಯಾಂ ಸ್ತ್ರಿಯಮುದ್ವಹೇತ್ ।
ಅನನ್ಯಪೂರ್ವಿಕಾಂ ಕಾಂತಾಮಸಪಿಂಡಾಂ ಯವೀಯಸೀಂ ॥ ೫೨ ॥

ಅರ್ಥ.—ವಿಚ್ಯುತಿಯಿಲ್ಲದ ಬ್ರಹ್ಮಚರ್ಯವುಳ್ಳವನು ತನಗಿಂತ ವಯಸ್ಸಿನಲ್ಲಿ ಚಿಕ್ಕವಳಾಗಿಯೂ ಅಸಮಾನಪಿಂಡಳಾಗಿಯೂ ಮನೋಹಾರಿಣಿಯಾಗಿಯೂ ಅನನ್ಯಪೂರ್ವಿಕಳಾಗಿಯೂ ಲಕ್ಷಣವತಿಯಾಗಿಯೂ ಇರುವ ಸ್ತ್ರೀಯನ್ನು ಮದುವೆಮಾಡಿಕೊಳ್ಳಬೇಕು. ಅನನ್ಯಪೂರ್ವಿಕೆಯೆಂದರೆ ಅನ್ಯಪುರುಷರ ಸಂಭೋಗವಿಲ್ಲದವಳು, ಅಥವಾ ಇನ್ನೊಬ್ಬನನ್ನು ವಿವಾಹಮಾಡಿಕೊಳ್ಳದೆ ಇರುವವಳು.

ವಿಜ್ಞಾನೇಶ್ವರ ವ್ಯಾಖ್ಯಾನ.

ಅನ್ಯಪೂರ್ವಾ ದ್ವಿವಿಧಾ ಪುನರ್ಭೂಃ ಸ್ವೈರಿಣೀ ಚೇತಿ । ಪುನರ್ಭೂರಪಿ ದ್ವಿವಿಧಾ ಕ್ಷತಾ ಚಾಕ್ಷತಾ ಚ । ತತ್ರ ಕ್ಷತಾ ಸಂಸ್ಕಾರಾತ್ಪ್ರಾಗೇವ ಪುರುಷಸಂಬಂಧದೂಷಿತಾ, ಅಕ್ಷತಾ ಪುನಃ ಸಂಸ್ಕಾರದೂಷಿತಾ ॥

ಅರ್ಥ.— ಅನ್ಯಪೂರ್ವಳು, ಪುನರ್ಭು ಮತ್ತು ಸ್ವೈರಿಣಿಯೆಂದು ಎರಡು ಪ್ರಕಾರ. ಪುನರ್ಭು ಪುನಃಕ್ಷತಳು ಮತ್ತು ಅಕ್ಷತಳು ಎಂದು ಎರಡುವಿಧ. ಕ್ಷತಳೆಂದರೆ ಮದುವೆಯಾಗುವುದಕ್ಕೆ ಮೊದಲೇ ಪುರುಷಸಂಬಂಧದಿಂದ ದೂಷಿತಳಾದವಳು. ಅಕ್ಷತಳೆಂದರೆ ಸಂಸ್ಕಾರದೂಷಿತಳು.

ಗೌತಮಸಂಹಿತೆ, ಅಧ್ಯಾಯ ೨೪.

ಗೃಹಸ್ಥಃ ಸದೃಶೀಂ ಭಾರ್ಯಾಂ ವಿಂದೇತಾನನ್ಯಪೂರ್ವಾಂ ಯವೀಯಸೀಂ॥

ಅರ್ಥ.—ಗೃಹಸ್ಥನು ಸಮಾನಜಾತಿಯವಳಾಗಿಯೂ ಅನನ್ಯಪೂರ್ವಳಾಗಿಯೂ ವಯಸ್ಸಿನಲ್ಲಿ ತನಗಿಂತ ಚಿಕ್ಕವಳಾಗಿಯೂ ಇರುವ ಹೆಂಡತಿಯನ್ನು ಹೊಂದಬೇಕು.

ಅನನ್ಯಪೂರ್ವಳು ಎಂದರೆ ಪರಪುರುಷಸಂಭೋಗವಿಲ್ಲದವಳು, ಅಥವಾ ಇನ್ನೊಬ್ಬನನ್ನು ಮದುವೆಯಾಗದೆ ಇರುವವಳು.

ಲಘುಹಾರೀತಸ್ಮೃತಿ, ಅಧ್ಯಾಯ ೪.

ಸರ್ವಾವಯವಸಂಪೂರ್ಣಾಂ ಸುವೃತ್ತಾಮುದ್ವಹೇನ್ನರಃ॥

ಅರ್ಥ.—ಪುರುಷನು ಸರ್ವಾವಯವಸಂಪೂರ್ಣಳಾಗಿಯೂ ಒಳ್ಳೆಯ ನಡತೆಯುಳ್ಳವಳಾಗಿಯೂ ಇರುವವಳನ್ನು ಮದುವೆಯಾಗಬೇಕು. ಸರ್ವಾವಯವಸಂಪೂರ್ಣಳು ಎಂದರೆ ಯೌವನವತಿ. ಸರ್ವಾಂಗಗಳೂ ಸಂಪೂರ್ಣವಾಗಬೇಕಾದರೆ ಯೌವನಾವಸ್ಥೆಯು ಪ್ರಾಪ್ತವಾಗಿರಬೇಕು. ಅದಕ್ಕೆ ಮೊದಲು ಅಂಗಗಳು ಸಂಪೂರ್ಣವಾಗುವುದಿಲ್ಲ. ಸುವೃತ್ತಳು ಎಂದರೆ ಒಳ್ಳೇ ನಡತೆಯುಳ್ಳವಳು. ಈ

ಪದಪ್ರಯೋಗದಿಂದಲೂ ಯೌವನವತಿಯೆಂದು ಧ್ವನಿ ತೋರುವುದು. ಸಣ್ಣ ಹುಡುಗಿಯರ ನಡತೆಯಲ್ಲಿ ಗುಣದೋಷಗಳನ್ನು ಹೇಳಲಾಗುವುದಿಲ್ಲ.

ಜೈಮಿನಿಗೃಹ್ಯಸೂತ್ರ, ೨೦—೧.

ತಾಭ್ಯಾಮನುಜ್ಞಾತೋ ಜಾಯಾಂ ವಿಂದೇತಾವಗ್ನಿಕಾಂ ಸಮಾನಜಾತೀಯಾಮಸಗೋತ್ರಾಂ ಮಾತುರಸಪಿಂಡಾಂ ॥

ಅರ್ಥ.—ಸ್ನಾತಕನು ತಂದೆ ತಾಯಿಗಳ ಅಪ್ಪಣೆಯನ್ನು ಪಡೆದು ಅನಗ್ನಿಕಳಾದ ಸಮಾನಜಾತಿಯವಳಾದ ಸಗೋತ್ರಳಲ್ಲದ ಮತ್ತು ತನ್ನ ತಾಯಿಗೆ ಅಸಪಿಂಡಳಾದ ಹೆಂಡತಿಯನ್ನು ಹೊಂದಬೇಕು.

ಇಲ್ಲಿ ಅನಗ್ನಿಕೆಯೆಂದರೆ ಋತುಮತಿಯೆಂದರ್ಥ. ಗೋಭಿಲಪುತ್ರ ಗೃಹ್ಯಾಸಂಗ್ರಹದಲ್ಲಿ ಈ ಪದಕ್ಕೆ ಇದೇ ಅರ್ಥವು ಪ್ರಯೋಗಿಸಲ್ಪಟ್ಟಿರುವುದು ಮೊದಲೇ ತೋರಿಸಲ್ಪಟ್ಟಿರುವುದು. ಇದಲ್ಲದೆ ಜೈಮಿನಿಗೃಹ್ಯಸೂತ್ರದಲ್ಲಿ ವಿವಾಹದ ನಾಲ್ಕನೆಯ ರಾತ್ರಿ ವಧೂವರರು ಸಂಭೋಗಮಾಡಲು ಅಪ್ಪಣೆಯಿರುವುದು. ಅದಪ್ರಯುಕ್ತ ಇಲ್ಲಿ ಅನಗ್ನಿಕೆಯೆಂದರೆ ಋತುಮತಿಯೆಂದೇ ಅರ್ಥಮಾಡಬೇಕಾಗುವುದು.

ಆಪಸ್ತಂಬ ಗೃಹ್ಯಸೂತ್ರ, ಪಟಲ ೧, ಖಂಡ ೩.

ಬಂಧುಶೀಲಲಕ್ಷಣಸಂಪನ್ನಾಮರೋಗಾಮುಪಯಚ್ಛೇತ ॥೧೯॥

ಅರ್ಥ.—ಸ್ನಾತಕನು ಬಂಧುಶೀಲಲಕ್ಷಣಯುಕ್ತಳಾದ ರೋಗವಿಲ್ಲದ ಸ್ತ್ರೀಯನ್ನು ಮದುವೆಯಾಗಬೇಕು.

ಶೀಲವೆಂದರೆ ಒಳ್ಳೆಯ ನಡತೆ. ಬುದ್ಧಿ ಕಾಲದ ಚಿಕ್ಕಹುಡುಗಿಯರ ನಡತೆಯ ವಿಷಯವಾಗಿ ಗುಣದೋಷಗಳನ್ನು ಹೇಳಲಾಗುವುದಿಲ್ಲ. ಯೌವನವತಿಯರ ನಡತೆಯ ವಿಷಯವಾಗಿ ಗುಣದೋಷಗಳನ್ನು ಹೇಳಲು ಸಾಧ್ಯವಾಗಿರುವುದು. ಇಲ್ಲಿ ಒಳ್ಳೆಯ ನಡತೆಯ ಸ್ತ್ರೀಯನ್ನು ಮದುವೆಯಾಗಬೇಕೆಂದು ಹೇಳಿರುವುದರಿಂದ ಯುವತಿಯು ಸೂಚಿತಳಾಗುವಳು. ಇದಲ್ಲದೆ ಈ ಗೃಹ್ಯಸೂತ್ರದಲ್ಲಿ ವಿವಾಹದ ನಾಲ್ಕನೆಯ ರಾತ್ರಿ ಸಂಭೋಗಕ್ಕೆ ಅಪ್ಪಣೆಯಿರುವುದರಿಂದಲೂ ಋತುಮತಿಯೇ ಸೂಚಿತಳಾಗುವಳೆಂದು ದೃಢವಾಗಿ ಹೇಳಬಹುದಾಗಿದೆ.

ಹಿರಣ್ಯಕೇಶಿಗೃಹ್ಯಸೂತ್ರ, ಪ್ರಶ್ನ ೧, ಪಟಲ ೬, ಖಂಡ ೧೯.

ತಾಭ್ಯಾಮನುಜ್ಞಾತೋ ಭಾರ್ಯಾಮುಪಯಚ್ಛೇತ ಸಜಾತಾಂ ನಗ್ನಿಕಾಂ ಬ್ರಹ್ಮಚಾರಿಣೀಮಸಗೋತ್ರಾಂ ॥೨॥

ಅರ್ಥ.—ಸ್ನಾತಕನು ತಂದೆ ತಾಯಿಗಳ ಅಪ್ಪಣೆಯನ್ನು ಪಡೆದು ಸಜಾತಿಯವಳಾದ ನಗ್ನಿಕೆಯಾದ ಬ್ರಹ್ಮಚಾರಿಣಿಯಾದ ಭಿನ್ನಗೋತ್ರಳಾದ ಹೆಂಡತಿಯನ್ನು ಹೊಂದಬೇಕು.

ಇಲ್ಲಿ ನಗ್ನಿಕೆಯೆಂದರೆ ಋತುಮತಿಯೆಂದರ್ಥ. 'ಅರಾತ' ಎಂಬ ಪದಕ್ಕೆ ಸಮೀಪ ಮತ್ತು ದೂರ ಎಂಬೆರಡು ಪರಸ್ಪರ ವಿರುದ್ಧಾರ್ಥಗಳು ಹೇಗೆ ಇರುವುವೋ, ಹಾಗೆ 'ನಗ್ನಿಕೆ' ಎಂಬ ಪದಕ್ಕೆ ಋತುಮತಿಯಾದವಳು ಮತ್ತು ಋತುಮತಿಯಾಗದವಳು ಎಂಬೆರಡು ವಿರುದ್ಧಾರ್ಥಗಳಿರುವುವು. ನಗ್ನಿಕೆಯೆಂದರೆ ವಸ್ತ್ರರಹಿತಳೆಂದು ಆ ಪದಕ್ಕೆ ಮೂಲಾರ್ಥವು. ಬುದ್ಧಿಸಾಲದ ಚಿಕ್ಕ ಹುಡುಗಿಯೂ ವಸ್ತ್ರವಿಲ್ಲದಿರುವಳು. ಋತುಮತಿಯೂ ಸಂಭೋಗಕಾಲದಲ್ಲಿ ಹಾಗೆಯೇ ಇರುವಳು. ಆದುದರಿಂದ ಶಾಸ್ತ್ರಕಾರರು ಈಯೆರಡು ಅರ್ಥಗಳಲ್ಲಿ ಆ ಪದವನ್ನು ಪ್ರಯೋಗಿಸಿರುವರು. ಹೀಗಿರುವುದರಿಂದ ವ್ಯಾಖ್ಯಾನಕಾರರು ಸಂದರ್ಭಕ್ಕೆ ತಕ್ಕಂತೆ ಅರ್ಥ ಮಾಡಬೇಕು.

ಪ್ರಕೃತದಲ್ಲಿ ಮೇಲಿನ ವಚನದಲ್ಲಿ ನಗ್ನಿಕೆ ಮತ್ತು ಬ್ರಹ್ಮಚಾರಿಣಿ ಎಂಬೆರಡು ವಿಶೇಷಣಗಳು ಭಾರ್ಯೆಯೆಂಬ ಏಕಪದಕ್ಕೆ ಪ್ರಯೋಗಿಸಲ್ಪಟ್ಟಿರುವುವು. ಬ್ರಹ್ಮಚಾರಿಣಿಯೆಂದರೆ ಪುರುಷಸಂಭೋಗವಿಲ್ಲದವಳೆಂದರ್ಥವು. ಮೈಥುನಾರ್ಹಳಲ್ಲದ ಚಿಕ್ಕಹುಡುಗಿಯು ಬ್ರಹ್ಮಚಾರಿಣಿಯಾಗಿರಬೇಕೆಂದು ಹೇಳುವುದು ಅನಾವಶ್ಯಕ. ಆದರೆ ಋತುಮತಿಯು ಮೈಥುನಾರ್ಹಳಾಗಿರುವುದರಿಂದ ಅಂಥವಳು ಬ್ರಹ್ಮಚಾರಿಣಿಯಾಗಿರಬೇಕೆಂದು ಹೇಳುವುದು ಆವಶ್ಯಕ. ಹಾಗೆ ಬ್ರಹ್ಮಚಾರಿಣಿಯಾಗಿರದೆ ಪುರುಷಸಂಭೋಗವುಳ್ಳವಳು ವಿವಾಹಕ್ಕೆ ಯೋಗ್ಯಳಲ್ಲವೆಂದು ಮೇಲಿನ ವಚನದ ಅಭಿಪ್ರಾಯವಾಗಿರುವುದು. ಇದಲ್ಲದೆ ಆ ಗೃಹ್ಯಸೂತ್ರದಲ್ಲಿ ವಿವಾಹದ ನಾಲ್ಕನೆಯ ರಾತ್ರಿ ವಧೂವರರು ಸಂಭೋಗಮಾಡಲು ಅಪ್ಪಣೆಯಿರುವುದು. ಈ ವಿಷಯವು ಇನ್ನು ಮುಂದೆ ತೋರಿಸಲ್ಪಡುವುದು.

ಆದಪ್ರಯುಕ್ತ ಇಲ್ಲಿ ಪ್ರಯೋಗಿಸಲ್ಪಟ್ಟಿರುವ ನಗ್ನಿಕಾಪದಕ್ಕೆ ಋತುಮತಿಯೆಂದೇ ಅರ್ಥ ಮಾಡಬೇಕು. ಬೇರೆ ವ್ಯಾಖ್ಯಾನಕಾರರೂ ಇದೇ ಅರ್ಥವನ್ನು ಸೂಚಿಸಿರುವರು. ಹೇಗೆಂದರೆ—

ಮಾತೃದತ್ತ ವ್ಯಾಖ್ಯಾನ.

ತಸ್ಮಾದ್ವಸ್ತ್ರವಿಕ್ಷೇಪಣಾರ್ಹಾ ನಗ್ನಿಕಾ ಮೈಥುನಾರ್ಹೇತ್ಯರ್ಥಃ। ಬ್ರಹ್ಮಚಾರಿಣೀಂ ಅಕೃತಮೈಥುನಾಂ ॥

ಅರ್ಥ.—ಆದುದರಿಂದ ನಗ್ನಿಕೆಯೆಂದರೆ ವಸ್ತ್ರವನ್ನು ತೆಗೆದುಹಾಕಲು ಯೋಗ್ಯಳು, ಎಂದರೆ ಮೈಥುನಕ್ಕೆ ಅರ್ಹಳಾದವಳು. ಬ್ರಹ್ಮಚಾರಿಣಿಯೆಂದರೆ ಮೈಥುನವಿಲ್ಲದವಳು.

ಸಂಸ್ಕಾರರತ್ನಮಾಲೆಯಲ್ಲಿ ಭಟ್ಟಗೋಪೀನಾಥ ದೀಕ್ಷಿತನ ವ್ಯಾಖ್ಯಾನ—

ನಗ್ನಿಕಾಂ ಮೈಥುನಾರ್ಹಾಂ। ಅರ್ಥ.—ನಗ್ನಿಕೆಯೆಂದರೆ ಮೈಥುನಕ್ಕೆ ಅರ್ಹಳು.

ಇದಲ್ಲದೆ ಮೇಲಿನ ಗೃಹ್ಯಸೂತ್ರದಲ್ಲಿ 'ನಗ್ನಿಕಾಂ' ಎಂಬ ಪದಕ್ಕೆ ಬದಲಾಗಿ 'ಅನಗ್ನಿಕಾಂ' ಎಂದು ಪಾಠಾಂತರವುಂಟು.

'ಅನಗ್ನಿಕೆ' ಎಂದರೆ ಋತುಮತಿಯೆಂದು ಮೊದಲೇ ಜೈಮಿನಿಗೃಹ್ಯಸೂತ್ರಕ್ಕೆ ವ್ಯಾಖ್ಯಾನಮಾಡಲ್ಪಟ್ಟಿದೆ. ಆದುದರಿಂದ ಹಿರಣ್ಯಕೇಶಿ ಸೂತ್ರದಲ್ಲಿ 'ಬ್ರಹ್ಮಚಾರಿಣಿ' ಎಂಬ ಪದದ ಪ್ರಯೋಗವಿರುವುದರಿಂದಲೂ ವಿವಾಹದ ನಾಲ್ಕನೆಯ ರಾತ್ರಿ ಸಂಭೋಗಕ್ಕೆ ಅಪ್ಪಣೆಯಿರುವುದರಿಂದಲೂ, 'ನಗ್ನಿಕೆ' ಎಂಬ ಪದವನ್ನಿಟ್ಟುಕೊಂಡರೂ ಅಥವಾ 'ಅನಗ್ನಿಕೆ' ಎಂಬ ಪದವನ್ನಿಟ್ಟುಕೊಂಡರೂ ಅವೆರಡರಲ್ಲಿ ಪ್ರತಿಯೊಂದು ಪದಕ್ಕೂ ಋತುಮತಿಯೆಂದೇ ಅರ್ಥ ಮಾಡಬೇಕಾಗುವುದು.

ಆಶ್ವಲಾಯನ ಗೃಹ್ಯಸೂತ್ರ, ಅಧ್ಯಾಯ ೧, ಕಂಡಿಕೆ ೫.

ಬುದ್ಧಿರೂಪಶೀಲಲಕ್ಷಣಸಂಪನ್ನಾಮರೋಗಾಮುಪಯಚ್ಛೇತ ॥೩॥

ಅರ್ಥ.—ಬುದ್ಧಿ ರೂಪ ಶೀಲ ಲಕ್ಷಣ ಯುಕ್ತಳಾದ ರೋಗವಿಲ್ಲದ ಸ್ತ್ರೀಯನ್ನು ಮದುವೆಯಾಗಬೇಕು.

ಶೀಲವೆಂದರೆ ಒಳ್ಳೆಯ ನಡತೆ. ಬುದ್ಧಿ ಮತ್ತು ಒಳ್ಳೆಯ ನಡತೆಯುಳ್ಳ ಸ್ತ್ರೀಯೆಂಬಲ್ಲಿ ಪ್ರಾಯದವಳು ಸೂಚಿತಳಾಗುವಳು. ಚಿಕ್ಕ ಹುಡುಗಿಯರ ವಿಷಯದಲ್ಲಿ ಬುದ್ಧಿ ಶೀಲಗಳ ಪ್ರಸ್ತಾವವಿರುವುದಿಲ್ಲ. ಇದಲ್ಲದೆ ಈ ಗೃಹ್ಯಸೂತ್ರದ ವ್ಯಾಖ್ಯಾನ ಪ್ರಕಾರ ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ಸಂಭೋಗಕ್ಕೆ ಅಪ್ಪಣೆಯಿರುವುದು. ಈ ಕಾರಣಗಳಿಂದ ಇಲ್ಲಿ ಉಕ್ತವಾದ ವಿವಾಹಯೋಗ್ಯ ಕನ್ಯಾಲಕ್ಷಣವು ಋತುಮತಿಯನ್ನು ದ್ಯೋತನ ಮಾಡುವಂಥಾದ್ದಾಗಿರುವುದು.

ವ್ಯಾಸಸ್ಮೃತಿ, ಅಧ್ಯಾಯ ೨.

ಪರೀಕ್ಷೇತ ವಿವಾಹಾರ್ಥಮನಿಂದ್ಯಾನ್ವಯಸಂಭವಾಂ ॥೧॥
ಅನನ್ಯಪೂರ್ವಿಕಾಂ ಲಘ್ವೀಂ ಶುಭಲಕ್ಷಣಸಂಯುತಾಂ ॥೩॥

ಅರ್ಥ.—ವಿವಾಹಕ್ಕೋಸ್ಕರ ಕನ್ಯೆಯನ್ನು ಪರೀಕ್ಷಿಸಬೇಕು. ಆಕೆಯು ಅನಿಂದ್ಯವಾದ ಕುಲದಲ್ಲಿ ಹುಟ್ಟಿದವಳಾಗಿಯೂ ಅನನ್ಯಪೂರ್ವಿಕಳಾಗಿಯೂ ಗರ್ಭಿಣಿಯಲ್ಲದವಳಾಗಿಯೂ ಶುಭಲಕ್ಷಣಗಳಿಂದ ಕೂಡಿದವಳಾಗಿಯೂ ಇರಬೇಕು.

ವಸಿಷ್ಠಸ್ಮೃತಿ, ಅಧ್ಯಾಯ ೮.

ಗೃಹಸ್ಥೋ ವಿನೀತಕ್ರೋಧಹರ್ಷೋ ಗುರುಣಾನುಜ್ಞಾತಃ ಸ್ನಾತ್ವಾ ಅಸಮಾನಾರ್ಷಾಮಸ್ಪೃಷ್ಟಮೈಥುನಾಂ ಯವೀಯಸೀಂ ಸದೃಶೀಂ ಭಾರ್ಯಾಂವಿಂದೇತ ॥೧॥

ಅರ್ಥ.—ಗೃಹಸ್ಥನಾಗುವವನು ವಿನೀತಕ್ರೋಧಹರ್ಷವುಳ್ಳವನಾಗಿ ಗುರುವಿನ ಅಪ್ಪಣೆಪಡೆದು ಸ್ನಾನಮಾಡಿ ಅಸಮಾನಗೋತ್ರಳಾಗಿಯೂ ಮೈಥುನವಿಲ್ಲದವಳಾ

ಗಿಯೂ ವಯಸ್ಸಿನಲ್ಲಿ ತನಗಿಂತ ಚಿಕ್ಕವಳಾಗಿಯೂ ಸಮಾನವರ್ಣದವಳಾಗಿಯೂ ಇರುವ ಹೆಂಡತಿಯನ್ನು ಹೊಂದಬೇಕು.

ಪುರುಷಸಂಭೋಗವಿಲ್ಲದವಳು ಎಂಬಲ್ಲಿ ಋತುಮತಿಯು ಸೂಚಿತಳಾಗು ವಳು.

ಮಹಾಭಾರತ, ಅನುಶಾಸನಿಕಪರ್ವ, ಅಧ್ಯಾಯ ೧೦೪.

ಮಹಾಕುಲೇ ಪ್ರಸೂತಾಂ ಚ ಪ್ರಶಸ್ತಾಂ ಲಕ್ಷಣೈಸ್ತಥಾ ।
ವಯಸ್ಥಾಂ ಚ ಮಹಾಪ್ರಾಜ್ಞಃ ಕನ್ಯಾಮಾವೋಢುಮರ್ಹತಿ ॥

ಅರ್ಥ.—ಮಹಾಪ್ರಾಜ್ಞನಾದವನು ದೊಡ್ಡ ಕುಲದಲ್ಲಿ ಹುಟ್ಟಿದಂಥಾ ಲಕ್ಷಣ ಗಳಿಂದ ಪ್ರಶಸ್ತಳಾದಂಥಾ ಯುವತಿಯಾದ ಕನ್ಯೆಯನ್ನು ಮದುವೆಯಾಗಲು ಅರ್ಹ ನಾಗುತ್ತಾನೆ.

ವಯಸ್ಥೆ = ಯುವತಿ.

ಪದ್ಮಪುರಾಣ, ಅಧ್ಯಾಯ ೩೪.

ಆಹರೇದ್ವಿಧಿವದ್ಭಾರ್ಯಾಂ ಸದೃಶಾಮಾತ್ಮನಶ್ಶುಭಾಂ ।
ರೂಪಲಕ್ಷಣಸಂಯುಕ್ತಾಂ ಯೋನಿದೋಷವಿವರ್ಜಿತಾಂ ॥
ಆಹರೇದ್ಬ್ರಾಹ್ಮಣೋ ಭಾರ್ಯಾಂ ಶೀಲಶೌಚಸಮನ್ವಿತಾಂ ॥

ಅರ್ಥ.—ಸಮಾನಜಾತಿಯವಳಾಗಿಯೂ ಶುಭವುಳ್ಳವಳಾಗಿಯೂ ರೂಪಲಕ್ಷ ಣಗಳಿಂದ ಕೂಡಿದವಳಾಗಿಯೂ ಯೋನಿದೋಷವಿಲ್ಲದವಳಾಗಿಯೂ ಇರುವಂಥ ಹೆಂಡತಿಯನ್ನು ವಿಧಿಪ್ರಕಾರ ಮದುವೆಯಾಗಬೇಕು. ಬ್ರಾಹ್ಮಣನು ಶೀಲಶೌಚ ಯುಕ್ತಳಾದ ಭಾರ್ಯೆಯನ್ನು ಮದುವೆಯಾಗಬೇಕು. ಯೋನಿದೋಷವೆಂದರೆ ಮೈಥುನ ಮತ್ತು ಯೋನಿಸಂಬಂಧವಾದ ರೋಗದೋಷವು. ಶೀಲವೆಂದರೆ ಒಳ್ಳೆಯ ನಡತೆ, ಶೌಚವೆಂದರೆ ಶುಚಿಯಾಗಿರುವಿಕೆ. ಇವೆರಡು ಗುಣಗಳನ್ನೂ ಯುವತಿ ಯಲ್ಲಿ ಪರೀಕ್ಷಿಸಬಹುದೇ ಹೊರತು ಚಿಕ್ಕ ಹುಡುಗಿಯರಲ್ಲಿ ಕಂಡುಹಿಡಿಯಲಿಕ್ಕಾ ಗುವುದಿಲ್ಲ.

ಹೇಮಾದ್ರಿದಾನಖಂಡ, ಅಧ್ಯಾಯ ೯, ಸ್ಕಂದಪುರಾಣವಚನ.

ಆತಾಮ್ರಪಾಣಿಪಾದಾಗ್ರಾಂ ಕಂಬುಗ್ರೀವಾಂ ಸುಮಧ್ಯಮಾಂ ।
ವಿಶಾಲಜಘನಾಂ ಚಾರುನಿತಂಬಸ್ಥಲಭೂಷಿತಾಂ ।
ಉದ್ವಹೇತ್ತಾದೃಶೀಂ ಕನ್ಯಾಂ ರೋಗದೋಷವಿವರ್ಜಿತಾಂ ॥

ಅರ್ಥ.—ಕೆಂಪಾದ ಹಸ್ತಪಾದಗಳುಳ್ಳಂಥ ಶಂಖದಂತೆ ಕುತ್ತಿಗೆಯುಳ್ಳಂಥ ಸಣ್ಣ ನಡುವುಳ್ಳಂಥ ವಿಶಾಲವಾದ ಜಘನವುಳ್ಳಂಥ ಮನೋಹರವಾದ ನಿತಂಬದಿಂದ ಅಲಂಕೃತಳಾದಂಥ ರೋಗದೋಷಗಳಿಲ್ಲದಂಥ ಕನ್ಯೆಯನ್ನು ಮದುವೆಯಾಗಬೇಕು.

ಇಲ್ಲಿ ಹೇಳುವ ವಿಶಾಲಜಘನಾದಿಗಳು ಯುವತಿಯನ್ನು ಸೂಚಿಸುವುವು.

ಬೃಹತ್ಪರಾಶರಸಂಹಿತೆ, ಅಧ್ಯಾಯ ೪.

ಪಿಂಗಲಾಂ ಕಪಿಲಾಂ ಕೃಷ್ಣಾಂ ದುಷ್ಟವಾಕ್ಕಾಕನಿಸ್ವನಾಂ ।
ಸ್ಥೂಲಾಂಗಜಂಘಪಾದಾಂ ಚ ಸದಾ ಚಾಪ್ರಿಯವಾದಿನೀಂ ॥
ತ್ಯಜೇನ್ನಾಗನದೀನಾಮ್ನೀಂ ಪಕ್ಷಿವೃಕ್ಷರ್ಕ್ಷನಾಮಿಕಾಂ ।
ಅಹಿಪ್ರಕ್ಷಾಲ್ಯನಾಮ್ನೀಂ ಚ ತಥಾ ಭೀಷಣನಾಮಿಕಾಂ ॥
ಸುಜಾತಿಮುದ್ವಹೇತ್ಕನ್ಯಾಂ ಸುರೂಪಾಂ ಲಕ್ಷಣಾನ್ವಿತಾಂ ।
ಆರೋಗಿಣೀಂ ಸುಶೀಲಾಂ ಚ ತಥಾ ಭ್ರಾತೃಮತೀಮಪಿ ॥
ಸುಲಜ್ಜಾಂ ಶುಭನಾಸಾಂ ಚ ಪತಿಪ್ರೀತಿಕರೀಮಪಿ ।
ಶ್ವಶ್ರೂಶ್ವಶುರಗುರ್ವಾದಿಶುಶ್ರೂಷಾಕಾರಿಣೀಂ ಪ್ರಿಯಾಂ ॥

ಅರ್ಥ. – ಪಿಂಗಲ ಕಪಿಲ ಮತ್ತು ಕಪ್ಪು ಬಣ್ಣವುಳ್ಳವಳಾಗಿಯೂ ದುಷ್ಟವಾಕ್ಕುಳ್ಳವಳಾಗಿಯೂ ಕಾಗೆಯ ಧ್ವನಿಯುಳ್ಳವಳಾಗಿಯೂ ಸ್ಥೂಲವಾದ ಅಂಗ ಜಂಘ ಪಾದಗಳುಳ್ಳವಳಾಗಿಯೂ ಸರ್ವದಾ ಅಪ್ರಿಯವಾದಿನಿಯಾಗಿಯೂ ನಾಗ ನದೀ ಪಕ್ಷಿವೃಕ್ಷರ್ಕ್ಷಅಹಿಪ್ರಕ್ಷಾಲ್ಯನಾಮ್ನಿಯಾಗಿಯೂ ಭಯಂಕರವಾದ ಹೆಸರುಳ್ಳವಳಾಗಿಯೂ ಇರುವಂಥ ಕನ್ಯೆಯನ್ನು ಬಿಡಬೇಕು. ಸುಜಾತಿಯವಳಾಗಿಯೂ ಸುರೂಪಳಾಗಿಯೂ ಲಕ್ಷಣವಿಶಿಷ್ಟಳಾಗಿಯೂ ಆರೋಗಿಣಿಯಾಗಿಯೂ ಸುಶೀಲಳಾಗಿಯೂ ಭ್ರಾತೃವುಳ್ಳವಳಾಗಿಯೂ ಚೆನ್ನಾಗಿ ಲಜ್ಜೆಯುಳ್ಳವಳಾಗಿಯೂ ಒಳ್ಳೆಯ ಮೂಗುಳ್ಳವಳಾಗಿಯೂ ಗಂಡನಿಗೆ ಪ್ರೀತಿಯನ್ನುಂಟುಮಾಡುವಳಾಗಿಯೂ ಅತ್ತೆ ಮಾವ ಗುರು ಮುಂತಾದವರ ಶುಶ್ರೂಷೆಮಾಡುವವಳಾಗಿಯೂ ಪ್ರಿಯಳಾಗಿಯೂ ಇರುವ ಕನ್ಯೆಯನ್ನು ಮದುವೆಯಾಗಬೇಕು.

ಇಲ್ಲಿ ಪ್ರಯೋಗಿಸಿರುವ ದುಷ್ಟವಾಕ್ಕುಳ್ಳವಳು, ಅಪ್ರಿಯವಾದಿನಿ, ಸುಶೀಲಳು, ಲಜ್ಜೆಯುಳ್ಳವಳು, ಗಂಡನಿಗೆ ಪ್ರೀತಿಯನ್ನುಂಟುಮಾಡುವಳು, ಗುರು ಮುಂತಾದವರ ಶುಶ್ರೂಷೆಮಾಡುವವಳು, ಎಂಬೀ ವಿಶೇಷಣ ಪದಗಳು ಕನ್ಯೆಯು ಯುವತಿಯೆಂಬುದನ್ನು ಸೂಚಿಸುವುವು.

ಈರೀತಿಯಾಗಿ ಮೇಲಿನ ಶಾಸ್ತ್ರವಚನಗಳಲ್ಲಿ ಪ್ರಯೋಗಿಸಲ್ಪಟ್ಟ ಅಮೈಥುನಿ, ಅಕ್ಷತಯೋನಿ, ಅನನ್ಯಪೂರ್ವಿಕೆ, ಅನನ್ಯಪೂರ್ವೆ, ಬ್ರಹ್ಮಚಾರಿಣಿ, ಅಸ್ಪೃಷ್ಟಮೈಥುನೆ, *ಯೋನಿದೋಷವಿವರ್ಜಿತೆ, ಎಂಬ ವಿಶೇಷಣ ಪದಗಳು ಪುರುಷಸಂಭೋಗವಿಲ್ಲದ ಕನ್ಯೆಯರು ವಿವಾಹಕ್ಕೆ ಯೋಗ್ಯರೆಂಬುದನ್ನು ಸೂಚಿಸುವುವು. ಇದರಿಂದ ಋತುಮತೀವಿವಾಹವು ದ್ಯೋತಿತವಾಗುವುದು. ಋತುವಾಗದ ಚಿಕ್ಕ ಹುಡುಗಿಯರು ಮೈಥುನಕ್ಕೆ ಅರ್ಹರಲ್ಲವಾದುದರಿಂದ ಅಂಥವರ ವಿಷಯದಲ್ಲಿ ಆ ವಿಶೇಷ

ಣಪದಗಳ ಪ್ರಯೋಗವು ಆವಶ್ಯಕವಾಗಿಯೂ ಸಮಂಜಸವಾಗಿಯೂ ಇರುವುದಿಲ್ಲ. ಋತುಮತಿಯರು ಮೈಥುನಾರ್ಹರಾದುದರಿಂದ ಅವರ ವಿಷಯದಲ್ಲಿ ಆ ವಿಶೇಷಣಗಳು ಸಮಂಜಸವಾಗಿರುವುವು.

ಹಾಗೆಯೇ ಸುವೃತ್ತೆ, ಶೀಲಲಕ್ಷಣಸಂಪನ್ನೆ, ಶೀಲಶೌಚಸಮನ್ವಿತೆ, ಸುಶೀಲೆ, ಎಂಬೀ ವಿಶೇಷಣಗಳೂ ಋತುಮತಿಯನ್ನು ಸೂಚಿಸುವುವು. ಯುವತಿಯರ ನಡತೆಗಳ ವಿಷಯದಲ್ಲಿ ಅವನ್ನು ಹೇಳಲಾಗುವುದಿಲ್ಲ. ಮತ್ತು ಬುದ್ಧಿಸಂಪನ್ನೆ, ವಿಶಾಲಜಘನೆ, ಚಾರುನಿತಂಬಸ್ಥಲಭೂಷಿತೆ, ಸುಮಧ್ಯಮೆ, ಸುಲಜ್ಜೆ, ಪತಿಪ್ರೀತಿಕರಿ, ಗುರುಶುಶ್ರೂಷಣಕಾರಿಣಿ, ಎಂಬೀ ವಿಶೇಷಣಗಳೂ ತರುಣಿಯನ್ನು ಸೂಚಿಸುವಂಥವಾಗಿರುವುವು.

ಮತ್ತು ಸರ್ವಾವಯವಸಂಪೂರ್ಣೆ, ಎಂಬುದೂ ಯುವತಿಯನ್ನು ದ್ಯೋತನಮಾಡುವುದು. ತರುಣಿಯರಲ್ಲಿ ಎಲ್ಲಾ ಅವಯವಗಳೂ ಸಂಪೂರ್ಣತೆಯನ್ನು ಹೊಂದಿರುವುವೇ ಹೊರತು ಚಿಕ್ಕಹುಡುಗಿಯರಲ್ಲಿ ಅವು ಸಂಪೂರ್ಣತೆಯನ್ನು ಹೊಂದಿರುವುದಿಲ್ಲ. ಇದಲ್ಲದೆ 'ಲಘ್ವಿ' ಎಂದರೆ ಬಸುರಾಗಿಲ್ಲದವಳು ಎಂಬ ಪದವೂ ಪ್ರಯೋಗಿಸಲ್ಪಟ್ಟಿರುವುದು. ಇದು ಋತುಮತಿಯನ್ನು ಸೂಚಿಸುವಂಥಾದ್ದಾಗಿರುವುದೆಂದು ಹೇಳಬೇಕಾದ್ದಿಲ್ಲ. ಮತ್ತು ನಗ್ನಿಕೆ, ಅನಗ್ನಿಕೆ, ವಯಸ್ಥೆ, ಎಂಬ ವಿಶೇಷಣಗಳು ಸ್ಪಷ್ಟವಾಗಿ ಋತುಮತಿಯನ್ನೇ ಬೋಧಿಸುವುವು.

ಹೀಗಿರುವುದರಿಂದ ಮೇಲೆ ಉದಾಹರಿಸಲ್ಪಟ್ಟ ಕನ್ಯಾಲಕ್ಷಣಬೋಧಕವಾದ ಶಾಸ್ತ್ರವಚನಗಳು ಋತುಮತೀವಿವಾಹವನ್ನು ಸೂಚಿಸುವಂಥವಾಗಿರುವುವೆಂದು ನಿಸ್ಸಂದೇಹವಾಗಿ ಹೇಳಬಹುದು.

ಪ್ರಕರಣ ೫.

ಕನ್ಯಾದೂಷಣೆ.

—:o:—

ಶಾಸ್ತ್ರಗಳಲ್ಲಿ ಹೇಳಲ್ಪಟ್ಟ ಕನ್ಯಾದೂಷಣವಿಷಯುವನ್ನು ಪರ್ಯಾಲೋಚಿಸಿದರೆ, ಅದರಿಂದ ಋತುಮತೀವಿವಾಹವು ಸೂಚಿಸಲ್ಪಡುವುದೆಂಬುದು ವ್ಯಕ್ತವಾಗುವುದು. ಈ ವಿಷಯುಸಂಬಂಧವಾದ ಕೆಲವು ವಚನಗಳು ಇಲ್ಲಿ ಉದಾಹರಿಸಲ್ಪಡುವುವು:—

ನಾರದಸ್ಮೃತಿ, ವ್ಯವಹಾರಪದ ೧೨.

ದೀರ್ಘಕುತ್ಸಿತರೋಗಾರ್ತಾ ವ್ಯಂಗಾ ಸಂಸ್ಪೃಷ್ಟಮೈಥುನಾ ।
ದುಷ್ಟಾನ್ಯಗತಭಾವಾ ಚ ಕನ್ಯಾದೋಷಾಃ ಪ್ರಕೀರ್ತಿತಾಃ ॥೩೬॥
ಯಸ್ತು ದೋಷವತೀಂ ಕನ್ಯಾಮನಾಖ್ಯಾಯ ಪ್ರಯಚ್ಛತಿ ।
ತಸ್ಯ ಕುರ್ಯಾನ್ನೃಪೋ ದಂಡಂ ಪೂರ್ವಸಾಹಸಚೋದಿತಂ ॥ ೩೩ ॥
ಅಕನ್ಯೇತಿ ತು ಯಃ ಕನ್ಯಾಂ ಬ್ರೂಯಾದ್ದ್ವೇಷೇಣ ಮಾನವಃ ।
ಸ ಶತಂ ಪ್ರಾಪ್ನುಯಾದ್ದಂಡಂ ಕನ್ಯಾದೋಷಮದರ್ಶಯನ್ ॥ ೩೪ ॥
ಕನ್ಯಾಯಾಮಸಕಾಮಾಯಾಂ ಹ್ಯಂಗುಲಸ್ಯಾವಕರ್ತನಂ ।
ಉತ್ತಮಾಯಾಂ ವಧಸ್ತ್ವೇವ ಸರ್ವಸಂಗ್ರಹಣಂ ತಥಾ ॥ ೭೧॥
ಸಕಾಮಾಯಾಂ ತು ಕನ್ಯಾಯಾಂ ಸಂಗಮೇ ನಾಸ್ತ್ಯತಿಕ್ರಮಃ ।
ಕಿಂತ್ವಲಂಕೃತ್ಯ ಸಂಸ್ಕೃತ್ಯ ಸಏವೈನಾಂ ಸಮುದ್ವಹೇತ್ ॥ ೭೨॥

ಅರ್ಥ.—ದೀರ್ಘವಾದ ಕೆಟ್ಟ ರೋಗದಿಂದ ಪೀಡಿತಳಾಗಿರುವುದು, ಅಂಗಹೀನತ್ವ, ಪುರುಷಸಂಭೋಗ, ದುಷ್ಟಸ್ವಭಾವ, ಅನ್ಯನಲ್ಲಿ ಅಭಿಲಾಷೆ—ಇವು ಕನ್ಯಾದೋಷಗಳೆಂದು ಹೇಳಲ್ಪಟ್ಟಿವೆ. ಯಾವನು ದೋಷವತಿಯಾದ ಕನ್ಯೆಯನ್ನು ತಿಳಿಸದೆ ಮದುವೆಮಾಡಿಕೊಡುತ್ತಾನೋ ಅವನಿಗೆ ರಾಜನು ಉತ್ತಮಸಾಹಸಕ್ಕೆ ಹೇಳಿರುವ ದಂಡವನ್ನು ಹಾಕಬೇಕು. ಯಾವನು ದ್ವೇಷದಿಂದ ಕನ್ಯೆಯಾದವಳನ್ನು ಅಕನ್ಯೆಯೆಂದು ಹೇಳುತ್ತಾನೋ, ಅವನು ಆಕೆಯ ದೋಷವನ್ನು ತೋರಿಸದಿದ್ದರೆ ಶತಭಾಗದಂಡವನ್ನು ಹೊಂದುವನು. ಅಕಾಮಳಾದ ಕನ್ಯೆಯ ಸಂಗಮಾಡಿದವನ ಬೆರಳನ್ನು ಕತ್ತರಿಸತಕ್ಕದು. ಉತ್ತಮವರ್ಣದ ಕನ್ಯೆಯ ಸಂಗಮಾಡಿದವನ ಸರ್ವಸ್ವವನ್ನೂ ಕಿತ್ತುಕೊಂಡು ಅವನನ್ನು ವಧಿಸಬೇಕು. ಸಕಾಮಳಾದ ಕನ್ಯೆಯ ಸಂಭೋ

ಗಮಾಡಿದರೆ ತಪ್ಪಿಲ್ಲ. ಆದರೆ ಆಕೆಯನ್ನು ಅಲಂಕರಿಸಿ ಸತ್ಕರಿಸಿ ಅವನೇ ವಿವಾಹ ಮಾಡಿಕೊಳ್ಳಬೇಕು.

ಕನ್ಯೆಯೆಂದರೆ ಮದುವೆಯಾಗದ ಸ್ತ್ರೀಯೆಂದರ್ಥವು.

ವಿಷ್ಣುಸ್ಮೃತಿ, ಅಧ್ಯಾಯ ೫.

ದೋಷಮನಾಖ್ಯಾಯ ಕನ್ಯಾಂ ಪ್ರಯಚ್ಛಂಶ್ಚ ॥ ೪೫ ॥

ಅದುಷ್ಟಾಂ ದುಷ್ಟಾಮಿತಿ ಬ್ರುವನ್ನುತ್ತಮಸಾಹಸಂ ॥ ೪೭ ॥

ಅರ್ಥ.—ಕನ್ಯಾದೋಷವನ್ನು ತಿಳಿಸದೆ ಅವಳನ್ನು ಮದುವೆಮಾಡಿಕೊಟ್ಟವನಿಗೆ (ನೂರು ಕಾರ್ಷಾಪಣಗಳನ್ನು ದಂಡ ಹಾಕಬೇಕು). ದೋಷರಹಿತಳಾದ ಕನ್ಯೆಯನ್ನು ದೋಷಿಣಿಯೆಂದು ಹೇಳುವವನು ಮೊದಲನೆಯ ತರಹದ ದಂಡವನ್ನು ಹೊಂದುವನು.

ಅಧ್ಯಾಯ ೭.

ಸ್ವಸುಃ ಸಖ್ಯಾಃ ಸಗೋತ್ರಾಯಾಃ ಉತ್ತಮವರ್ಣಾಯಾಃ ಕುಮಾರ್ಯಾಃ ಅಂತ್ಯಜಾಯಾಃ ರಜಸ್ವಲಾಯಾಃ ಶರಣಾಗತಾಯಾಃ ಪ್ರವ್ರಜಿತಾಯಾಃ ನಿಕ್ಷಿಪ್ತಾಯಾಶ್ಚ ॥ ೭ ॥

ಅರ್ಥ.—ಸಹೋದರಿಯು ಸ್ನೇಹಿತಳು, ಸಗೋತ್ರದವಳು, ಉತ್ತಮವರ್ಣದವಳು, ಕುಮಾರಿ, ಅಂತ್ಯಜಳು, ಮುಟ್ಟಾದವಳು, ಶರಣಾಗತಳು, ಸನ್ಯಾಸಿನಿ, ತನ್ನ ವಶಕ್ಕೆ ಕೊಡಲ್ಪಟ್ಟವಳು—ಇವರುಗಳ ಸಂಗಮಾಡುವುದು ಗುರುಪತ್ನೀಸಂಗಕ್ಕೆ ಸಮವಾದ ಪಾತಕವಾಗಿರುವುದು.

ಕುಮಾರಿ = ಕನ್ಯೆ = ಮದುವೆಯಾಗದ ಸ್ತ್ರೀಯೆಂದರ್ಥ.

ಆಪಸ್ತಂಬ ಧರ್ಮಸೂತ್ರ, ಪ್ರಶ್ನ ೨, ಪಟಲ ೧೦, ಖಂಡ ೨೭.

ಕುಮಾರ್ಯಾಂ ತು ಸ್ವಾನ್ಯಾದಾಯ ನಾಶ್ಯಃ ॥೨೧॥

ಅರ್ಥ.—ಕುಮಾರೀಸಂಗಮಾಡಿದವನ ಸರ್ವಸ್ವವನ್ನೂ ಹರಣಮಾಡಿ ಅವನನ್ನು ದೇಶಾಂತರಕ್ಕೆ ಓಡಿಸತಕ್ಕದು.

ಸಂವರ್ತಸ್ಮೃತಿ.

ಭಗಿನೀಂ ಮಾತುರಾಪ್ತಾಂ ಚ ಸ್ವಸಾರಂ ಚಾನ್ಯಮಾತೃಜಾಂ ॥೧೬೩॥

ಏತಾಸ್ತಿಸ್ರಃಸ್ತ್ರಿಯೋ ಗತ್ವಾ ತಪ್ತಕೃಚ್ಛ್ರಂ ಸಮಾಚರೇತ್ ।

ಕುಮಾರೀಗಮನೇ ಚೈತದ್ವ್ರತಮೇವ ಸಮಾಚರೇತ್ ॥೧೬೪॥

ಅರ್ಥ—ಸಾಕ್ಷಾತ್ಸಹೋದರಿ, ತಾಯಿಯ ಸ್ನೇಹಿತಳು, ಮಲತಾಯಿಮಗಳು-ಈ ಮೂರು ಸ್ತ್ರೀಯರಲ್ಲಿ ಗಮನಮಾಡಿದರೆ ತಪ್ತಕೃಚ್ಛ್ರ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಕುಮಾರೀಗಮನದಲ್ಲಿಯೂಕೂಡ ಈ ವ್ರತವನ್ನೇ ಆಚರಿಸಬೇಕು.

ವ್ಯಾಸಸ್ಮೃತಿ ಅಧ್ಯಾಯ ೨.

ತ್ಯಜನ್ನದುಷ್ಟಾಂ ದಂಡ್ಯಃ ಸ್ಯಾದ್ದೂಷಯಂಶ್ಚಾಪ್ಯದೂಸಿತಾಂ ॥೯॥

ಅರ್ಥ—ಅದೋಷಿಯಾದ ಕನ್ಯೆಯನ್ನು ತ್ಯಜಿಸಿದವನೂ ಅದೋಷಿಣಿಯಾದವಳನ್ನು ದೂಷಿಸಿದವನೂ ದಂಡಕ್ಕೆ ಗುರಿಯಾಗುವನು.

ಬೋಧಾಯನ ಧರ್ಮಶಾಸ್ತ್ರ, ಪ್ರಶ್ನ ೨, ಅಧ್ಯಾಯ ೧, ಕಾಂಡಿಕೆ ೨.

ಅಥೋಪಪಾತಕಾನಿ ॥೧೨॥ ಅಗಮ್ಯಾಗಮನಂ... ಕನ್ಯಾದೂಷಣಂ ॥೧೩॥

ಅರ್ಥ —ಈಗ ಉಪಪಾತಕಗಳು ಹೇಳಲ್ಪಡುವುವು. ಯಾವುವೆಂದರೆ—

ಅಗಮ್ಯಾಗಮನವು...... ಕನ್ಯಾದೂಷಣವು.

ಶಾತಾತಪಸ್ಮೃತಿ. ಅಧ್ಯಾಯ ೬.

ವ್ಯಾಘ್ರೇಣ ಹನ್ಯತೇ ಜಂತುಃ ಕುಮಾರೀಗಮನೇನ ಚ ।
ವಿಷದಶ್ಚೈವ ಸರ್ಪೇಣ ಗಜೇನ ನೃಪದುಷ್ಟಕೃತ್ ॥೯॥

ಅರ್ಥ.—ಕುಮಾರೀ ಗಮನಮಾಡಿದವನು ಹುಲಿಯಿಂದಲೂ, ವಿಷಪ್ರಯೋಗ ಮಾಡಿದವನು ಸರ್ಪದಿಂದಲೂ, ರಾಜದ್ರೋಹಿಯು ಆನೆಯಿಂದಲೂ ಕೊಲ್ಲಲ್ಪಡುವನು.

ಯಾಜ್ಞವಲ್ಕ್ಯಸ್ಮೃತಿ. ಪ್ರಾಯಶ್ಚಿತ್ತಾಧ್ಯಾಯ.

ಸಖಿಭಾರ್ಯಾಕುಮಾರೀಷು ಸ್ವಯೋನಿಷ್ವಂತ್ಯಜಾಸು ಚ ।
ಸಗೋತ್ರಾಸು ಸುತಸ್ತ್ರೀಷು ಗುರುತಲ್ಪಸಮಂ ಸ್ಮೃತಂ ॥೨೩೧॥
ಕನ್ಯಾಸಂದೂಷಣಂ ಚೈವ ಪರಿವೇದಕಯಾಜನಂ ।
ಕನ್ಯಾಪ್ರದಾನಂ ತಸ್ಯೈವ ಕೌಟಿಲ್ಯಂ ವ್ರತಲೋಪನಂ ॥೨೩೮॥

ಅರ್ಥ.—ಸ್ನೇಹಿತರ ಹೆಂಡತಿಯರಲ್ಲಿಯೂ ಕುಮಾರಿಯರಲ್ಲಿಯೂ ಸಹೋದರಿಯರಲ್ಲಿಯೂ ಅಂತ್ಯಜಸ್ತ್ರೀಯರಲ್ಲಿಯೂ ಸಗೋತ್ರರಾದ ಸ್ತ್ರೀಯರಲ್ಲಿಯೂ ಪುತ್ರರ ಹೆಂಡತಿಯರಲ್ಲಿಯೂ ಸಂಭೋಗಮಾಡುವುದು ಗುರುಪತ್ನೀಗಮನಕ್ಕೆ ಸಮವಾದ ಪಾಪವಾಗಿರುವುದು. ಕನ್ಯಾದೂಷಣ, ಅಣ್ಣನು ಮದುವೆಯಾಗುವುದಕ್ಕೆ ಮೊದಲು ಮದುವೆಯಾದ ತಮ್ಮನಿಗೆ ಯಜ್ಞಮಾಡಿಸುವುದು, ಅಣ್ಣನಿಗೆ ಮದುವೆಯಿಲ್ಲದಿರುವಾಗ ತಮ್ಮನಿಗೆ ಕನ್ಯಾದಾನಮಾಡುವುದು, ಮೋಸಮಾಡುವುದು, ವ್ರತಲೋಪಮಾಡುವುದು... ಇವು ಉಪಪಾತಕಗಳು.

ಯಾಜ್ಞವಲ್ಕ್ಯಸ್ಮೃತಿ. ಆಚಾರಾಧ್ಯಾಯ.

ಅಸಾಖ್ಯಾಯ ದದದ್ದೋಷಂ ದಂಡ್ಯಉತ್ತಮಸಾಹಸಂ ।
ಅದುಷ್ಟಾಂ ಚ ತ್ಯಜನ್ಕನ್ಯಾಂ ದೂಷಯಂಸ್ತು ಮೃಷಾ ಶತಂ ॥೬೬॥

ಅರ್ಥ.—ದೋಷವನ್ನು ತಿಳಿಸದೆ ಕನ್ಯೆಯನ್ನು ಕೊಡುವವನಿಗೂ ದೋಷವಿಲ್ಲದ ಕನ್ಯೆಯನ್ನು ತ್ಯಜಿಸುವವನಿಗೂ ಉತ್ತಮದಂಡವನ್ನು ಹಾಕಬೇಕು. ಮತ್ತು ಅನ್ಯಾಯವಾಗಿ ಕನ್ಯೆಯನ್ನು ದೂಷಿಸುವವನಿಗೆ ನೂರು ಹಣ ದಂಡ ಹಾಕಬೇಕು.

ಭೃತಕಾಧ್ಯಾಪಕಃ ಕ್ಲೀಬಃ ಕನ್ಯಾದೂಷ್ಯಭಿಶಸ್ತಕಃ ॥೨೨೩॥

ಅರ್ಥ.—ಹಣ ತೆಗೆದುಕೊಂಡು ವಿದ್ಯೆ ಹೇಳಿಕೊಡುವವನು, ನಪುಂಸಕ, ಕನ್ಯಾದೂಷಕ, ಕೆಟ್ಟ ಹೆಸರನ್ನು ಪಡೆದವ—ಇವರನ್ನು ಶ್ರಾದ್ಧಕ್ಕೆ ಕರೆಯಬಾರದು. ಯಾಜ್ಞವಲ್ಕ್ಯಸ್ಮೃತಿ, ವ್ಯವಹಾರಾಧ್ಯಾಯ.

ಸಕಾಮಾಸ್ವನುಲೋಮಾಸು ನ ದೋಷಸ್ತ್ವನ್ಯಥಾ ದಮಃ।
ದೂಷಣೇ ತು ಕರಚ್ಛೇದಃ ಉತ್ತಮಾಯಾಂ ವಧಸ್ತಥಾ ॥೨೮೮॥

ಅರ್ಥ.—ಉತ್ತಮವರ್ಣದವನು ಕಾಮುಕಿಯಾದ ಹೀನವರ್ಣದ ಕನ್ಯೆಯನ್ನು ಹರಣಮಾಡಿದರೆ ತಪ್ಪಿಲ್ಲ. ಆದರೆ ಹೀನವರ್ಣದವನು ಕಾಮುಕಿಯಾದ ಉತ್ತಮವರ್ಣದ ಕನ್ಯೆಯನ್ನು ಹರಣಮಾಡಿದರೆ ದಂಡವುಂಟು. ಕನ್ಯೆಯನ್ನು ಕೆಡಿಸಿದರೆ ಅವನ ಕೈಯನ್ನು ಕತ್ತರಿಸಬೇಕು. ಹೀನನು ಉತ್ತಮವರ್ಣದ ಕನ್ಯೆಯನ್ನು ಕೆಡಿಸಿದರೆ ಅವನಿಗೆ ಮರಣದಂಡನೆಯಾಗಬೇಕು.

ಮನುಸ್ಮೃತಿ ಅಧ್ಯಾಯ ೮.

ನೋನ್ಮತ್ತಾಯಾನ ಕುಷ್ಠಿನ್ಯಾಃ ನ ಚ ಯಾ ಸ್ಪೃಷ್ಟಮೈಥುನಾ।
ಪೂರ್ವಂ ದೋಷಾನಭಿಖ್ಯಾಪ್ಯ ಪ್ರದಾತಾ ದಂಡಮರ್ಹತಿ ॥೨೦೫॥
ಯಸ್ತು ದೋಷವತೀಂ ಕನ್ಯಾಮನಾಖ್ಯಾಯ ಪ್ರಯಚ್ಛತಿ।
ತಸ್ಯ ಕುರ್ಯಾನ್ನೃಪೋ ದಂಡಂ ಸ್ವಯಂ ಷಣ್ಣವತಿಂ ಪಣಾನ್ ॥೨೨೪॥
ಅಕನ್ಯೇತಿ ತು ಯಃ ಕನ್ಯಾಂ ಬ್ರೂಯಾದ್ದ್ವೇಷೇಣ ಮಾನವಃ।
ಸ ಶತಂ ಪ್ರಾಪ್ನುಯಾದ್ದಂಡಂ ತಸ್ಯಾದೋಷಮದರ್ಶಯನ್ ॥೨೨೫॥

ವ್ಯಾಖ್ಯಾನಂ—

ಮೇಧಾತಿಥಿಃ। ಅಕನ್ಯಾ ವೃತ್ತಮೈಥುನಸಂಬಂಧಾ ॥
ಕುಲ್ಲೂಕಃ। ನೇಯಂ ಕನ್ಯಾ ಕ್ಷತಯೋನಿಃ ॥
ರಾಘವಾನಂದಃ। ಅಕನ್ಯಾ ಕೇನಾಪಿ ಕ್ಷತಯೋನಿತ್ವಾತ್ ॥
ನಂದನಃ। ಅಕನ್ಯಾ ಕ್ಷತಯೋನಿಃ ॥

ಅರ್ಥ.—ಹುಚ್ಚುಹಿಡಿದವಳನ್ನಾಗಲಿ ಕುಷ್ಠರೋಗವುಳ್ಳವಳನ್ನಾಗಲಿ ಪುರುಷಸಂಭೋಗವುಳ್ಳವಳನ್ನಾಗಲಿ ಮೊದಲೇ ಅಂಥವಳ ದೋಷವನ್ನು ತಿಳಿಸಿ ವರನಿಗೆ ಕೊಟ್ಟವನು ದಂಡಕ್ಕೆ ಗುರಿಯಾಗುವುದಿಲ್ಲ. ಆದರೆ ಮೊದಲೇ ದೋಷವನ್ನು ತಿಳಿಸದೆ ದೋಷವತಿಯಾದ ಕನ್ಯೆಯನ್ನು ಕೊಟ್ಟವನಿಗೆ ರಾಜನು ೯೬ ಹಣಗಳನ್ನು ದಂಡ

ಹಾಕಬೇಕು. ದ್ವೇಷದಿಂದ ಯಾವನು ಕನ್ಯೆಯನ್ನು ಅಕನ್ಯೆಯೆಂದು ಹೇಳುತ್ತಾನೋ, ಅವನು ಕನ್ಯಾದೋಷವನ್ನು ತೋರಿಸಿಕೊಡದಿದ್ದರೆ ೧೦೦ ಹಣ ದಂಡವನ್ನು ಕೊಡಬೇಕು. ಮೇಧಾತಿಥಿ ವ್ಯಾಖ್ಯಾನ.—'ಅಕನ್ಯೆ' ಎಂದರೆ ಮೈಥುನ ಸಂಬಂಧವುಳ್ಳವಳು. ಕುಲ್ಲೂಕ.—ಇವಳು ಕನ್ಯೆಯಲ್ಲ, ಎಂದರೆ ಕ್ಷತಯೋನಿ (ಎಂದರೆ ಪುರುಷಸಂಭೋಗವುಳ್ಳವಳು). ರಾಘವಾನಂದ.—ಯಾವನಿಂದಾದರೂ ಸಂಭೋಗವುಳ್ಳವಳು ಅಕನ್ಯೆಯು. ನಂದನ.—'ಅಕನ್ಯೆ' ಎಂದರೆ ಕ್ಷತಯೋನಿ (ಎಂದರೆ ಪುರುಷಸಂಬಂಧವುಳ್ಳವಳು)

ಶ್ಲೋ॥ ಯೋಕಾಮಾಂ ದೂಷಯೇತ್ಕನ್ಯಾಂ ಸ ಸದ್ಯೋ ವಧಮರ್ಹತಿ ।
ಸಕಾಮಾಂ ದೂಷಯಂಸ್ತುಲ್ಯೋ ನ ವಧಂ ಪ್ರಾಪ್ನುಯಾನ್ನರಃ ॥ ೩೬೪॥
ಕನ್ಯಾಂ ಭಜಂತೀಮುತ್ಕೃಷ್ಟಂ ನ ಕಿಂಚಿದಪಿ ದಾಪಯೇತ್ ।
ಜಘನ್ಯಂ ಸೇವಮಾನಾಂ ತು ಸಂಯತಾಂ ವಾಸಯೇದ್ಗೃಹೇ ॥ ೩೬೫ ॥

ವ್ಯಾ॥ ಕುಲ್ಲೂಕಃ । ಕನ್ಯಾಂ ಸಂಭೋಗಾರ್ಥ ಮುತ್ಕೃಷ್ಟಜಾತಿಪುರುಷಂ ಸೇವಮಾನಾಂ ಸ್ವಲ್ಪಮಪಿ ದಂಡಂ ನ ದಾಪಯೇತ್ । ಹೀನಜಾತಿಂ ಪುನಃ ಸೇವಮಾನಾಂ ಯತ್ನಾತ್ಸ್ಥಾಪಯೇತ್ ॥

ಅರ್ಥ.—ಪುರುಷಸಂಭೋಗವನ್ನಪೇಕ್ಷಿಸದ ಕನ್ಯೆಯನ್ನು ಕೆಡಿಸುವವನು ಕೂಡಲೇಮರಣದಂಡನೆಗೆ ಗುರಿಯಾಗುವನು. ಸಮಾನಜಾತಿಯವನು ಕಾಮುಕಳಾದ್ದ ಕನ್ಯೆಯನ್ನು ಕೆಡಿಸಿದರೆ ಅವನಿಗೆ ಮರಣದಂಡನೆಯಿಲ್ಲ. ಸಂಭೋಗಾಪೇಕ್ಷೆಯಿಂದ ಉತ್ಕೃಷ್ಟಜಾತಿಯವನನ್ನು ಸೇವಿಸುವ ಕನ್ಯೆಗೆ ದಂಡವೇನೂ ಇಲ್ಲ. ಆದರೆ ಹೀನಜಾತಿಯವನನ್ನು ಸೇವಿಸಿದ್ದಾದರೆ ಅವಳನ್ನು ಮನೆಯಲ್ಲಿ ಬಂಧದಲ್ಲಿಡಬೇಕು. ಕುಲ್ಲೂಕ ವ್ಯಾಖ್ಯಾನ.—ಸಂಭೋಗಾರ್ಥವಾಗಿ ಉತ್ಕೃಷ್ಟಜಾತಿ ಪುರುಷನನ್ನು ಸೇವಿಸುವ ಕನ್ಯೆಗೆ ಸ್ವಲ್ಪವೂ ದಂಡಹಾಕಬಾರದು. ಆದರೆ ಹೀನಜಾತಿಯವನನ್ನು ಸೇವಿಸಿದರೆ ಅವಳನ್ನು ಬಂಧದಲ್ಲಿಡಬೇಕು.

ಶ್ಲೋ॥ ಉತ್ತಮಾಂ ಸೇವಮಾನಸ್ತು ಜಘನ್ಯೋ ವಧಮರ್ಹತಿ ।
ಶುಲ್ಕಂ ದದ್ಯಾತ್ಸೇವಮಾನಃ ಸಮಾಮಿಚ್ಛೇತ್ಪಿತಾ ಯದಿ ॥ ೩೬೬ ॥
ಅಭಿಸಹ್ಯ ತು ಯಃ ಕನ್ಯಾಂ ಕುರ್ಯಾದ್ದರ್ಪೇಣ ಮಾನವಃ ।
ತಸ್ಯಾಶು ಕರ್ತ್ಯೇ ಅಂಗುಲ್ಯೌ ದಂಡಂ ಚಾರ್ಹತಿ ಷಟ್ಛತಂ ॥ ೩೬೭ ॥
ಸಕಾಮಾಂ ದೂಷಯಂಸ್ತುಲ್ಯೋ ನಾಂಗುಲಿಚ್ಛೇದಮಾಪ್ನುಯಾತ್ ।
ದ್ವಿಶತಂ ತು ದಮೋ ದಾಪ್ಯಃ ಪ್ರಸಂಗವಿನಿವೃತ್ತಯೇ ॥ ೩೬೮ ॥

ಅರ್ಥ.—ಸಂಭೋಗಾರ್ಥವಾಗಿ ಹೀನಜಾತಿಯವನು ಉತ್ತಮಜಾತಿಯವಳನ್ನು ಸೇವಿಸಿದರೆ ಮರಣದಂಡನೆಗೆ ಗುರಿಯಾಗುವನು. ಸೇವಿಸುವವನು ಸಮಾನಜಾತಿಯವನಾದರೆ ಅವನು ಹೆಣ್ಣಿನ ತಂದೆಯು ಇಷ್ಟಪಟ್ಟರೆ ಆತನಿಗೆ ಶುಲ್ಕವನ್ನು

ಕೊಡಬೇಕು. ಸಮಾನಜಾತಿಯುವನು ದರ್ಪದಿಂದ ಬಲವಂತಮಾಡಿ ಕನ್ಯೆಯನ್ನು ಕೆಡಿಸಿದರೆ ಅವನ ಎರಡು ಬೆರಳುಗಳನ್ನು ಕೂಡಲೆ ಕತ್ತರಿಸುವುದಲ್ಲದೆ ಅವನಿಗೆ ಆರುನೂರು ಹಣಗಳನ್ನು ದಂಡ ಹಾಕಬೇಕು. ಸಮಾನಜಾತಿಯುವನು ಕಾಮುಕಳಾದ ಕನ್ಯೆಯನ್ನು ಕೆಡಿಸಿದರೆ ಅವನಿಗೆ ಅಂಗುಲಿಚ್ಛೇದವಿಲ್ಲ. ಆದರೆ ಅವನು ಪುನಃ ಹಾಗೆ ಮಾಡದಂತೆ ಅವನಿಗೆ ಇನ್ನೂರು ಹಣ ದಂಡಹಾಕಬೇಕು.

ಮನುಸ್ಮೃತಿ ಅಧ್ಯಾಯ ೯.

ವಿಧಿವತ್ಪ್ರತಿಗೃಹ್ಯಾಪಿ ತ್ಯಜೇತ್ಕನ್ಯಾಂ ವಿಗರ್ಹಿತಾಂ |
ವ್ಯಾಧಿತಾಂ ವಿಪ್ರದುಷ್ಟಾಂ ವಾ ಛದ್ಮನಾ ಚೋಪಪಾದಿತಾಂ ‖ ೭೨ ‖

ವ್ಯಾ ‖ ಸರ್ವಜ್ಞನಾರಾಯಣಃ | ವಿಪ್ರದುಷ್ಟಾಂ:— ಪುರುಷಾಂತರದೂಷಿತಾಂ ‖
ನಂದನಃ | ವಿಪ್ರದುಷ್ಟಾಂ:—ಕ್ಷತಯೋನಿಂ ‖
ರಾಮಚಂದ್ರಃ | ವಿಪ್ರದುಷ್ಟಾಂ: — ಪುರುಷಾಂತರಸಂಸ್ಪೃಷ್ಟಾಂ ‖

ಅರ್ಥ. — ಮದುವೆಮಾಡಿಕೊಳ್ಳಲು ವಿಧಿಪ್ರಕಾರ ಒಪ್ಪಿಕೊಂಡಿದ್ದಾಗ್ಯೂ ಮೋಸದಿಂದ ಕೊಡಲ್ಪಟ್ಟ ನಿಂದಿತಳಾದ ರೋಗಪೀಡಿತಳಾದ ಅಥವಾ ಪರಪುರುಷಸಂಭೋಗವುಳ್ಳವಳಾದ ಕನ್ಯೆಯನ್ನು ವರನು ತ್ಯಜಿಸಬೇಕು. ಸರ್ವಜ್ಞನಾರಾಯಣನ ವ್ಯಾಖ್ಯಾನ.—' ವಿಪ್ರದುಷ್ಟೆ ' ಎಂದರೆ ಪರಪುರುಷನಿಂದ ದೂಷಿತಳಾದವಳು. ನಂದನ.—' ವಿಪ್ರದುಷ್ಟೆ ' ಎಂದರೆ ಪುರುಷಸಂಭೋಗವುಳ್ಳವಳು. ರಾಮಚಂದ್ರ.—' ವಿಪ್ರದುಷ್ಟೆ ' ಎಂದರೆ ಪರಪುರುಷ ಸಂಭೋಗವುಳ್ಳವಳು.

ಮನುಸ್ಮೃತಿ, ಅಧ್ಯಾಯ ೧೧.

ರೇತಸ್ಸೇಕಃ ಸ್ವಯೊನೀಷು ಕುಮಾರೀಷ್ವಂತ್ಯಜಾಸು ಚ |
ಸಖ್ಯುಃ ಪುತ್ರಸ್ಯ ಚ ಸ್ತ್ರೀಷು ಗುರುತಲ್ಪಸಮಂ ವಿದುಃ ‖ ೫೮ ‖
ಗುರುತಲ್ಪವ್ರತಂ ಕುರ್ಯಾದ್ರೇತಃ ಸಿಕ್ತ್ವಾ ಸ್ವಯೋನಿಷು |
ಸಖ್ಯುಃ ಪುತ್ರಸ್ಯ ಚ ಸ್ತ್ರೀಷು ಕುಮಾರೀಷ್ವಂತ್ಯಜಾಸುಚ ‖ ೧೭೦ ‖

ಅರ್ಥ. — ಸಹೋದರಿಯರಲ್ಲಿ ಕುಮಾರಿಯರಲ್ಲಿ ಅಂತ್ಯಜಸ್ತ್ರೀಯರಲ್ಲಿ ಸ್ನೇಹಿತರ ಹೆಂಡತಿಯರಲ್ಲಿ ಅಥವಾ ಪುತ್ರರ ಹೆಂಡತಿಯರಲ್ಲಿ ಸಂಭೋಗಮಾಡುವುದು ಗುರುಪತ್ನೀಸಂಗಕ್ಕೆ ಸಮವಾದ ಮಹಾಪಾತಕವೆಂದು ಹೇಳುವರು. ಸಹೋದರಿಯರಲ್ಲಿ ಸ್ನೇಹಿತರ ಹೆಂಡತಿಯರಲ್ಲಿ ಪುತ್ರನ ಹೆಂಡತಿಯರಲ್ಲಿ ಕುಮಾರಿಯರಲ್ಲಿ ಅಥವಾ ಅಂತ್ಯಜ ಸ್ತ್ರೀಯರಲ್ಲಿ ಸಂಭೋಗಮಾಡಿದರೆ, ಗುರುಪತ್ನೀಗಮನಕ್ಕೆ ಮಾಡಬೇಕಾದ ಪ್ರಾಯಶ್ಚಿತ್ತ ವ್ರತವನ್ನೇ ಆಚರಿಸಬೇಕು.

ಮನುಸ್ಮೃತಿ, ಅಧ್ಯಾಯ ೩.

ಶ್ವಕ್ರೀಡೀ ಶ್ಯೇನಜೀವೀ ಚ ಕನ್ಯಾದೂಷಕಏವ ಚ ‖ ೧೬೪ ‖

ಅರ್ಥ.—ಕ್ರೀಡಾರ್ಥವಾಗಿ ನಾಯಿಗಳನ್ನು ಸಾಕುವವನು, ಗಿಡಗಗಳನ್ನು ಸಾಕುವವನು, ಕನ್ಯಾದೂಷಕ—ಇವರನ್ನು ಹವ್ಯಕವ್ಯಗಳಿಗೆ ಕರೆಯಬಾರದು.

ವೃದ್ಧಹಾರೀತಸಂಹಿತೆ, ಅಧ್ಯಾಯ ೬.

ಸಖಿಭಾರ್ಯಾ ಕುಮಾರೀ ಚ ಸಗೋತ್ರಾ ಶರಣಾಗತಾ ।
ಸಾಧ್ವೀ ಪ್ರವ್ರಜಿತಾ ರಾಜ್ಞೀ ನಿಕ್ಷಿಪ್ತಾ ಚ ರಜಸ್ವಲಾ ॥
ಜನನೀ ಭಗಿನೀ ಧಾತ್ರೀ ದುಹಿತಾಚಾರ್ಯಭಾಮಿನೀ ।
ಆಸಾಮನ್ಯತಮಾಂ ಗಚ್ಛೇದ್ಗುರುತಲ್ಪಗ ಉಚ್ಯತೇ ॥

ಅರ್ಥ.—ಸ್ನೇಹಿತನ ಹೆಂಡತಿ, ಕನ್ಯೆ, ಸಗೋತ್ರದವಳು, ಶರಣಾಗತಳು, ಸಾಧ್ವಿ, ಸನ್ಯಾಸಿನಿ, ರಾಣಿ, ನಿಕ್ಷಿಪ್ತಳು, ಮುಟ್ಟಾದವಳು, ತಾಯಿ, ಸಹೋದರಿ, ಸಾಕುತಾಯಿ, ಮಗಳು, ಆಚಾರ್ಯನಸ್ತ್ರೀ—ಇವರ ಸಂಭೋಗ ಮಾಡಿದವನು ಗುರುತಲ್ಪಗನೆಂದು ಹೇಳಲ್ಪಡುವನು.

ಮದನಪಾರಿಜಾತ, ಸ್ತಬಕ. ೯.

ಕನ್ಯಾದೂಷಣೇ ಹಾರೀತೋಕ್ತಂ । ಕನ್ಯಾದೂಷೀ ಸೋಮವಿಕ್ರಯೀ...
ಕೌಮಾರದಾರತ್ಯಾಗೀ... .ಮಾಸಂ ಗೋಮೂತ್ರಯಾವಕಮಶ್ನೀಯುಃ ॥

ಅರ್ಥ.—ಕನ್ಯಾದೂಷಣ ವಿಷಯದಲ್ಲಿ ಹಾರೀತನವಚನ.—ಕನ್ಯಾದೂಷಿಯು, ಸೋಮವನ್ನು ವಿಕ್ರಯಿಸುವವನು, ಚಿಕ್ಕಹೆಂಡತಿಯನ್ನು ಬಿಟ್ಟವನು—ಇವರು ಪ್ರಾಯಶ್ಚಿತ್ತ ಶುದ್ಧಿಗಾಗಿ ಒಂದು ತಿಂಗಳು ಗೋಮೂತ್ರ ಯಾವಕವನ್ನು ತಿನ್ನಬೇಕು.

ಮದನಪಾರಿಜಾತ, ಸ್ತಬಕ ೯.

ಶಂಖಃ । ಪಿತೃಘ್ನೋ ಮಾತೃಘ್ನೋ ವಾ ನೇತ್ರವಿಕಲಃ ಸ್ನುಷಾಗಾಮೀ ವಾತವೃಷಣಃ ಸ್ಥೂಲಃ ಚತುಷ್ಪಥೇ ಮೂತ್ರವಿಸರ್ಜನೇ ಮೂತ್ರಕೃಚ್ಛ್ರೀ ಕನ್ಯಾದೂಷಕಃ ಷಂಡಃ ॥

ಅರ್ಥ.—ಶಂಖವಚನ.—ತಂದೆಯನ್ನಾಗಲಿ ತಾಯಿಯನ್ನಾಗಲಿ ಕೊಂದವನು ನೇತ್ರಹೀನನಾಗಿಯೂ, ಸೊಸೆಯಲ್ಲಿ ಸಂಭೋಗಮಾಡಿದವನು ವಾತವೃಷಣನಾಗಿಯೂ ಮತ್ತು ಸ್ಥೂಲನಾಗಿಯೂ, ನಾಲ್ಕುಹಾದಿಗಳು ಕೂಡಿದ ಸ್ಥಳದಲ್ಲಿ ಮೂತ್ರವಿಸರ್ಜನೆ ಮಾಡಿದವನು ಮೂತ್ರಕೃಚ್ಛ್ರ ರೋಗವುಳ್ಳವನಾಗಿಯೂ, ಕನ್ಯೆಯನ್ನು ದೂಷಿಸಿದವನು ಷಂಡನಾಗಿಯೂ ಆಗುವರು.

ವ್ಯಾ ॥ಮದನಪಾಲಃ । ಕನ್ಯಾಸಂಭೋಗೇ ತು ಗುರುತಲ್ಪಸಮತ್ವಂ ॥

ಅರ್ಥ.—ಮದನಪಾಲ ವ್ಯಾಖ್ಯಾನ—ಕನ್ಯಾಸಂಭೋಗವು ಗುರುತಲ್ಪಕ್ಕೆ ಸಮವಾದ ಪಾಪವು.

ಭಟ್ಟನೀಲಕಂಠಕೃತ ಪ್ರಾಯಶ್ಚಿತ್ತಮಯೂಖ.

ಚತುರ್ವಿಂಶತಿಮತೇ। ಕುಮಾರೀಗಮನೇ ವಿಪ್ರಶ್ಚರೇಚ್ಚಾಂದ್ರಾಯಣವ್ರತಂ॥

ಅರ್ಥ.—ಬ್ರಾಹ್ಮಣನು ಕುಮಾರೀಸಂಗಮಾಡಿದರೆ ಆ ಪಾಪಶುದ್ಧಿಗಾಗಿ ಚಾಂದ್ರಾಯಣವ್ರತವನ್ನಾಚರಿಸಬೇಕು.

ಈ ವಿಷಯದಲ್ಲಿ ಹೀಗೆಯೇ ಇನ್ನೂ ಅನೇಕ ವಚನಗಳಿರುವವು.

ಹೀಗೆ ಮೇಲಿನ ಶಾಸ್ತ್ರವಚನಗಳಲ್ಲಿ, ಮದುವೆಯಾಗುವುದಕ್ಕೆ ಮೊದಲು ಪುರುಷಸಂಭೋಗವನ್ನು ಹೊಂದಿರುವುದು ಕನ್ಯಾದೋಷವೆಂತಲೂ, ದೋಷವುಳ್ಳ ಕನ್ಯೆಯನ್ನು ತಿಳಿಸದೆ ಮದುವೆ ಮಾಡಿಕೊಟ್ಟವನೂ ದೋಷವಿಲ್ಲದ ಕನ್ಯೆಯನ್ನು ದೋಷವತಿಯೆಂದು ದೂಷಿಸುವವನೂ ತನ್ನಲ್ಲಿ ಸಂಭೋಗಾಪೇಕ್ಷೆಯಿಲ್ಲದ ಕನ್ಯೆಯನ್ನು ಕೆಡಿಸುವವನೂ ರಾಜಶಿಕ್ಷೆಗೆ ಗುರಿಯಾಗುವರೆಂತಲೂ, ಕನ್ಯಾಗಮನ ಅಥವಾ ಕುಮಾರೀಗಮನವು ಪಾಪವೆಂತಲೂ ಅಂಥಾ ಪಾಪವನ್ನು ಮಾಡಿದವರು ಅದರ ಪರಿಹಾರಾರ್ಥವಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕೆಂತಲೂ ಹೇಳಲ್ಪಟ್ಟಿರುವುದು. ಋತುಮತಿಯರಾದ ಕನ್ಯೆಯರು ಮೈಥುನಾರ್ಹರಾಗಿರುವುದರಿಂದ ಇಂಥಾ ದೋಷವು ಅವರಲ್ಲಿ ಸಂಭವಿಸಬಹುದೇ ಹೊರತು ಮೈಥುನಯೋಗ್ಯರಲ್ಲದ ಋತುವಾಗದ ಚಿಕ್ಕಹುಡುಗಿಯರಲ್ಲಿ ಪ್ರಾಯಕವಾಗಿ ಸಂಭವಿಸಲಾರದು.

ಇದಲ್ಲದೆ ಅನ್ಯಗತಭಾವಾ ಮತ್ತು ಸಕಾಮಾ, ಎಂದರೆ ಅನ್ಯಪುರುಷನಲ್ಲಿ ಅಭಿಲಾಷೆ ಮತ್ತು ಪುರುಷಸಂಭೋಗದಲ್ಲಿ ಇಚ್ಛೆ— ಇವು ಕನ್ಯೆಯರ ವಿಷಯದಲ್ಲಿ ಹೇಳಲ್ಪಟ್ಟಿರುವುದರಿಂದ, ಇಂಥಾ ಕನ್ಯೆಯರು ಋತುಮತಿಯರಾದ ಯುವತಿಯರೆಂದು ಊಹಿಸಬೇಕಾಗುವುದು. ಆದುದರಿಂದ ಇಲ್ಲಿ ಉದಾಹರಿಸಲ್ಪಟ್ಟ ಕನ್ಯಾದೂಷಣಸಂಬಂಧವಾದ ಶಾಸ್ತ್ರವಚನಗಳು ಋತುಮತೀವಿವಾಹವ್ಯಂಜಕವಾಗಿರುವುವೆಂಬುದು ವ್ಯಕ್ತವಾಗಿರುವುದು.

ಪ್ರಕರಣ ೩.

ವಿವಾಹಭೇದಗಳು.

ಶಾಸ್ತ್ರಗಳಲ್ಲಿ ಉತ್ತಮವಾದ ಎಂಟುಬಗೆಯ ವಿವಾಹಗಳಿಗೆ ಹೇಳಿರುವ ಲಕ್ಷಣಗಳನ್ನು ಪರಿಶೀಲಿಸಿ ನೋಡಿದರೆ, ಅವುಗಳಲ್ಲಿ ಗಾಂಧರ್ವ ಮತ್ತು ಪೈಶಾಚ ಎಂಬ ವಿವಾಹಗಳಲ್ಲಿ ಕನ್ಯೆಯರು ಋತುಮತಿಗಳಾಗಿರುವರೆಂಬುದು ವ್ಯಕ್ತವಾಗುವುದು. ಪ್ರಾಜಾಪತ್ಯದಲ್ಲೂ ಕನ್ಯೆಯು ಋತುಮತಿಯೆಂದು ಧ್ವನಿ ತೋರುವುದು. ಮಿಕ್ಕ ಐದು ವಿವಾಹಗಳಲ್ಲಿ ಕನ್ಯೆಯರ ವಯಸ್ಸು ಸೂಚಿತವಾಗಿಲ್ಲ. ಆದುದರಿಂದ ಅವುಗಳಲ್ಲಿ ಕನ್ಯೆಯರು ಅನೃತುಮತಿಗಳಾಗಿಯಾಗಲಿ ಅಥವಾ ಋತುಮತಿಗಳಾಗಿಯಾಗಲಿ ಇರಬಹುದೆಂದು ಊಹಿಸಬೇಕಾಗುತ್ತದೆ. ಗಾಂಧರ್ವದಲ್ಲಿಯೂ ಪೈಶಾಚದಲ್ಲಿಯೂ ಕನ್ಯಾವರರಿಗೆ ಅನೇಕ ಸಂದರ್ಭಗಳಲ್ಲಿ ಮೊದಲು ಸಂಭೋಗವು ನಡೆದು ಆಮೇಲೆ ವಿವಾಹಾಂಗವಾದ ಹೋಮಾದಿಗಳು ಮಾಡಲ್ಪಡುವುದರಿಂದ, ಇವುಗಳಲ್ಲಿ ಕನ್ಯೆಯರು ಋತುಮತಿಗಳಾಗಿರಬೇಕೆಂಬುದಕ್ಕೆ ಸಂದೇಹವಿಲ್ಲ.

ಅನೇಕ ಶಾಸ್ತ್ರಕಾರರು ಗಾಂಧರ್ವವಿವಾಹವು ಎಲ್ಲಾ ವರ್ಣದವರಿಗೂ ಆಗಬಹುದೆಂದು ಅಪ್ಪಣೆಕೊಡಿಸಿರುವರು. ಇದಲ್ಲದೆ ಸಂಕಟದಲ್ಲಿ ಪೈಶಾಚವೂ ಕೂಡ ಬ್ರಾಹ್ಮಣಜಾತಿಯವರಿಗೆ ಆಗಬಹುದೆಂದು ಹೇಳಿರುವರು, ಆದ ಪ್ರಯುಕ್ತ ಬ್ರಾಹ್ಮಣ ಸ್ತ್ರೀಯರಿಗೂ ಇತರ ಜಾತಿಯ ಸ್ತ್ರೀಯರಿಗೂ ಋತುಮತಿಗಳಾದ ಬಳಿಕ ವಿವಾಹಕ್ಕೆ ಅಪ್ಪಣೆಯಿರುವುದೆಂದು ಸ್ಪಷ್ಟವಾಗುವುದು. ಇದಲ್ಲದೆ ಮಿಕ್ಕ ಆರು ವಿವಾಹಗಳಲ್ಲಿಯೂ ಋತುಮತಿಯರ ಮದುವೆಯನ್ನು ನಿಷೇಧಿಸಿಲ್ಲವಾದುದರಿಂದ, ಅವುಗಳಲ್ಲಿಯೂ ಋತುಮತಿಗಳಾದ ಬ್ರಾಹ್ಮಣ ಕನ್ಯೆಯರಿಗೆ ವಿವಾಹಮಾಡಲು ಅಡ್ಡಿಯಿಲ್ಲವೆಂದು ತೋರುತ್ತದೆ. ಕೆಳಗೆ ಉದಾಹರಿಸಲ್ಪಟ್ಟ ಶಾಸ್ತ್ರವಚನಗಳು ಇದೇ ಅಭಿಪ್ರಾಯವನ್ನು ದೃಢೀಕರಿಸುವುವು.—

ಮನುಸ್ಮೃತಿ. ಅಧ್ಯಾಯ. ೩.

ಸಹೋಭೌ ಚರತಾಂ ಧರ್ಮಮಿತಿ ವಾಚಾನುಭಾಷ್ಯ ಚ ।
ಕನ್ಯಾಪ್ರದಾನಮಭ್ಯರ್ಚ್ಯ ಪ್ರಾಜಾಪತ್ಯೋ ವಿಧಿಃ ಸ್ಮೃತಃ ॥೩೦॥

ಅರ್ಥ.—ನೀವಿಬ್ಬರೂ ಜತೆಯಲ್ಲಿದ್ದುಕೊಂಡು ಧರ್ಮವನ್ನಾಚರಿಸಿರಿ, ಎಂದು ಹೇಳಿ ಪೂಜಿಸಿ ಕನ್ಯಾದಾನಮಾಡುವುದು ಪ್ರಾಜಾಪತ್ಯವಿಧಿಯೆಂದೆಣಿಸಲ್ಪಟ್ಟಿರುವುದು.

ನಾರದಸ್ಮೃತಿ, ೧೨ ನೇ ವ್ಯವಹಾರಪದ.

ಸಹ ಧರ್ಮಂ ಚರೇತ್ಯುಕ್ತ್ವಾ ಪ್ರಾಜಾಪತ್ಯೋ ವಿಧಿಃ ಸ್ಮೃತಃ ॥೪೦॥

ಅರ್ಥ—'ಜತೆಯಲ್ಲಿದ್ದುಕೊಂಡು ಧರ್ಮವನ್ನಾಚರಿಸಿರಿ' ಎಂದು ಹೇಳಿ ಕನ್ಯಾದಾನಮಾಡುವುದು ಪ್ರಾಜಾಪತ್ಯವಿಧಿಯೆನ್ನಿಸುವುದು.

ಕನ್ಯಾ ಚೈವ ವರಶ್ಚೋಭೌ ಇಚ್ಛಯಾ ಧರ್ಮಚಾರಿಣೌ ।
ಸ್ಯಾತಾಮಿತಿ ಚ ಯತ್ರೋಕ್ತ್ವಾ ದಾನಂ ಕಾರ್ಯಂ ವಿಧಿಸ್ತ್ವಯಂ ॥

ಅರ್ಥ.—ಕನ್ಯಾವರರು ಇಬ್ಬರೂ ಇಚ್ಛೆಯಿಂದ ಧರ್ಮಚಾರಿಗಳಾಗಲಿ ಎಂದು ಹೇಳಿ ದಾನಮಾಡುವುದು ಪ್ರಾಜಾಪತ್ಯವೆನ್ನಿಸುವುದು.

ಆಶ್ವಲಾಯನಗೃಹ್ಯಸೂತ್ರ, ಅಧ್ಯಾಯ ೧, ಕಂಡಿಕೆ ೬.

ಸಹ ಧರ್ಮಂ ಚರತಮಿತಿ ಪ್ರಾಜಾಪತ್ಯಃ ॥ ೩ ॥

ಜೊತೆಯಲ್ಲಿದ್ದುಕೊಂಡು ಧರ್ಮವನ್ನಾಚರಿಸಿರಿ ಎಂದು ಹೇಳಿ ದಾನಮಾಡುವುದು ಪ್ರಾಜಾಪತ್ಯವು.

ಹೀಗೆಯೇ ಇನ್ನೂ ಅನೇಕ ಶಾಸ್ತ್ರಕಾರರು ಪ್ರಾಜಾಪತ್ಯವಿವಾಹದ ಲಕ್ಷಣವನ್ನು ಹೇಳಿರುವರು.

ಮನುಸ್ಮೃತಿ, ಅಧ್ಯಾಯ ೩.

ಬ್ರಾಹ್ಮೋ ದೈವಸ್ತಥೈವಾರ್ಷಃ ಪ್ರಾಜಾಪತ್ಯಸ್ತಥಾಸುರಃ ।
ಗಾಂಧರ್ವೋ ರಾಕ್ಷಸಶ್ಚೈವ ಪೈಶಾಚಶ್ಚಾಷ್ಟಮೋಽಧಮಃ ॥ ೨೧ ॥
ಷಡಾನುಪೂರ್ವ್ಯಾ ವಿಪ್ರಸ್ಯ ಕ್ಷತ್ರಸ್ಯ ಚತುರೋಽವರಾನ್ ।
ವಿಟ್ಛೂದ್ರಯೋಸ್ತು ತಾನೇವ ವಿದ್ಯಾದ್ಧರ್ಮ್ಯಾನರಾಕ್ಷಸಾನ್ ॥ ೨೩ ॥
ಇಚ್ಛಯಾನ್ಯೋನ್ಯಸಂಯೋಗಃ ಕನ್ಯಾಯಾಶ್ಚ ವರಸ್ಯ ಚ ।
ಗಾಂಧರ್ವಸ್ಸತು ವಿಜ್ಞೇಯೋ ಮೈಥುನ್ಯಃ ಕಾಮಸಂಭವಃ ॥ ೩೨ ॥
ಸುಪ್ತಾಂ ಮತ್ತಾಂ ಪ್ರಮತ್ತಾಂ ವಾ ರಹೋ ಯತ್ರೋಪಗಚ್ಛತಿ ।
ಸಪಾಪಿಷ್ಠೋ ವಿವಾಹಾನಾಂ ಪೈಶಾಚಶ್ಚಾಷ್ಟಮೋಽಧಮಃ ॥ ೩೪ ॥

ಅರ್ಥ.—ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಮತ್ತು ಎಂಟನೆಯದಾದ ಅಧಮವಾದ ಪೈಶಾಚ—ಇವು ವಿವಾಹಭೇದಗಳಾಗಿರುವುವು. ಇವುಗಳಲ್ಲಿ ಮೊದಲನೆಯ ಆರು ಎಂದರೆ ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಮತ್ತು ಗಾಂಧರ್ವ—ಇವುಗಳು ಬ್ರಾಹ್ಮಣನಿಗೂ, ಕೊನೆಯ ನಾಲ್ಕು ಎಂದರೆ ಆಸುರ ಗಾಂಧರ್ವ ರಾಕ್ಷಸ ಪೈಶಾಚಗಳು ಕ್ಷತ್ರಿಯನಿಗೂ, ರಾಕ್ಷಸವನ್ನು ಬಿಟ್ಟು ಅವೇ ಮೂರು ಎಂದರೆ ಆಸುರ ಗಾಂಧರ್ವ ಪೈಶಾಚಗಳು ವೈಶ್ಯ ಶೂದ್ರರಿಗೂ ಧರ್ಮಯುಕ್ತವಾದುವೆಂದು ತಿಳಿಯಬೇಕು. ಕನ್ಯೆಗೂ ವರನಿಗೂ ಪರಸ್ಪರಾನುರಾಗದಿಂದಲೂ ಕಾಮದಿಂದಲೂ ಉಂಟಾದ ಮೈಥುನಪೂರ್ವಕವಾದ ಸಂಯೋಗವು ಗಾಂಧರ್ವವೆಂದು ತಿಳಿಯಲ್ಪಡತಕ್ಕುದು, ನಿದ್ರೆಮಾಡುತ್ತಿರುವವಳಾಗಿಯೂ ಮತ್ತಳಾಗಿಯೂ ಅಥವಾ ಪ್ರಮತ್ತಳಾಗಿಯೂ ಇರುವ ಕನ್ಯೆಯಲ್ಲಿ ರಹಸ್ಯವಾಗಿ ಸಂಭೋಗಮಾಡುವುದು ವಿವಾಹಗಳಲ್ಲಿ ಎಂಟನೆಯದಾದ ಅಧಮವಾದ ಪಾಪಿಷ್ಠವಾದ ಪೈಶಾಚವಾಗಿರುವುದು.

ಹೀಗೆ ಮನುಮತಪ್ರಕಾರ ಗಾಂಧರ್ವವಿವಾಹವು ಎಲ್ಲಾ ವರ್ಣಗಳವರಿಗೂ ಸಾಮಾನ್ಯವಾಗಿರುವುದು. ಮತ್ತು ಆ ವಿವಾಹದ ಲಕ್ಷಣವನ್ನು ಪರ್ಯಾಲೋಚಿಸಿದರೆ, ಕನ್ಯೆಯು ಋತುಮತಿಯಾಗಿರಬೇಕೆಂದು ವಿಶದವಾಗುವುದು.

ಆಶ್ವಲಾಯನಗೃಹ್ಯ ಸೂತ್ರ, ಅಧ್ಯಾಯ ೧, ಕಂಡಿಕೆ ೬.

ಮಿಥಃ ಸಮಯಂ ಕೃತ್ವೋಪಯಚ್ಛೇತ ಸಗಾಂಧರ್ವಃ ॥ ೫ ॥

ಅರ್ಥ.—ಸ್ತ್ರೀಪುರುಷರು ಪರಸ್ಪರ ಸಮಯಮಾಡಿಕೊಂಡು ಮದುವೆಯಾಗುವುದು ಗಾಂಧರ್ವವು.

ನಾರದಸ್ಮೃತಿ, ೧೨ ನೆಯ ವ್ಯವಹಾರಪದ.

ಇಚ್ಛಂತೀಮಿಚ್ಛತಃ ಪ್ರಾಹುರ್ಗಾಂಧರ್ವಂ ನಾಮ ಪಂಚಮಂ ॥ ೪೨ ॥
ಸುಪ್ತಪ್ರಮತ್ತೋಪಗಮಾತ್ಪೈಶಾಚಸ್ತ್ವಷ್ಟಮೋಧಮಃ ॥ ೪೩ ॥
ಏಷಾಂ ತು ಧರ್ಮ್ಯಾಶ್ಚತ್ವಾರೋ ಬ್ರಾಹ್ಮಾದ್ಯಾಃ ಸಮುದಾಹೃತಾಃ ।
ಸಾಧಾರಣಃ ಸ್ಯಾದ್ಗಾಂಧರ್ವಸ್ತ್ರಯೋಽಧರ್ಮ್ಯಾಸ್ತತಃ ಪರೇ ॥ ೪೪ ॥

ಅರ್ಥ.—ಪರಸ್ಪರವಾಗಿ ಅಭಿಲಾಷೆಯುಳ್ಳ ಸ್ತ್ರೀಪುರುಷರ ವಿವಾಹವನ್ನು ಐದನೆಯದಾದ ಗಾಂಧರ್ವವೆಂದು ಹೇಳುವರು. ನಿದ್ರೆಹೋಗುತ್ತಿರುವ ಅಥವಾ ಪ್ರಮತ್ತಳಾದ ಕನ್ಯೆಯ ಸಂಭೋಗವು ಎಂಟನೆಯದಾದ ಅಧಮವಾದ ಪೈಶಾಚವು. ಇವುಗಳಲ್ಲಿ ಬ್ರಾಹ್ಮಾದಿ ನಾಲ್ಕು ವಿವಾಹಗಳು ಧರ್ಮಯುಕ್ತವಾದವು, ಗಾಂಧರ್ವವು ಸಾಧಾರಣವಾದುದು, ಉಳಿದ ಮೂರು ಎಂದರೆ ಆಸುರ ರಾಕ್ಷಸ ಪೈಶಾಚಗಳು ಅಧರ್ಮವಾದುವು.

ವಿಷ್ಣುಸ್ಮೃತಿ, ಅಧ್ಯಾಯ ೨೪.

ದ್ವಯೋಃ ಸಕಾಮಯೋರ್ಮಾತಾಪಿತೃರಹಿತೋ ಯೋಗೋ ಗಾಂಧರ್ವಃ ॥
ಸುಪ್ತಪ್ರಮತ್ತಾಭಿಗಮನಾತ್ಪೈಶಾಚಃ ॥ ೨೬ ॥
ಗಾಂಧರ್ವೇಣ ಗಂಧರ್ವಲೋಕಂ ಗಚ್ಛತಿ ॥ ೩೭ ॥

ಅರ್ಥ.—ತಾಯಿತಂದೆಗಳ ಅನುಮತಿಯಿಲ್ಲದೆ ಸ್ತ್ರೀಪುರುಷರು ತಾವೇ ಅನ್ಯೋನ್ಯಾನುರಾಗದಿಂದ ಸಂಯೋಗಮಾಡುವುದು ಗಾಂಧರ್ವವು. ನಿದ್ದೆಹೋಗುತ್ತಿರುವವಳ ಅಥವಾ ಪ್ರಮತ್ತಳಾದವಳ ಸಂಭೋಗಮಾಡುವುದು ಪೈಶಾಚವು ಗಾಂಧರ್ವವಿವಾಹದಿಂದ ಗಂಧರ್ವಲೋಕವನ್ನು ಹೊಂದುವನು.

ಆಪಸ್ತಂಬಧರ್ಮಸೂತ್ರ, ಪ್ರಶ್ನ ೨. ಪಟಲ ೫, ಖಂಡ ೧೧.

ಮಿಥಃ ಕಾಮಾತ್ಸಂವರ್ತೇತ ಸಗಾಂಧರ್ವಃ ॥ ೨೦ ॥
ಹರದತ್ತವ್ಯಾಖ್ಯಾ । ಅತ್ರ ಸಂಯೋಗಾದುತ್ತರಕಾಲಂ ವಿವಾಹಸಂಸ್ಕಾರಃ ಕರ್ತವ್ಯಃ ॥

ಅರ್ಥ.—ಕನ್ಯಾವರರು ಪರಸ್ಪರ ಕಾಮದಿಂದ ಸಂಗಮಾಡುವುದು ಗಾಂಧರ್ವವು. ಹರದತ್ತವ್ಯಾಖ್ಯೆ—ಈ ವಿವಾಹದಲ್ಲಿ ಕನ್ಯಾವರರಿಗೆ ಸಂಭೋಗ ನಡೆದ ಬಳಿಕ ವಿವಾಹಸಂಸ್ಕಾರವು ಮಾಡಲ್ಪಡತಕ್ಕದು.

ಗೌತಮಧರ್ಮಶಾಸ್ತ್ರ, ಅಧ್ಯಾಯ, ೪.

ಇಚ್ಛಂತ್ಯಾಃ ಸ್ವಯಂ ಸಂಯೋಗೋ ಗಾಂಧರ್ವಃ ॥ ೧೦ ॥

ಅಸಂವಿಜ್ಞಾತೋಪಸಂಗಮನಾತ್ಪೈಶಾಚಃ ॥ ೧೩ ॥ ಷಡಿತ್ಯೇಕೇ ॥ ೧೫ ॥

ಅರ್ಥ.—ಮೈಥುನವನ್ನಪೇಕ್ಷಿಸುವ ಕನ್ಯೆಯಲ್ಲಿ ವರನು ಸಂಭೋಗಮಾಡುವುದು ಗಾಂಧರ್ವವು. ಕನ್ಯೆಗೆ ಎಚ್ಚರಿಕೆಯಿಲ್ಲದೇಯಿರುವಾಗ ಅವಳ ಸಂಭೋಗಮಾಡುವುದು ಪೈಶಾಚವು. ಕೆಲವರು ಶಾಸ್ತ್ರಕಾರರು ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಗಾಂಧರ್ವ, ಆಸುರ—ಈ ಆರು ವಿವಾಹಗಳೂ ಧರ್ಮಯುಕ್ತವಾದುವೆಂದು ಹೇಳುವರು.

ವಾಸಿಷ್ಠಧರ್ಮಶಾಸ್ತ್ರ, ಅಧ್ಯಾಯ ೧.

ಸಕಾಮಾಂ ಕಾಮಯಮಾನಃ ಸದೃಶೀಂ ಯೋನಿಮುಹ್ಯಾತ್ಸಗಾಂಧರ್ವಃ ॥

ಅರ್ಥ.—ಸಮಾನವರ್ಣದವರಾದ ಕನ್ಯಾವರರು ಕಾಮದಿಂದ ಪರಸ್ಪರ ಸಂಭೋಗಮಾಡಿ ಮದುವೆಯಾಗುವುದು ಗಾಂಧರ್ವವು.

ಬೋಧಾಯನ ಧರ್ಮಶಾಸ್ತ್ರ, ಪ್ರಶ್ನ ೧. ಅಧ್ಯಾಯ ೧೧, ಕಂಡಿಕೆ ೨೦.

ಸಕಾಮೇನ ಸಕಾಮಾಯಾಃ ಮಿಥಸ್ಸಂಯೋಗೋ ಗಾಂಧರ್ವಃ ॥ ೬ ॥

ಸುಪ್ತಾಂ ಮತ್ತಾಂ ಪ್ರಮತ್ತಾಂ ವೋಪಯಚ್ಛೇದಿತಿ ಪೈಶಾಚಃ ॥ ೯ ॥

ಗಾಂಧರ್ವಮಪ್ಯೇಕೇ ಪ್ರಶಂಸಂತಿ ಸರ್ವೇಷಾಂ ಸ್ನೇಹಾನುಗತತ್ವಾತ್ ॥೧೯

ಅರ್ಥ.—ಪರಸ್ಪರವಾಗಿ ಕಾಮವುಳ್ಳ ಕನ್ಯಾವರರ ಸಂಯೋಗವು ಗಾಂಧರ್ವವು. ನಿದ್ದೆಹೋಗುತ್ತಿರುವ ಅಥವಾ ಮತ್ತಳಾಗಿರುವ ಅಥವಾ ಪ್ರಮತ್ತಳಾಗಿರುವ ಕನ್ಯೆಯ ಸಂಭೋಗಮಾಡುವುದು ಪೈಶಾಚವು. ಸ್ನೇಹದಿಂದಾಗುವುದರಿಂದ ಗಾಂಧರ್ವವಿವಾಹವು ಎಲ್ಲಾ ವರ್ಣಗಳವರಿಗೂ ಉಚಿತವೆಂದು ಕೆಲವರು ಶಾಸ್ತ್ರಕಾರರು ಶ್ಲಾಘಿಸುವರು.

ಶಂಖಸ್ಮೃತಿ, ಅಧ್ಯಾಯ ೪.

ಗಾಂಧರ್ವಸ್ಸಮಯಾನ್ಮಿಥಃ ॥ ೫ ॥

ಅರ್ಥ.—ಕನ್ಯಾವರರು ಅನ್ಯೋನ್ಯವಾಗಿ ಸಮಯಮಾಡಿಕೊಂಡು ಮದುವೆಯಾಗುವುದು ಗಾಂಧರ್ವವು.

ಯಾಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ.

ಗಾಂಧರ್ವಸ್ಸಮಯಾನ್ಮಿಥಃ ॥ ೬೧ ॥

ಅರ್ಥ.—ಕನ್ಯಾವರರು ಅನ್ಯೋನ್ಯವಾಗಿ ಸಮುಯ ಮಾಡಿಕೊಂಡು ಮದುವೆಯಾಗುವುದು ಗಾಂಧರ್ವವು.

ಬೃಹತ್ಪರಾಶರಸಂಹಿತೆ ಅಧ್ಯಾಯ ೪.

ಅಷ್ಟೌ ವಿವಾಹಾನಾರೀಣಾಂ ಸಂಸ್ಕಾರಾಯ ಪ್ರಕೀರ್ತಿತಾಃ ।
ಯತ್ರಾನ್ಯೋನ್ಯಾಭಿಲಾಷೇಣ ಉಭಯೋರ್ವರಕನ್ಯಯೋಃ ॥
ತಯೋಸ್ತಯೋರ್ವಿವಾಹಃ ಸ್ಯಾದ್ಗಾಂಧರ್ವಃ ಪ್ರಥಿತಃ ಸತು ॥
ಸುಪ್ತಾಂ ವಾಪಿ ಪ್ರಮತ್ತಾಂ ವಾ ಕನ್ಯಾಂ ಛಲೇನ ಭುಂಜತೇ ।
ಸರ್ವೇಭ್ಯಃ ಸತು ಪಾಪಿಷ್ಠಃ ಪೈಶಾಚಃ ಪ್ರಥಿತೋಽಷ್ಟಮಃ ॥
ಆದ್ಯಾ ಆದ್ಯಸ್ಯ ಷಟ್ ಪ್ರೋಕ್ತಾ ಧರ್ಮ್ಯಾಶ್ಚತ್ವಾರ ಏವ ಹಿ ।
ಚತ್ವಾರೋಽನ್ಯೇ ದ್ವಿತೀಯಸ್ಯ ಆದ್ಯಸ್ಯ ಚ ದ್ವಯಸ್ಯ ಚ ॥
ಪಂಚಮಶ್ಚ ತಥಾ ಷಷ್ಠಃ ಸ್ಮೃತೌ ಚ ತ್ರಿಚತುರ್ಥಯೋಃ ॥

ಅರ್ಥ.—ಸಂಸ್ಕಾರಾರ್ಥವಾಗಿ ಸ್ತ್ರೀಯರಿಗೆ ಎಂಟು ವಿವಾಹಗಳು ಹೇಳಲ್ಪಟ್ಟಿವೆ. ಕನ್ಯಾವರರಿಗೆ ಅನ್ಯೋನ್ಯಾಭಿಲಾಷೆಯಿಂದಾದ ವಿವಾಹವು ಗಾಂಧರ್ವವೆನ್ನಿಸುವುದು. ನಿದ್ದೆಹೋಗುತ್ತಿರುವ ಅಥವಾ ಪ್ರಮತ್ತಳಾದ ಕನ್ಯೆಯನ್ನು ಛಲದಿಂದ ಸಂಭೋಗಮಾಡುವುದು ಸರ್ವರಿಗೂ ಪಾಪಿಷ್ಠವಾದ ಎಂಟನೆಯದಾದ ಪೈಶಾಚವೆನ್ನಿಸುವುದು. ಮೊದಲನೆಯ ಆರು—ಎಂದರೆ ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ ವಿವಾಹಗಳು, ಅಥವಾ ನಾಲ್ಕು ಬ್ರಾಹ್ಮಣನಿಗೂ ಬೇರೆ ನಾಲ್ಕು ಎಂದರೆ ಆಸುರ, ಗಾಂಧರ್ವ, ರಾಕ್ಷಸ, ಪೈಶಾಚ, ವಿವಾಹಗಳು ಕ್ಷತ್ರಿಯನಿಗೂ, ಅಥವಾ ಬ್ರಾಹ್ಮಣ ಕ್ಷತ್ರಿಯರಿಬ್ಬರಿಗೂ ಧರ್ಮಗಳೆಂದು ಹೇಳಲ್ಪಟ್ಟಿರುವುವು. ಐದು ಆರನೆಯವುಗಳಾದ ಆಸುರ, ಗಾಂಧರ್ವ ವಿವಾಹಗಳು ವೈಶ್ಯಶೂದ್ರರಿಗೆ ಧರ್ಮಗಳಾಗಿ ಹೇಳಲ್ಪಟ್ಟಿರುವುವು.

ಹೀಗೆ ಪರಾಶರ ಮುನಿಯು ಕಲಿಯುಗದಲ್ಲಿಯೂ ಬ್ರಾಹ್ಮಣರಿಗೆ ಗಾಂಧರ್ವ ವಿವಾಹವು ಧರ್ಮಕರವಾದುದೆಂದು ಹೇಳಿರುವನು.

ಹೇಮಾದ್ರಿಧರ್ಮಶಾಸ್ತ್ರ, ಪ್ರಾಯಶ್ಚಿತ್ತಾಧ್ಯಾಯ.

ಮಾರ್ಕಂಡೇಯಃ—

ಬ್ರಾಹ್ಮೋ ದೈವಃ ತಥಾ ಚಾರ್ಷಃ ಪ್ರಾಜಾಪತ್ಯೋ ದ್ವಿಜನ್ಮನಾಂ ।
ಮುಖ್ಯಸಂತಾನಕರ್ತಾರಸ್ತಸ್ಮಾದೇತಾನ್ ಸಮಾಚರೇತ್ ॥
ಆಸುರಾದಿ ವಿವಾಹಾಶ್ಚ ಕೇವಲಂ ಸುಖದಾಯಿನಃ ।
ಆಸುರಾದಿವಿವಾಹೇಷು ದೈವಾದ್ಯದಿಪೂರ್ವಜಃ ॥
ಪ್ರಾಯಶ್ಚಿತ್ತಂ ತದಾ ಕೃತ್ವಾ ಪಶ್ಚಾತ್ತೇಷು ಪ್ರವರ್ತಯೇತ್ ।
ಅನ್ಯಥಾ ದೋಷಮಾಪ್ನೋತಿ ಪಾಪಯೋನಿಷು ಜಾಯತೇ ॥

ಅರ್ಥ.—ಮಾರ್ಕಂಡೇಯವಚನ.—ಬ್ರಾಹ್ಮದೈವ ಆರ್ಷ ಪ್ರಾಜಾಪತ್ಯ ವಿವಾಹಗಳು ದ್ವಿಜರಿಗೆ ಮುಖ್ಯಸಂತಾನವನ್ನುಂಟುಮಾಡುವಂಥವಾಗಿರುವವು. ಆದುದರಿಂದ ಅವುಗಳನ್ನೇ ಆಚರಿಸಬೇಕು. ಆಸುರಾದಿ ವಿವಾಹಗಳು ಕೇವಲ ಸುಖವನ್ನು ಕೊಡತಕ್ಕವಾಗಿರುವವು. ಬ್ರಾಹ್ಮಣನು ದೈವವಶಾತ್ತಾಗಿ ಆಸುರಾದಿ ವಿವಾಹಗಳಲ್ಲಿ ಪ್ರವರ್ತಿಸಬೇಕಾಗಿಬಂದರೆ, ಆಗ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ಆಮೇಲೆ ಅವುಗಳಲ್ಲಿ ಪ್ರವರ್ತಿಸತಕ್ಕದು. ಹಾಗೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿದ್ದರೆ ದೋಷವನ್ನು ಹೊಂದಿ ಪಾಪಯುಕ್ತವಾದ ಜನ್ಮಗಳನ್ನು ಹೊಂದುವನು.

ಈ ವಚನದಿಂದ, ಬ್ರಾಹ್ಮಣನು ಪ್ರಾಯಶ್ಚಿತ್ತಮಾಡಿಕೊಂಡು ಗಾಂಧರ್ವ ಅಥವಾ ಪೈಶಾಚ ವಿವಾಹದಲ್ಲಿ ಪ್ರವರ್ತಿಸಿದರೆ ಆತನಿಗೆ ದೋಷವಿಲ್ಲವೆಂದು ತೋರುವುದು.

ಅಪರಾರ್ಕ.

ಆಸುರಗಾಂಧರ್ವೌ ನ ಪ್ರಶಸ್ತೌ ನ ನಿಷಿದ್ಧೌ ॥

ಅರ್ಥ.—ಆಸುರ ಗಾಂಧರ್ವ ವಿವಾಹಗಳು ಪ್ರಶಸ್ತವೂ ಅಲ್ಲ, ನಿಷಿದ್ಧವೂ ಅಲ್ಲ.

ಧರ್ಮಸಿಂಧು, ಪರಿಚ್ಛೇದ ೩—೭೧.

ಬ್ರಾಹ್ಮೋ ದೈವಆರ್ಷಃ ಪ್ರಾಜಾಪತ್ಯಆಸುರೋ ಗಾಂಧರ್ವೋ ರಾಕ್ಷಸಃ ಪೈಶಾಚಇತ್ಯಷ್ಟೌ ವಿವಾಹಾಃ ವರವಧ್ವೋರಿಚ್ಛಯಾನ್ಯೋನ್ಯಸಂಯೋಗೋ ಗಾಂಧರ್ವಃ । ಸಂಕಟೇ ರಾಕ್ಷಸಭಿನ್ನಾಃ ಸಪ್ತ ವಿಪ್ರಸ್ಯ, ಬ್ರಾಹ್ಮದೈವೇತರೇ ಷಟ ಕ್ಷತ್ರಿಯಸ್ಯ, ವೈಶ್ಯಶೂದ್ರಯೋಃ ಬ್ರಾಹ್ಮದೈವರಾಕ್ಷಸಭಿನ್ನಾಃ ಪಂಚ ॥

ಅರ್ಥ.—ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ, ರಾಕ್ಷಸ, ಪೈಶಾಚ ಎಂದು ಎಂಟು ವಿವಾಹಗಳು. ವಧೂವರರ ಇಚ್ಛೆಯಿಂದಾದ ಅನ್ಯೋನ್ಯ ಸಂಯೋಗವು ಗಾಂಧರ್ವವು. ರಾಕ್ಷಸಭಿನ್ನವಾದ ಏಳು ವಿವಾಹಗಳೂ ಬ್ರಾಹ್ಮಣನಿಗೂ, ಬ್ರಾಹ್ಮ ದೈವಗಳ ಹೊರತಾದ ಆರು ವಿವಾಹಗಳು ಕ್ಷತ್ರಿಯನಿಗೂ, ಬ್ರಾಹ್ಮ, ದೈವ, ರಾಕ್ಷಸಭಿನ್ನಗಳಾದ ಐದು ವಿವಾಹಗಳು ವೈಶ್ಯ ಶೂದ್ರರಿಗೂ ಸಂಕಟದಲ್ಲಿ ಆಗಬಹುದು.

ಈ ವಚನದಿಂದ, ಬ್ರಾಹ್ಮಣಾದಿ ಸಕಲವರ್ಣಗಳವರಿಗೂ ಸಂಕಟದಲ್ಲಿ ಗಾಂಧರ್ವ ಪೈಶಾಚ ವಿವಾಹಗಳು ಆಗಬಹುದೆಂದು ತೋರುವುದು.

ಪರಾಶರ ಮಾಧವೀಯದಲ್ಲಿ ಮಾಧವವಚನ.

ಆದಿತಃ ಷಡ್ವಿವಾಹಾವಿಪ್ರಸ್ಯ ಧರ್ಮ್ಯಾಃ॥ಅನ್ಯವಿವಾಹಾಲಾಭೇ ಬ್ರಾಹ್ಮಣಾದೀನಾಂ ಪೈಶಾಚಮಪ್ಯನುಜಾನಾತಿ ವತ್ಸಃ ।

ಸರ್ವೋಪಾಯೈರಸಾಧ್ಯಾ ಸ್ಯಾತ್ ಸುಕನ್ಯಾ ಪುರುಷಸ್ಯ ಯಾ ।
ಚೌರ್ಯೇಣಾಪಿ ವಿವಾಹೇನ ಸಾ ವಿವಾಹ್ಯಾ ರಹಸ್ಸ್ಥಿತಾ ॥

ನ ಚ ಗಾಂಧರ್ವಾದಿವಿವಾಹೇಷು ಸಪ್ತಪದಾಭಿಕ್ರಮಣಾದ್ಯಭಾವಾತ್ ಪತಿತ್ವ ಭಾರ್ಯಾತ್ವಾ ಭಾವ ಇತಿ ಶಂಕನೀಯಂ । ಸ್ವೀಕಾರಾತ್ ಪ್ರಾಕ್ ತದಭಾವೇಪಿ ಪಶ್ಚಾತ್ತತ್ಸದ್ಭಾವಾತ್. ತದಾಹ ದೇವಲಃ—

ಗಾಂಧರ್ವಾದಿವಿವಾಹೇಷು ಪುನರ್ವೈವಾಹಿಕೋ ವಿಧಿಃ ।
ಕರ್ತವ್ಯಶ್ಚ ತ್ರಿಭಿರ್ವರ್ಣೈಃ ಸಮರ್ಥೇನಾಗ್ನಿಸಾಕ್ಷಿಕಂ ॥

ಗೃಹ್ಯಪರಿಶಿಷ್ಟೇಪಿ.—

ಗಾಂಧರ್ವಾಸುರಪೈಶಾಚಾಃ ವಿವಾಹೋ ರಾಕ್ಷಸಶ್ಚಯಃ ।
ಪೂರ್ವಂ ಪರಿಗ್ರಹಸ್ತೇಷು ಪಶ್ಚಾದ್ಧೋಮೋ ವಿಧೀಯತೇ ॥

ಅರ್ಥ.—ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ ಎಂಬೀ ಮೊದಲಿನ ಆರು ವಿವಾಹಗಳು ಬ್ರಾಹ್ಮಣನಿಗೆ ಧರ್ಮಕರಗಳಾಗಿರುವುವು. ಇತರ ವಿವಾಹಗಳು ಅನುಕೂಲಿಸದಿದ್ದರೆ, ವತ್ಸನು ಬ್ರಾಹ್ಮಣಾದಿಗಳಿಗೆ ಪೈಶಾಚಕ್ಕೂ ಅಪ್ಪಣೆ ಕೊಡುವನು:—“ಉತ್ತಮಕನ್ಯೆಯು ಸಮಸ್ತೋಪಾಯಗಳಿಂದಲೂ ಪುರುಷನಿಗೆ ಅಸಾಧ್ಯಳಾದರೆ ಏಕಾಂತದಲ್ಲಿರುವವಳನ್ನು ಕಳ್ಳತನದಿಂದ ವಿವಾಹಮಾಡಿಕೊಳ್ಳಬಹುದು.” ಗಾಂಧರ್ವಾದಿ ವಿವಾಹಗಳಲ್ಲಿ ಸಪ್ತಪದ್ಯಭಿಕ್ರಮಣ ಮುಂತಾದವುಗಳಿಲ್ಲವಾಗಿ ಪತಿತ್ವ ಪತ್ನೀತ್ವಗಳೇ ಇಲ್ಲವೆಂದು ಶಂಕಿಸಬಾರದು. ಸ್ವೀಕಾರಮಾಡುವುದಕ್ಕೆ ಮೊದಲು ಅವುಗಳಿಲ್ಲದಿದ್ದರೂ ಅನಂತರ ಉಂಟಾಗುವುವೆಂದು ದೇವಲನು ಹೇಳಿರುವನು:—ಮೂರುವರ್ಣದವರಲ್ಲಿಯೂ ಸಮರ್ಥನಾದವನಿಂದ ಗಾಂಧರ್ವಾದಿ ವಿವಾಹಗಳಲ್ಲಿ ಅಗ್ನಿಸಾಕ್ಷಿಯಾಗಿ ಪುನಃ ವಿವಾಹವಿಧಿಯು ಆಚರಿಸಲ್ಪಡಬೇಕು. ಗೃಹ್ಯಪರಿಶಿಷ್ಟದಲ್ಲಿಯೂ ಹೀಗೆಯೇ ಉಕ್ತವಾಗಿರುವುದು:—ಗಾಂಧರ್ವ ಆಸುರ ಪೈಶಾಚ ರಾಕ್ಷಸ ವಿವಾಹಗಳಲ್ಲಿ ಮೊದಲು ಪರಿಗ್ರಹವೂ ಆಮೇಲೆ ಹೋಮವೂ ವಿಧಿಸಲ್ಪಟ್ಟಿವೆ.

ಮದನಪಾರಿಜಾತ ಸ್ತಬಕ ೨.

ಕನ್ಯಾವರಯೋರನ್ಯೋನ್ಯರಾಗೇಣ ಯಃ ಸಮಯಃ ತ್ವಂ ಮೇ ಭಾರ್ಯಾ ತ್ವಂ ಮೇ ಪತಿರಿತಿ ಸಗಾಂಧರ್ವಃ । ಸಮಯಪೂರ್ವಕಮುಪಭೋಗೋಪಿ ಗಾಂಧರ್ವಏವ ॥

ದೇವಲಃ ।

ಗಾಂಧರ್ವಾದಿವಿವಾಹೇಷು ಪುನರ್ವೈವಾಹಿಕೋ ವಿಧಿಃ ।
ಕರ್ತವ್ಯಶ್ಚ ತ್ರಿಭಿರ್ವರ್ಣೈಃ ಸಮಯೇನಾಗ್ನಿಸಾಕ್ಷಿಕಃ ॥

ಏವಂ ಸ್ಥಿತೇ ವರ್ಣವ್ಯವಸ್ಥಯಾ ವಿವಾಹನಿಯಮಮಾಹಮನುಃ ।
ಷಡಾನುಪೂರ್ವ್ಯಾ ವಿಪ್ರಸ್ಯ ಕ್ಷತ್ರಸ್ಯ ಚತುರೋವರಾನ್ ।
ವಿಟ್ಛೂದ್ರಯೋಸ್ತು ತಾನೇವ ವಿದ್ಯಾದ್ಧರ್ಮ್ಯಾನರಾಕ್ಷಸಾನ್ ॥

ಅಸ್ಯಾರ್ಥಃ । ಬ್ರಾಹ್ಮಾದೀನ್ ಷಡಾನುಪೂರ್ವ್ಯಾ ಕ್ರಮೇಣ ಬ್ರಾಹ್ಮಣಸ್ಯ ಧರ್ಮ್ಯಾನ್ ಧರ್ಮಾದನಪೇತಾನ್ವಿದ್ಯಾತ್ ತೇ ಚ ಷಟ್ ಬ್ರಾಹ್ಮೋದೈವ ಆರ್ಷಃ ಪ್ರಾಜಾಪತ್ಯ ಆಸುರೋ ಗಾಂಧರ್ವಶ್ಚೇತಿ ।

ಅರ್ಥ.—ನೀನು ನನ್ನ ಗಂಡ--ನೀನು ನನ್ನ ಹೆಂಡತಿ—ಎಂದು ಕನ್ಯಾ ವರರಿಗೆ ಅನ್ಯೋನ್ಯ ಪ್ರೀತಿಯಿಂದಾದ ಸಮಯವು ಗಾಂಧರ್ವವು. ಸಮಯಪೂರ್ವಕವಾಗಿ ನಡೆದ ಉಪಭೋಗವೂ ಕೂಡ ಗಾಂಧರ್ವವೇ ಆಗುವುದು. ಈ ವಿಷಯದಲ್ಲಿ ದೇವಲವಚನವೇನೆಂದರೆ—ಗಾಂಧರ್ವಾದಿ ವಿವಾಹಗಳಲ್ಲಿ ಮೂರುವರ್ಣಗಳವರಿಂದ ಅಗ್ನಿಸಾಕ್ಷಿಕವಾಗಿ ಪುನರ್ವೈವಾಹಿಕ ವಿಧಿಯು ಯಥಾವಿಧಿಯಾಗಿ ಮಾಡಲ್ಪಡತಕ್ಕದು. ಹೀಗಿರಲು ಮನುವು ವರ್ಣವ್ಯವಸ್ಥೆಯಿಂದ ವಿವಾಹನಿಯಮವನ್ನು ಹೇಳಿರುವನು. ಹೇಗೆಂದರೆ—ಕ್ರಮವಾಗಿ ಮೊದಲಿನ ಆರು ವಿವಾಹಗಳು ಬ್ರಾಹ್ಮಣನಿಗೂ, ಕೊನೆಯ ನಾಲ್ಕು ಕ್ಷತ್ರಿಯನಿಗೂ ರಾಕ್ಷಸ ವಿವಾಹವನ್ನು ಬಿಟ್ಟು ಅದೇ ಮೂರು ವೈಶ್ಯ ಶೂದ್ರರಿಗೂ, ಧರ್ಮಗಳೆಂದು ತಿಳಿಯತಕ್ಕದು. ಇದರ ಅರ್ಥವೇನೆಂದರೆ – ಬ್ರಾಹ್ಮಾದಿಯಾದ ಕ್ರಮವಾಗಿ ಮೊದಲನೆಯ ಆರು ವಿವಾಹಗಳು ಬ್ರಾಹ್ಮಣನಿಗೆ ಧರ್ಮಯುಕ್ತವಾದುವೆಂದು ತಿಳಿಯಬೇಕು. ಆ ಆರು ವಿವಾಹಗಳು ಯಾವುವೆಂದರೆ—ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಆಸುರ, ಗಾಂಧರ್ವ ಎಂಬುವು.

ಹೀಗೆ ಮೇಲಿನವಚನಗಳಿಂದ ಗಾಂಧರ್ವ ಪೈಶಾಚ ವಿವಾಹಗಲ್ಲಿ ಕನ್ಯಾ ವರರಿಗೆ ಸಂಭೋಗವಾಗುವುದು ತೋರಿಬರುವುದರಿಂದಲೂ, ಋತುಮತಿಯರಾದ ಕನ್ಯೆಯರೇ ಮೈಥುನಯೋಗ್ಯರಾಗಿರುವುದರಿಂದಲೂ, ಗಾಂಧರ್ವವಿವಾಹವು ಸರ್ವವರ್ಣದವರಿಗೂ ಆಗಬಹುದೆಂದು ಅಪ್ಪಣೆಕೊಡಿಸಿರುವುದರಿಂದಲೂ, ಸಂಕಟದಲ್ಲಿ ಪೈಶಾಚ ವಿವಾಹವೂ ಆಗಬಹುದೆಂದು ಹೇಳಿರುವುದರಿಂದಲೂ, ಮಿಕ್ಕ ಆರು ಬಗೆಯ ವಿವಾಹಗಳಲ್ಲಿ ಋತುಮತಿಯರ ವಿವಾಹವು ನಿಷೇಧಿಸಲ್ಪಟ್ಟಂತೆ ಕಂಡುಬಾರದೆ ಇರುವುದರಿಂದಲೂ, ಬ್ರಾಹ್ಮಣಾದಿ ಜಾತಿಗಳ ಸ್ತ್ರೀಯರಿಗೆ ಋತುಮತಿಗಳಾದ ಬಳಿಕ ವಿವಾಹ ಮಾಡಿಕೊಳ್ಳಲು ಶಾಸ್ತ್ರಕಾರರ ಸಮ್ಮತಿಯಿರುವುದೆಂದು ವ್ಯಕ್ತವಾಗುವುದು.

ಪ್ರಕರಣ ೭.

ಪುತ್ರಭೇದಗಳು.

ಈಗ ಪುತ್ರರ ವಿಷಯವು ವಿಚಾರ ಮಾಡಲ್ಪಡುವುದು. ಶಾಸ್ತ್ರಗಳಲ್ಲಿ ಹನ್ನೆರಡುವಿಧ ಪುತ್ರರು ಹೇಳಲ್ಪಟ್ಟಿರುವರು. ಅವರಲ್ಲಿ ಕಾನೀನ ಮತ್ತು ಸಹೋಢ ಎಂಬ ಪುತ್ರರು ಋತುಮತೀವಿವಾಹವನ್ನು ಸೂಚಿಸುವರು. ಕಾನೀನನೆಂದರೆ ಮದುವೆಯಿಲ್ಲದವಳಲ್ಲಿ ಹುಟ್ಟಿದವನು. ಸಹೋಢನೆಂದರೆ ವಿವಾಹಕಾಲದಲ್ಲಿ ಬಸುರಾಗಿದ್ದವಳಲ್ಲಿ ಹುಟ್ಟಿದವನು. ಋತುಮತಿಗಳಾದ ಕನ್ಯೆಯರೇ ಬಸುರಿಯರಾಗಲಿಕ್ಕೂ ಮಕ್ಕಳನ್ನು ಹೆರಲಿಕ್ಕೂ ಸಮರ್ಥರೇ ಹೊರತು ಋತುಮತಿಗಳಲ್ಲದ ಚಿಕ್ಕ ಹುಡುಗಿಯರು ಬಸುರಾಗಿ ಹೆರಲಾರರು. ಆದರೆ ಋತುಮತಿಗಳಾದ ಕನ್ಯೆಯರು ಮದುವೆಯಿಲ್ಲದೆ ವ್ಯಭಿಚಾರಿಣಿಯರಾಗಿರಬೇಕೆಂದು ನಮ್ಮ ತಾತ್ಪರ್ಯವಲ್ಲ. ಋತುಮತೀವಿವಾಹವು ಶಾಸ್ತ್ರಸಮ್ಮತವು—ಮತ್ತು ಅದು ಪೂರ್ವದಲ್ಲಿ ನಡೆಯುತ್ತಿತ್ತು ಎಂದು ತೋರಿಸುವ ಉದ್ದೇಶದಿಂದ ಇಲ್ಲಿ ಈ ವಿಷಯವು ಹೇಳಲ್ಪಟ್ಟಿದೆ. ಈಗ ಪುತ್ರಸಂಬಂಧವಾದ ಕೆಲವು ಶಾಸ್ತ್ರವಚನಗಳು ಉದಾಹರಿಸಲ್ಪಡುವುವು.

ಯಾಜ್ಞವಲ್ಕ್ಯಸ್ಮೃತಿ, ವ್ಯವಹಾರಾಧ್ಯಾಯ.

ಕಾನೀನಃ ಕನ್ಯಕಾಜಾತೋ ಮಾತಾಮಹಸುತೋ ಮತಃ ||೧೨೯||
ದತ್ತಾತ್ಮಾ ತು ಸ್ವಯಂ ದತ್ತೋ ಗರ್ಭೇ ವಿನ್ನಃ ಸಹೋಢಜಃ ||೧೩೧||
ಪಿಂಡದೋಂಶಹರಶ್ಚೈಷಾಂ ಪೂರ್ವಾಭಾವೇ ಪರಃಪರಃ ||೧೩೨||

ಥ.F.—ಕನ್ಯೆಯಲ್ಲಿ ಹುಟಿದವನು ಕಾನೀನನು. ಇವನು ಮಾತಾಮಹನಿಗೆ ಪುತ್ರನಾಗುವನೆಂದು ಹೇಳುವರು. ತಾನಾಗಿಯೇ ಕೊಡಲ್ಪಟ್ಟವನು ಸ್ವಯಂದತ್ತನೆನ್ನಿಸುವನು. ಮದುವೆಯಾಗುವಾಗಲೇ ಗರ್ಭಿಣಿಯಾಗಿದ್ದ ತಾಯಿಯಲ್ಲಿ ಹುಟ್ಟಿದವನು ಸಹೋಢನು. ದ್ವಾದಶವಿಧ ಪುತ್ರರಲ್ಲಿ ಮೊದಲುಮೊದಲು ಹೇಳಲ್ಪಟ್ಟವರಿಲ್ಲದಿದ್ದರೆ ಆಮೇಲಾಮೇಲೆ ಹೇಳಲ್ಪಟ್ಟವರು ತಂದೆಗೆ ಪಿಂಡಹಾಕಲಿಕ್ಕೂ ಆತನ ಸೊತ್ತಿಗೂ ಬಾಧ್ಯರಾಗುವರು.

ನಾರದಸ್ಮೃತಿ, ೧೩ನೆಯ ವ್ಯವಹಾರಪದ.

ಕಾನೀನಶ್ಚ ಸಹೋಢಶ್ಚ ಗೂಢಾಯಾಂ ಯಶ್ಚ ಜಾಯತೇ ||
ತೇಷಾಂ ವೋಢಾ ಪಿತಾ ಜ್ಞೇಯಸ್ತೇಚ ಭಾಗಹರಾಃ ಸ್ಮೃತಾಃ ||೧೮||
ಅಜ್ಞಾತಪಿತೃಕೋ ಯಶ್ಚ ಕಾನೀನೋ ಽನೂಢಮಾತೃಕಃ ||
ಮಾತಾಮಹಾಯ ದದ್ಯಾತ್ಸಃ ಪಿಂಡಂ ರಿಕ್ಥಂ ಹರೇತ ಚ ||೧೮||

ಕ್ರಮಾದೇತೇ ಪ್ರಪದ್ಯೇರನ್ಮೃತೇ ಪಿತರಿ ವಾ ಧನಂ ॥
ಜ್ಯಾಯಸೋಜ್ಯಾಯಸೋಲಾಭೇ ಕನೀಯಾನ್ರಿಕ್ಥಮರ್ಹತಿ ॥೧೯॥

ಅರ್ಥ—ಕಾನೀನ ಸಹೋಢ ಗೂಢಜ ಇವರುಗಳಿಗೆ ಇವರ ತಾಯಿಯರನ್ನು ಮದುವೆಯಾದವನೇ ತಂದೆಯು. ಈ ತಂದೆಯ ಸೊತ್ತಿಗೆ ಇವರೇ ಬಾಧ್ಯರು. ವಿವಾಹಿತಳಾದ ತಾಯಿಯೂ ಗೊತ್ತಿಲ್ಲದ ತಂದೆಯೂ ಉಳ್ಳವನೇ ಕಾನೀನನು. ಇವನು ಮಾತಾಮಹನಿಗೆ ಪಿಂಡಪ್ರದಾನ ಮಾಡುವನಾಗಿಯೂ ಆತನ ಸೊತ್ತಿಗೆ ಬಾಧ್ಯನಾಗಿಯೂ ಇರುವನು. ಔರಸ, ಕ್ಷೇತ್ರಜ, ಪುತ್ರಿಕಾಪುತ್ರ, ಕಾನೀನ, ಸಹೋಢ, ಗೂಢೋತ್ಪನ್ನ, ಪೌನರ್ಭವ, ಅಪವಿದ್ಧ, ಬದ್ಧ, ಕ್ರೀತ, ಕೃತ, ಸ್ವಯಮುಪಗತ ಎಂದು ಹೀಗೆ ೧೨ ಜನ ಪುತ್ರರು ಉದಾಹೃತರಾಗಿರುವರು. ಇವರಲ್ಲಿ ಮೊದಲನೆಯ ಆರು ಪುತ್ರರು ದಾಯಭಾಗವನ್ನು ಹೊಂದುವ ಬಂಧುಗಳು. ಉಳಿದ ಆರು ಪುತ್ರರು ದಾಯಭಾಗವಿಲ್ಲದ ಬಂಧುಗಳು. ಪೂರ್ವಪೂರ್ವದವರು ಶ್ರೇಷ್ಠರು; ಉತ್ತರೋತ್ತರದವರು ಕನಿಷ್ಠರು. ತಂದೆಯು ಸತ್ತರೆ ಈ ಪುತ್ರರು ಕ್ರಮವಾಗಿ ಪಿತೃಧನವನ್ನು ಹೊಂದುವರು. ಶ್ರೇಷ್ಠಶ್ರೇಷ್ಠನಾದ ಮಗನಿಲ್ಲದಿದ್ದರೆ ಕನಿಷ್ಠನಾದ ಮಗನು ರಿಕ್ಥಕ್ಕೆ ಬಾಧ್ಯನಾಗುವನು.

ವಿಷ್ಣುಸ್ಮೃತಿ, ಅಧ್ಯಾಯ ೧೫.

ಕಾನೀನಃ ಪಂಚಮಃ ॥೧೦॥
ಪಿತೃಗೃಹೇಽಸಂಸ್ಕೃತಯೈವೋತ್ಪಾದಿತಃ ॥೧೧॥
ಸಚ ಪಾಣಿಗ್ರಾಹಸ್ಯ ॥೧೨॥
ಸಹೋಢಃ ಸಪ್ತಮಃ ॥೧೩॥
ಯಾ ಗರ್ಭಿಣೀ ಸಂಸ್ಕ್ರಿಯತೇ ತಸ್ಯಾಃ ಪುತ್ರಃ ॥೧೬॥
ಏತೇಷಾಂ ಪೂರ್ವಃಪೂರ್ವಃ ಶ್ರೇಯಾನ್ ॥೨೮॥
ಸ ಏವ ದಾಯಹರಃ ॥೨೯॥

ಅರ್ಥ.—(ಹನ್ನೆರಡು ಬಗೆಯ ಪುತ್ರರಲ್ಲಿ) ಕಾನೀನನು ಐದನೆಯವನು. ಇವನು ಮದುವೆಯಿಲ್ಲದೆ ತಂದೆಯ ಮನೆಯಲ್ಲಿರುವ ಕನ್ಯೆಯಲ್ಲಿ ಹುಟ್ಟಿದವನು. ಇವನು ಆಕೆಯನ್ನು ಮದುವೆಯಾದವನಿಗೆ ಸೇರುವನು. ಸಹೋಢನು ಏಳನೆಯವನು. ಇವನು ಗರ್ಭಿಣಿಯಾದ ಬಳಿಕ ಮದುವೆಯಾದವಳಲ್ಲಿ ಹುಟ್ಟಿದ ಮಗನು. ಹನ್ನೆರಡುವಿನ ಪುತ್ರರಲ್ಲಿ ಮೊದಲುಮೊದಲನೆಯವನು ಶ್ರೇಷ್ಠನು. ಆತನೇ ದಾಯಭಾಗಿಯು.

ಗೌತಮಧರ್ಮಶಾಸ್ತ್ರ, ಅಧ್ಯಾಯ ೨೮.

ಕಾನೀನ ಸಹೋಢ ಪೌನರ್ಭವ ಪುತ್ರಿಕಾಪುತ್ರ ಸ್ವಯಂದತ್ತ ಕ್ರೀತಾ ಗೋತ್ರಭಾಜಃ ॥೩೨॥

ಅರ್ಥ.—ಕಾನೀನ, ಸಹೋಢ, ಪೌನರ್ಭವ, ಪುತ್ರಿಕಾಪುತ್ರ, ಸ್ವಯಂದತ್ತ ಕ್ರೀತ—ಈ ಆರು ಪುತ್ರರು ಗೋತ್ರಭಾಗಿಗಳು.

ಪರಾಶರ ಮಾಧವೀಯ, ವ್ಯವಹಾರಕಾಂಡ, ದಾಯಭಾಗಾಖ್ಯ ವ್ಯವಹಾರ ಪದ, ಹಾರೀತೇನೋಕ್ತಂ.

ವಿಭಜಿಷ್ಯಮಾಣ ಏಕವಿಂಶಂ ಕಾನೀನಾಯ ದದ್ಯಾತ್, ವಿಂಶಂ ಪೌನರ್ಭವಾಯ, ಏಕೋನವಿಂಶಂ ದ್ವ್ಯಾಮುಷ್ಯಾಯಣಾಯ, ಅಷ್ಟಾದಶಾಂಶಂ ಚ ಕ್ಷೇತ್ರಜಾಯ, ಸಪ್ತದಶಾಂಶಂ ಪುತ್ರಾಯ, ಇತರದೌರಸಾಯ ಪುತ್ರಾಯ ದದ್ಯಾತ್ ಇತಿ ॥

ಅರ್ಥ.—ಹಾರೀತವಚನ.—ವಿಭಾಗ ಮಾಡುವವನು ಕಾನೀನನಿಗೆ ಇಪ್ಪತ್ತೊಂದನೆಯ ಭಾಗವನ್ನೂ ಪೌನರ್ಭವನಿಗೆ ಇಪ್ಪತ್ತನೆಯ ಭಾಗವನ್ನೂ ದತ್ತಪುತ್ರನಿಗೆ ಹತ್ತೊಂಭತ್ತನೆಯ ಭಾಗವನ್ನೂ ಕ್ಷೇತ್ರಜನಿಗೆ ಹದಿನೆಂಟನೆಯ ಭಾಗವನ್ನು, (ಉಳಿದ ಪ್ರತಿನಿಧಿ) ಮಗನಿಗೂ ಹದಿನೇಳನೆಯ ಭಾಗವನ್ನೂ, ಇತರ ಭಾಗವನ್ನೂ ಔರಸಪುತ್ರನಿಗೂ ಕೊಡಬೇಕು.

ವಾಸಿಷ್ಠ ಧರ್ಮಶಾಸ್ತ್ರ, ಅಧ್ಯಾಯ ೧೭.

ಕಾನೀನಃ ಪಂಚಮಃ ॥೨೧॥

ಯಾ ಪಿತೃಗೃಹೇಽಸಂಸ್ಕೃತಾ ಕಾಮಾದುತ್ಪಾದಯೇನ್ಮಾತಾಮಹಸ್ಯ ಪುತ್ರೋ ಭವತೀತ್ಯಾಹುಃ ॥೨೨॥

ಅಥಾಪ್ಯುದಾಹರಂತಿ ॥ ಅಪ್ರತ್ತಾ ದುಹಿತಾ ಯಸ್ಯ ಪುತ್ರಂ ವಿಂದೇತ ತುಲ್ಯತಃ।
ಪುತ್ರೀ ಮಾತಾಮಹಸ್ತೇನ ದದ್ಯಾತ್ಪಿಂಡಂ ಹರೇದ್ಧನಮಿತಿ ॥೨೩॥

ಇತ್ಯೇತೇ ದಾಯಾದಾಬಾಂಧವಾಸ್ತ್ರಾತಾರೋಮಹತೋ ಭಯಾದಿತ್ಯಾಹುಃ॥

ಅಥಾದಾಯಾದಬಂಧೂನಾಂ ಸಹೋಢಏವ ಪ್ರಥಮಃ ॥೨೪॥

ಯಾ ಗರ್ಭಿಣೀ ಸಂಸ್ಕ್ರಿಯತೇ ಸಹೋಢಃ ಪುತ್ರೋ ಭವತಿ ॥೨೫॥

ಅಥಾಪ್ಯುದಾಹರಂತಿ। ಯಸ್ಯ ಪೂರ್ವೇಷಾಂ ಷಣ್ಣಾಂ ನ ಕಶ್ಚಿದ್ದಾಯಾದಃ ಸ್ಯಾದೇತೇ ತಸ್ಯ ದಾಯಂ ಹರೇರನ್ನಿತಿ ॥೨೬॥

ಅರ್ಥ.—ಕಾನೀನು ಐದನೆಯವನು. ತಂದೆಯಮನೆಯಲ್ಲಿರುವಾಗ ಕನ್ಯೆಯು ಕಾಮುಕಳಾಗಿ ಹೆತ್ತಂಥ ಈ ಮಗನು ಮಾತಾಮಹನಿಗೆ ಪುತ್ರನಾಗುವನೆಂದು ಹೇಳುವರು. ಹಾಗೆಯೇ ಉದಾಹರಿಸುವರು.—ಮದುವೆಯಿಲ್ಲದ ಕನ್ನೆಯು ಸಜಾತಿಯವನಿಂದ ಪುತ್ರನನ್ನು ಪಡೆದರೆ, ಆ ಮಗನಿಂದ ಮಾತಾಮಹನು ಪುತ್ರವಂತನಾಗುವನು, ಆ ಪುತ್ರನು ಮಾತಾಮಹನ ಸೊತ್ತಿಗೆ ಬಾಧ್ಯನಾಗುವನು, ಮತ್ತು ಪಿಂಡಪ್ರದನೂ ಆಗುವನು. ಇವರು (ಎಂದರೆ ಔರಸ, ಕ್ಷೇತ್ರಜ, ಪುತ್ರಿಕಾಪುತ್ರ, ಪೌನರ್ಭವ, ಕಾನೀನ, ಅಪವಿದ್ಧ ಎಂಬ ಆರುಮಕ್ಕಳು) ದಾಯಭಾಗಿಗಳಾದ ಬಂಧು

ಗಳು; ಮತ್ತು (ನರಕ ಸಂಬಂಧವಾದ) ಮಹಾಭಯದ ದೆಶೆಯಿಂದ ರಕ್ಷಕರು ಎಂದು ಹೇಳುವರು. ದಾಯಭಾಗಿಗಳಲ್ಲದೆ ಬಂಧು ಮಾತ್ರರಾದ ಪುತ್ರರಲ್ಲಿ ಸಹೋಢನು ಮೊದಲನೆಯವನು. ಮದುವೆಯಾಗುವಾಗಲೇ ಬಸುರಿಯಾಗಿದ್ದವಳಲ್ಲಿ ಹುಟ್ಟಿದವನು ಸಹೋಢನು. ಹಾಗೆಯೇ ಉದಾಹರಿಸುವರು.—ಮೊದಲನೆಯ ಆರುವಿಧ ಪುತ್ರರಲ್ಲಿ ಯಾರೂ ಇಲ್ಲದಿದ್ದರೆ (ಕೊನೆಯ ಆರುಜನ ಪುತ್ರರಾದ ಸಹೋಢಾದಿಗಳಾದ) ಇವರು ತಂದೆಯ ಸ್ವತ್ತಿಗೆ ಬಾಧ್ಯರಾಗುವರು.

ಬೋಧಾಯನ ಧರ್ಮಶಾಸ್ತ್ರ, ಪ್ರಶ್ನೆ ೨, ಅಧ್ಯಾಯ ೨, ಕಂಡಿಕೆ ೩.

ಅಸಂಸ್ಕೃತಾಮನತಿಸೃಷ್ಟಾಂ ಯಾಮುಪಯಚ್ಛೇತ್ತಸ್ಯಾಂ ಯೋ ಜಾತಃ ಸ ಕಾನೀನಃ ॥೨೪॥

ಯಾ ಗರ್ಭಿಣೀ ಸಂಸ್ಕ್ರಿಯತೇ ವಿಜ್ಞಾತಾ ಅವಿಜ್ಞಾತಾ ವಾ ತಸ್ಯಾಂ ಯೋ ಜಾತಃ ಸ ಸಹೋಢಃ ॥೨೫॥

ಕಾನೀನಂ ಚ ಸಹೋಢಂ ಚ ಕ್ರೀತಂ ಪೌನರ್ಭವಂ ತಥಾ ।
ಸ್ವಯಂದತ್ತಂ ನಿಷಾದಂ ಚ ಗೋತ್ರಭಾಜಃ ಪ್ರಚಕ್ಷತೇ ॥೩೨॥

ಅರ್ಥ.—ಸಂಸ್ಕಾರವಿಲ್ಲದವಳಾಗಿಯೂ ದಾನಮಾಡಲ್ಪಡದವಳಾಗಿಯೂ ಇರುವ ಸ್ತ್ರೀಯಲ್ಲಿ ಯಾವನಾದರೂ ಸಂಭೋಗಮಾಡಿದರೆ, ಅದರಿಂದ ಅವಳಲ್ಲಿ ಹುಟ್ಟಿದ ಹುಡುಗನು ಕಾನೀನನೆನ್ನಿಸುವನು. ತಿಳಿದಾಗಲಿ ತಿಳಿಯದೆ ಆಗಲಿ ಗರ್ಭಿಣಿಯನ್ನು ಮದುವೆಮಾಡಿಕೊಂಡರೆ, ಅವಳಲ್ಲಿ ಹುಟ್ಟಿದ ಮಗನು ಸಹೋಢನು. ಕಾನೀನ, ಸಹೋಢ, ಕ್ರೀತ, ಪೌನರ್ಭವ, ಸ್ವಯಂದತ್ತ, ನಿಷಾದ—ಇವರು ಗೋತ್ರಭಾಜರೆಂದು ಹೇಳುವರು.

ಪರಾಶರಸ್ಮೃತಿ, ಅಧ್ಯಾಯ ೪.

ಔರಸಃ ಕ್ಷೇತ್ರಜಶ್ಚೈವ ದತ್ತಃ ಕೃತ್ರಿಮಕಸ್ಸುತಃ ॥೨೨॥

ಮಾಧವವ್ಯಾಖ್ಯಾ.—ಏತಚ್ಚ ದ್ವಾದಶವಿಧಾನಾಂ ಪುತ್ರಾಣಾಮುಪಲಕ್ಷಣಂ। ತೇ ಚ ಮನುನಾ ದರ್ಶಿತಾಃ ॥ ಅತ್ರ ದ್ವಾದಶವಿಧಾನಾಂ ಪುತ್ರಾಣಾಂ ಯಾನಿ ಲಕ್ಷಣಾನಿ ಮನುನಾ ದರ್ಶಿತಾನಿ, ತಾನಿ ಸರ್ವಾಣ್ಯುಪಲಕ್ಷಯಿತುಂ ದತ್ತಸ್ಯ ಲಕ್ಷಣಮಾಹ ದದ್ಯಾದಿತಿ ॥

ಅರ್ಥ.—ಔರಸ, ಕ್ಷೇತ್ರಜ, ದತ್ತ, ಮತ್ತು ಕೃತ್ರಿಮಕ ಎಂದು ಪುತ್ರರು. ಮಾಧವವ್ಯಾಖ್ಯೆ.—ಇಲ್ಲಿ ಹೇಳಿದ್ದು ಹನ್ನೆರಡು ವಿಧ ಪುತ್ರರಿಗೆ ಉಪಲಕ್ಷಣವು. ಆ ಪುತ್ರಭೇದಗಳು ಮನುವಿನಿಂದ ತೋರಿಸಲ್ಪಟ್ಟಿರುವುವು. ಈ ವಿಷಯದಲ್ಲಿ ಮನುವಿನಿಂದ ಹೇಳಲ್ಪಟ್ಟ ಹನ್ನೆರಡು ವಿಧ ಪುತ್ರರ ಲಕ್ಷಣಗಳೆಲ್ಲವನ್ನೂ ಉಪಲಕ್ಷಿಸುವುದಕ್ಕೋಸ್ಕರ ದದ್ಯಾತ್ ಎಂದು ಪ್ರಾರಂಭಿಸುವ ವಚನದಿಂದ ಪರಾಶರ ಮುನಿಯು ದತ್ತಪುತ್ರನ ಲಕ್ಷಣವನ್ನು ಹೇಳುವನು.

ಮನುಸ್ಮೃತಿ ಅಧ್ಯಾಯ ೯.

ಔರಸಃ ಕ್ಷೇತ್ರಜಶ್ಚೈವ ದತ್ತಃ ಕೃತ್ರಿಮ ಏವ ಚ ।
ಗೂಢೋತ್ಪನ್ನೋಽಪವಿದ್ಧಶ್ಚ ದಾಯಾದಾ ಬಾಂಧವಾಶ್ಚ ಷಟ್ ॥೧೫೯॥
ಕಾನೀನಶ್ಚ ಸಹೋಢಶ್ಚ ಕ್ರೀತಃ ಪೌನರ್ಭವಸ್ತಥಾ ।
ಸ್ವಯಂದತ್ತಶ್ಚ ಶೌದ್ರಶ್ಚ ಷಡದಾಯಾದಬಾಂಧವಾಃ ॥೧೬೦॥
ಪಿತೃವೇಶ್ಮನಿ ಕನ್ಯಾ ತು ಯಂ ಪುತ್ರಂ ಜನಯೇದ್ರಹಃ ।
ತಂ ಕಾನೀನಂ ವದೇನ್ನಾಮ್ನಾ ವೋಢುಃ ಕನ್ಯಾಸಮುದ್ಭವಂ ॥೧೭೨॥
ಯಾ ಗರ್ಭಿಣೀ ಸಂಸ್ಕ್ರಿಯತೇ ಜ್ಞಾತಾಜ್ಞಾತಾಪಿ ವಾ ಸತೀ ।
ವೋಢುಃ ಸಗರ್ಭೋ ಭವತಿ ಸಹೋಢ ಇತಿ ಚೋಚ್ಯತೇ ॥೧೭೩॥
ಶ್ರೇಯಸಃ ಶ್ರೇಯಸೋಽಲಾಭೇ ಪಾಪೀಯಾನ್ ರಿಕ್ಥಮರ್ಹತಿ ॥೧೮೪॥

ಅರ್ಥ.—ಔರಸ, ಕ್ಷೇತ್ರಜ, ದತ್ತ, ಕೃತ್ರಿಮ, ಗೂಢೋತ್ಪನ್ನ, ಅಪವಿದ್ಧ ಈ ಆರುಬಗೆಯ ಪುತ್ರರು ದಾಯಭಾಗಿಗಳಾದ ಬಾಂಧವರು. ಕಾನೀನ, ಸಹೋಢ ಕ್ರೀತ, ಪೌನರ್ಭವ, ಸ್ವಯಂದತ್ತ, ಶೌದ್ರ, ಈ ಆರುಬಗೆಯ ಪುತ್ರರು ದಾಯಭಾಗಿಗಳಲ್ಲದ ಬಂಧುಗಳು. ಕನ್ಯೆಯು ಇನ್ನೂ ಮದುವೆಯಿಲ್ಲದೆ ತಂದೆಯಮನೆಯಲ್ಲಿರುವಾಗ ರಹಸ್ಯವಾಗಿ ಹೆತ್ತರೆ, ಅವಳ ಪುತ್ರನನ್ನು ಕಾನೀನನೆಂದು ತಿಳಿಯಬೇಕು. ಇಂಥ ಕನ್ಯೆಯಲ್ಲಿ ಹುಟ್ಟಿದವನು, ಅವಳನ್ನು ಆಮೇಲೆ ಮದುವೆಮಾಡಿಕೊಂಡವನಿಗೆ ಸೇರುವನು. ಗರ್ಭಿಣಿಯಾದ ಕನ್ಯೆಯು ತಿಳಿದಾಗಲೀ ತಿಳಿಯದೆಯಾಗಲೀ ಮದುವೆಯಾದರೆ, ಅವಳ ಆ ಗರ್ಭದಲ್ಲಿ ಹುಟ್ಟಿದ ಹುಡುಗನು ಅವಳನ್ನು ಮದುವೆಯಾದವನಿಗೆ ಸೇರುವನು; ಮತ್ತು ಸಹೋಢನೆಂದು ಕರೆಯಲ್ಪಡುವನು. ಶ್ರೇಷ್ಠಶ್ರೇಷ್ಠನಾದ ಮಗನಿಲ್ಲದಿದ್ದರೆ ಕನಿಷ್ಠನಾದ ಮಗನು ರಿಕ್ಥವನ್ನು ಹೊಂದಲು ಅರ್ಹನಾಗುವನು.

ಮದನಪಾರಿಜಾತ, ಸ್ತಬಕ ೮.

ಮದನಪಾಲಃ । ಸವರ್ಣಾತ್ ಕನ್ಯಕಾಯಾಂ ಉತ್ಪನ್ನಃ ಕಾನೀನಃ; ಸಮಾತಾಮಹಸುತಃ; ಯದಿ ಸಾ ಅವಿವಾಹಿತಾ ಪಿತೃಗೃಹ ಏವ ತಿಷ್ಠತಿ । ಯದಿ ಚೇದ್ವಿವಾಹಿತಾ, ತದಾ ಸಪುತ್ರೋ ವೋಢುರೇವ। ಸಗರ್ಭಾಯಾಂ ವಿವಾಹಿತಾಯಾಂ ತಸ್ಮಾದ್ಗರ್ಭಾದ್ಯುತ್ಪನ್ನಃ ಸಸಹೋಢಜಃ ॥ ಕಾನೀನ ಗೂಢೋತ್ಪನ್ನ ಸಹೋಢ ಪೌನರ್ಭವಾನಾಂ ಸವರ್ಣತ್ವಂ ಜನಕದ್ವಾರೇಣ ॥ ಔರಸಾದ್ಯಭಾವೇ ತು ಕಾನೀನಾದೀನಾಮಪಿ ಸಕಲಪಿತ್ರ್ಯಧನಗ್ರಹಣಮಸ್ತ್ಯೇವ; ಪೂರ್ವಾಭಾವೇ ಪರಃಪರಃ ಇತಿ ವಚನಾದಿತಿ ವಿಜ್ಞಾನೇಶ್ವರಮತಂ ॥

ಅರ್ಥ.—ಮದನಪಾಲವಚನ.—ಸವರ್ಣದವನ ದೆಸೆಯಿಂದ ಕನ್ಯೆಯಲ್ಲಿ ಹುಟ್ಟಿದವನು ಕಾನೀನನು. ಅವಳು ವಿವಾಹವಿಲ್ಲದೆ ತಂದೆಯ ಮನೆಯಲ್ಲಿಯೇ ಇದ್ದರೆ,

ಅವನು ಮಾತಾಮಹನಿಗೆ ಮಗನಾಗುವನು. ಅವಳು ಮದುವೆಯಾದರೆ ಅವನು ಆಗ ಅವಳನ್ನು ಮದುವೆಮಾಡಿಕೊಂಡವನ ಮಗನಾಗುವನು. ಗರ್ಭಿಣಿಯಾಗಿ ವಿವಾಹಮಾಡಿಕೊಂಡವಳಲ್ಲಿ ಆಗರ್ಭದಿಂದ ಹುಟ್ಟಿದವನು ಸಹೋಢಜನು. ಹುಟ್ಟಿಸಿದವನ ದೆಶೆಯಿಂದ ಕಾನೀನ ಗೂಢೋತ್ಪನ್ನ ಸಹೋಢ ಪೌನರ್ಭವರಾದ ಮಕ್ಕಳುಗಳಿಗೆ ಸಮಾನವರ್ಣತ್ವವು ಉಂಟಾಗುವುದು. (ಎಂದರೆ ಹುಟ್ಟಿಸಿದವನು ಯಾವ ವರ್ಣದವನೋ ಆ ವರ್ಣಕ್ಕೆ ಆ ಮಕ್ಕಳೂ ಸೇರುವರು.) ಪೂರ್ವದವರಿಲ್ಲದಿದ್ದರೆ ಪರನು ಪರನು ಎಂದು ವಚನವಿರುವುದರಿಂದ, ಔರಸಾದಿ ಪುತ್ರರಿಲ್ಲದ ಪಕ್ಷದಲ್ಲಿ ಕಾನೀನಾದಿಗಳಿಗೂ ಕೂಡ ಸಮಸ್ತವಾದ ಪಿತೃಧನಗ್ರಹಣವುಂಟೆಂದು ವಿಜ್ಞಾನೇಶ್ವರನ ಮತವಾಗಿರುವುದು.

ಪರಾಶರ ಧರ್ಮಶಾಸ್ತ್ರ, ಅಧ್ಯಾಯ ೩.

ಔರಸಃ ಕ್ಷೇತ್ರಜಶ್ಚೈವ ದತ್ತಕಃ ಕನ್ಯಕಾಸುತಃ ॥೨೩॥

ಅರ್ಥ.—ಔರಸ, ಕ್ಷೇತ್ರಜ, ದತ್ತಕ, ಮತ್ತು ಕನ್ಯಕಾಸುತ. ಕನ್ಯಕಾಸುತ ಎಂದರೆ ಮದುವೆಯಾಗುವುದಕ್ಕೆ ಮೊದಲೇ ಕನ್ಯೆಯಲ್ಲಿ ಹುಟ್ಟಿದ ಮಗನು.

ಬೃಹತ್ಪರಾಶರಸ್ಮೃತಿ, ಅಧ್ಯಾಯ ೬.

ಔರಸಾದ್ಯಾಃ ಸ್ಮೃತಾಃ ಪುತ್ರಾ ಮುನಿಭಿರ್ದ್ವಾದಶೈವ ತು ।
ಯಥಾಜಾತ್ಯನುಸಾರೇಣ ವರ್ಣಾನಾಮನುಸಾರತಃ ।
ಶ್ರಾದ್ಧಪ್ರದಾಃ ಕ್ರಮೇಣ ಸ್ಯುಃ ಪೂರ್ವಾಭಾವೇ ಪರಃಪರಃ ॥

ಅರ್ಥ.—ಔರಸಾದಿ ಹನ್ನೆರಡುಬಗೆಯ ಪುತ್ರರು ಮುನಿಗಳಿಂದ ಸ್ಮರಿಸಲ್ಪಟ್ಟಿರುವರು. ಜಾತ್ಯನುಸಾರವಾಗಿ ಹೇಗೋ ಹಾಗೆ ವರ್ಣಾನುಸಾರವಾಗಿ ಈ ಪುತ್ರರಲ್ಲಿ ಮೊದಲು ಮೊದಲನೆಯವರಿಲ್ಲದಿದ್ದರೆ ಕೊನೆಕೊನೆಯವರು ಕ್ರಮೇಣ ಶ್ರಾದ್ಧ ಮಾಡುವವರಾಗುವರು.

ಹೀಗೆ ಪುತ್ರವಿಷಯವಾಗಿ ಇನ್ನೂ ಅನೇಕ ಶಾಸ್ತ್ರವಚನಗಳಿರುವುವು. ಅವುಗಳಲ್ಲೆಲ್ಲಾ ಹೇಳಲ್ಪಟ್ಟ ಕಾನೀನ ಸಹೋಢ ಪುತ್ರರ ಲಕ್ಷಣಗಳು ನಿಸ್ಸಂದೇಹವಾಗಿ ಋತುಮತೀವಿವಾಹವನ್ನು ಸೂಚಿಸುವಂಥವಾಗಿರುವುವು. ಗರ್ಭಿಣಿಯರಾಗಿ ಮಕ್ಕಳನ್ನು ಹೆರಲು ಋತುಮತಿಗಳಿಲ್ಲದ ಚಿಕ್ಕ ಹುಡುಗಿಯರು ಅನರ್ಹರಾಗಿರುವುದರಿಂದಲೂ, ಋತುಮತಿಗಳಾದ ಕನ್ಯೆಯರೇ ಅದಕ್ಕೆ ಅರ್ಹರಾಗಿರುವುದರಿಂದಲೂ, ಹಾಗೆ ಗರ್ಭಿಣಿಯರಾಗಿಯಾಗಲಿ ಹೆತ್ತಬಳಿಕವಾಗಲಿ ಮದುವೆ ಮಾಡಿಕೊಳ್ಳುವುದಾದರೆ, ಅಂಥ ಕನ್ಯೆಯರು ವಿವಾಹವಾಗುವುದಕ್ಕೆ ಮೊದಲೇ ಋತುಮತಿಗಳಾಗಿರಬೇಕೆಂಬುದು ಸ್ಪಷ್ಟವಾಗುವುದು.

ಪ್ರಕರಣ V.

ದೇವಪರಿಗ್ರಹ.

ಸೋಮ ಗಂಧರ್ವ ಮತ್ತು ಅಗ್ನಿ ಈ ಮೂರು ದೇವತೆಗಳು ಸ್ತ್ರೀಯರನ್ನು ಪರಿಗ್ರಹಿಸುವರೆಂದು ಶಾಸ್ತ್ರಗಳಲ್ಲಿ ಹೇಳಿದೆ. ಸ್ತ್ರೀಯರನ್ನು ಪರಿಗ್ರಹಿಸುವ ಕಾಲವೂ ಹೇಳಲ್ಪಟ್ಟಿದೆ. ಯೌವನಾವಸ್ಥೆಯನ್ನು ಸೂಚಿಸುವ ರೋಮಗಳು ಕುಚೋದ್ಗಮ ಮತ್ತು ರಜಸ್ಸು ಕಂಡಮೇಲೆ ಆ ದೇವತೆಗಳು ಅವರನ್ನು ಪರಿಗ್ರಹಿಸುವರೆಂದೂ, ಅವರು ಹಾಗೆ ಪರಿಗ್ರಹಿಸಿದನಂತರವೇ ಮನುಷ್ಯರು ಸ್ತ್ರೀಯರನ್ನು ಮದುವೆಯಾಗುವರೆಂದೂ ಉಕ್ತವಾಗಿದೆ. ಈ ಅರ್ಥವನ್ನು ಪರ್ಯಾಲೋಚಿಸಿದರೆ ಸ್ತ್ರೀಯರು ಋತುಮತಿಗಳಾಗಿ ಯೌವನಾವಸ್ಥೆಗೆ ಬಂದಮೇಲೆಯೇ ಅವರಿಗೆ ಮದುವೆಯಾಗತಕ್ಕದೆಂದು ಹೇಳಬೇಕಾಗುವುದು. ಕೆಳಗೆ ಉದಾಹರಿಸಲ್ಪಟ್ಟಿರುವ ಶಾಸ್ತ್ರವಚನಗಳು ಇದೇ ಅರ್ಥವನ್ನು ದೃಢೀಕರಿಸುತ್ತವೆ.

ಸಂವರ್ತಸ್ಮೃತಿ.

ರೋಮಕಾಲೇ ತು ಸಂಪ್ರಾಪ್ತೇ ಸೋಮೋ ಭುಂಕ್ತೇಥ ಕನ್ಯಕಾಂ ।
ರಜೋ ದೃಷ್ಟ್ವಾ ತು ಗಂಧರ್ವಃ ಕುಚೌ ದೃಷ್ಟ್ವಾ ತು ಪಾವಕಃ ॥೬೫॥

ಅರ್ಥ.—ಕನ್ಯೆಯ ಗುಹ್ಯಪ್ರದೇಶದಲ್ಲಿ ರೋಮಗಳು ಹುಟ್ಟುವ ಕಾಲವು ಬರುತ್ತಲೇ ಅವಳನ್ನು ಸೋಮನೂ, ರಜೋದರ್ಶನವಾದಮೇಲೆ ಗಂಧರ್ವನೂ, ಕುಚಗಳು ಚೆನ್ನಾಗಿ ಕಂಡಬಳಿಕ ಅಗ್ನಿಯೂ ಭೋಗಿಸುವರು.

'ಕಾಮಕಾಲೇ ತು ಸಂಪ್ರಾಪ್ತೇ' ಎಂದರೆ—ಕನ್ಯೆಗೆ ಪುರುಷಸಂಭೋಗಾಪೇಕ್ಷೆಯು ಬರುತ್ತಲೇ ಎಂದು ಈ ಶ್ಲೋಕಕ್ಕೆ ಪಾಠಾಂತರವೂ ಉಂಟು.

ಗೋಭಿಲಪುತ್ರ ಗೃಹ್ಯಾಸಂಗ್ರಹ, ಪ್ರಪಾಠಕ ೨.

ವ್ಯಂಜನೈಸ್ತು ಸಮುತ್ಪನ್ನೈಃ ಸೋಮೋ ಭುಂಜೀತ ಕನ್ಯಕಾಮ್ ।
ಪಯೋಧರೈಸ್ತು ಗಂಧರ್ವೋ ರಜಸಾಗ್ನಿಃ ಪ್ರಕೀರ್ತಿತಃ ॥೧೯॥

ಅರ್ಥ.—ಗುಹ್ಯಪ್ರದೇಶದಲ್ಲಿ ರೋಮಗಳು ಬೆಳೆಯುತ್ತಲೇ ಸೋಮನೂ, ಕುಚಗಳು ಬೆಳೆಯುತ್ತಲೇ ಗಂಧರ್ವನೂ, ರಜೋದರ್ಶನವಾಗುತ್ತಲೇ ಅಗ್ನಿಯೂ, ಕನ್ಯೆಯನ್ನು ಭೋಗಿಸುವರು.

ಕಾಶೀಖಂಡ, ಅಧ್ಯಾಯ ೪೧.

ಕನ್ಯಾಂ ಭುಂಕ್ತೇ ರಜಃಕಾಲೇಗ್ನಿಶ್ಶಶೀ ರೋಮದರ್ಶನೇ ।
ಸ್ತನೋದ್ಭೇದೇ ಚ ಗಂಧರ್ವಃ ॥

ಅರ್ಥ.—ಕನ್ಯೆಯನ್ನು ರಜಃಕಾಲದಲ್ಲಿ ಅಗ್ನಿಯೂ, ರೋಮದರ್ಶನದಲ್ಲಿ ಸೋಮನೂ, ಸ್ತನಗಳು ಬೆಳೆದಬಳಿಕ ಗಂಧರ್ವನೂ ಭೋಗಿಸುವರು.

ಬೋಧಾಯನ ಧರ್ಮಶಾಸ್ತ್ರ, ಪ್ರಶ್ನ ೨. ಅಧ್ಯಾಯ ೨, ಕಂಡಿಕೆ ೪.

ಸೋಮಃ ಶೌಚಂ ದದತ್ತಾಸಾಂ ಗಂಧರ್ವಃ ಶಿಕ್ಷಿತಾಂ ಗಿರಂ ।
ಅಗ್ನಿಶ್ಚ ಸರ್ವಮೇಧ್ಯತ್ವಂ ತಸ್ಮಾನ್ನಿಷ್ಕಲ್ಮಷಾಃ ಸ್ತ್ರಿಯಃ ॥೫॥

ಅರ್ಥ.—ಸೋಮನು ಅವರಿಗೆ ಶುಚಿತ್ವವನ್ನೂ ಗಂಧರ್ವನು ಮಧುರವಾದ ಧ್ವನಿಯನ್ನೂ ಅಗ್ನಿಯು ಸರ್ವನಿರ್ಮಲತ್ವವನ್ನೂ ಕೊಟ್ಟಿರುವರು. ಆದುದರಿಂದ ಸ್ತ್ರೀಯರು ಕಲ್ಮಷವಿಲ್ಲದವರಾಗಿರುವರು.

ಅತ್ರಿಸ್ಮೃತಿ, ಅಧ್ಯಾಯ ೫.

ಪೂರ್ವಂ ಸ್ತ್ರಿಯಃ ಸುರೈರ್ಭುಕ್ತಾಃ ಸೋಮಗಂಧರ್ವವಹ್ನಿಭಿಃ ।
ಭುಜ್ಯಂತೇ ಮಾನುಷೈಃ ಪಶ್ಚಾನ್ನೈತಾದುಷ್ಯಂತಿ ಕರ್ಹಿಚಿತ್ ॥೫॥
ವ್ಯಂಜನೇಷು ಚ ಜಾತೇಷು ಸೋಮೋ ಭುಂಕ್ತೇ ಚ ಕನ್ಯಕಾಮ್ ।
ಪಯೋಧರೇಷು ಗಂಧರ್ವೋ ರಜಸ್ಯಗ್ನಿಃ ಪ್ರತಿಷ್ಠಿತಃ ॥೬॥

ಅರ್ಥ.—ಸ್ತ್ರೀಯರು ಸೋಮ ಗಂಧರ್ವಾಗ್ನಿ ದೇವತೆಗಳಿಂದ ಮೊದಲು ಭೋಗಿಸಲ್ಪಡುವರು. ಅನಂತರ ಮನುಷ್ಯರಿಂದ ಭೋಗಿಸಲ್ಪಡುವರು. ಇದರಿಂದ ಸ್ತ್ರೀಯರು ಎಂದಿಗೂ ದೂಷಿತರಾಗುವುದಿಲ್ಲ. ಗುಹ್ಯ ಪ್ರದೇಶದಲ್ಲಿ ರೋಮವುಂಟಾಗಲು ಸೋಮನೂ, ಕುಚಗಳು ಬೆಳೆದ ಬಳಿಕ ಗಂಧರ್ವನೂ, ರಜೋದರ್ಶನವಾಗುತ್ತಲೇ ಅಗ್ನಿಯೂ ಕನ್ಯೆಯನ್ನು ಭೋಗಿಸುವರು.

ಇಲ್ಲಿ ಹೇಳಿರುವ ಗಂಧರ್ವಾಗ್ನಿಗಳ ಭೋಗಕಾಲಗಳೂ ಮೇಲೆ ಸಂವರ್ತ ಸ್ಮೃತಿಯಲ್ಲಿ ಹೇಳಲ್ಪಟ್ಟ ಭೋಗಕಾಲಗಳೂ ವ್ಯತ್ಯಾಸವಾಗಿರುವುವು.

ಋಗ್ವೇದ, ಮಂಡಲ ೧೦, ಸೂಕ್ತ ೮೫.

ಸೋಮಃ ಪ್ರಥಮೋ ವಿವಿದೇ ಗಂಧರ್ವೋ ವಿವಿದ ಉತ್ತರಃ ॥
ತೃತೀಯೋ ಅಗ್ನಿಷ್ಟೇ ಪತಿಸ್ತುರೀಯಸ್ತೇ ಮನುಷ್ಯಜಾಃ ॥೪೦॥
ಸೋಮೋದದದ್ಗಂಧರ್ವಾಯ ಗಂಧರ್ವೋ ದದದಗ್ನಯೇ ॥
ರಯಿಂ ಚ ಪುತ್ರಾಂಶ್ಚಾದಾದಗ್ನಿರ್ಮಹ್ಯಮಥೋ ಇಮಾಮ್ ॥೪೧॥

ಅರ್ಥ.—ಸೋಮನು ನಿನ್ನನ್ನು ಹೊಂದಿದನು, ಆಮೇಲೆ ಗಂಧರ್ವನು ಹೊಂದಿದನು, ನಿನಗೆ ಮೂರನೆಯ ಪತಿಯು ಅಗ್ನಿಯು, ನಾಲ್ಕನೆಯ ಪತಿಯು ಮನುಷ್ಯನು. ಸೋಮನು ಇವಳನ್ನು ಗಂಧರ್ವನಿಗೆ ಕೊಟ್ಟನು, ಗಂಧರ್ವನು ಅಗ್ನಿಗೆ ಕೊಟ್ಟನು, ಅನಂತರ ಅಗ್ನಿಯು ನನಗೆ ಇವಳನ್ನೂ ಧನವನ್ನೂ ಪುತ್ರರನ್ನೂ ಕೊಟ್ಟನು.

ಇವು ವಿವಾಹದಲ್ಲಿ ವರನು ವಧುವನ್ನು ಕುರಿತು ಹೇಳುವ ಮಂತ್ರಗಳು. ಕೃಷ್ಣಯಜುರ್ವೇದ, ಏಕಾಗ್ನಿಕಾಂಡ, ಪ್ರಪಾಠಕ ೧, ಖಂಡ ೩. ೧—೨ ಮೇಲಿನ ಮಂತ್ರಗಳೇ ಹೇಳಲ್ಪಟ್ಟಿವೆ.

ಸಾಮವೇದ, ಮಂತ್ರಬ್ರಾಹ್ಮಣ.

ಈ ಮಂತ್ರಗಳೇ ಹೇಳಲ್ಪಟ್ಟಿವೆ.

ಅಥರ್ವವೇದ ೧೪—೨.

ಸೋಮಸ್ಯ ಜಾಯಾ ಪ್ರಥಮಂ ಗಂಧರ್ವಸ್ತೇ ಪರಃ ಪತಿಃ ।
ತೃತೀಯೋ ಅಗ್ನಿಷ್ಟೇ ಪತಿಸ್ತುರೀಯಸ್ತೇ ಮನುಷ್ಯಜಾಃ ॥೩॥
ಸೋಮೋದದದ್ಗಂಧರ್ವಾಯ ಇತಿ ॥೪॥

ಅರ್ಥ.—ನೀನು ಮೊದಲು ಸೋಮನ ಹೆಂಡತಿ, ಅನಂತರ ಗಂಧರ್ವನು ನಿನ್ನ ಪತಿ, ಅಗ್ನಿಯು ನಿನಗೆ ಮೂರನೆಯ ಗಂಡನು, ಮನುಷ್ಯನಲ್ಲಿ ಹುಟ್ಟಿದವನು ನಿನಗೆ ನಾಲ್ಕನೆಯ ಗಂಡನು. ಸೋಮನು ಇವಳನ್ನು ಗಂಧರ್ವನಿಗೆ ಕೊಟ್ಟನು, ಎಂದು ಮೇಲೆ ಹೇಳಿರುವ ಪ್ರಕಾರ ಅರ್ಥಮಾಡಿಕೊಳ್ಳತಕ್ಕದು.

ಯಾಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ.

ಸೋಮಃ ಶೌಚಂ ದದೌ ಸ್ತ್ರೀಣಾಂ ಗಂಧರ್ವಶ್ಚ ಶುಭಾಂ ಗಿರಮ್ ॥
ಪಾವಕಃ ಸರ್ವಮೇಧ್ಯತ್ವಂ ಮೇಧ್ಯಾವೈ ಯೋಷಿತೋ ಹ್ಯತಃ ॥೭೧॥

ಅರ್ಥ.—ಸ್ತ್ರೀಯರಿಗೆ ಸೋಮನು ಶುಚಿತ್ವವನ್ನೂ ಗಂಧರ್ವನು ಶುಭವಾದ ವಾಕ್ಕನ್ನೂ ಅಗ್ನಿಯು ಸರ್ವಮೇಧ್ಯತ್ವವನ್ನೂ ಕೊಟ್ಟರು. ಆದುದರಿಂದ ಸ್ತ್ರೀಯರು ಪರಿಶುದ್ಧರಾಗಿರುವರು.

—ಮನುಸ್ಮೃತಿ, ಅಧ್ಯಾಯ ೯.

ದೇವದತ್ತಾಂ ಪತಿರ್ಭಾರ್ಯಾಂ ವಿಂದತೇ ನೇಚ್ಛಯಾತ್ಮನಃ ॥
ತಾಂ ಸಾಧ್ವೀಂ ಬಿಭೃಯಾನ್ನಿತ್ಯಂ ದೇವಾನಾಂ ಪ್ರಿಯಮಾಚರನ್ ॥೯೫॥

ಅರ್ಥ.—ಪತಿಯು ದೇವತೆಗಳಿಂದ ಕೊಡಲ್ಪಟ್ಟಂಥಾ ಭಾರ್ಯೆಯನ್ನು ಹೊಂದುವನು, ತನ್ನ ಇಚ್ಛೆಯಿಂದ ಹೊಂದುವುದಿಲ್ಲ. ದೇವತೆಗಳಿಗೆ ಪ್ರಿಯವಾದ್ದನ್ನು ಮಾಡುತ್ತಾ ಸಾಧ್ವಿಯಾದ ಆಕೆಯನ್ನು ಗಂಡನು ನಿರಂತರದಲ್ಲಿಯೂ ಪೋಷಣೆ ಮಾಡಬೇಕು.

ಈ ವಿಷಯದಲ್ಲಿ ಹೀಗೆಯೇ ಇನ್ನೂ ಅನೇಕ ವಚನಗಳಿರುವುವು. ಇವುಗಳಲ್ಲಿ ಹೀಗೆ ಸ್ತ್ರೀಯರನ್ನು ದೇವತೆಗಳು ಪರಿಗ್ರಹಿಸಿದ ಬಳಿಕ ಮನುಷ್ಯರಿಗೆ ಕೊಡುವರೆಂತಲೂ, ಆ ದೇವತೆಗಳು ಪರಿಗ್ರಹಿಸುವಾಗ ಸ್ತ್ರೀಯರು ಯೌವನ ಚಿಹ್ನೆಗಳುಳ್ಳವರಾಗಿರುವರೆಂತಲೂ ಹೇಳಿರುವುದರಿಂದ ಋತುಮತೀ ವಿವಾಹವು ಸೂಚಿತವಾಗುತ್ತದೆ.

ಪ್ರಕರಣ ೯.

ಸಾವಿತ್ರೀಕಾಲ.

ಸ್ತ್ರೀಯರಿಗೆ ಉಪನಯನ ಸ್ಥಾನದಲ್ಲಿ ವಿವಾಹವನ್ನು ವೈದಿಕ ಸಂಸ್ಕಾರವಾಗಿ ಇಟ್ಟುಕೊಳ್ಳಬಹುದೆಂದು ಕೆಲವರು ಶಾಸ್ತ್ರಕಾರರು ವಿಕಲ್ಪವನ್ನು ಅಪ್ಪಣೆಕೊಡಿಸಿರುವರು. ಹೇಗೆಂದರೆ—

ಮನುಸ್ಮೃತಿ, ಅಧ್ಯಾಯ ೨.

ವೈವಾಹಿಕೋ ವಿಧಿಃ ಸ್ತ್ರೀಣಾಂ ಸಂಸ್ಕಾರೋ ವೈದಿಕಃ ಸ್ಮೃತಃ ।
ಪತಿಸೇವಾ ಗುರೌ ವಾಸೋ ಗೃಹಾರ್ಥೋಽಗ್ನಿಪರಿಕ್ರಿಯಾ ॥೬೭॥

ಕುಲ್ಲೂಕಃ| ವಿವಾಹವಿಧಿರೇವ ಸ್ತ್ರೀಣಾಂ ವೈದಿಕಃ ಸಂಸ್ಕಾರಃ ಉಪನಯನಾಖ್ಯೋ ಮನ್ವಾದಿಭಿಃ ಸ್ಮೃತಃ| ಪತಿಸೇವೈವ ಗುರುಕುಲೇ ವಾಸೋ ವೇದಾಧ್ಯಯನರೂಪಃ । ಗೃಹಕೃತ್ಯಮೇವ ಸಾಯಂಪ್ರಾತಃ ಸಮಿದ್ಧೋಮರೂಪಾಗ್ನಿಪರಿಚರ್ಯಾ । ತಸ್ಮಾದ್ವಿವಾಹಾದೇರುಪನಯನಸ್ಥಾನೇ ವಿಧಾನಾದುಪನಯನಾದೇರ್ನಿವೃತ್ತಿರಿತಿ ॥

ಅರ್ಥ.—ಸ್ತ್ರೀಯರಿಗೆ ವೈವಾಹಿಕ ವಿಧಿಯು ವೈದಿಕ ಸಂಸ್ಕಾರವೆಂದೂ, ಪತಿಸೇವೆಯು ಗುರುಕುಲವಾಸವೆಂದೂ, ಗೃಹಕೃತ್ಯವು ಅಗ್ನಿಕಾರ್ಯವೆಂದೂ ತಿಳಿಯಲ್ಪಟ್ಟಿವೆ. ಕುಲ್ಲೂಕ ವ್ಯಾಖ್ಯಾನ.--ಸ್ತ್ರೀಯರಿಗೆ ವಿವಾಹವಿಧಿಯೇ ಉಪನಯನವೆಂದು ಹೆಸರುಳ್ಳ ವೈದಿಕ ಸಂಸ್ಕಾರವೆಂದು ಮನ್ವಾದಿಗಳಿಂದ ಸ್ಮರಿಸಲ್ಪಟ್ಟದೆ. ಪತಿಸೇವೆಯೇ ವೇದಾಧ್ಯಯನ ರೂಪವಾದ ಗುರುಕುಲವಾಸವೆಂದೂ, ಗೃಹಕೃತ್ಯವೇ ಸಾಯಂಕಾಲದಲ್ಲೂ ಪ್ರಾತಃಕಾಲದಲ್ಲೂ ಮಾಡಬೇಕಾದ ಸಮಿದ್ಧೋಮರೂಪವಾದ ಅಗ್ನಿಪೂಜೆಯೆಂದೂ ಭಾವಿಸಲ್ಪಟ್ಟದೆ. ಹೀಗೆ ಉಪನಯನ ಸ್ಥಾನದಲ್ಲಿ ವಿವಾಹಾದಿಗಳಿಗೆ ವಿಧಾನವಿರುವುದರಿಂದ, ಸ್ತ್ರೀಯರಿಗೆ ಉಪನಯನಾದಿಗಳನ್ನು ಮಾಡದೆ ಬಿಡಬಹುದು.

ಆದರೆ ಬೇರೆ ಕೆಲವರು ಶಾಸ್ತ್ರಕಾರರು ಸ್ತ್ರೀಯರಿಗೆ ಉಪನಯನಾದಿಕರ್ಮಗಳನ್ನೂ ವಿಧಿಸಿರುವರು. ಈ ವಿಷಯವನ್ನು ಇಲ್ಲಿ ಚರ್ಚಿಸ ಬೇಕಾದ ಪ್ರಕೃತವಿಲ್ಲ. ಸಾಮಾನ್ಯವಾಗಿ ಈಗ ಬಹು ವರ್ಷಗಳಿಂದಲೂ ದ್ವಿಜರು ಮನ್ವಾದಿಗಳಿಂದ ಹೇಳಲ್ಪಟ್ಟ ವಿಕಲ್ಪ ವಚನವನ್ನನುಸರಿಸಿ ಸ್ತ್ರೀಯರಿಗೆ ಉಪನಯನವಿಲ್ಲದೆ ವಿವಾಹವನ್ನು ಮಾಡುತ್ತಿರುವರು. ಹೀಗೆ ಉಪನಯನ ಸ್ಥಾನದಲ್ಲಿ ವಿವಾಹವನ್ನಿಟ್ಟುಕೊಂಡಿರುವುದರಿಂದ, ಶಾಸ್ತ್ರೋಕ್ತವಾದ ಉಪನಯನ ಕಾಲಾವಧಿಯೊಳಗಾಗಿ ಸ್ತ್ರೀಯರಿಗೆ

ಮದುವೆಮಾಡಬಹುದಾಗಿದೆ. ಆ ಅವಧಿಯಾದರೋ, ಬ್ರಾಹ್ಮಣರಿಗೆ ೧೬ ವರ್ಷಗಳ ಪರ್ಯಂತವೂ, ಕ್ಷತ್ರಿಯರಿಗೆ ೨೨ ವರ್ಷಗಳ ಪರ್ಯಂತವೂ, ವೈಶ್ಯರಿಗೆ ೨೪ ವರ್ಷಗಳ ಪರ್ಯಂತವೂ ಹೇಳಲ್ಪಟ್ಟಿರುವದು. ಇದಲ್ಲದೆ ಈ ಅವಧಿಗಳನ್ನು ವಿಾರಿದನಂತರವೂ ಶುದ್ಧಿಗೋಸ್ಕರ ಪ್ರಾಯಶ್ಚಿತ್ತವನ್ನು ಮಾಡಿಕೊಂಡು, ಆ ಬಳಿಕ ಉಪನಯನವನ್ನು ಮಾಡಿಕೊಳ್ಳಬಹುದೆಂದು ಶಾಸ್ತ್ರಕಾರರು ಅಪ್ಪಣೆಕೊಡಿಸಿರುವರು.

ಶಾಸ್ತ್ರವಿಧಿಯು ಹೀಗಿರುವುದರಿಂದ, ಬ್ರಾಹ್ಮಣ ಕ್ಷತ್ರಿಯ ವೈಶ್ಯಜಾತಿಗಳ ಸ್ತ್ರೀಯರಿಗೆ ಕ್ರಮವಾಗಿ ಹದಿನಾರು ಇಪ್ಪತ್ತೆರಡು ಇಪ್ಪತ್ತನಾಲ್ಕು ವರ್ಷಗಳ ಪರ್ಯಂತ ವಿವಾಹಮಾಡಲಿಕ್ಕೆ ಅವಕಾಶವುಂಟು. ಈ ಅವಧಿಗಳನ್ನು ವಿಾರಿದ ಬಳಿಕವೂ ಅವರಿಗೆ ಪ್ರಾಯಶ್ಚಿತ್ತಮಾಡಿ ಮದುವೆಮಾಡಬಹುದು. ಆದರೆ ಕೆಲವು ಶಾಸ್ತ್ರಕಾರರ ಮತಪ್ರಕಾರ, ಋತುಮತಿಗಳಾದ ಸ್ತ್ರೀಯರಿಗೆ ಸಾವಿತ್ರೀ ಕಾಲಾವಧಿಯೊಳಗಾಗಿ ವಿವಾಹವನ್ನು ಮಾಡಿದಾಗ್ಯೂ ಅವರಿಗೆ ಪ್ರಾಯಶ್ಚಿತ್ತಮಾಡಲೇಬೇಕಾಗಿರುವುದು. ಒಂದುವೇಳೆ ಆ ಅವಧಿಯೊಳಗಾಗಿ ಸ್ತ್ರೀಯರು ಋತುವಾಗದಿದ್ದರೆ ಪ್ರಾಯಶ್ಚಿತ್ತವು ಆವಶ್ಯಕವಿಲ್ಲ. ಹೀಗೆ ಈ ಶಾಸ್ತ್ರಕಾರರ ಮತಪ್ರಕಾರ ಋತುಮತಿಯಾಗದ ಬ್ರಾಹ್ಮಣಕನ್ಯೆಗೆ ಪ್ರಾಯಶ್ಚಿತ್ತವಿಲ್ಲದೆಯೂ ಋತುಮತಿಗೆ ಪ್ರಾಯಶ್ಚಿತ್ತ ಮಾಡಿಯೂ ಹದಿನಾರು ವರ್ಷಗಳು ತುಂಬುವದರೊಳಗಾಗಿ ವಿವಾಹವನ್ನು ಮಾಡಬಹುದು. ಹದಿನಾರು ವರ್ಷಗಳು ವಿಾರಿದ ಬಳಿಕ ಕನ್ಯೆಯು ಋತುವಾಗಿರಲಿ ಆಗದೆಇರಲಿ ಅವಳಿಗೆ ಪ್ರಾಯಶ್ಚಿತ್ತವನ್ನು ಮಾಡಿಯೇ ಮದುವೆ ಮಾಡಬೇಕಾಗುವುದು. ಹೀಗೆಯೇ ಕ್ಷತ್ರಿಯವೈಶ್ಯಕನ್ಯೆಯರು ಅವರಿಗೆ ಹೇಳಿರುವ ಅವಧಿಗಳಿಗನುಸಾರವಾಗಿ ನಡೆಯತಕ್ಕದು.

ಈಗ ಸಾವಿತ್ರೀಕಾಲಾವಧಿಯನ್ನು ಅಪ್ಪಣೆಕೊಡಿಸುವ ಕೆಲವು ಶಾಸ್ತ್ರವಚನಗಳು ಉದಾಹರಿಸಲ್ಪಡುವುವು.—

ಮನುಸ್ಮೃತಿ, ಅಧ್ಯಾಯ ೨.

ಆಷೋಡಶಾದ್ಬ್ರಾಹ್ಮಣಸ್ಯ ಸಾವಿತ್ರೀ ನಾತಿವರ್ತತೇ ।
ಆದ್ವಾವಿಂಶಾತ್ ಕ್ಷತ್ರಬಂಧೋರಾಚತುರ್ವಿಂಶತೇರ್ವಿಶಃ ॥ ೩೮ ॥
ಅತಊರ್ಧ್ವಂ ತ್ರಯೋಪ್ಯೇತೇ ಯಥಾಕಾಲಮಸಂಸ್ಕೃತಾಃ ।
ಸಾವಿತ್ರೀ ಪತಿತಾವ್ರಾತ್ಯಾ ಭವನ್ತ್ಯಾರ್ಯವಿಗರ್ಹಿತಾಃ ॥ ೩೯ ॥
ನೈತೈರಪೂತೈರ್ವಿಧಿವದಾಪದ್ಯಪಿ ಹಿ ಕರ್ಹಿಚಿತ್ ।
ಬ್ರಾಹ್ಮಾನ್ಯೌನಾಂಶ್ಚ ಸಂಬನ್ಧಾನಾಚರೇದ್ಬ್ರಾಹ್ಮಣಃ ಸಹ ॥ ೪೦ ॥

ಅಧ್ಯಾಯಃ ೧೧.

ಯೇಷಾಂ ದ್ವಿಜಾನಾಂ ಸಾವಿತ್ರೀ ನಾನೂಚ್ಯೇತ ಯಥಾವಿಧಿ ।
ತಾಂಶ್ಚಾರಯಿತ್ವಾ ತ್ರೀನ್ಕೃಚ್ಛ್ರಾನ್ಯಥಾ ವಿಧ್ಯುಪನಾಯಯೇತ್ ॥೧೯೧॥

ಕುಲ್ಲೂಕಃ | ಯೇಷಾಂ ಬ್ರಾಹ್ಮಣಕ್ಷತ್ರಿಯವಿಶಾಂ ಅನುಕಲ್ಪಿಕಕಾಲೇ ಉಪನಯನಂ ಯಥಾಶಾಸ್ತ್ರಂ ನ ಕೃತವಾನ್, ತಾನ್ಪ್ರಾಜಾಪತ್ಯತ್ರಯಂ ಕಾರಯಿತ್ವಾ ಯಥಾಶಾಸ್ತ್ರಮುಪನಯೇತ್ । ಯತ್ತು ಯಾಜ್ಞವಲ್ಕ್ಯಾದಿಭಿರ್ವ್ರಾತ್ಯಸ್ತೋಮಾದಿ ಪ್ರಾಯಶ್ಚಿತ್ತಮುಕ್ತಂ ತೇನ ಸಹಾಸ್ಯ ಗುರುಲಾಘವಮನುಸಂಧಾಯ ಜಾತಿಶಕ್ತ್ಯಾದ್ಯಪೇಕ್ಷೋ ವಿಕಲ್ಪೋ ಮಂತವ್ಯಃ ॥

ಅರ್ಥ.—ಬ್ರಾಹ್ಮಣನಿಗೆ ೧೬ ವರ್ಷಗಳ ಪರ್ಯಂತವೂ, ಕ್ಷತ್ರಿಯನಿಗೆ ೨೨ ವರ್ಷಗಳ ಪರ್ಯಂತವೂ, ವೈಶ್ಯನಿಗೆ ೨೪ ವರ್ಷಗಳ ಪರ್ಯಂತವೂ ಸಾವಿತ್ರಿಯು ಮೀರುವುದಿಲ್ಲ; ಎಂದರೆ ಉಪನಯನವು ಕಾಲ ಮೀರಿದ್ದಾಗುವುದಿಲ್ಲ. ಆ ಅವಧಿಯು ಕಳೆದ ಬಳಿಕ ಯಥಾಕಾಲದಲ್ಲಿ ಉಪನಯನ ಸಂಸ್ಕಾರವನ್ನು ಹೊಂದದ ಈ ಮೂರು ವರ್ಣಗಳವರೂ ಸಾವಿತ್ರೀಪತಿತರೂ ವ್ರಾತ್ಯರೂ ಆರ್ಯರಿಂದ ತಿರಸ್ಕೃತರೂ ಆಗುವರು. ಇವರು ವಿಧಿಪ್ರಕಾರ ಪ್ರಾಯಶ್ಚಿತ್ತವನ್ನು ಹೊಂದಿ ಶುದ್ಧರಾಗದಿದ್ದರೆ, ಇವರೊಂದಿಗೆ ಬ್ರಾಹ್ಮಣನು ಆಪತ್ಕಾಲದಲ್ಲಿಯೂ ಕೂಡ ವೇದಾಧ್ಯಯನಾದಿ ಸಂಬಂಧವನ್ನೂ ವಿವಾಹ ಸಂಬಂಧವನ್ನೂ ಎಂದಿಗೂ ಮಾಡಬಾರದು. ಯಾವ ದ್ವಿಜರಿಗೆ ಸಾವಿತ್ರಿಯು ಯಥಾವಿಧಿಯಾಗಿ ಹೇಳಲ್ಪಡಲಿಲ್ಲವೋ, ಅವರಿಂದ ಮೂರು ಕೃಚ್ಛ್ರಗಳನ್ನು ಮಾಡಿಸಿ ಅವರಿಗೆ ವಿಧಿಪ್ರಕಾರ ಉಪನಯನವನ್ನು ಮಾಡಬೇಕು.

ಕುಲ್ಲೂಕವ್ಯಾಖ್ಯಾನ—ಶಾಸ್ತ್ರಪ್ರಕಾರವಾಗಿ ಅನುಕಲ್ಪಿಕವಾದ ಕಾಲದಲ್ಲಿ ಉಪನಯನವಾಗದ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಂದ ಮೂರು ಪ್ರಾಜಾಪತ್ಯಗಳನ್ನು ಮಾಡಿಸಿ, ಅವರಿಗೆ ಯಥಾಶಾಸ್ತ್ರವಾಗಿ ಉಪನಯನಮಾಡಬೇಕು. ಯಾಜ್ಞವಲ್ಕ್ಯಾದಿಗಳಿಂದ ಹೇಳಲ್ಪಟ್ಟ ವ್ರಾತ್ಯಸ್ತೋಮಾದಿ ಪ್ರಾಯಶ್ಚಿತ್ತದೊಂದಿಗೆ ಈ ಪ್ರಾಯಶ್ಚಿತ್ತದ ಗೌರವಲಾಘವಗಳನ್ನು ಪರ್ಯಾಲೋಚಿಸಿ, ಜಾತಿಶಕ್ತ್ಯಾದ್ಯಪೇಕ್ಷಾನುಸಾರವಾದ ವಿಕಲ್ಪವನ್ನು ತಿಳಿಯತಕ್ಕದು.

ಆಶ್ವಲಾಯನ ಗೃಹ್ಯಸೂತ್ರ, ಅಧ್ಯಾಯ ೧, ಕಂಡಿಕೆ ೧೯.

ಆಷೋಡಶಾದ್ಬ್ರಾಹ್ಮಣಸ್ಯಾನತೀತಃ ಕಾಲಃ ॥ ೫ ॥ ಆದ್ವಾವಿಂಶಾತ್ ಕ್ಷತ್ರಿಯಸ್ಯಾಚತುರ್ವಿಂಶಾದ್ವೈಶ್ಯಸ್ಯಾತಊರ್ಧ್ವಂ ಪತಿತಸಾವಿತ್ರೀಕಾಭವಂತಿ॥೬

ಅರ್ಥ.—ಹದಿನಾರು ವರ್ಷಗಳ ಪರ್ಯಂತ ಬ್ರಾಹ್ಮಣನಿಗೆ ಸಾವಿತ್ರೀ ಕಾಲವು ಅತೀತವಾಗುವುದಿಲ್ಲ. ಕ್ಷತ್ರಿಯನಿಗೆ ಇಪ್ಪತ್ತೆರಡು ವರ್ಷಗಳ ಪರ್ಯಂತವೂ, ವೈಶ್ಯನಿಗೆ ಇಪ್ಪತ್ತನಾಲ್ಕು ವರ್ಷಗಳ ಪರ್ಯಂತವೂ ಉಪನಯನಕಾಲವು ಮೀರುವುದಿಲ್ಲ. ಆ ಅವಧಿಯು ಕಳೆದ ಬಳಿಕ ಅವರು (ಉಪನಯನವಿಲ್ಲದವರಾಗಿದ್ದರೆ) ಸಾವಿತ್ರೀಪತಿತರಾಗುವರು.

ಬೋಧಾಯನ ಧರ್ಮಶಾಸ್ತ್ರ, ಪ್ರಶ್ನ ೧, ಅಧ್ಯಾಯ ೨, ಕಂಡಿಕೆ ೩.

ಆಷೋಡಶಾದಾದ್ವಾವಿಂಶಾದಾಚತುರ್ವಿಂಶಾದಿತ್ಯನಾತ್ಯಯಃ ವಿಶಾಂ, ಕ್ರಮೇಣ ॥ ೧೨ ॥

ಅರ್ಥ.—ಕ್ರಮವಾಗಿ ಹದಿನಾರು ಇಪ್ಪತ್ತೆರಡು ಇಪ್ಪತ್ತನಾಲ್ಕು ವರ್ಷಗಳ ಪರ್ಯಂತ, ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಉಪನಯನ ಕಾಲವು ಮೀರುವುದಿಲ್ಲ.

ಶಂಖಸ್ಮೃತಿ, ಅಧ್ಯಾಯ ೨.

ಷೋಡಶಾಬ್ದಾನಿ ವಿಪ್ರಸ್ಯ ರಾಜನ್ಯಸ್ಯ ದ್ವಿವಿಂಶತಿಃ ॥ ೭ ॥
ವಿಂಶತಿಃ ಸಚತುಷ್ಕಾ ತು ವೈಶ್ಯಸ್ಯ ಪರಿಕೀರ್ತಿತಾ ।
ನಾತಿವರ್ತೇತ ಸಾವಿತ್ರೀಮತಊರ್ಧ್ವಂ ನಿವರ್ತತೇ ॥ ೮ ॥
ವಿಜ್ಞಾತವ್ಯಾಸ್ತ್ರಯೋಪ್ಯೇತೇ ಯಥಾಕಾಲಮಸಂಸ್ಕೃತಾಃ ।
ಸಾವಿತ್ರೀಪತಿತಾವ್ರಾತ್ಯಾಃ ಸರ್ವಧರ್ಮಬಹಿಷ್ಕೃತಾಃ ॥ ೯ ॥

ಅರ್ಥ.—ಬ್ರಾಹ್ಮಣನಿಗೆ ೧೬, ಕ್ಷತ್ರಿಯನಿಗೆ ೨೨, ವೈಶ್ಯನಿಗೆ ೨೪ ವರ್ಷಗಳ ಪರ್ಯಂತ ಸಾವಿತ್ರೀಕಾಲವು ಮೀರುವುದಿಲ್ಲ. ಆ ಬಳಿಕ ಅದು ಅತೀತವಾಗುವುದು. ಯುಕ್ತಕಾಲದಲ್ಲಿ ಸಂಸ್ಕೃತರಾಗದ ಈ ಮೂರು ವರ್ಣಗಳವರೂ ಸಾವಿತ್ರೀಪತಿತರಾಗಿಯೂ ವ್ರಾತ್ಯರಾಗಿಯೂ ಯಲ್ಲಾ ಧರ್ಮಗಳಿಂದ ಬಹಿಷ್ಕೃತರಾಗಿಯೂ ತಿಳಿಯಲ್ಪಡಬೇಕು.

ಆಪಸ್ತಂಬ ಧರ್ಮಸೂತ್ರ, ಪ್ರಶ್ನ ೧, ಪಟಲ ೧, ಖಂಡ ೧.

ಆಷೋಡಶಾದ್ಬ್ರಾಹ್ಮಣಸ್ಯಾನಾತ್ಯಯಆದ್ವಾವಿಂಶಾತ್ ಕ್ಷತ್ರಿಯಸ್ಯಾಚತುರ್ವಿಂಶಾದ್ವೈಶ್ಯಸ್ಯ ॥ ೨೭ ॥ ಅತಿಕ್ರಾಂತೇ ಸಾವಿತ್ರ್ಯಾಃ ಕಾಲೇ ಋತುಂ ತ್ರೈವಿದ್ಯಕಂ ಬ್ರಹ್ಮಚರ್ಯಂ ಚರೇತ್ ॥ ೨೮ ॥ ಅಥೋಪನಯನಂ ॥ ೨೯ ॥

ಅರ್ಥ.—ಬ್ರಾಹ್ಮಣನಿಗೆ ೧೬, ಕ್ಷತ್ರಿಯನಿಗೆ ೨೨, ವೈಶ್ಯನಿಗೆ ೨೪ ವರ್ಷಗಳ ಪರ್ಯಂತ ಸಾವಿತ್ರೀಕಾಲವು ಮೀರುವುದಿಲ್ಲ. ಆ ಕಾಲವು ಮೀರಿದಬಳಿಕ ಎರಡು ತಿಂಗಳ ಪರ್ಯಂತ ತ್ರೈವಿದ್ಯಕ ಬ್ರಹ್ಮಚರ್ಯವನ್ನು ಮಾಡಬೇಕು. ಆಮೇಲೆ ಉಪನಯನವನ್ನು ಮಾಡತಕ್ಕದು.

ವಾಸಿಷ್ಠ ಧರ್ಮಶಾಸ್ತ್ರ, ಅಧ್ಯಾಯ ೧೧.

ಆಷೋಡಶಾದ್ಬ್ರಾಹ್ಮಣಸ್ಯ ನಾತೀತಃ ಕಾಲಃ ॥ ೭೧ ॥ ಆದ್ವಾವಿಂಶಾತ್ ಕ್ಷತ್ರಿಯಸ್ಯ ॥ ೭೨ ॥ ಆಚತುರ್ವಿಂಶಾದ್ವೈಶ್ಯಸ್ಯ ॥ ೭೩ ॥ ಪತಿತಸಾವಿತ್ರೀಕ ಉದ್ದಾಲಕವ್ರತಂ ಚರೇತ್ ॥ ೭೬ ॥ ಅಶ್ವಮೇಧಾವಭೃಥಂಗಚ್ಛೇತ್ ॥ ೭೮ ॥ ವ್ರಾತ್ಯಸ್ತೋಮೇನ ವಾ ಯಜೇತ್ ॥ ೭೯ ॥

ಅರ್ಥ.—ಬ್ರಾಹ್ಮಣನಿಗೆ ೧೬, ಕ್ಷತ್ರಿಯನಿಗೆ ೨೨, ವೈಶ್ಯನಿಗೆ ೨೪ ವರ್ಷಗಳ ಪರ್ಯಂತ ಉಪನಯನಕಾಲವು ಮೀರುವುದಿಲ್ಲ. ಸಾವಿತ್ರೀಪತಿತನಾದವನು ಉದ್ದಾಲಕ ವ್ರತವನ್ನಾಚರಿಸಬಹುದು. ಅಥವಾ ಅಶ್ವಮೇಧದಲ್ಲಿ ಅವಭೃಥವನ್ನು ಹೊಂದಬಹುದು. ಅಥವಾ ವ್ರಾತ್ಯಸ್ತೋಮವನ್ನು ಮಾಡಿ ಶುದ್ಧನಾಗಬಹುದು.

ಯಾಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ.

ಆಷೋಡಶಾದಾದ್ವಾವಿಂಶಾಚ್ಚತುರ್ವಿಂಶಾಚ್ಚ ವತ್ಸರಾತ್ ।
ಬ್ರಹ್ಮಕ್ಷತ್ರವಿಶಾಂ ಕಾಲಔಪನಾಯನಿಕಃ ಪರಃ ॥ ೩೭ ॥
ಅತಊರ್ಧ್ವಂ ತ್ರಯೋಽಪ್ಯೇತೇ ಯಥಾಕಾಲಮಸಂಸ್ಕೃತಾಃ ।
ಸಾವಿತ್ರೀಪತಿತಾವ್ರಾತ್ಯಾವ್ರಾತ್ಯಸ್ತೋಮಾದೃತೇ ಕ್ರತೋಃ ॥ ೩೮ ॥

ಅರ್ಥ.—ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಹದಿನಾರು, ಇಪ್ಪತ್ತೆರಡು, ಇಪ್ಪತ್ತನಾಲ್ಕು ವರ್ಷಗಳ ಪರ್ಯಂತ ಉಪನಯನಕಾಲವಿರುವುದು. ಯಥಾಕಾಲದಲ್ಲಿ ಸಂಸ್ಕೃತರಾಗದ ಈ ಮೂರು ವರ್ಣಗಳವರು ಆ ಅವಧಿಯು ಮೀರಿದಬಳಿಕ ವ್ರಾತ್ಯಸ್ತೋಮವನ್ನು ಮಾಡದಿದ್ದರೆ ಸಾವಿತ್ರೀಪತಿತರೂ ವ್ರಾತ್ಯರೂ ಆಗುವರು.

ಹೀಗೆ ಈ ವಿಷಯದಲ್ಲಿ ಇನ್ನೂ ಅನೇಕ ಶಾಸ್ತ್ರವಚನಗಳಿರುವುವು. ಇವುಗಳಿಂದ ಬ್ರಾಹ್ಮಣ ಕ್ಷತ್ರಿಯ ವೈಶ್ಯರಿಗೆ ಕ್ರಮವಾಗಿ ಹದಿನಾರು, ಇಪ್ಪತ್ತೆರಡು, ಇಪ್ಪತ್ತನಾಲ್ಕು ವರ್ಷಗಳ ಪರ್ಯಂತ ಉಪನಯನಕ್ಕೆ ಅವಧಿಯಿದೆಯೆಂದೂ, ಅದನ್ನು ಮೀರಿದ ಬಳಿಕ ಅವರು ವ್ರಾತ್ಯಸ್ತೋಮಾದಿಗಳನ್ನು ಆಚರಿಸಿ, ಬೇಕಾದಾಗ ಉಪನಯನವನ್ನು ಮಾಡಿಕೊಳ್ಳಬಹುದೆಂದೂ ವ್ಯಕ್ತವಾಗುವುದು. ಸ್ತ್ರೀಯರಿಗೆ ಉಪನಯನಸ್ಥಾನದಲ್ಲಿ ವಿವಾಹವು ಹೇಳಲ್ಪಟ್ಟಿರುವುದರಿಂದ, ಮೇಲಿನ ವಚನಗಳ ಆಧಾರದಮೇಲೆ ಬ್ರಾಹ್ಮಣಾದಿ ಕನ್ಯೆಯರಿಗೆ ಕ್ರಮವಾಗಿ ಹದಿನಾರು, ಇಪ್ಪತ್ತೆರಡು, ಇಪ್ಪತ್ತನಾಲ್ಕು ವರ್ಷಗಳ ಪರ್ಯಂತ ವಿವಾಹಕ್ಕೆ ಕಾಲವಿದೆಯೆಂದು ಹೇಳಲವಕಾಶವುಂಟು. ಇದಲ್ಲದೆ ಆ ಅವಧಿಯು ಮೀರಿದಬಳಿಕವೂ ಕನ್ಯೆಯರಿಗೆ ಪ್ರಾಯಶ್ಚಿತ್ತಮಾಡಿ ಅನುಕೂಲವಾದಾಗ ಮದುವೆಮಾಡಬಹುದಾಗಿದೆ. ಬೇರೆ ಕೆಲವರು ಶಾಸ್ತ್ರಕಾರರ ಮತಾನುಸಾರವಾಗಿ ಅವರಿಗೆ ಪ್ರಾಯಶ್ಚಿತ್ತವಿಲ್ಲದೆಯೂ ವಿವಾಹವನ್ನು ಮಾಡಬಹುದಾಗಿದೆ.

ಪ್ರಕರಣ ೧೦.

ಗೃಹ್ಯ ಸೂತ್ರಗಳು.

ಗೃಹ್ಯಸೂತ್ರಗಳು ಉಪನಯನ ವಿವಾಹಾದಿ ಸಂಸ್ಕಾರಗಳನ್ನು ಬೋಧಿಸುವ ಶಾಸ್ತ್ರಗಳಾಗಿರುವುವು. ಮತ್ತು ಇವು ವೇದಮಂತ್ರಗಳನ್ನು ಎಲ್ಲೆಲ್ಲಿ ಪ್ರಯೋಗಿಸಬೇಕೆಂಬುದನ್ನೂ ತಿಳಿಸುವುವು. ಆದಪ್ರಯುಕ್ತ ಇವು ವೇದಗಳಷ್ಟು ಪ್ರಬಲವಾದ ಪ್ರಮಾಣಗಳಾಗಿವೆಯೆಂದು ಹೇಳಬಹುದು. ಇವುಗಳಲ್ಲಿ ಉಕ್ತವಾದ ವಿವಾಹ ಕರ್ಮಾಂಗಗಳಲ್ಲಿ ವರಣ, ಪಾಣಿಗ್ರಹಣ, ಸಪ್ತಪದಿ, ವರನ ಮನೆಗೆ ವಧುವಿನ ಪ್ರಯಾಣ, ಧ್ರುವಾರುಂಧತೀದರ್ಶನ, ತ್ರಿರಾತ್ರ ಬ್ರಹ್ಮಚರ್ಯ, ಸಮಾವೇಶನ- ಇವು ಯಥಾಕ್ರಮವಾಗಿ ವಿಧಿಸಲ್ಪಟ್ಟಿರುವುವು. ಹೀಗೆ ವಿವಾಹವು ವರಣದಿಂದ ಪ್ರಾರಂಭಿಸಿ ಸಮಾವೇಶನದಲ್ಲಿ ಮುಗಿಯುವುದು. ಸಮಾವೇಶನವೆಂದರೆ ಸಂಭೋಗಾರ್ಥವಾಗಿ ವಧೂವರರು ಜತೆಯಲ್ಲಿ ಮಲಗುವುದು.

ವಿವಾಹಸಮಾವೇಶನವೆಂತಲೂ ಋತುಸಮಾವೇಶನವೆಂತಲೂ ಸಮಾವೇಶನವು ಎರಡುಪ್ರಕಾರವಾಗಿರುವುದು, ವಿವಾಹಸಮಾವೇಶನವೆಂದರೆ, ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ವಧೂವರರು ಜತೆಯಲ್ಲಿ ಮಲಗಿಕೊಂಡು ಸಂಭೋಗಮಾಡುವುದು. ಋತುಸಮಾವೇಶನವೆಂದರೆ, ಪತ್ನಿಯು ಋತುವಾಗಿ ಎರೆದುಕೊಂಡ ದಿವಸದಿಂದ ಹದಿನಾರು ರಾತ್ರಿಗಳ ಪರ್ಯಂತ ಪತಿಯು ಆಕೆಯಲ್ಲಿ ಸಂಭೋಗಮಾಡುವುದು. ಸ್ತ್ರೀಯು ಋತುವಾಗಿ ಎರೆದುಕೊಂಡ ದಿವಸದಿಂದ ಹದಿನಾರು ದಿವಸಗಳ ಪರ್ಯಂತ ಋತುಕಾಲವೆನ್ನಿಸುವುದು. ಈಯೆರಡು ಬಗೆಯ ಸಮಾವೇಶನಗಳಲ್ಲಿ ಹೇಳತಕ್ಕ ಮಂತ್ರಗಳೂ ಬೇರೆಬೇರೆಯಾಗಿರುವುವು.

ದೈವಯೋಗದಿಂದ ವಿವಾಹದ ನಾಲ್ಕನೆಯ ದಿವಸದಲ್ಲಿ ವಧುವಿಗೆ ಇನ್ನೂ ಋತುಕಾಲವು ಇದ್ದದ್ದೇ ಆದರೆ ಆಗ ಆಯೆರಡುವಿಧವಾದ ಮಂತ್ರಗಳನ್ನೂ ಹೇಳಿ ಸಂಭೋಗಮಾಡಬೇಕೆಂದು ಕೆಲವು ಶಾಸ್ತ್ರಕಾರರ ಮತವಾಗಿರುವುದು. ವಿವಾಹಸಮಾವೇಶನಕ್ಕೆ ಮೊದಲು ವಧೂವರರು ಉಪ್ಪುಕಾರವಿಲ್ಲದ ಆಹಾರವನ್ನು ಸೇವಿಸುತ್ತಾ ಮೂರು ರಾತ್ರಿಗಳ ಪರ್ಯಂತ ಬ್ರಹ್ಮಚರ್ಯವ್ರತವನ್ನಾಚರಿಸಬೇಕು. ಎಂದರೆ ಇಬ್ಬರೂ ಜತೆಯಲ್ಲಿ ಮಲಗಿಕೊಂಡಿದ್ದಾಗ್ಯೂ ಸಂಭೋಗವನ್ನು ಬಿಡಬೇಕು. ಆಮೇಲೆ ನಾಲ್ಕನೆಯ ರಾತ್ರಿಯಲ್ಲಿ ಅವರು ಸಂಭೋಗಮಾಡತಕ್ಕದು, ಗೃಹ್ಯಸೂತ್ರಕಾರರು ಹೀಗೆ ಅಪ್ಪಣೆಕೊಡಿಸಿರುವುದರಿಂದ, ಋತುಮತೀವಿವಾಹವು ನಿಸ್ಸಂದೇಹವಾಗಿ ಶಾಸ್ತ್ರಸಮ್ಮತವಾಗಿರುವುದೆಂದು ಹೇಳಬೇಕಾಗುತ್ತದೆ. ಈ ಅರ್ಥವನ್ನು ದೃಢೀಕರಿಸುವುದಕ್ಕಾಗಿ ಇಲ್ಲಿ ಕೆಲವು ಗೃಹ್ಯಸೂತ್ರಗಳು ಉದಾಹರಿಸಲ್ಪಡುವುವು.

ಆಪಸ್ತಂಬಗೃಹ್ಯಸೂತ್ರ, | ಕೃಷ್ಣಯಜುರ್ವೇದಶಾಖೆ, ಪಟಲ ೨, ಖಂಡ ೪.

ಸುಹೃದಸ್ಸಮವೇತಾನ್ಮಂತ್ರವತೋ ವರಾನ್ ಪ್ರಹಿಣುಯಾತ್ ॥೧॥ ಅಥಾಸ್ಯೈ ದಕ್ಷಿಣೇನ ನೀಚಾ ಹಸ್ತೇನ ದಕ್ಷಿಣಮುತ್ತಾನಂ ಹಸ್ತಂ ಗೃಹ್ಣೀಯಾತ್ ॥ ೧೧ ॥

ಖಂಡ ೫.

ಅಥೈನಾಮುತ್ತರೇಣಾಗ್ನಿಂ ದಕ್ಷಿಣೇನ ಪದಾಶ್ಮಾನಮಾಸ್ಥಾಪಯತ್ಯಾತಿಷ್ಠೇತಿ ॥ ಪರಿಷೇಚನಾಂತಂ ಕೃತ್ವೋತ್ತರಾಭ್ಯಾಂ ಯೋಕ್ತ್ರಂ ವಿಮುಚ್ಯ ತಾಂ ತತಃಪ್ರವಾವಾಹಯೇತ್ಪ್ರವಾಹಾರಯೇತ್ ॥ ೧೩ ॥ ಸಮೋಪ್ಯೈತಮಗ್ನಿಮನುಹರಂತಿ ॥ ೧೪ ॥

ಖಂಡ ೬.

ಲೋಹಿತಂ ಚರ್ಮಾನಡುಹಂ ಪ್ರಾಚೀನಗ್ರೀವಮುತ್ತರಲೋಮ ಮಧ್ಯೇಗಾರಸ್ಯೋತ್ತರಯಾಸ್ತೀರ್ಯ ಗೃಹಾನ್ಪ್ರಪಾದಯನ್ನುತ್ತರಾಂ ವಾಚಯತಿ ದಕ್ಷಿಣೇನ ಪದಾ ॥ ೮ ॥ ಉದಿತೇಷು ನಕ್ಷತ್ರೇಷು ಪ್ರಾಚೀಮುದೀಚೀಂ ವಾ ದಿಶಮುಪನಿಷ್ಕ್ರಮ್ಯ ಉತ್ತರಾಭ್ಯಾಂ ಯಥಾಲಿಂಗಂ ಧ್ರುವಮರುಂಧತೀಂ ಚ ದರ್ಶಯತಿ ॥ ೧೨ ॥

ಪಟಲ ೩, ಖಂಡ ೮.

ಏತದಹರ್ವಿಜಾನೀಯಾದ್ಯದಹರ್ಭಾರ್ಯಾಮಾವಹತೇ ॥ ೭ ॥ ತ್ರಿರಾತ್ರಮುಭಯೋರಧಶ್ಶಯ್ಯಾ ಬ್ರಹ್ಮಚರ್ಯಂ ಕ್ಷಾರಲವಣವರ್ಜನಂ ಚ ॥ ೮ ॥

ಸುದರ್ಶನವ್ಯಾಖ್ಯಾನಂ—ಉಭಯೋರ್ದಮ್ಪತ್ಯೋಃ ಸ್ಥಾಲೀಪಾಕಾದಾರಭ್ಯ ತ್ರಿರಾತ್ರಮಧಶ್ಶಯ್ಯಾ ಸ್ಯಾತ್, ನ ತು ಖಟ್ವಾದೌ । ನಾಪಿ ಪೃಥಕ್ಶಯ್ಯಾ ಉಭಯೋರಿತಿ ಗ್ರಹಣಾತ್। ತಥಾಷ್ಟಾಂಗ ಮೈಥುನವರ್ಜನಲಕ್ಷಣಂ ಬ್ರಹ್ಮಚರ್ಯಂ ಸ್ಯಾತ್ । ಏತಚ್ಚ ಸ್ಥಾಲೀಪಾಕಾತ್ಪ್ರಾಗಪ್ಯಧ್ವನಿ। ಅತಏವಾತ್ರಸೂತ್ರೇ ಶಯ್ಯೈಕ್ಯಾದ್ದುರ್ವಾರಮಪಿ ಮೈಥುನಮತಿಪ್ರಯತ್ನೇನ ವರ್ಜನೀಯಮಿತ್ಯೇವಮರ್ಥಸ್ತನ್ನಿಷೇಧಃ । ತಥೈವ ಕ್ಷಾರಲವಣವರ್ಜನಂ ಚ ಸ್ಯಾತ್ ॥

ತಯೋಶ್ಶಯ್ಯಾಮಂತರೇಣ ದಂಡೋ ಗಂಧಲಿಪ್ತೋ ವಾಸಸಾ ಸೂತ್ರೇಣ ವಾ ಪರಿವೀತಸ್ತಿಷ್ಠತಿ ॥ ೯ ॥

ಸುದರ್ಶನವ್ಯಾಖ್ಯಾನಂ - ತಸ್ಯಾಏವ ಮಧ್ಯೇ ನ ತು ತ್ರಿರಾತ್ರಾದೂರ್ಧ್ವಂ। ಆಸ್ಮಿಂಶ್ಚ ದಂಡೇ ಗಂಧರ್ವೋ ವಿಶ್ವಾವಸುರ್ಭಾವಯಿತವ್ಯಃ. ಉದೀರ್ಷ್ವಾತೋ ವಿಶ್ವಾವಸೋ ಇತಿ ಮಂತ್ರಲಿಂಗಾತ್. ತಂ ಚತುರ್ಥ್ಯಾಮಪರರಾತ್ರಉತ್ತರಾಭ್ಯಾಮುತ್ಥಾಪ್ಯ ಪ್ರಕ್ಷಾಳ್ಯ ನಿಧಾಯಾಗ್ನೇರುಪಸಮಾಧಾನಾದ್ಯಾಜ್ಯಭಾಗಾಂತೇ ಸ್ವಾರ

ಬದ್ಧಯಾಮುತ್ತರಾಆಹುತೀರ್ಹುತ್ವಾ ಜಯಾದಿ ಪ್ರತಿಪದ್ಯತೇ ಪರಿಷೇಚನಾಂತಂ ಕೃತ್ವಾಪರೇಣಾಗ್ನಿಂ ಪ್ರಾಚೀಮುಪವೇಶ್ಯ ತಸ್ಯಾಶ್ಶಿರಸ್ಯಾಜ್ಯಶೇಷಾದ್ವ್ಯಾಹೃತಿಭಿರೋಂಕಾರಚತುರ್ಥಾಭಿರಾನೀಯೋತ್ತರಾಭ್ಯಾಂ ಯಥಾಲಿಂಗಂ ಮಿಥಸ್ಸಮೀಕ್ಷ್ಯೋತ್ತರಯಾಜ್ಯಶೇಷೇಣ ಹೃದಯದೇಶೌ ಸಂಮೃಜ್ಯೋತ್ತರಾಸ್ತಿಸ್ರೋ ಜಪಿತ್ವಾ ಶೇಷಂ ಸಮಾವೇಶನೇ ಜಪೇತ ॥೧೦॥

ದಂಡೋತ್ಥಾಪನಮಂತ್ರಃ.— ಉದೀರ್ಷ್ವಾತೋ ವಿಶ್ವಾವಸೋ ನಮಸೇಡಾಮಹೇ ತ್ವಾ । ಅನ್ಯಾಮಿಚ್ಛ ಪ್ರಫರ್ವ್ಯಂ ಸಂಜಾಯಾಂ ಪತ್ಯಾ ಸೃಜ॥ ಉದೀರ್ಷ್ವಾತಃ ಪತಿವತೀ ಹ್ಯೇಷಾ ವಿಶ್ವಾವಸುಂ ನಮಸಾ ಗೀರ್ಭಿರೀಟ್ಟೇ । ಅನ್ಯಾಮಿಚ್ಛ ಪಿತೃಷದಂ ವ್ಯಕ್ತಾಂ ಸತೇ ಭಾಗೋ ಜನುಷಾ ತಸ್ಯ ವಿದ್ಧಿ ॥

ಸಮೀಕ್ಷಣಮಂತ್ರೌ.— ಅಪಶ್ಯಂ ತ್ವಾ ಮನಸಾ ಚೇಕಿತಾನಂ ತಪಸೋ ಜಾತಂ ತಪಸೋ ವಿಭೂತಮ್ । ಇಹ ಪ್ರಜಾಮಿಹ ರಯಿಂ ರರಾಣಃ ಪ್ರಜಾಯಸ್ವ ಪ್ರಜಯಾ ಪುತ್ರಕಾಮ॥ ಅಪಸ್ಯಂ ತ್ವಾ ಮನಸಾ ದೀಧ್ಯಾನಾಂ ಸ್ವಾಯಾಂ ತನೂಂ ಋತ್ವಿಯೇ ನಾಥಮಾನಾಮ್ । ಉಪ ಮಾಮುಚ್ಚಾ ಯುವತಿರ್ಬಭೂಯಾಃ ಪ್ರಜಾಯಸ್ವ ಪ್ರಜಯಾ ಪುತ್ರಕಾಮೇ ॥

ವಿವಾಹ ಸಮಾವೇಶನ ಮಂತ್ರಾಃ.- ಆರೋಹೋರುಮುಪಬರ್ಹಸ್ವ ಬಾಹುಂ ಪರಿಷ್ವಜಸ್ವ ಜಾಯಾಂ ಸುಮನಸ್ಯಮಾನಃ। ತಸ್ಯಾಂ ಪುಷ್ಯತಂ ಮಿಥುನೌ ಸಯೋನೀಬಹ್ವೀಂ ಪ್ರಜಾಂ ಜನಯಂತೌ ಸರೇತಸಾ ॥ ಇತ್ಯಾದಯಃ ॥

ಸುದರ್ಶನ ವ್ಯಾಖ್ಯಾನಂ.— ಶೇಷಮನುವಾಕಶೇಷಂ ಆರೋಹೋರುಂ ಇತ್ಯಾದಿಕಂ ಸಮಾವೇಶನೇ ಸಮಾವೇಶನಕಾಲೇ ಜಪೇತ್ । ಸಮಾವೇಶನಂ ಚ ವಧ್ವಾ ಸಹ ಮೈಥುನಾರ್ಥಂ ಶಯನಂ, ಋತುಸಮಾವೇಶನಇತ್ಯತು ಲಿಂಗಾತ್। ಏತಚ್ಚರಾಗ ಪ್ರಾಪ್ತಸಮಾವೇಶನಾಶ್ರಿತಂ ವಿವಾಹಕರ್ಮಾರ್ಥಂ ಕ್ರಮಜಪಯೋರ್ವಿಧಾನಮ್ । ಕೇಚಿತ್ ಅಸತ್ಯಪಿ ರಾಗೇ ಕರ್ಮಾರ್ಥಮಸ್ಮಿನ್ಕ್ರಮೇ ಸಮಾವೇಶನಂ ನಿಯತಮೇವೇತಿ । ಸಮಾವೇಶನಾಂತರೇಷುತು ಅಕರ್ಮಾರ್ಥತ್ವಾದೇವ ನಾಯಂ ಜಪಃ । ಬೋಧಾಯನೇನ ತು ವಿಕಲ್ಪೋಭಿ ಹಿತಃ. ಸರ್ವಾಣ್ಯುಪಗಮನಾನಿ ಮಂತ್ರವಂತೀತಿ ಬೋಧಾಯನೋ ಯಜ್ಞಾದೌ ಯಜ್ಞತಾವಿತಿ ಶಾಲಿಕಿಃ, ಇತಿ ಅಸ್ಮಿನ್ನೇವ ಕ್ರಮೇ ಯದಿ ದೈವಾದೃತುಗಮನಮುಪಿಕರ್ತವ್ಯಂ ಸ್ಯಾತ್ತದಾ ಪೂರ್ವಂ ಆರೋಹೋರುಂ ಇತ್ಯಾದಿಜಪಃ । ತತೋವಿಷ್ಣುರ್ಯೋನಿಂ ಇತ್ಯಾದಿಭಿರಭಿಮಂತ್ರಣಮ್ ॥ ಯದಾ ಮಲವದ್ವಾಸಾಃ ಸ್ಯಾದಥೈನಾಂ ಬ್ರಾಹ್ಮಣ ಪ್ರತಿಷಿದ್ಧಾನಿ ಕರ್ಮಾಣಿ ಸಂಶಾಸ್ತಿ ಯಾಂ ಮಲವದ್ವಾಸಸಮಿತ್ಯೇತಾನಿ ॥ ೧೧ ॥

ಸುದರ್ಶನವ್ಯಾಖ್ಯಾನಂ.— ಅಥ ತಾನಿ ಸುಗ್ರಹಾರ್ಥಂ ಕ್ರಮೇಣೋಚ್ಯಂತೇ। ನ ಸ್ನಾನಾತ್ಪೂರ್ವಂ ಮೈಥುನಮ್ । ಅಪೂರ್ಣೇ ತ್ರಿರಾತ್ರೇ ನ ಸ್ನಾನಮ್ ನ ತೈಲಾಭ್ಯಂಜನಮ್ । ಇತ್ಯಾದೀನಿ ॥

ರಜಸಃ ಪ್ರಾದುರ್ಭಾವಾತ್ ಸ್ನಾತಾಮೃತುಸಮಾವೇಶನಉತ್ತರಾಭಿರಭಿಮಂತ್ರಯತೇ ॥೧೩॥

ಸುದರ್ಶನವ್ಯಾಖ್ಯಾನಂ — ಉತ್ತರಾಭಿಃ ವಿಷ್ಣುರ್ಯೋನಿಂಕಲ್ಪಯತು ಇತ್ಯಾದಿಭಿಸ್ತ್ರಯೋದಶಭಿರಭಿಮಂತ್ರಯತೇ ।

ಖಂಡ ೯. ಚತುರ್ಥೀಪ್ರಭೃತ್ಯಾಷೋಡಶೀಮುತ್ತರಾಮುತ್ತರಾಂ ಯುಗ್ಮಾಂ ಪ್ರಜಾನಿಶ್ರೇಯಸಮೃತುಗಮನಇತ್ಯುಪದಿಶಂತಿ ॥೧॥

ಅರ್ಥ.—ವರನು ಸಭೆಕೂಡಿರುವ ಮಂತ್ರಬಲ್ಲಸ್ನೇಹಿತರನ್ನು ವರಣಾರ್ಥವಾಗಿ (ಎಂದರೆ ಹೆಣ್ಣನ್ನು ಗೊತ್ತುಮಾಡಿಕೊಂಡು ಬರುವುದಕ್ಕಾಗಿ ಹೆಣ್ಣಿನ ತಂದೆಯ ಬಳಿಗೆ) ಕಳುಹಿಸಬೇಕು. ಅನಂತರ ವರನು ಅಂಗೈ ಕೆಳಗಾದ ತನ್ನ ಬಲಗೈಯಿಂದ ಅಂಗೈ ಮೇಲಾದ ವಧುವಿನ ಬಲಗೈಯನ್ನು ಹಿಡಿದುಕೊಳ್ಳಬೇಕು, (ಇದೇ ಪಾಣಿಗ್ರಹಣ ಕರ್ಮ. ಆಮೇಲೆ) 'ಆತಿಷ್ಠ' ಎಂಬ ಮಂತ್ರವನ್ನು ಹೇಳಿ, ಅಗ್ನಿಗೆ ಉತ್ತರದಲ್ಲಿ ಕಲ್ಲಿನಮೇಲೆ ಬಲಪಾದವನ್ನೂರಿಸಿ ವಧುವನ್ನು ನಿಲ್ಲಿಸುವನು. (ಇದು ಸಪ್ತಪದೀಕರ್ಮ.) ಪರಿಷೇಚನಾಂತವಾಗಿ ಹವನವನ್ನು ಮುಗಿಸಿ ಯೋಕ್ತ್ರವನ್ನು ಬಿಚ್ಚಿ ಅನಂತರ ವಧುವನ್ನು ಯಾನದಲ್ಲಾಗಲೀ ವಾಹನದಮೇಲಾಗಲೀ ಕೂಡಿಸಿಕೊಂಡು (ತನ್ನ ಮನೆಗೆ) ಕರೆದುಕೊಂಡು ಹೋಗುವನು. ವಿವಾಹಾಗ್ನಿಯನ್ನು ಅಗ್ನಿಷ್ಟಿಕೆಯಲ್ಲಿಟ್ಟು ಹಿಂದುಗಡೆ ತೆಗೆದುಕೊಂಡು ಬರುವರು. ವರನು ಮಂತ್ರವನ್ನು ಹೇಳಿ (ತನ್ನ) ಮನೆಯ ಮಧ್ಯದಲ್ಲಿ ಕೆಂಪೆತ್ತಿನ ಚರ್ಮವನ್ನು ಕುತ್ತಿಗೆ ಪೂರ್ವವಾಗಿಯೂ ರೋಮವು ಮೇಲಾಗಿಯೂ ಇರುವಂತೆ ಹಾಸಿ ವಧುವನ್ನು ಬಲಗಾಲು ಮುಂದಾಗಿ ಗೃಹಪ್ರವೇಶಮಾಡಿಸಿ ಅವಳಿಂದ ಮಂತ್ರವನ್ನು ಹೇಳಿಸುವನು. ನಕ್ಷತ್ರೋದಯವಾದಮೇಲೆ ವರನು ಪೂರ್ವದಿಕ್ಕಿಗಾಗಲಿ ಉತ್ತರದಿಕ್ಕಿಗಾಗಲಿ ಬಂದು ಮಂತ್ರಪೂರ್ವಕವಾಗಿ ಧ್ರುವನಕ್ಷತ್ರವನ್ನೂ ಅರುಂಧತೀನಕ್ಷತ್ರವನ್ನೂ ವಧುವಿಗೆ ತೋರಿಸುವನು. ವರನು ವಧುವನ್ನು ತನ್ನ ಮನೆಗೆ ಕರೆದುಕೊಂಡು ಬಂದ ದಿವಸವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಮೂರು ರಾತ್ರಿಗಳ ಪರ್ಯಂತ ವಧೂವರರು ಕ್ಷಾರ ಲವಣಗಳನ್ನು ಬಿಟ್ಟು ಬ್ರಹ್ಮಚರ್ಯದಿಂದ ನೆಲದಮೇಲೆ ಮಲಗಬೇಕು.

ಸುದರ್ಶನ ವ್ಯಾಖ್ಯಾನ.—ಸ್ಥಾಲೀಪಾಕ ಮೊದಲುಗೊಂಡು ಮೂರುರಾತ್ರಿಗಳ ಪರ್ಯಂತ ದಂಪತಿಗಳು ನೆಲದಮೇಲೆ ಮಲಗಬೇಕು. ಮಂಚ ಮುಂತಾದವುಗಳ ಮೇಲೆ ಮಲಗಬಾರದು. ಉಭಯಶಬ್ದ ಪ್ರಯೋಗವಿರುವುದರಿಂದ, ಅವರಿಬ್ಬರೂ ಬೇರೆ ಬೇರೆಯಾಗಿ ಮಲಗದೆ ಜೊತೆಯಲ್ಲಿಯೇ ಮಲಗಬೇಕೆಂದು ತಾತ್ಪರ್ಯವು. ಹಾಗೆಯೇ ಬ್ರಹ್ಮಚರ್ಯಶಬ್ದವು ಅಷ್ಟಾಂಗ ಮೈಥುನ ವರ್ಜನವನ್ನು ಸೂಚಿಸುವುದು. ಸ್ಥಾಲೀಪಾಕಪೂರ್ವದಲ್ಲಿಯೂ ವರನು ವಧುವಿನೊಡನೆ ತನ್ನ ಮನೆಗೆ ಬರುವಾಗ ದಾರಿಯಲ್ಲಿಯೂ ಬ್ರಹ್ಮಚರ್ಯವನ್ನಾಚರಿಸಬೇಕು. ಹಾಸಿಗೆಯು ಒಂದೇ ಆದುದರಿಂದ ಮೈಥುನವನ್ನು ಬಿಡಲು ಕಷ್ಟವಾದಾಗ್ಯೂ ಕೂಡ ಅತಿಪ್ರಯತ್ನದಿಂದ ಅದನ್ನು

ಬಿಡಬೇಕೆಂದು ನಿಷೇಧಿಸುವುದೇ ಈ ಸೂತ್ರದ ಅರ್ಥವು. ಇದಕ್ಕೋಸ್ಕರವೇ ಕ್ಷಾರ ಲವಣವರ್ಜನವೂ ಹೇಳಲ್ಪಟ್ಟಿದೆ.

ಸೂತ್ರ.—ಹಾಸಿಗೆಯಮೇಲೆ ದಂಪತಿಗಳ ಮಧ್ಯದಲ್ಲಿ ಗಂಧಲಿಪ್ತವಾಗಿಯೂ ಮತ್ತು ಬಟ್ಟೆಯಿಂದಾಗಲೀ ದಾರದಿಂದಾಗಲೀ ಸುತ್ತಲ್ಪಟ್ಟದಾಗಿಯೂ ಇರುವಂಥ ಒಂದು ಕಡ್ಡಿಯು ಇರುವುದು.

ಸುದರ್ಶನವ್ಯಾಖ್ಯಾನ.—ಈ ಕಡ್ಡಿಯು ಅವರ ಮಧ್ಯದಲ್ಲಿ ಮೂರು ರಾತ್ರಿಗಳಾದಮೇಲೆ ಇರಕೂಡದು. 'ವಿಶ್ವಾವಸುವೆ! ಎದ್ದು ಹೋಗು' ಎಂದು ಮಂತ್ರದಲ್ಲಿ ಸೂಚಿತವಾಗಿರುವುದರಿಂದ, ಈ ದಂಡದಲ್ಲಿಯೇ ವಿಶ್ವಾವಸುವೆಂಬ ಗಂಧರ್ವನಿರುವನೆಂದು ಭಾವಿಸಬೇಕು.

ಸೂತ್ರ.—ನಾಲ್ಕನೆಯ ರಾತ್ರಿ ಕಡೆಯ ಯಾಮದಲ್ಲಿ ವರನು ಎರಡುಮಂತ್ರಗಳನ್ನು ಹೇಳಿ ದಂಡವನ್ನು ತೊಳೆದು ಆಚೆಗೆ ಇಡುವನು. ಆಗ ಅಗ್ನಿಗೆ ಸಮಿತ್ತುಗಳನ್ನು ಹಾಕಿ ಆಜ್ಯಭಾಗವು ಮುಗಿದ ಬಳಿಕ ವಧುವು ವರನನ್ನು ಹಿಡಿದುಕೊಳ್ಳುವಳು. ವರನು ಮಂತ್ರಗಳನ್ನು ಹೇಳುತ್ತಾ ಜಯಾದಿ ಹೋಮಗಳನ್ನು ಮಾಡುವನು. ಆಮೇಲೆ ಆಕೆಯನ್ನು ಅಗ್ನಿಗೆ ಪಶ್ಚಿಮದಲ್ಲಿ ಪೂರ್ವಾಭಿಮುಖವಾಗಿ ಕೂಡಿಸಿ ವ್ಯಾಹೃತಿ ಓಂಕಾರಗಳಿಂದ ಆಕೆಯ ತಲೆಯಮೇಲೆ ಆಹುತಿಶೇಷವಾದ ತುಪ್ಪವನ್ನು ಸೇಚನಮಾಡುವನು. ಆಬಳಿಕ ಅವರಿಬ್ಬರೂ ಮಂತ್ರವನ್ನು ಹೇಳುತ್ತಾ ಒಬ್ಬರನ್ನೊಬ್ಬರು ನೋಡುವರು. ಆಮೇಲೆ ವರನು ತುಪ್ಪವನ್ನು ತಮ್ಮಿಬ್ಬರ ಹೃದಯದೇಶಗಳಿಗೂ ಹಚ್ಚುವನು. ಅನಂತರ ಮೂರು ಮಂತ್ರಗಳನ್ನು ಸಮಾವೇಶನದಲ್ಲಿ—ಎಂದರೆ ಸಂಭೋಗಾರ್ಥವಾಗಿ ವಧುವಿನ ಜೊತೆಯಲ್ಲಿ ಮಲಗಿದಾಗ, ಜಪಿಸುವನು.

ದಂಡವನ್ನು ತೆಗೆಯುವಾಗ ಹೇಳುವ ಮಂತ್ರ.—ಎಲೈ ವಿಶ್ವಾವಸುವೆ, ಈ ಹಾಸಿಗೆಯಿಂದ ಏಳು. ನಿನಗೆ ನಮಸ್ಕಾರ ಮಾಡಿ ಸ್ತೋತ್ರವನ್ನು ಮಾಡುತ್ತೇವೆ. ಒಳ್ಳೇ ಜಘನವುಳ್ಳ ಇನ್ನೊಬ್ಬಳನ್ನು ಹುಡುಕಿಕೊಳ್ಳುವವನಾಗು. ಈ ಹೆಂಡತಿಯನ್ನು ಗಂಡನಾದ ನನ್ನೊಂದಿಗೆ ಬಿಡು. ಈ ಹಾಸಿಗೆಯಿಂದೇಳು. ಇವಳು ಗಂಡನುಳ್ಳವಳಲ್ಲವೆ! ವಿಶ್ವಾವಸುವಾದ ನಿನ್ನನ್ನು ನಮಸ್ಕಾರದಿಂದಲೂ ಸ್ತುತಿಗಳಿಂದಲೂ ಯಾಚಿಸುತ್ತೇವೆ. ತಂದೆಯ ಮನೆಯಲ್ಲಿರುವ ಮತ್ತೊಬ್ಬಳನ್ನು ಹುಡುಕಿಕೊಳ್ಳುವವನಾಗು. ಇಂಥವಳು ಜನ್ಮದಿಂದ ನಿನ್ನ ಭಾಗವೆಂದು ತಿಳಿ. (ಸಂಭೋಗಕಾಲದಲ್ಲಿ ಬೇರೆಯವರಿರುವುದು ಉಚಿತವಲ್ಲವಾದುದರಿಂದ ವಿಶ್ವಾವಸುವು ಕಳುಹಿಸಲ್ಪಡುವನು.)

ವಧೂವರರು ಒಬ್ಬರನ್ನೊಬ್ಬರು ನೋಡುವಾಗ ಹೇಳುವ ಮಂತ್ರಗಳು.— (ವಧುವು ವರನನ್ನು ಕುರಿತು ಹೇಳುವಳು.) ತಪಸ್ಸಿನಿಂದ ಹುಟ್ಟಿ ತಪಸ್ಸಿನಿಂದ ವೃದ್ಧಿ ಹೊಂದಿದವನಾಗಿಯೂ ನನ್ನ ಅಭಿಪ್ರಾಯವನ್ನು ತಿಳಿದವನಾಗಿಯೂ ಇರುವ ನಿನ್ನನ್ನು ಸ್ನೇಹಭಾವದಿಂದ ನೋಡಿದೆನು. ಎಲೈ ಪುತ್ರಕಾಮನೆ, ನನ್ನಲ್ಲಿ ಪ್ರೀತಿ

ಯನ್ನೂ ಈ ಮನೆಯಲ್ಲಿ ಧನವನ್ನೂ ಕೊಡುವವನಾಗಿ ಸಂತತಿ ರೂಪದಿಂದ ಹುಟ್ಟು ವವನಾಗು (ಎಂದರೆ ಸಂತಾನವನ್ನು ಪಡೆ.) (ವರನು ವಧುವನ್ನು ಕುರಿತು ಹೇಳು ವನು.)—ದೀಪ್ತಿಯುಳ್ಳವಳಾಗಿಯೂ ಋತುಮತಿಯಾದ ನಿನ್ನ ಶರೀರದಲ್ಲಿ ಗರ್ಭ ವನ್ನಪೇಕ್ಷಿಸುವವಳಾಗಿಯೂ ಇರುವ ನಿನ್ನನ್ನು ಸ್ನೇಹಭಾವದಿಂದ ನೋಡಿದೆನು. ಎಲೈ ಪುತ್ರಕಾಮಳೆ, ಯುವತಿಯಾದ ನೀನು ನನ್ನನ್ನು ಮೇಲೆ ಮಲಗಿಸಿಕೊಂಡು ಸಂಭೋಗಮಾಡಿ ಸಂತತಿರೂಪದಿಂದ ಹುಟ್ಟುವವಳಾಗು (ಎಂದರೆ ಸಂತಾನವನ್ನು ಪಡೆ.)

ವಿವಾಹದ ನಾಲ್ಕನೆಯರಾತ್ರಿ ಸಂಭೋಗಮಾಡುವಾಗ ವರನು ಹೇಳುವ ಮಂತ್ರಗಳು.—ಸಂತೋಷದಿಂದ ತೊಡೆಯನ್ನು ಹತ್ತು. ತೋಳನ್ನು ನೀಡು. ಹೆಂಡತಿಯನ್ನು ಆಲಿಂಗನಮಾಡು. ಪುಷ್ಟರಾಗಿ ಮಿಥುನರಾಗಿ ಗುಹ್ಯೇಂದ್ರಿಯ ಗಳನ್ನು ಸೇರಿಸಿದವರಾಗಿ ಸರೇತಸರಾಗಿ ಬಲವಾದ ಪ್ರಜೆಗಳನ್ನು ಹುಟ್ಟಿಸಿರಿ. ಇತ್ಯಾದಿಗಳು.

ಸುದರ್ಶನವ್ಯಾಖ್ಯಾನ.—ಉಳಿದ 'ಆರೋಹೋರುಂ' ಇತ್ಯಾದಿ ಮಂತ್ರ ಗಳನ್ನು ಸಮಾವೇಶನಕಾಲದಲ್ಲಿ ಜಪಿಸಬೇಕು. 'ಋತುಸಮಾವೇಶನದಲ್ಲಿ' ಎಂದು ಋತುಚಿಹ್ನೆಯಿರುವ್ರದರಿಂದ, ಸಮಾವೇಶನವೆಂದರೆ ವಧುವಿನೊಡನೆ ಮೈಥುನಕ್ಕಾಗಿ ಮಲಗುವುದೆಂದರ್ಥವು. ಇದು ಸಂಭೋಗಾಪೇಕ್ಷೆಯ ಸಮಾವೇಶನವನ್ನಾಶ್ರ ಯಿಸಿದಂಥ ವಿವಾಹಕರ್ಮಾರ್ಥವಾದಂಥ ಕ್ರಮವಾದ ಜಪಗಳ ವಿಧಾನವು. ವಧೂವರರಿಗೆ ಸಂಭೋಗಾಪೇಕ್ಷೆಯಿಲ್ಲದಿದ್ದರೂ, ಕರ್ಮಾರ್ಥವಾಗಿ ಈ ಕ್ರಮದಲ್ಲಿ ಸಮಾವೇಶನಮಾಡುವುದು ಆವಶ್ಯಕವೆಂದು ಕೆಲವು ಶಾಸ್ತ್ರಕಾರರ ಮತವು. ವಿವಾ ಹಸಮಾವೇಶನ ಮತ್ತು ಋತು ಸಮಾವೇಶನಕಾಲಗಳಲ್ಲಲ್ಲದೆ ಬೇರೆ ಮಧ್ಯಕಾಲಗ ಳಲ್ಲಿ ಮಾಡುವ ಸಂಭೋಗಗಳು ಕರ್ಮಾರ್ಥಕ್ಕಲ್ಲವಾದುದರಿಂದ, ಅವುಗಳಲ್ಲಿ ಈ ಮಂತ್ರಜಪವಿಲ್ಲ. ಆದರೆ ಬೋಧಾಯನನಿಂದ ವಿಕಲ್ಪವು ಹೇಳಲ್ಪಟ್ಟಿದೆ. ಎಲ್ಲಾ ಉಪಗಮನಗಳೂ ಮಂತ್ರಯುಕ್ತಗಳಾಗಿರುವುವು ಎಂದು ಬೋಧಾಯನಮತವು (ಎಂದರೆ ಸಂಭೋಗಮಾಡುವಾಗೆಲ್ಲ ಮಂತ್ರಗಳನ್ನು ಹೇಳಬೇಕು.) ಆದಿಸಮಾ ವೇಶನದಲ್ಲಿ ಎಂದರೆ ವಿವಾಹಸಂಬಂಧವಾದ ಸಮಾವೇಶನದಲ್ಲಿಯೂ ಋತುಸಮಾ ವೇಶನದಲ್ಲಿಯೂ ಏಕರೀತಿಯಾಗಿ ಮಂತ್ರಗಳನ್ನು ಜಪಿಸಬೇಕೆಂದು ಶಾಲಿಕಿಯ ಮತವು. ಈ ಕ್ರಮದಲ್ಲಿ ದೈವವಶದಿಂದ ಋತುಗಮನವನ್ನೂ ಮಾಡಬೇಕಾಗಿ ಬಂದರೆ, ಆಗ ಮೊದಲು 'ಆರೋಹೋರುಂ' ಇತ್ಯಾದಿ ಮಂತ್ರಗಳನ್ನೂ ಆಮೇಲೆ 'ವಿಷ್ಣುರ್ಯೋನಿಂ' ಇತ್ಯಾದಿ ಮಂತ್ರಗಳನ್ನೂ ಜಪಿಸಬೇಕು. (ಅಂದರೆ ವಿವಾಹದ ನಾಲ್ಕನೆಯ ರಾತ್ರಿ ವಧುವಿಗೆ ಋತುಕಾಲವಿದ್ದರೆ ವಿವಾಹ ಸಮಾವೇಶನ ಮಂತ್ರಗ ಳಾದ 'ಆರೋಹೋರುಂ' ಇತ್ಯಾದಿಗಳನ್ನು ಮೊದಲು ಜಪಿಸಿ ಆಮೇಲೆ ಋತುಸಮಾ ವೇಶನ ಮಂತ್ರಗಳಾದ 'ವಿಷ್ಣುರ್ಯೋನಿಂ' ಇತ್ಯಾದಿ ಮಂತ್ರಗಳನ್ನು ಜಪಿಸಿ ಅನಂ

ತರ ಸಂಭೋಗವಮಾಡಬೇಕು. ಪ್ರತಿತಿಂಗಳಲ್ಲಿಯೂ ಸ್ತ್ರೀಯು ಮುಟ್ಟಾಗಿ ಎರೆದು ಕೊಂಡಬಳಿಕ ೧೬ ದಿವಸಗಳ ವರೆಗೂ ಋತುಕಾಲವೆನ್ನಿಸುವುದು.)

ಸೂತ್ರ.—ಹೆಂಡತಿಯು ಮುಟ್ಟಾದರೆ ಗಂಡನು ಅವಳಿಗೆ ಬ್ರಾಹ್ಮಣ ನಿಷಿದ್ಧ ವಾದ ಕರ್ಮಗಳನ್ನು ಬೋಧಿಸುವನು.

ಸುದರ್ಶನ ವ್ಯಾಖ್ಯಾನ.—ಸುಖಬೋಧೆಗಾಗಿ ಆ ನಿಷಿದ್ಧ ಕರ್ಮಗಳು ಕ್ರಮ ವಾಗಿ ಹೇಳಲ್ಪಡುವುವು.—ಋತುಸ್ನಾನಕ್ಕೆ ಮೊದಲು ಮೈಥುನ ಕೂಡದು, ಮೂ ರುರಾತ್ರಿಗಳಿಗೆ ಮೊದಲು ಸ್ನಾನಮಾಡಕೂಡದು, ತೈಲಾಭ್ಯಂಜನವಿಲ್ಲ; ಇತ್ಯಾದಿ.

ಋತು ಸಮಾವೇಶನದಲ್ಲಿ ಗಂಡನು ಮುಟ್ಟಾಗಿ ಎರೆದುಕೊಂಡ ಹೆಂಡತಿ ಯನ್ನು ಕುರಿತು ಉತ್ತರ ಮಂತ್ರಗಳನ್ನು ಜಪಿಸುವನು. (ಎಂದರೆ ಋತುಸ್ನಾತ ಳಾದ ಬಳಿಕ ರಾತ್ರಿಯಲ್ಲಿ ಸಮಾವೇಶನ ಕಾಲದಲ್ಲಿ ಮಿಕ್ಕ ಮಂತ್ರಗಳನ್ನು ಹೇಳಿ ಗಂಡನು ಆಕೆಯಲ್ಲಿ ಸಂಭೋಗವಮಾಡುವನು.)

ಸುದರ್ಶನ ವ್ಯಾಖ್ಯಾನ.—ಉತ್ತರ ಮಂತ್ರಗಳೆಂದರೆ 'ವಿಷ್ಣುರ್ಯೋನಿಂಕ ಲ್ಪಯತು (ಎಂದರೆ ವಿಷ್ಣುವು ನಿನ್ನ ಯೋನಿಯನ್ನು ಸಿದ್ಧಪಡಿಸಲಿ) ಎಂದು ಮೊದಲಾದ ಹದಿಮೂರು ಮಂತ್ರಗಳನ್ನು ಜಪಿಸುವನು. ನಾಲ್ಕನೆಯ ದಿವಸ ಮೊದಲುಗೊಂ ಡು ಹದಿನಾರನೆಯ ದಿವಸದ ವರೆಗೂ ಮುಂದಮುಂದಕ್ಕೆ ಸಮದಿವಸಗಳಲ್ಲಿ ಋತು ಗಮನವು ಸಂತತಿ ಸಂಪತ್ತುಗಳಿಗೆ ಕಾರಣವೆಂದು ಹೇಳುವರು.

ಹೀಗೆ ಮೇಲೆ ಉದಾಹರಿಸಲ್ಪಟ್ಟ ಈ ಆಪಸ್ತಂಬ ಗೃಹ್ಯಸೂತ್ರ ವಚನಗಳ ನ್ನೂ ಸುದರ್ಶನ ವ್ಯಾಖ್ಯಾನವನ್ನೂ ಪರ್ಯಾಲೋಚಿಸಿದರೆ, ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ವಧೂವರರಿಗೆ ಸಂಭೋಗವು ನಡೆಯಬೇಕೆಂಬುದು ವ್ಯಕ್ತವಾಗು ವುದು. ಇದರಿಂದ ವಧುವು ವಿವಾಹಕಾಲದಲ್ಲಿ ಮೈಥುನಾರ್ಹಳಾಗಿರಬೇಕು— ಎಂದರೆ ಋತುಮತಿಯಾಗಿ ಯೌವನದಶೆಯಲ್ಲಿರಬೇಕೆಂಬುದು ಸಿದ್ಧವಾಗುವುದು.

ಬೋಧಾಯನ ಗೃಹ್ಯಸೂತ್ರ ಯಜುಶ್ಶಾಖೆ ಪ್ರಶ್ನ ೧, ಅಧ್ಯಾಯ ೧.

ಉದಗಯನಆಪೂರ್ಯಮಾಣಪಕ್ಷೇ ಪುಣ್ಯೇ ನಕ್ಷತ್ರೇ ಯುಗ್ಮಾನ್ ಬ್ರಾಹ್ಮ ಣಾನ್ ವರಾನ್ ಪ್ರಹಿಣೋತಿ ॥೧೩॥

ಅಧ್ಯಾಯ ೪.

ಅಥಾಸ್ಯೈ ದಕ್ಷಿಣೇನ ನೀಚಾ ಹಸ್ತೇನ ದಕ್ಷಿಣಮುತ್ತಾನಂ ಹಸ್ತಂ ಸಾಂಗು ಷ್ಠಮಭೀವಲೋಮಾನಿ ಗೃಹ್ಣಾತಿ ॥೧೦॥

ಅಥೈನಾಮುತ್ತರೇಣಾಗ್ನಿಂ ದಕ್ಷಿಣೇನ ಪದಾಶ್ಮಾನಮಾಸ್ಥಾಪಯತಿ॥

ಅಧ್ಯಾಯ ೫.

ಅಥೈನಾಂ ದಕ್ಷಿಣೇ ಹಸ್ತೇ ಗೃಹೀತ್ವಾ ಸ್ವರಥಮಾರೋಪ್ಯ ಸ್ವಾನ್ ಗೃಹಾ ನಾನಯತಿ ॥೪೪॥

ಅಥೋದಿತೇಷು ನಕ್ಷತ್ರೇಷೂಪನಿಷ್ಕ್ರಮ್ಯ ಧ್ರುವಮರುಂಧತೀಂ ಚ ದರ್ಶಯತಿ ॥೫೬॥

ಉಭೌ ಜಾಯಾಪತೀ ವ್ರತಚಾರಿಣೌ ಬ್ರಹ್ಮಚಾರಿಣೌ ಭವತೋಧಶ್ಶಯಾತೇ॥ ತಯೋಶ್ಶಯ್ಯಾಮಂತರೇಣೋದುಂಬರದಂಡೋ ಗಂಧಾನುಲಿಪ್ತೋ ವಾಸಸಾ ಸೂತ್ರೇಣ ವಾ ಪರಿವೀತಸ್ತಿಷ್ಠತ್ಯಾಪಕ್ವಹೋಮಾತ್ ॥೬೧॥

ಚತುರ್ಥ್ಯಾಂ ನಿಶಾಯಾಂ ಹುತೇ ಪಕ್ವಹೋಮೇ ವ್ರತಂ ವಿಸೃಜ್ಯ ದಂಡಮುತ್ಥಾಪಯತಿ ॥೬೨॥

ಪ್ರಸಿದ್ಧಮುಪವೇಶನಂ ॥೬೪॥

ಅಥೈನಾಂ ಸರ್ವಸುರಭಿಗಂಧಯಾ ಮಾಲಯಾ ಯುನಕ್ತಿ ॥೭೫॥

ಅಧ್ಯಾಯ ೬.

ಅಥ ಶ್ರೀಮಂತಮಗಾರಂ ಸಮ್ಮೃಷ್ಟೋಪಲಿಪ್ತಂ ಗಂಧವಂತಂ ಪುಷ್ಪವಂತಂ ಧೂಪವಂತಂ ದೀಪವಂತಂ ತಲ್ಪವಂತಂ ಸಾಧಿವಾಸಂ ದಿಕ್ಷು ಸರ್ಪಿಸ್ಸೂತ್ರೇಂಧನಪ್ರದ್ಯೋತಿತಮುದಕುಂಭಾದರ್ಶೋಚ್ಛಿರಸಂ ಪ್ರಪಾದ್ಯ ತಸ್ಮಿನ್ನೇನಾಂ ಸಂವೇಶ್ಯತಸ್ಯಾಅಂತಿಕೇ ಜಪತಿ ॥೨೨॥

ಉದೀರ್ಷ್ವಾತೋ ವಿಶ್ವಾವಸೋ ನಮಸೇಡಾಮಹೇ ತ್ವಾ । ಅನ್ಯಾಮಿಚ್ಛ ಪ್ರಫರ್ವ್ಯಂ ಸಂ ಜಾಯಾಂ ಪತ್ಯಾ ಸೃಜ ॥ ಉದೀರ್ಷ್ವಾತಃ ಪತಿವತೀ ಹ್ಯೇಷಾ ವಿಶ್ವಾವಸುಂ ನಮಸಾ ಗೀರ್ಭಿರೀಟ್ಟೇ । ಅನ್ಯಾಮಿಚ್ಛ ಪಿತೃಷದಂ ವ್ಯಕ್ತಾಂ ಸ ತೇ ಭಾಗೋ ಜನುಷಾ ತಸ್ಯ ವಿದ್ಧಿ ಇತಿ ॥೨೩॥

ಅಥೈನಾಮುಪಸಂವೇಶಯತಿ ॥೨೪॥

ಅಥಾಸ್ಯಾಃ ಸ್ತೋಕೋತಿಂ ವಿಮೃಣೋತಿ । ಪ್ರಜಾಯೈ ತ್ವಾ ಇತಿ ॥೨೫॥

ಸಾ ಯದ್ಯೃತುರ್ ಕುರ್ಯಾತ್ತಾಮನುಮಂತ್ರಯತೇ ॥೨೬॥

ಅಧ್ಯಾಯ ೭.

ಅಥ ಯದಿ ಕಾಮಯೇತ ಶ್ರೋತ್ರಿಯಂ ಜನಯೇಯಮಿತ್ಯಾರುಂಧತ್ಯುಪಸ್ಥಾನಾತ್ಕೃತ್ವಾ ತ್ರಿರಾತ್ರಮಕ್ಷಾರಲವಣಾಶಿನಾವಧಶ್ಶಾಯಿನೌ ಬ್ರಹ್ಮಚಾರಿಣಾವಾಸಾತೇ ॥೯॥

ಚತುರ್ಥ್ಯಾಂ ಪಕ್ವಹೋಮಉಪಸಂವೇಶನಂ ಚ ॥೧೧॥

ಅಥ ಯದಿ ಕಾಮಯೇತಾನೂಚಾನಂ ಜನಯೇಯಮಿತಿ ದ್ವಾದಶರಾತ್ರಮೇತದ್ವ್ರತಂ ಚರೇತ್ ॥೧೨॥

ವ್ರತಾಂತೇ ಪಕ್ವಹೋಮಉಪಸಂವೇಶನಂ ಚ ॥೧೩॥

ಅಥ ಯದಿ ಕಾಮಯೇತ ಋಷಿಕಲ್ಪಂ ಜನಯೇಯಮಿತಿ ಮಾಸಮೇತದ್ವ್ರತಂ ಚರೇತ್ ॥೧೪॥

ವ್ರತಾಂತೇ ಪಕ್ವಹೋಮಮುಪಸಂವೇಶನಂ ಚ ॥ ೧೫ ॥
ಅಥ ಯದಿ ಕಾಮಯೇತ ಭ್ರೂಣಂ ಜನಯೇಯಮಿತಿ ಚತುರೋ ಮಾಸಾ
ನೇತದ್ವ್ರತಂ ಚರೇತ್ ॥ ೧೬ ॥
ವ್ರತಾಂತೇ ಪಕ್ವಹೋಮಮುಪಸಂವೇಶನಂ ಚ ॥ ೧೭ ॥
ಅಥ ಯದಿ ಕಾಮಯೇತ ಋಷಿಂ ಜನಯೇಯಮಿತಿ ಷಣ್ಮಾಸಾನೇತದ್ವ್ರ
ತಂ ಚರೇತ್ ॥ ೧೮ ॥
ವ್ರತಾಂತೇ ಪಕ್ವಹೋಮಮುಪಸಂವೇಶನಂ ಚ ॥ ೧೯ ॥
ಅಥ ಯದಿ ಕಾಮಯೇತ ದೇವಂ ಜನಯೇಯಮಿತಿ ಸಂವತ್ಸರಮೇತದ್ವ್ರ
ತಂ ಚರೇತ್ ॥ ೨೦ ॥
ವ್ರತಾಂತೇ ಪಕ್ವಹೋಮಮುಪಸಂವೇಶನಂ ಚ ॥ ೨೧ ॥

ಬೋಧಾಯನ ಗೃಹ್ಯಪರಿಭಾಷಾ ಸೂತ್ರ ಪ್ರಶ್ನ ೧, ಅಧ್ಯಾಯ ೧.

ಅಥಾಧಿಬ್ರಹ್ಮಚರ್ಯಂ—ವಿವಾಹೇ ತ್ರಿರಾತ್ರಂ ॥ ೮ ॥
ಋತೌ ತ್ರಿರಾತ್ರಂ ॥ ೯ ॥
ಅಮಾವಾಸ್ಯಾಯಾಂ ಪೌರ್ಣಮಾಸ್ಯಾಂ ಶ್ರಾದ್ಧಂ ದತ್ವಾ ಭುಕ್ತ್ವಾ ಚೈಕರಾ
ತ್ರಂ ॥ ೧೦ ॥

ಬೋಧಾಯನ ಗೃಹ್ಯಸೂತ್ರ ಪ್ರಶ್ನ ೪, ಅಧ್ಯಾಯ ೧.

ಅಥ ಯದಿ ಕನ್ಯೋಪಸಾದ್ಯಮಾನಾ ವೋಹ್ಯಮಾನಾ ವಾ ರಜಸ್ವಲಾ ಸ್ಯಾ
ತ್ತಾಮನುಮಂತ್ರಯತೇ । ಪುಮಾಂಸೌ ಮಿತ್ರಾವರುಣೌ ಪುಮಾಂಸಾವಶ್ವಿನಾ
ವುಭೌ । ಪುಮಾನಿಂದ್ರಶ್ಚ ಸೂರ್ಯಶ್ಚ ಪುಮಾಂಸಂ ವರ್ಧಯತಾಂ ಇತಿ ॥ ೧ ॥

ಬೋಧಾಯನ ಗೃಹ್ಯಶೇಷ ಸೂತ್ರ ಪ್ರಶ್ನ ೫, ಅಧ್ಯಾಯ ೨.

ಅಥ ವಿವಾಹ್ಯಕನ್ಯಾರಜಸ್ವಲಾಪ್ರಾಯಶ್ಚಿತ್ತಾದಿವಿಧಿಂ ವ್ಯಾಖ್ಯಾಸ್ಯಾಮಃ ॥
ವಿವಾಹೇ ವಿತತೇ ಯಜ್ಞೇ ಹೋಮಕಾಲಉಪಸ್ಥಿತೇ ।
ಕನ್ಯಾಮೃತುಮತೀಂ ದೃಷ್ಟ್ವಾ ಕಥಂ ಕುರ್ವಂತಿಯಾಜ್ಞಿಕಾಃ ॥ ೧ ॥
ಯಜುಃಪವಿತ್ರೈಃ ಸಾವಿತ್ರ್ಯಾ ಪ್ರೋಕ್ಷಯೇತ್ಪೂತವಾರಿಭಿಃ ।
ಅನೇನ ಚಾನುವಾಕೇನ ಪವಮಾನಸ್ಸುವಾದಿನಾ ॥ ೨ ॥
ಸ್ನಾಪಯಿತ್ವಾಥ ವಿದ್ವದ್ಭಿರನ್ಯವಸ್ತ್ರಾದ್ಯಲಂಕೃತಾಂ ।
ಪೂರ್ಣಾಹುತ್ಯಥ ಮಿಂದಾಭ್ಯಾಂ ಮಹಾವ್ಯಾಹೃತಿಭಿಸ್ಸಹ ॥ ೩ ॥
ಹುತ್ವಾ ತಂತುಮತೀಂ ಚೈವ ವ್ಯಾಹೃತಿಭಿಸ್ತಥೈವ ಚ ।
ಅನಾಜ್ಞಾತಂ ಚ ವಿದ್ವದ್ಭಿಃ ಶೇಷಂ ಕಾರ್ಯಂ ಸಮಾಚರೇತ್ ॥ ೪ ॥

ಪ್ರಧಾನಹೋಮೇ ನಿರ್ವೃತ್ತೇ ಮಲವದ್ವಾಸಸೀ ಭವೇತ್ ।
ತ್ರಿಯಹೇ ಪರ್ಯವೇತೇಥ ಶೇಷಕಾರ್ಯಂ ಸಮಾಚರೇತ್ ॥ ೫ ॥

ಅರ್ಥ.—ಉತ್ತರಾಯಣದಲ್ಲಿ ಶುಕ್ಲಪಕ್ಷದಲ್ಲಿ ಶುಭನಕ್ಷತ್ರದಲ್ಲಿ ವರನು ಸಮ ಸಂಖ್ಯೆಯುಳ್ಳ ಬ್ರಾಹ್ಮಣರನ್ನು ಕನ್ಯಾವರಣಾರ್ಥವಾಗಿ ಕಳುಹಿಸುತ್ತಾನೆ. ಅನಂತರ ವರನು ಅಂಗೈ ಕೆಳಗಾದ ತನ್ನ ಬಲಗೈಯಿಂದ ಅಂಗೈ ಮೇಲಾದ ಅವಳ ಬಲಗೈಯನ್ನು ಅಂಗುಷ್ಠಸಹಿತವಾಗಿ ಮಣಿಬಂಧ ಪರ್ಯಂತ ಹಿಡಿದುಕೊಳ್ಳುತ್ತಾನೆ. ಬಳಿಕ ಅವಳನ್ನು ಎಬ್ಬಿಸಿ ಅಗ್ನಿಯು ಉತ್ತರದಲ್ಲಿ ಬಲಗಾಲಿನಿಂಧ ಕಲ್ಲಿನಮೇಲೆ ನಿಲ್ಲಿಸುತ್ತಾನೆ. ಆಮೇಲೆ ವಧುವಿನ ಬಲಗೈಯನ್ನು ಹಿಡಿದುಕೊಂಡು ಗಾಡಿಯಲ್ಲಿ ಕೂಡಿಸಿ ತನ್ನ ಮನೆಗೆ ಕರೆದುಕೊಂಡು ಬರುವನು. ನಕ್ಷತ್ರೋದಯವಾಗುತ್ತಲೆ ಹೊರಗೆ ಬಂದು ಅವಳಿಗೆ ಧ್ರುವನಕ್ಷತ್ರವನ್ನೂ ಅರುಂಧತೀನಕ್ಷತ್ರವನ್ನೂ ತೋರಿಸುವನು. ಅನಂತರ ವಧೂವರರು ವ್ರತವುಳ್ಳವರಾಗಿ ಬ್ರಹ್ಮಚರ್ಯವುಳ್ಳವರಾಗಿ ನೆಲದಮೇಲೆ ಮಲಗಬೇಕು. ಹಾಸಿಗೆಮೇಲೆ ಅವರಿಬ್ಬರ ಮಧ್ಯದಲ್ಲಿ, ವಸ್ತ್ರದಿಂದಾಗಲಿ ದಾರದಿಂದಾಗಲಿ ಸುತ್ತಲ್ಪಟ್ಟ—ಗಂಧಲಿಪ್ತವಾದ ಅತ್ತಿಕಡ್ಡಿಯು ಪಕ್ವಹೋಮದಪರ್ಯಂತ ಇರುತ್ತದೆ. ನಾಲ್ಕನೆಯ ರಾತ್ರಿ ಪಕ್ವಹೋಮವಾದಮೇಲೆ, ವರನು ವ್ರತವನ್ನುಬಿಟ್ಟು, ಕಡ್ಡಿಯನ್ನು ತೆಗೆದು ಬೇರೆಕಡೆ ಇಡುವನು. (ಅನಂತರ ಮಾಡಬೇಕಾದ ಕರ್ಮವಾದ) ಉಪಸಮಾವೇಶನವು ಪ್ರಸಿದ್ಧವಾಗಿರುವುದು. ಆಮೇಲೆ ಅವಳಿಗೆ ಗಂಧವನ್ನು ಹಚ್ಚಿ ಪುಷ್ಪಮಾಲಿಕೆಯನ್ನು ಹಾಕುವನು.

ಆ ಬಳಿಕ ಅವಳನ್ನು, ಗಂಧಪುಷ್ಪ ಧೂಪದೀಪ ಹಾಸಿಗೆ ಮೇಲುಹೊದ್ದಿಕೆಯುಳ್ಳಂಥ ದಿಕ್ಕುಗಳಲ್ಲಿ ಪ್ರಕಾಶಮಾನವಾಗಿ ಉರಿಯುತ್ತಿರುವ ತುಪ್ಪದ ದೀಪಗಳುಳ್ಳಂಥ ಜಲಪೂರ್ಣಪಾತ್ರೆ, ಕನ್ನಡಿಗಳುಳ್ಳಂಥ ಗುಡಿಸಿ ಸಾರಿಸಲ್ಪಟ್ಟ ಕೊಟಡಿಗೆ ಕರೆದುಕೊಂಡು ಬಂದು ಹಾಸಿಗೆಯಮೇಲೆ ಮಲಗಿಸಿ ಅವಳ ಸಮೀಪದಲ್ಲಿ ಈ ವೇದಮಂತ್ರವನ್ನು ಜಪಿಸುವನು:—

ಎಲೈ ವಿಶ್ವಾವಸುವೆ, ಈ ಹಾಸಿಗೆಯಿಂದೇಳು. ನಿನಗೆ ನಮಸ್ಕಾರಮಾಡಿ ಸ್ತೋತ್ರ ಮಾಡುತ್ತೇವೆ. ಸುಜಘನವುಳ್ಳ ಮತ್ತೊಬ್ಬಳನ್ನು ಹುಡುಕಿಕೊಳ್ಳುವವನಾಗು. ಈ ಹೆಂಡತಿಯನ್ನು ಗಂಡನೊಂದಿಗೆ ಬಿಡು. ಇಲ್ಲಿಂದೇಳು. ಇವಳು ಗಂಡವುಳ್ಳವಳಲ್ಲವೆ! ವಿಶ್ವಾವಸುವಾದ ನಿನ್ನನ್ನು ನಮಸ್ಕಾರದಿಂದಲೂ ಸ್ತುತಿಗಳಿಂದಲೂ ಯಾಚಿಸುತ್ತೇವೆ. ತಂದೆಯ ಮನೆಯಲ್ಲಿರುವ ಮತ್ತೊಬ್ಬಳನ್ನು ಹುಡುಕಿಕೊಳ್ಳುವವನಾಗು, ಅಂಥವಳು ಜನ್ಮದಿಂದ ನಿನ್ನ ಭಾಗದವಳೆಂದು ತಿಳಿ. [ಸಂಭೋಗಕಾಲದಲ್ಲಿ ಅನ್ಯರು ಇರಕೂಡದಾದುದರಿಂದ, ವಿಶ್ವಾವಸುವನ್ನು ಪ್ರಾರ್ಥಿಸಿ ಕಳುಹಿಸುವನು.] ಅನಂತರ ತಾನೂ ಅವಳ ಬಳಿಯಲ್ಲಿ ಮಲಗಿಕೊಳ್ಳುವನು, ಆಮೇಲೆ "ಪ್ರಜಾಯೈ ತ್ವಾ" ಎಂಬ ಮಂತ್ರವನ್ನು ಹೇಳಿ ಅವಳ ಯೋನಿಯನ್ನು ಅಗಲಿಸು

ವನು. ಅವಳು ಕಣ್ಣೀರು ಸುರಿಸಿದರೆ ಮಂತ್ರವನ್ನು ಹೇಳಿ ಸಮಾಧಾನಪಡಿಸುತ್ತಾನೆ.

ಶ್ರೋತ್ರಿಯನಾದ ಪುತ್ರನನ್ನು ಹುಟ್ಟಿಸಬೇಕೆಂದು ಅಪೇಕ್ಷೆಯಿದ್ದರೆ, ಅರುಂಧತೀನಕ್ಷತ್ರದರ್ಶನವಾದ ಬಳಿಕ ಮೂರು ರಾತ್ರಿ ಪರ್ಯಂತ ಕ್ಷಾರ ಲವಣವಿಲ್ಲದ ಆಹಾರವನ್ನು ತಿನ್ನುವವರಾಗಿಯೂ ನೆಲದಮೇಲೆ ಜೊತೆಯಲ್ಲಿ ಮಲಗುವವರಾಗಿಯೂ ಬ್ರಹ್ಮಚರ್ಯವುಳ್ಳವರಾಗಿಯೂ ಇರಬೇಕು. ಆಮೇಲೆ ನಾಲ್ಕನೆಯ ರಾತ್ರಿ ಪಕ್ವ ಹೋಮಮಾಡಿ ಸಂಭೋಗಮಾಡಬೇಕು. ಅನೂಚಾನನಾದ ಪುತ್ರನನ್ನು ಹುಟ್ಟಿಸಬೇಕೆಂದು ಅಪೇಕ್ಷೆಯಿದ್ದರೆ ಮೇಲಿನ ವ್ರತವನ್ನು ಹನ್ನೆರಡು ರಾತ್ರಿಗಳ ಪರ್ಯಂತ ಮಾಡಬೇಕು. ವ್ರತವು ಮುಗಿದ ಬಳಿಕ ಪಕ್ವಹೋಮ ಮಾಡಿ ಅನಂತರ ಸಂಭೋಗ ಮಾಡಬೇಕು. ಋಷಿಗೆ ಸಮಾನನಾದ ಪುತ್ರನನ್ನು ಹುಟ್ಟಿಸಬೇಕೆಂದು ಅಪೇಕ್ಷೆಯಿದ್ದರೆ, ಮೇಲಿನ ವ್ರತವನ್ನು ಒಂದು ತಿಂಗಳ ಪರ್ಯಂತ ಮಾಡಿ ಆ ಬಳಿಕ ಪಕ್ವ ಹೋಮ ಸಮಾವೇಶನಗಳನ್ನು ಆಚರಿಸಬೇಕು ಭ್ರೂಣನಾದ ಮಗನು ಬೇಕೆಂಬ ಅಪೇಕ್ಷೆಯಿದ್ದರೆ ಆ ವ್ರತವನ್ನು ನಾಲ್ಕುತಿಂಗಳ ಪರ್ಯಂತ ಮಾಡಬೇಕು. ವ್ರತಾಂತವಾದ ಬಳಿಕ ಪಕ್ವಹೋಮವೂ ಉಪಸಮಾವೇಶನವೂ ಆಗಬೇಕು. ಋಷಿಯನ್ನು ಹುಟ್ಟಿಸಬೇಕೆಂದು ಅಪೇಕ್ಷೆಯಿದ್ದರೆ ಆರುತಿಂಗಳು ವ್ರತವನ್ನು ಆಚರಿಸಿ ಆಮೇಲೆ ಪಕ್ವಹೋಮವನ್ನೂ ಸಂಭೋಗವನ್ನೂ ಮಾಡಬೇಕು. ದೇವತಾಸ್ವರೂಪನಾದ ಮಗನು ಬೇಕಾದರೆ ಮೇಲಿನ ವ್ರತವನ್ನು ಒಂದು ವರ್ಷ ಪರ್ಯಂತ ಮಾಡಬೇಕು. ವ್ರತಾಂತದಲ್ಲಿ ಪಕ್ವಹೋಮವೂ ಸಂಭೋಗವೂ ಆಗಬೇಕು.

ಈಗ ಬ್ರಹ್ಮಚರ್ಯೆ ವಿಷಯವು ಹೇಳಲ್ಪಡುವುದು, ಯಾವುದೆಂದರೆ:—ವಿವಾಹದಲ್ಲಿ ಮೂರು ರಾತ್ರಿ ಬ್ರಹ್ಮಚರ್ಯವು. ಋತುವಿನಲ್ಲಿ ಮೂರುರಾತ್ರಿ ಬ್ರಹ್ಮಚರ್ಯವು. ಅಮಾವಾಸ್ಯೆಯಲ್ಲಿ ಪೌರ್ಣಮಿಯಲ್ಲಿ ಶ್ರಾದ್ಧಮಾಡಿದಾಗ ಮತ್ತು ಶ್ರಾದ್ಧಭೋಜನದಲ್ಲಿ ಒಂದು ರಾತ್ರಿ ಬ್ರಹ್ಮಚರ್ಯವು.

[ಪಾಣಿಗ್ರಹಣ ಮತ್ತು ಸಪ್ತಪದೀಗಮನವಾದ ಬಳಿಕ ವರನು] ಕನ್ಯೆಯನ್ನು ಕೈಹಿಡಿದುಕೊಂಡಾಗಲಿ ಗಾಡಿಯಲ್ಲಿ ಕೂಡಿಸಿಕೊಂಡಾಗಲಿ ತನ್ನ ಮನೆಗೆ ಕರೆದುಕೊಂಡು ಹೋಗುವಾಗ ಅವಳು ಮುಟ್ಟಾದರೆ ಈ ಮಂತ್ರವನ್ನು ಹೇಳುವನು. [ಮಂತ್ರಾರ್ಥ]—ಪುರುಷರಾದ ಮಿತ್ರಾವರುಣರೂ ಪುರುಷರಾದ ಇಬ್ಬರು ಅಶ್ವಿನಿದೇವತೆಗಳೂ ಪುರುಷನಾದ ಇಂದ್ರನು ಮತ್ತು ಸೂರ್ಯನೂ ಕೂಡ ಪುರುಷನಾದ ನನ್ನನ್ನು ವೃದ್ಧಿಪಡಿಸಲಿ.

ಈಗ ವಿವಾಹ್ಯಳಾದ ಕನ್ಯೆಯು ರಜಸ್ವಲೆಯಾದರೆ ಅದಕ್ಕೆ ಪ್ರಾಯಶ್ಚಿತ್ತಾದಿ ವಿಧಿಯನ್ನು ಹೇಳುತ್ತೇವೆ:—

ವಿವಾಹದಲ್ಲಿಯೂ ವಿಸ್ತೃತವಾದ ಯಾಗದಲ್ಲಿಯೂ ಹೋಮಕಾಲವು ಪ್ರಾಪ್ತವಾಗಲು ಕನ್ಯೆಯು ಮುಟ್ಟಾದರೆ, ಯಾಜ್ಞಿಕರು ಹೇಗೆ ಮಾಡುವರು ? ಯಜುರ್ವೇದ ಋಕ್ಕುಗಳಿಂದಲೂ ಸಾವಿತ್ರಿಯಿಂದಲೂ ಪವಮಾನ ಅನುವಾಕದಿಂದಲೂ ಪರಿಶುದ್ಧವಾದ ಜಲಗಳಿಂದ (ಅವಳನ್ನು) ಪ್ರೋಕ್ಷಿಸಬೇಕು. ಆಮೇಲೆ ವಿಧಿಜ್ಞರಿಂದ ಅವಳನ್ನು ಸ್ನಾನಮಾಡಿಸಿ, ಬೇರೆ ವಸ್ತ್ರದಿಂದಲಂಕರಿಸಿ, ಯುಂಜಾನಮಂತ್ರದಿಂದಲೂ ಮಹಾವ್ಯಾಹೃತಿಗಳಿಂದಲೂ ಪೂರ್ಣಾಹುತಿಮಾಡಿ, ಮತ್ತು ವ್ಯಾಹೃತಿಗಳಿಂದ ತಂತುಮತೀಹವನಮಾಡಿ, ಅನಾಜ್ಞಾತಜಪವನ್ನು ಮಾಡಿ, ಉಳಿದಕಾರ್ಯವನ್ನು ಮಾಡಬೇಕು.

ಪ್ರಧಾನಹೋಮವು ಮುಗಿದ ಬಳಿಕ ವಧುವು ಮುಟ್ಟಾದರೆ ಮೂರುದಿನಗಳು ಕಳೆದ ಬಳಿಕ ಉಳಿದ ಕಾರ್ಯವನ್ನು ಮಾಡಬೇಕು.

ಹೀಗೆ ಮೇಲೆ ಕಾಣಿಸಲ್ಪಟ್ಟ ಈ ಬೋಧಾಯನಗೃಹ್ಯಸೂತ್ರ ವಚನಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ನೋಡಿದರೆ, ಅಲ್ಲಿ ಹೇಳಲ್ಪಟ್ಟ ವೈವಾಹಿಕವಿಧಿಯು ಋತುಮತಿಯರಾದ ಕನ್ಯೆಯರಿಗೆ ಅನ್ವಯಿಸುವುದೆಂದು ನಿಸ್ಸಂದೇಹವಾಗಿ ತೋರುವುದು.

ಹಿರಣ್ಯಕೇಶಿಗೃಹ್ಯಸೂತ್ರ—ಕೃಷ್ಣಯಜುರ್ವೇದಶಾಖೆ. ಪ್ರಶ್ನ ೧. ಪಟಲ ೬, ಖಂಡ ೨೦.

ಪ್ರಾಙ್ಮುಖಃ ಪ್ರತ್ಯಙ್ಮುಖ್ಯಾಹಸ್ತಂ ಗೃಹ್ಣೀಯಾತ್ಪ್ರತ್ಯಙ್ಮುಖಃ ಪ್ರಾಙ್ಮುಖ್ಯಾವಾ ॥ ೧ ॥

ತಾಂ ನಃ ಪೂಷಞ್ಛಿವತಮಾಮೇರಯಸ್ವ ಯಸ್ಯಾಂ ಬೀಜಂ ಮನುಷ್ಯಾ ವಪಂತಿ । ಯಾನಊರೂ ಉಶತೀ ವಿಶ್ರಯಾತೈ ಯಸ್ಯಾಮುಶನ್ತಃ ಪ್ರಹರೇಮ ಶೇಫಂ ॥

ಸೋಮಃ ಪ್ರಥಮೋ ವಿವಿದೇ ಗಂಧರ್ವೋ ವಿವಿದಉತ್ತರಃ ।
ತೃತೀಯೋ ಅಗ್ನಿಷ್ಟೇ ಪತಿಸ್ತುರೀಯೋಽಹಂ ಮನುಷ್ಯಜಾಃ ॥
ಸೋಮೋದದದ್ಗನ್ಧರ್ವಾಯ ಗನ್ಧರ್ವೋಽಗ್ನಯೇದದಾತ್ ।
ಪಶೂಂಶ್ಚ ಮಹ್ಯಂ ಪುತ್ರಾಂಶ್ಚಾಗ್ನಿರ್ದದಾತ್ಯಥೋ ತ್ವಾಂ ॥
ಅಮೂಹಮಸ್ಮಿ ಸಾ ತ್ವಂ ದ್ಯೌರಹಂ ಪೃಥಿವೀ ತ್ವಂ ಸಾಮಾಹಮೃಕ್ತ್ವಂ
ತಾವೇಹಿ ಸಂಭವಾಯ ಸಹ ರೇತೋ ದಧಾವಹೈ ಪುಂಸೇ ಪುತ್ರಾಯ ವೇತ್ತವೈ ರಾಯಸ್ಪೋಷಾಯ ಸುಪ್ರಜಾಸ್ತ್ವಾಯ ಸುವೀರ್ಯಾಯ ॥ ೨ ॥

ಪಟಲ ೬, ಖಂಡ ೨೧.

ಸಪ್ತಮಂ ಪದಮುಪಸ್ಥಾಪ್ಯ ಜಪತಿ ॥ ೨ ॥

ಪಟಲ ೩, ಖಂಡ ೧೨.

ತಾಂ ತತಃ ಪ್ರವಾಹಯಂತಿ ಪ್ರವ್ರಾಹಾರಯಂತಿ ॥ ೧॥
ಸವೋಽಪ್ಯೈತಮಗ್ನಿಮನುಹರಂತಿ ॥ ೨॥
ಆಗಾರಂ ಪ್ರಾಪ್ಯಾಥೈನಾಂ ಸಂಶಾಸ್ತಿ । ದಕ್ಷಿಣಂ ಪಾದಮಗ್ರೇತಿಹರ ದೇಹ ಲಿಂ ಮಾಧಿಷ್ಠಾಃ; ಇತಿ ॥ ೬ ॥
ಉದಿತೇಷು ನಕ್ಷತ್ರೇಷು ಪ್ರಾಚೀಮುದೀಚೀಂ ವಾ ದಿಶಮುಪನಿಷ್ಕ್ರಮ್ಯ । ದೇವೀಃ ಷಡುರ್ವೀಃ ಇತಿ ದಿಶಉಪತಿಷ್ಠತೇ ॥೧೧॥

ಪಟಲ ೩, ಖಂಡ ೧೩.

ತ್ರಿರಾತ್ರಮಕ್ಷಾರಾಲವಣಾಶಿನಾವಧಶ್ಶಾಯಿನಾವಲಂಕುರ್ವಾಣೌ ಬ್ರಹ್ಮಚಾರಿಣೌ ವಸತಃ ॥೧೦॥
ಚತುರ್ಥ್ಯಾಮಪರರಾತ್ರೇಽಗ್ನಿಮುಪಸಮಾಧಾಯ ಪ್ರಾಯಶ್ಚಿತ್ತಿಪರ್ಯಸ್ತಂ ಕೃತ್ವಾ ನವ ಪ್ರಾಯಶ್ಚಿತ್ತೀರ್ಜುಹೋತಿ ॥೧೧॥

ಪಟಲ ೩, ಖಂಡ ೧೪.

ಅಥೈನಾಮುಪಯಚ್ಛತೇ । ಸಂ ನಾಮ್ನಃ ಸಂ ಹೃದಯಾನಿ ಸಂ ನಾಭಿಃ ಸಂ ತ್ವಚಃ । ಸಂ ತ್ವಾ ಕಾಮಸ್ಯ ಯೋಕ್ತ್ರೇಣ ಯುಂಜಾನ್ಯವಿಮೋಚನಾಯ, ಇತಿ ॥೪॥
ಅಥೈನಾಂ ಪರಿಷ್ವಜತೇ । ಮಾಮನುವ್ರತಾಭವ ಸಹಚರ್ಯಾ ಮಯಾ ಭವ, ಇತಿ ॥೫॥
ಅಥಾಸ್ಯೈ ಮುಖೇನ ಮುಖಮಾಸ್ಯತೇ । ಮಧು ಹೇ ಪುದ್ವಿದಂ ಮಧು ಜಿಹ್ವಾ ಮೇ ಮಧುವಾದಿನೀ, ಇತಿ ॥೬॥
ತ್ರಿರಾತ್ರಂ ಮಲವದ್ವಾಸಸಾ ಬ್ರಾಹ್ಮಣವ್ಯಾಖ್ಯಾತಾನಿ ವ್ರತಾನಿ ಚರತಿ॥೭॥
ಚತುರ್ಥ್ಯಾಂ ಸ್ನಾತಾಂ ಪ್ರಯತವಸ್ತ್ರಾಮಲಂಕೃತಾಂ ಬ್ರಾಹ್ಮಣಸಂಭಾಷಾಮಾಚಮ್ಯೋಪಹ್ವಯತೇ ॥ ೮ ॥

ಪಟಲ ೩, ಖಂಡ ೧೫.

ವಿಷ್ಣುರ್ಯೋನಿಂ ಕಲ್ಪಯತು ತ್ವಷ್ಟಾ ರೂಪಾಣಿ ಪಿಂಶತು । ಆಸಿಂಚತು ಪ್ರಜಾಪತಿರ್ಧಾತಾ ಗರ್ಭಂ ದಧಾತು ತೇ ॥
ಗರ್ಭಂ ಧೇಹಿ ಸಿನೀವಾಲಿ ಗರ್ಭಂ ಧೇಹಿ ಸರಸ್ವತಿ । ಗರ್ಭಂ ತೇ ಅಶ್ವಿನಾ ವುಭಾವಾಧತ್ತಾಂ ಪುಷ್ಕರಸ್ರಜೌ ॥
ಹಿರಣ್ಯಯೀ ಅರಣೀ ಯಂ ನಿರ್ಮಂಥತೋ ಅಶ್ವಿನಾ । ತಂ ತೇ ಗರ್ಭಂ ಹವಾಮಹೇ ದಶಮಾಸ್ಯಾಯ ಸೂತವೆ ಇತಿ ॥೧॥

ಸರ್ವಾಣ್ಯುಪಗಮನಾನಿ ಮಂತ್ರವಂತಿ ಭವಂತೀತ್ಯಾತ್ರೇಯಃ ॥೩॥
ಯಚ್ಛಾದೌ ಯಚ್ಛರ್ತಾವಿತಿ ಬಾದರಾಯಣಃ ॥೪॥

ಅರ್ಥ.—ಪೂರ್ವಾಭಿಮುಖನಾದ ವರನು ಪಶ್ಚಿಮಾಭಿಮುಖಳಾದ ವಧುವಿನ ಹಸ್ತವನ್ನು ಹಿಡಿಯಬೇಕು ; ಅಥವಾ ವರನು ಪಶ್ಚಿಮಾಭಿಮುಖನಾಗಿ, ಪೂರ್ವಾಭಿಮುಖಳಾದ ವಧುವಿನ ಹಸ್ತವನ್ನು ಹಿಡಿಯಬೇಕು. (ಆಮೇಲೆ ಆತನು ಆಕೆಯನ್ನುದ್ದೇಶಿಸಿ ಈ ವೇದಮಂತ್ರಗಳನ್ನು ಹೇಳುವನು.)—ಎಲೈ ಪೂಷನೆ, ಯಾವಳಲ್ಲಿ ಮನುಷ್ಯರು ಬೀಜವನ್ನು ಹಾಕುವರೋ, ಯಾವಳು ಸಂಭೋಗಾಪೇಕ್ಷೆಯುಳ್ಳವಳಾಗಿ ನನಗೋಸ್ಕರ ತೊಡೆಗಳನ್ನು ತೆರೆಯುವಳೋ, ಮತ್ತು ಯಾವಳಲ್ಲಿ ನಾನು ಅಪೇಕ್ಷೆಯುಳ್ಳವನಾಗಿ ಶಿಶ್ನಪ್ರಹರಮಾಡುವೆನೋ, ಅಂಥ ಮಂಗಳತಮಳಾದ ಇವಳನ್ನು ನನಗೆ ಅನುಕೂಲಳಾಗುವಂತೆ ಪ್ರೇರಿಸು. ಮೊದಲು ನಿನ್ನನ್ನು (ವಧುವನ್ನು) ಸೋಮನೂ ಆಮೇಲೆ ಗಂಧರ್ವನೂ ಹೊಂದಿದರು. ನಿನ್ನ ಮೂರನೆಯ ಪತಿಯು ಅಗ್ನಿಯು, ಮನುಷ್ಯನಾದ ನಾನು ನಿನ್ನ ನಾಲ್ಕನೆಯ ಗಂಡನು. ಸೋಮನು ಇವಳನ್ನು ಗಂಧರ್ವನಿಗೆ ಕೊಟ್ಟನು, ಗಂಧರ್ವನು ಅಗ್ನಿಗೆ ಕೊಟ್ಟನು. ಅಗ್ನಿಯು ನನಗೆ ಪಶುಗಳನ್ನೂ ಪುತ್ರರನ್ನೂ ಮತ್ತು ನಿನ್ನನ್ನೂ ಕೊಟ್ಟನು. ಇವನು ನಾನು, ಅವಳು ನೀನು. ನಾನು ಸ್ವರ್ಗ, ನೀನು ಭೂಮಿ. ನಾನು ಸಾಮವೇದ, ನೀನು ಋಗ್ವೇದ. ಸಂಭೋಗಕ್ಕೆ ಬಾ. ಪುತ್ರನನ್ನು ಪಡೆಯುವುದಕ್ಕೂ, ಧನಾಭಿವೃದ್ಧಿಗೋಸ್ಕರವಾಗಿಯೂ, ಬಲವಾದ ಸುಪ್ರಜೆಗಳಿಗೋಸ್ಕರವಾಗಿಯೂ ರೇತಸನ್ನು ಕೂಡಿಸೋಣ.

ಆಬಳಿಕ ಏಳುಹೆಜ್ಜೆಗಳನ್ನಿಡಿಸಿ, ವಧುವನ್ನು ಕುರಿತು ಮಂತ್ರವನ್ನು ಜಪಿಸುವನು. ಆಮೇಲೆ ಅವಳನ್ನು (ತಂದೆಯ ಮನೆಯಿಂದ ಗಂಡನ ಮನೆಗೆ) ಕರೆದುಕೊಂಡು ಹೋಗುವರು. ಹಿಂದುಗಡೆ ಅಗ್ನಿಯನ್ನು ತರುವರು. ಗಂಡನಮನೆಗೆ ಬಂದನಂತರ ವರನು ಅವಳನ್ನು ಕುರಿತು 'ಹೊಸ್ತಿಲಮೇಲೆ ನಿಲ್ಲಬೇಡ, ಬಲಗಾಲು ಮುಂದಾಗಿ ದಾಟು' ಎಂದು ಹೇಳುವನು. ಆಬಳಿಕ ನಕ್ಷತ್ರೋದಯವಾಗುತ್ತಲೆ ಹೊರಕ್ಕೆ ಉತ್ತರಕ್ಕಾಗಲಿ ಪೂರ್ವಕ್ಕಾಗಲಿ ಹೋಗಿ, 'ಅರು ವಿಶಾಲವಾದ ದೇವಿಗಳಿರಾ' ಎಂಬ ಮಂತ್ರವನ್ನು ಹೇಳಿ, ದಿಕ್ಕುಗಳನ್ನು ಪೂಜಿಸುವನು. ಆಮೇಲೆ ವಧೂವರರು ಮೂರು ರಾತ್ರಿಗಳ ಪರ್ಯಂತ, ಕ್ಷಾರಲವಣವಿಲ್ಲದ ಆಹಾರವನ್ನು ತೆಗೆದುಕೊಳ್ಳುತ್ತ, ಅಲಂಕಾರಮಾಡಿಕೊಂಡು ಬ್ರಹ್ಮಚರ್ಯವ್ರತವುಳ್ಳವರಾಗಿ ನೆಲದ ಮೇಲೆ ಮಲಗಬೇಕು. ನಾಲ್ಕನೆಯ ರಾತ್ರಿ ಬೆಳಗಿನ ಜಾವದಲ್ಲಿ ಅಗ್ನಿಗೆ ಸಮಿತ್ತುಗಳನ್ನು ಹಾಕಿ, ಪ್ರಾಯಶ್ಚಿತ್ತಪರ್ಯಂತ ಕರ್ಮಗಳನ್ನು ಮಾಡಿ, ಆ ಮೇಲೆ ಒಂಭತ್ತು ಪ್ರಾಯಶ್ಚಿತ್ತಹೋಮಗಳನ್ನು ಮಾಡುವನು.

ಅದಾದ ಬಳಿಕ—' ನಮ್ಮ ಆತ್ಮನು ಕೂಡಿದೆ, ಹೃದಯಗಳು ಕೂಡಿವೆ, ಹೊ

ಕ್ಕಳು ಕೊಡಿದೆ, ಚರ್ಮವು ಕೂಡಿದೆ, ಕಾಮಪಾಶದಿಂದ ನಿನ್ನನ್ನು ಕಟ್ಟುವೆನು, ಆದರಿಂದ ಬಿಡುಗಡೆಯಿಲ್ಲ' ಎಂದು ಮಂತ್ರವನ್ನು ಹೇಳುತ್ತ ವರನು ವಧುವಿನ ಸಂಭೋಗಮಾಡುವನು. ಆಮೇಲೆ—'ನನ್ನನ್ನು ಅನುಸರಿಸು, ಸಹಚಾರಿಣಿಯಾಗಿರು' ಎಂದು ಮಂತ್ರವನ್ನು ಹೇಳಿ, ಆಕೆಯನ್ನು ಆಲಿಂಗನಮಾಡುವನು. ಅನಂತರ -'ಮಧು, ಇದೋ ಮಧು, ಇದು ಮಧು, ನನ್ನ ನಾಲಿಗೆಯ ಮಾತು ಮಧುವಾಗಿರುವುದು' ಎಂದು ಮಂತ್ರವನ್ನು ಹೇಳಿ, ಅವಳ ಮುಖವನ್ನು ಚುಂಬಿಸುವನು. (ಇಲ್ಲಿ ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ಮಾಡುವ ಸಂಭೋಗವು ಹೇಳಲ್ಪಟ್ಟಿರುವುದು.)

ಆಬಳಿಕ ಮುಟ್ಟಾದವಳು ಮೂರುರಾತ್ರಿಗಳ ಪರ್ಯಂತ ಬ್ರಾಹ್ಮಣದಲ್ಲಿ ಹೇಳಲ್ಪಟ್ಟ ವ್ರತಗಳನ್ನಾಚರಿಸುವಳು. (ಆ ವ್ರತಗಳು ಯಾವುವೆಂದರೆ—ವ್ಯವಾಯವನ್ನು ಬಿಡುವುದು, ಅಭ್ಯಂಜನವಿಲ್ಲದೆ ಇರುವುದು, ತಲೆಬಾಚಿಕೊಳ್ಳದೆ ಇರುವುದು, ಕಣ್ಣಿಗೆ ಕಾಡಿಗೆಹಚ್ಚಿಕೊಳ್ಳದೆ ಇರುವುದು, ಇತ್ಯಾದಿ.) ನಾಲ್ಕನೆಯ ರಾತ್ರಿ, ಗಂಡನು ಆಚಮನಮಾಡಿ, ಋತುಸ್ನಾತಳಾಗಿ ಶುಭ್ರವಾದ ವಸ್ತ್ರವನ್ನು ಧರಿಸಿ ಅಲಂಕಾರ ಮಾಡಿಕೊಂಡು ಒಬ್ಬ ಬ್ರಾಹ್ಮಣನೊಂದಿಗೆ (ಶುದ್ಧಿಗಾಗಿ) ಮಾತಾಡಿದಂಥ ಹೆಂಡತಿಯನ್ನು (ಸಂಭೋಗಾರ್ಥವಾಗಿ) ತನ್ನ ಸಮೀಪಕ್ಕೆ ಕರೆಯುವನು. ಮತ್ತು ಈ ಮಂತ್ರಗಳನ್ನು ಹೇಳಿ ಸಂಭೋಗಮಾಡುವನು.

ವಿಷ್ಣುವು ಯೋನಿಯನ್ನು ಕಲ್ಪಿಸಲಿ, ತ್ವಷ್ಟೃವು ರೂಪಗಳನ್ನು ಮಾಡಲಿ, ಪ್ರಜಾಪತಿಯು ಆಸಿಂಚನಮಾಡಲಿ, ಧಾತೃವು ನಿನಗೆ ಗರ್ಭವನ್ನು ಕೊಡಲಿ. ಸಿನೀವಾಲಿಯು ಗರ್ಭವನ್ನು ಕೊಡಲಿ, ಸಾವಿತ್ರಿಯು ಗರ್ಭವನ್ನು ಕೊಡಲಿ, ಕಮಲಪುಷ್ಪಮಾಲಿಕೆಗಳನ್ನು ಧರಿಸಿರುವ ಅಶ್ವಿನೀದೇವತೆಗಳು ಇಬ್ಬರೂ ನಿನಗೆ ಗರ್ಭವನ್ನು ಕೊಡಲಿ. ಅಶ್ವಿನೀದೇವತೆಗಳು ನಿರ್ಮಿಸುವ ಚಿನ್ನದ ಅರಣಿಯು, ಹತ್ತು ತಿಂಗಳುಗಳಾದ ಬಳಿಕ ಮಗುವಾಗಿ ಹುಟ್ಟುವುದಕ್ಕೋಸ್ಕರ ಅದನ್ನು ನಿನ್ನ ಗರ್ಭಕ್ಕೆ ಕರೆಯುವೆವು. (ಇವು ಋತುಸಮಾವೇಶನದಲ್ಲಿ ಹೇಳುವ ಮಂತ್ರಗಳು.) ಸಂಭೋಗಮಾಡುವಾಗೆಲ್ಲ ಮಂತ್ರಗಳನ್ನು ಹೇಳಬೇಕೆಂದು ಆತ್ರೇಯಮತ. ಆದಿಯಲ್ಲಿಯೂ (ಎಂದರೆ ವಿವಾಹಸಮಾವೇಶನದಲ್ಲಿಯೂ) ಮತ್ತು ಋತುಸಮಾವೇಶನದಲ್ಲಿಯೂ ಮಂತ್ರಗಳನ್ನು ಹೇಳಬೇಕೆಂದು ಬಾದರಾಯಣ ಮತವಾಗಿರುವುದು.

ಹೀಗೆ ಮೇಲೆ ಹೇಳಲ್ಪಟ್ಟ ವಿವಾಹಕ್ರಮವನ್ನು ಪರಿಶೀಲಿಸಿದರೆ, ಋತುಮತೀವಿವಾಹಕ್ಕೆ ಅಪ್ಪಣೆಯಿರುವುದು ಚೆನ್ನಾಗಿ ವೇದ್ಯವಾಗುವುದು. ಇಲ್ಲಿ ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ಸಂಭೋಗಮಾಡುವಾಗ ಹೇಳಬೇಕಾದ ಮಂತ್ರಗಳೂ ಆಮೇಲೆ ವಧುವು ಮುಟ್ಟಾಗಿ ಎರೆದುಕೊಂಡ ಬಳಿಕ ಸಂಭೋಗಮಾಡುವಾಗ ಹೇಳಬೇಕಾದ ಮಂತ್ರಗಳೂ ಬೇರೆಬೇರೆಯಾಗಿರುವುವು. ಇದರಿಂದ ವಿವಾಹಸಮಾವೇಶನವೂ ಋತುಸಮಾವೇಶನವೂ ಪ್ರತ್ಯೇಕಪ್ರತ್ಯೇಕವಾಗಿ ಹೇಳಿದಂ

ತಾಯಿತು. ವಿವಾಹಸಮಾವೇಶನವು ಋತುಮತಿಯಲ್ಲಿಯೇ ಸಂಭವಿಸತಕ್ಕುದಾದುದರಿಂದ, ಇಲ್ಲಿ ಋತುಮತೀವಿವಾಹವೇ ನಿಸ್ಸಂದೇಹವಾಗಿ ಸೂಚಿತವಾಗುವುದು.

ಇದಲ್ಲದೆ ಈ ಗೃಹ್ಯಸೂತ್ರದಲ್ಲಿ ಉಕ್ತವಾದ ಕನ್ಯಾಲಕ್ಷಣವನ್ನು ಪರ್ಯಾಲೋಚಿಸಿದರೂ, ಋತುಮತೀವಿವಾಹವೇ ಸ್ಪಷ್ಟವಾಗುವುದು. ಈ ವಿಷಯವು ಮೊದಲೇ ಹೇಳಲ್ಪಟ್ಟಿದೆ. ಮತ್ತು ಈ ಗೃಹ್ಯವನ್ನನುಸರಿಸಿ ರಚಿಸಲ್ಪಟ್ಟ "ಸಂಸ್ಕಾರರತ್ನಮಾಲಾ" ಎಂಬ ಗ್ರಂಥದಲ್ಲಿ ಭಟ್ಟ ಗೋಪೀನಾಥದೀಕ್ಷಿತನು ಇದೇ ಅರ್ಥವನ್ನು ಸೂಚಿಸಿರುವನು. ಹೇಗೆಂದರೆ:—

ಇದಮುಪಗಮನಮಾವಶ್ಯಕಂ। ಸ್ತ್ರೀಸಂಸ್ಕಾರತ್ವಾತ್ ॥

ಅರ್ಥ.—ವಿವಾಹದ ನಾಲ್ಕನೆಯ ರಾತ್ರಿಯ ಸಂಭೋಗವು ಸ್ತ್ರೀಗೆ ಸಂಸ್ಕಾರವಾಗಿರುವುದರಿಂದ, ಅದು ಅವಶ್ಯವಾಗಿ ನಡೆಸತಕ್ಕುದಾಗಿರುವುದು.

ಹೀಗೆ ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ಸ್ತ್ರೀಗೆ ಸಂಭೋಗವು ಆವಶ್ಯಕವೆಂದು ಹೇಳಿರುವುದರಿಂದಲೂ, ಋತುಮತಿಯಾದ ಸ್ತ್ರೀಯೇ ಸಂಭೋಗಯೋಗ್ಯಳಾಗಿರುವುದರಿಂದಲೂ, ಇಲ್ಲಿ ಋತುಮತೀವಿವಾಹವು ವಿಧಿಸಲ್ಪಟ್ಟಿರುವುದೆಂದು ಹೇಳಲು ಸಂದೇಹವಿಲ್ಲ.

ಆಶ್ವಲಾಯನಗೃಹ್ಯಸೂತ್ರ—ಋಗ್ವೇದಶಾಖೆ. ಅಧ್ಯಾಯ ೧, ಕಂಡಿಕೆ ೭.

ಯತ್ತು ಸಮಾನಂ ತದ್ವಕ್ಷ್ಯಾಮಃ ॥ ೨ ॥

ಗಾರ್ಗ್ಯನಾರಾಯಣವ್ಯಾಖ್ಯಾ — ಜನಪದಾದಿಧರ್ಮಾಣಾಂ ವಕ್ಷ್ಯಮಾಣಧರ್ಮಾಣಾಂ ಚ ವಿರೋಧೇ ಸತಿ, ವಕ್ಷ್ಯಮಾಣಮೇವ ಧರ್ಮಂ ಕುರ್ಯಾತ್। ಜನಪದಾದಿಧರ್ಮಮಿತಿ ಯದ್ವಕ್ಷ್ಯಾಮಃ, ತತ್ ಸರ್ವತ್ರ ಸಮಾನಮೇವೇತ್ಯರ್ಥಃ। ವೈದೇಹೇಷು ಸದ್ಯಏವ ವ್ಯವಾಯೋ ದೃಷ್ಟಃ। ಗೃಹ್ಯೇ ತು ಬ್ರಹ್ಮಚಾರಿಣೌ ತ್ರಿರಾತ್ರಂ ಇತಿ ಬ್ರಹ್ಮಚರ್ಯಂ ವಿಹಿತಂ। ತತ್ರ ಗೃಹ್ಯೋಕ್ತಮೇವ ಕುರ್ಯಾತ್, ನ ದೇಶಧರ್ಮಮಿತಿ ಸಿದ್ಧಂ॥

ಅರ್ಥ.—ಸಾಮಾನ್ಯವಾದ ಧರ್ಮವು ಯಾವುದೋ ಅದನ್ನು ಹೇಳುತ್ತೇವೆ.

ಗಾರ್ಗ್ಯನಾರಾಯಣವ್ಯಾಖ್ಯೆ.—ಜನಪದಾದಿಗಳು ನಡೆಸುತ್ತಿರುವ ಧರ್ಮಗಳಿಗೂ ಗೃಹ್ಯಸೂತ್ರದಲ್ಲಿ ಹೇಳಲ್ಪಟ್ಟ ಧರ್ಮಗಳಿಗೂ ವಿರೋಧ ತೋರಿದರೆ, ಗೃಹ್ಯಸೂತ್ರೋಕ್ತ ಧರ್ಮಗಳನ್ನೇ ಆಚರಿಸಬೇಕು. ಜನಪದಾದಿಗಳಿಗೋಸ್ಕರ ಈಗ ಹೇಳಲ್ಪಡುವ ಧರ್ಮವು ಸರ್ವತ್ರ ಸಾಮಾನ್ಯವಾದುದೆಂದು ಅರ್ಥವು. ವಿದೇಹದೇಶೀಯರಲ್ಲಿ (ವಿವಾಹವಾದ) ಕೂಡಲೆ (ವಧೂವರರಿಗೆ) ವ್ಯವಾಯವು ನಡೆಯುವುದು. ಗೃಹ್ಯಸೂತ್ರದಲ್ಲಿ ಮೂರುರಾತ್ರಿ ಬ್ರಹ್ಮಚಾರಿಗಳಾಗಿರಬೇಕೆಂದು ಹೇ

ಳಿರುವುದರಿಂದ, ಬ್ರಹ್ಮಚರ್ಯವ್ರತಾಚರಣವು ವಿಹಿತವು. ಈ ವಿಷಯದಲ್ಲಿ ಗೃಹ್ಯೋಕ್ತಧರ್ಮವನ್ನು ಮಾಡಬೇಕೇ ಹೊರತು ದೇಶಧರ್ಮವು ಕೂಡದೆಂಬುದು ಸಿದ್ಧವು.

ಅಧ್ಯಾಯ ೧, ಕಂಡಿಕೆ ೭. ಪಾಣಿಗ್ರಹಣಂ.

ಗೃಭ್ಣಾಮಿ ತೇ ಸೌಭಗತ್ವಾಯ ಹಸ್ತಮಿತ್ಯಂಗುಷ್ಠಮೇವ ಗೃಹ್ಣೀಯಾತ್ ॥

ಸಪ್ತಪದೀಗಮನಂ.

ಅಥೈನಾಮಪರಾಜಿತಾಯಾಂ ದಿಶಿ ಸಪ್ತಪದಾನ್ಯಭ್ಯುತ್ಕ್ರಾಮಯತಿ ॥ ೧೯ ॥
ಬ್ರಾಹ್ಮಣ್ಯಾಶ್ಚ ವೃದ್ಧಾಯಾಜೀವಪತ್ನ್ಯಾಜೀವಪ್ರಜಾಯಾ ಅಗಾರಏತಾಂ ರಾತ್ರಿಂ ವಸೇತ್ ॥ ೨೧ ॥

ಧ್ರುವಾರುಂಧತೀಸಪ್ತರ್ಷಿದರ್ಶನಂ.

ಧ್ರುವಮರುಂಧತೀಂ ಸಪ್ತಋಷೀನಿತಿ ದೃಷ್ಟ್ವಾ ವಾಚಂ ವಿಸೃಜೇತ್ ಜೀವಪತ್ನೀಂ ಪ್ರಜಾಂ ವಿಂದಯೇತಿ ॥ ೨೨ ॥

ಕಂಡಿಕೆ ೮, ವರಗೃಹಂ ಪ್ರತಿ ಪ್ರಯಾಣಂ.

ಪ್ರಯಾಣಉಪಪದ್ಯಮಾನೇ ಪೂಷಾ ತ್ವೇತೋ ನಯತು ಹಸ್ತಗೃಹ್ಯೇತಿ ಯಾನಮಾರೋಹಯೇತ್ ॥ ೧ ॥
ವಿವಾಹಾಗ್ನಿಮಗ್ರತೋಜಸ್ರಂ ನಯಂತಿ ॥ ೪ ॥

ಗೃಹಪ್ರವೇಶಃ.

ಇಹ ಪ್ರಿಯಂ ಪ್ರಜಯಾ ತೇ ಸಮೃಧ್ಯತಾಮಿತಿ ಗೃಹಂ ಪ್ರವೇಶಯೇತ್ ॥ ೮ ॥

ವ್ರತಧಾರಣಂ ವಿವಾಹಸಮಾವೇಶನಂ ಚ ಋತುಸಮಾವೇಶನಂ ಚ,

ಅಕ್ಷಾರಲವಣಾಶಿನೌ ಬ್ರಹ್ಮಚಾರಿಣಾವಲಂಕುರ್ವಾಣಾವಧಶ್ಶಾಯಿನೌ ಸ್ಯಾತಾಂ ॥ ೧೦ ॥
ಅತಊರ್ಧ್ವಂ ತ್ರಿರಾತ್ರಂ ದ್ವಾದಶರಾತ್ರಂ ॥ ೧೧ ॥
ಸಂವತ್ಸರಂ ವೈಕಋಷಿರ್ಜಾಯತ ಇತಿ ॥ ೧೨ ॥

ಅರ್ಥ.— ಪಾಣಿಗ್ರಹಣ—“ ಸೌಭಾಗ್ಯಕ್ಕಾಗಿ ನಿನ್ನ ಹಸ್ತವನ್ನು ಹಿಡಿಯುತ್ತೇನೆ ” ಎಂಬ ಮಂತ್ರವನ್ನು ಹೇಳಿ ವರನು ವಧುವಿನ ಅಂಗುಷ್ಠವನ್ನೇ ಹಿಡಿಯಬೇಕು. ಸಪ್ತಪದಿ — ಅನಂತರ ಆಕೆಯನ್ನು ಉತ್ತರದಿಕ್ಕಿಗೆ ಏಳು ಹೆಜ್ಜೆ ನಡೆಸುವನು. ಗಂಡನೂ ಮಕ್ಕಳೂ ಬದುಕಿರುವಂಥ ವೃದ್ಧಬ್ರಾಹ್ಮಣ ಸ್ತ್ರೀಯ ಮನೆಯಲ್ಲಿ ವಧುವು ಆ ದಿನ ರಾತ್ರಿ ವಾಸಮಾಡಬೇಕು. ಧ್ರುವ ಅರುಂಧತಿ ಮತ್ತು ಸಪ್ತಋಷಿಗಳ ದರ್ಶನ.—ಧ್ರುವನಕ್ಷತ್ರ ಅರುಂಧತಿ ಮತ್ತು ಸಪ್ತಋಷಿಗಳನು

ನೋಡಿದ ಬಳಿಕ, ವಧುವು 'ನನ್ನ ಗಂಡನು ಜೀವಿಸಲಿ, ಪ್ರಜೆಗಳನ್ನು ಪಡೆಯಲಿ' ಎಂಬ ಮಂತ್ರವನ್ನು ಹೇಳಿ, ಮೌನವನ್ನು ಬಿಡಬೇಕು. ಗಂಡನ ಮನೆಗೆ ಪ್ರಯಾಣ.—ಪ್ರಯಾಣ ಮಾಡುವಾಗ ವರನು, 'ಪೂಷನು ನಿನ್ನ ಕೈಹಿಡಿದು ಇಲ್ಲಿಂದ ಕರೆದುಕೊಂಡು ಹೋಗಲಿ' ಎಂಬ ಮಂತ್ರವನ್ನು ಹೇಳಿ, ಆಕೆಯನ್ನು ಗಾಡಿಯಲ್ಲಿ ಹತ್ತಿಸುವನು. ವಿವಾಹಾಗ್ನಿಯನ್ನು ಯಾವಾಗಲೂ ಮುಂದುಗಡೆಯಲ್ಲಿ ತೆಗೆದುಕೊಂಡುಹೋಗುವರು. ಗೃಹಪ್ರವೇಶ.—'ಇಲ್ಲಿ ಪ್ರಜೆಯಿಂದ ನಿನಗೆ ಪ್ರಿಯಸಮೃದ್ಧಿಯಾಗಲಿ' ಎಂಬ ಮಂತ್ರವನ್ನು ಹೇಳಿ ಆಕೆಯನ್ನು ಮನೆಯೊಳಕ್ಕೆ ಕರೆದುಕೊಂಡುಹೋಗುವನು. ಬ್ರಹ್ಮಚರ್ಯವ್ರತಧಾರಣೆ ವಿವಾಹಸಮಾವೇಶನ ಮತ್ತು ಋತುಸಮಾವೇಶನ—ಆಕಾಲದಿಂದ ವಧೂವರರು ಉಪ್ಪುಕಾರವಿಲ್ಲದ ಆಹಾರವನ್ನು ತೆಗೆದುಕೊಳ್ಳುತ್ತ ಅಲಂಕಾರಮಾಡಿಕೊಂಡು, ಸಂಭೋಗವಿಲ್ಲದೆ, ಬ್ರಹ್ಮಚರ್ಯವುಳ್ಳವರಾಗಿ, ನೆಲದಮೇಲೆ ಮೂರುರಾತ್ರಿ ಅಥವಾ ಹನ್ನೆರಡು ರಾತ್ರಿ ಜತೆಯಲ್ಲಿ ಮಲಗಬೇಕು. (ಆಮೇಲೆ ಅವರು ಸಂಭೋಗಮಾಡತಕ್ಕದು) ಒಂದು ಸಂವತ್ಸರ ಪರ್ಯಂತ ಅವರು ಹೀಗೆ ವ್ರತಮಾಡಿದರೆ ಋಷಿಸಮಾನನಾದ ಮಗನು ಅವರಿಗೆ ಹುಟ್ಟುವನು ಎಂದು ಕೆಲವರ ಮತವು.

ಹೀಗೆ ಮೇಲೆ ಹೇಳಲ್ಪಟ್ಟ ವಿವಾಹಕ್ರಮವು, ಪಾಣಿಗ್ರಹಣದಿಂದ ಪ್ರಾರಂಭವಾಗಿ ಸಮಾವೇಶನದಲ್ಲಿ ಸಮಾಪ್ತಿಯಾಗುವುದರಿಂದ, ಈ ಗೃಹ್ಯಸೂತ್ರದಲ್ಲಿಯೂ ಋತುಮತೀವಿವಾಹವೇ ಸೂಚಿತವಾಗುವುದು. ಇಲ್ಲಿ ಬ್ರಹ್ಮಚರ್ಯದ ವಿಷಯದಲ್ಲಿ, ಮೂರುರಾತ್ರಿ—ಹನ್ನೆರಡುರಾತ್ರಿ—ಅಥವಾ ಋಷಿಗೆ ಸಮಾನನಾದ ಮಗನು ಹುಟ್ಟಬೇಕಾದರೆ ಒಂದು ವರ್ಷಪರ್ಯಂತವೆಂದು ವಿಕಲ್ಪವು ಹೇಳಲ್ಪಟ್ಟಿದೆ ವ್ರತವು ಮುಗಿದ ಬಳಿಕ ವ್ಯವಾಯುಮಾಡಬೇಕೆಂದು ಹೇಳಬೇಕಾದುದೇ ಇಲ್ಲ. ಇದಲ್ಲದೆ ಮೊದಲೇ ತೋರಿಸಿರುವ ಪ್ರಕಾರ, ಈ ಗೃಹ್ಯದಲ್ಲಿ ಹೇಳಲ್ಪಟ್ಟ ಕನ್ಯಾಲಕ್ಷಣವು ಋತುಮತಿಯನ್ನೇ ದ್ಯೋತನಮಾಡುವುದು.

ಪಾರಸ್ಕರ ಗೃಹ್ಯಸೂತ್ರ—ಶುಕ್ಲ ಯಜುರ್ವೇದಶಾಖೆ.

ಕಾಂಡ ೧, ಕಂಡಿಕೆ ೬.

ಅಥಾಸ್ಯೈ ದಕ್ಷಿಣಂ ಹಸ್ತಂ ಗೃಹ್ಣಾತಿ ಸಾಂಗುಷ್ಠಂ ॥ ೩ ॥

ಕಂಡಿಕೆ ೭.

ಅಥೈನಾಮಶ್ಮಾನಮಾರೋಹಯತ್ಯುತ್ತರತೋಽಗ್ನೇರ್ದಕ್ಷಿಣಪಾದೇನ ॥ ೧ ॥

ಕಂಡಿಕೆ ೮.

ತಾಂ ದೃಢಪುರುಷಉನ್ಮಥ್ಯ ಪ್ರಾಗ್ವೋದಗ್ವಾನುಗುಪ್ತಾಗಾರಆನಡುಹೇ ರೋಹಿತೇ ಚರ್ಮಣ್ಯುಪವೇಶಯತಿ ॥ ೧೦ ॥

ಅಸ್ತಮಿತೇ ಧ್ರುವಂ ದರ್ಶಯತಿ ॥ ೧೯ ॥

ತ್ರಿರಾತ್ರಮಕ್ಷಾರಾಲವಣಾಶಿನೌ ಸ್ಯಾತಾಮಧಃಶಯೀಯಾತಾಂ ಸಂವತ್ಸರಂ ನ ಮಿಥುನಮುಪೇಯಾತಾಂ ದ್ವಾದಶರಾತ್ರಂ ಷಡ್ರಾತ್ರಂ ತ್ರಿರಾತ್ರಮಂ ತತಃ ॥ ೩೧ ॥

ಹರಿಹರವ್ಯಾಖ್ಯಾ.—ಸಂವತ್ಸರಾದಿಪಕ್ಷಾಶಕ್ತೌ ತ್ರಿರಾತ್ರಪಕ್ಷಾಶ್ರಯಣೇಪಿ ಚತುರ್ಥೀಕರ್ಮಾನಂತರಂ ಪಂಚಮ್ಯಾದಿರಾತ್ರಾವಭಿಗಮನಂ ॥

ಕಂಡಿಕೆ ೧೧,

ತಾಮುದ್ವಾಹ್ಯ ಋತೌ ಪ್ರವೇಶನಂ ॥ ೭ ॥

ಯಥಾಕಾಮೀ ವಾ ಕಾಮಮಾವಿಜನಿತೋಃ ಸಂಭವಾಮೇತಿ ವಚನಾತ್ ॥

ಅರ್ಥ.—ವರನು ಅಂಗುಷ್ಠಸಹಿತವಾಗಿ ವಧುವಿನ ಬಲಗೈಯನ್ನು ಹಿಡಿದುಕೊಳ್ಳುವನು. ಅಗ್ನಿಗೆ ಉತ್ತರದಲ್ಲಿ ಅವಳ ಬಲಗಾಲಿನಿಂದ ಕಲ್ಲನ್ನು ಮೆಟ್ಟಿಸುವನು. ಬಲವಾದವನು ವಧುವನ್ನು ಎತ್ತಿಕೊಂಡು ಉತ್ತರ ಅಥವಾ ಪೂರ್ವಾಭಿಮುಖವಾಗಿ ಬೇರೆ ಮನೆಗೆ ಬಂದು, ಅಲ್ಲಿ ಕೆಂದೆತ್ತಿನ ಚರ್ಮದಮೇಲೆ ಆಕೆಯನ್ನು ಕೂರಿಸುವನು. ಸೂರ್ಯಾಸ್ತಮಯುವಾಗುತ್ತಲೆ ವರನು ವಧುವಿಗೆ ಧ್ರುವನಕ್ಷತ್ರವನ್ನು ತೋರಿಸುವನು. ಮೂರುರಾತ್ರಿ ಪರ್ಯಂತ ಅವರಿಬ್ಬರೂ ಕ್ಷಾರಲವಣವಿಲ್ಲದ ಆಹಾರವನ್ನು ತೆಗೆದುಕೊಳ್ಳಬೇಕು. ನೆಲದಮೇಲೆ ಮಲಗಬೇಕು, ಒಂದು ವರ್ಷ, ಹನ್ನೆರಡು ರಾತ್ರಿ, ಆರುರಾತ್ರಿ, ಅಥವಾ ಕನಿಷ್ಠಪಕ್ಷಕ್ಕೆ ಮೂರುರಾತ್ರಿಗಳ ಪರ್ಯಂತ ಅವರು ಪರಸ್ಪರ ಸಂಭೋಗಮಾಡಕೂಡದು. ಹರಿಹರವ್ಯಾಖ್ಯೆ.—ಸಂವತ್ಸರಾದಿಕಾಲಪರ್ಯಂತ ಬ್ರಹ್ಮಚರ್ಯಾಚರಣೆಗೆ ಶಕ್ತಿಯಿಲ್ಲದಿದ್ದರೆ ಮೂರುರಾತ್ರಿಗಳವರೆಗಾದರೂ ಅದನ್ನಾಚರಿಸಿ ನಾಲ್ಕನೆಯ ರಾತ್ರಿಯ ಕರ್ಮವು ಮುಗಿದ ಬಳಿಕ ಐದನೆಯ ರಾತ್ರಿಯಿಂದ ಅವರು ಸಂಭೋಗಮಾಡಬಹುದು.

ಸೂತ್ರ.—ವರನು ವಧುವನ್ನು ತನ್ನ ಮನೆಗೆ ಕರೆದುಕೊಂಡು ಬಂದ ಬಳಿಕ, ಪ್ರತಿ ಋತುವಿನಲ್ಲಿಯೂ ಅವಳಲ್ಲಿ ಸಂಭೋಗಮಾಡಬೇಕು. ಅಥವಾ, ಸಂತಾನವಾಗುವವರೆಗೂ ಇಷ್ಟಾನುಸಾರವಾಗಿ ಸಂಭೋಗಮಾಡಬಹುದು.

ಹೀಗೆ ಈ ಗೃಹ್ಯವಚನದಿಂದಲೂ ಋತುಮತೀವಿವಾಹವು ವಿಶದವಾಗಿ ಸೂಚಿತವಾಗುವುದೆಂದು ಹೇಳಬೇಕಾದುದಿಲ್ಲ.

ಗೋಭಿಲಗೃಹ್ಯಸೂತ್ರ—ಸಾಮವೇದಶಾಖೆ.

ಪ್ರಪಾಠಕ ೨, ಕಾಂಡಿಕೆ ೧.

ಪ್ರಾವೃತಾಂ ಯಜ್ಞೋಪವೀತಿನೀಮಭ್ಯುದಾನಯನ್ ಜಪೇತ್-ಸೋಮೋದದದ್ಗಂಧರ್ವಾಯೇತಿ ॥ ೧೯ ॥

ಕಾಂಡಿಕೆ, ೨.

ಅನುಪೃಷ್ಠಂ ಪತಿಃ ಪರಿಕ್ರಮ್ಯ ದಕ್ಷಿಣತಉದಙ್ಮುಖೋಽವತಿಷ್ಠತೇ ವಧ್ವಂಜಲಿಂ ಗೃಹೀತ್ವಾ ॥ ೨ ॥

ಪಾಣಿಗ್ರಾಹೋ ಜಪತಿ—ಇಮಮಶ್ಮಾನಮಾರೋಹೇತಿ ॥ ೪ ॥

ಸಮಾಪ್ತಾಸೂರ್ಧ್ವಹಂತಿ ॥ ೧೨ ॥

ಕಾಂಡಿಕೆ ೨.

ಪ್ರಾಗುದೀಚ್ಯಾಂ ದಿಶಿ ಯದ್ಬ್ರಾಹ್ಮಣಕುಲಮಭಿರೂಪಂ ॥ ೧ ॥

ಹುತ್ವೋಪಬೋತ್ಥಾಯೋಪನಿಷ್ಕ್ರಮ್ಯ ಧ್ರುವಂ ದರ್ಶಯತಿ ॥ ೮ ॥

ಅರುಂಧತೀಂ ಚ ॥ ೧೦ ॥

ತಾವುಭೌ ತತ್ಪ್ರಭೃತಿ ತ್ರಿರಾತ್ರಮಕ್ಷಾರಲವಣಾಶಿನೌ ಬ್ರಹ್ಮಚಾರಿಣೌ ಭೂಮೌ ಸಹ ಶಯೀಯಾತಾಂ ॥ ೧೫ ॥

ಚಂದ್ರಕಾಂತತರ್ಕಾಲಂಕಾರಭಾಷ್ಯಂ—ಬ್ರಹ್ಮಚರ್ಯಮಿಹ ವ್ಯವಾಯವರ್ಜನಮುಚ್ಯತೇ । ವಿವಾಹಸ್ಯ ವೃತ್ತತ್ವಾತ್ ವ್ಯವಾಯಃ ಪ್ರಾಪ್ನೋತಿ । ವೈದೇಹೇಷು ಚ ಸದ್ಯಏವ ವ್ಯವಾಯೋ ದೃಷ್ಟಃ ॥

ಕಾಂಡಿಕೆ ೪.

ಯಾನಮಾರೋಹಂತ್ಯಾಂ ಸುಕಿಂಶುಕಂ ಶಾಲ್ಮಲಿಮಿತ್ಯೇತಾಮೃಚಂ ಜಪೇತ್ ॥ ೧ ॥

ಪ್ರಾಪ್ತೇಷು ವಾಮದೇವ್ಯಂ ॥ ೫ ॥

ಕಾಂಡಿಕೆ ೫.

ಅಥಾತಶ್ಚತುರ್ಥೀಕರ್ಮ ॥ ೧ ॥

ಊರ್ಧ್ವಂ ತ್ರಿರಾತ್ರಾತ್ ಸಂಭವಇತ್ಯೇಕೇ ॥ ೨ ॥

ಭಾಷ್ಯಂ—ಸಂಭವಃ ಸಂಭೋಗಃ ವ್ಯವಾಯಃ ಕರ್ತವ್ಯಃ—ಇತ್ಯೇಕೇ ಆಚಾರ್ಯಾಮನ್ಯಂತೇ ॥

ಯದರ್ತುಮತೀ ಭವತ್ಯುಪರತಶೋಣಿತಾ, ತದಾ ಸಂಭವಕಾಲಃ ॥ ೮ ॥

ದಕ್ಷಿಣೇನ ಪಾಣಿನೋಪಸ್ಥಮಭಿಮೃಶೇದ್ವಿಷ್ಣುರ್ಯೋನಿಂ ಕಲ್ಪಯತ್ವಿತ್ಯೇತಯರ್ಚಾ ಗರ್ಭಂ ಧೇಹಿ ಸಿನೀವಾಲೀತಿ ಚ ॥ ೯ ॥

ಸಮಾಪ್ಯರ್ಚಾ ಸಂಭವತಃ ॥ ೧೦ ॥

ಅರ್ಥ.—ವಸ್ತ್ರಧಾರಣಮಾಡಿ ಯಜ್ಞೋಪವೀತಯುಕ್ತಳಾದ ವಧುವನ್ನು ವರನು ಮುಂದಕ್ಕೆ ಕರೆತಂದು, 'ಸೋಮನು ಗಂಧರ್ವನಿಗೆ ಕೊಟ್ಟನು' ಎಂಬ ಮಂತ್ರವನ್ನು ಜಪಿಸುವನು. ಹಿಂದುಗಡೆಯಿಂದ ವಧುವಿನ ದಕ್ಷಿಣಕ್ಕೆ ಹೋಗಿ, ಆಕೆಯ ಕೈಗಳನ್ನು ಹಿಡಿದುಕೊಂಡು, ಉತ್ತರಾಭಿಮುಖವಾಗಿ ನಿಲ್ಲುವನು. 'ಈ ಕಲ್ಲಿನಮೇಲೆ ಹತ್ತು' ಎಂಬ ಮಂತ್ರವನ್ನು ಹೇಳುವನು. ಮಂತ್ರಗಳು ಮುಗಿದ ಬಳಿಕ ಈಶಾನ್ಯದಿಕ್ಕಿನಲ್ಲಿ ಅನುಕೂಲವಾಗಿರುವ ಒಂದು ಬ್ರಾಹ್ಮಣಗೃಹಕ್ಕೆ ಆಕೆಯನ್ನು ಕರೆದುಕೊಂಡು ಹೋಗುವರು. ಹೋಮವನ್ನು ಮಾಡಿದ ಬಳಿಕ ಹೊರಗೆ

ಬಂದು ವರನು ವಧುವಿಗೆ ಧ್ರುವಾರುಂಧತೀನಕ್ಷತ್ರಗಳನ್ನು ತೋರಿಸುವನು. ಆಕಾಲದಿಂದ ಅವರಿಬ್ಬರೂ, ಮೂರುರಾತ್ರೆಗಳ ಪರ್ಯಂತ ಕ್ಷಾರಲವಣಯುಕ್ತವಾದ ಆಹಾರಗಳನ್ನು ತೆಗೆದುಕೊಳ್ಳದೆ, ಬ್ರಹ್ಮಚರ್ಯವ್ರತವುಳ್ಳವರಾಗಿ, ನೆಲದಮೇಲೆ ಜತೆಯಲ್ಲಿ ಮಲಗಬೇಕು. ಚಂದ್ರಕಾಂತತರ್ಕಾಲಂಕಾರ ಭಾಷ್ಯ.—ಇಲ್ಲಿ ಬ್ರಹ್ಮಚರ್ಯವೆಂದರೆ ಸಂಭೋಗವನ್ನು ಬಿಡತಕ್ಕದು. ವಿವಾಹಪೂರ್ತಿಗಾಗಿ ವ್ಯವಾಯವು ಪ್ರಾಪ್ತವಾಗುವುದು. ವೈದೆಹರಲ್ಲಾದರೋ, ಕೂಡಲೆ ವ್ಯವಾಯವು ನಡೆಯುವುದು. ಸೂತ್ರ.—ವಧುವು ಗಾಡಿಯನ್ನು ಹತ್ತುವಾಗ ವರನು—'ಕಿಂಶುಕಪುಷ್ಪಗಳಿಂದಲಂಕೃತವಾದ ಶಾಲ್ಮಲಿ' ಇತ್ಯಾದಿ ಮಂತ್ರವನ್ನು ಜಪಿಸಬೇಕು. ವರನ ಮನೆಗೆ ಬರುತ್ತಲೆ 'ವಾಮದೇವ್ಯ' ಎಂಬ ಮಂತ್ರವನ್ನು ಹೇಳಬೇಕು. ಈಗ ನಾಲ್ಕನೆಯ ದಿನದ ಕರ್ಮವು ಮಾಡಲ್ಪಡುವುದು. ಮೂರುರಾತ್ರಿಯಾದ ಬಳಿಕ ವಧೂವರರು ಸಂಭೋಗಮಾಡಬೇಕೆಂದು ಕೆಲವರ ಮತವು. ಭಾಷ್ಯ—ಸಂಭವ ಎಂದರೆ ಸಂಭೋಗ, ವ್ಯವಾಯಮಾಡಬೇಕು ಎಂದು ಕೆಲವರು ಆಚಾರ್ಯರು ಹೇಳುತ್ತಾರೆ. ಸೂತ್ರ.—ಮುಟ್ಟಾಗಿ ರಕ್ತಸ್ರಾವವು ನಿಂತಬಳಿಕ ಸಂಭೋಗಕ್ಕೆ ಕಾಲವು. ವರನು—'ವಿಷ್ಣುವು ಯೋನಿಯನ್ನು ಕಲ್ಪಿಸಲಿ, ಸಿನೀವಾಲಿ ಗರ್ಭವನ್ನು ಕೊಡು' ಎಂಬ ಋಕ್ಕುಗಳಿಂದ ವಧುವಿನ ಉಪಸ್ಥವನ್ನು ತನ್ನ ಬಲಗೈಯಿಂದ ಮುಟ್ಟಬೇಕು. ಆ ಮಂತ್ರಗಳು ಮುಗಿದ ಬಳಿಕ ಅವರು ಸಂಭೋಗಮಾಡಬೇಕು.

ಹೀಗೆ ಈ ಗೃಹ್ಯಸೂತ್ರದಲ್ಲಿಯೂ ಕೂಡ ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ವಧೂವರರಿಗೆ ಸಂಭೋಗಮಾಡಲಿಕ್ಕೆ ಅಪ್ಪಣೆಯಿರುವುದರಿಂದ, ಋತುಮತೀವಿವಾಹವು ವಿಧಿಸಲ್ಪಟ್ಟಿರುವುದೆಂಬುದು ವ್ಯಕ್ತವಾಗುವುದು.

ಜೈಮಿನಿ ಗೃಹ್ಯಸೂತ್ರ.

(ಖಂಡ ೨೨.)

ತ್ರಿರಾತ್ರಮಕ್ಷಾರಲವಣಾಶಿನೌ ಬ್ರಹ್ಮಚಾರಿಣೌ ಅಧಸ್ಸಂವೇಶಿನೌ ಅಸಂವರ್ತಮಾನೌ ಸಹ ಶಯೀಯಾತಾಂ ॥ ೬ ॥ ಊರ್ಧ್ವಂ ತ್ರಿರಾತ್ರಾತ್ ಸಂಭವಃ ॥ ೭ ॥ ಊರ್ಧ್ವಮರ್ಧರಾತ್ರಾತ್ಸಂವೇಶನಂ ವಿಷ್ಣುರ್ಯೋನಿಂ ಕಲ್ಪಯತು ಇತ್ಯೇತೇನ ತ್ರ್ಯೃಚೇನ ॥ ೧೪ ॥ ಋತಾವೃತಾವೇವಮೇವ ॥ ೧೫ ॥

ಅರ್ಥ.—ವಧೂವರರು, ಮೂರುರಾತ್ರಿಗಳ ಪರ್ಯಂತ ಕ್ಷಾರಲವಣಗಳನ್ನು ಬಿಟ್ಟವರಾಗಿ, ಬ್ರಹ್ಮಚರ್ಯವನ್ನಾಚರಿಸುತ್ತಾ, ಪರಸ್ಪರ ಸಂಭೋಗವಿಲ್ಲದೆ, ನೆಲದಮೇಲೆ ಜತೆಯಲ್ಲಿ ಮಲಗಬೇಕು. ಮೂರುರಾತ್ರೆಗಳಾದ ಬಳಿಕ, ಅವರು ಸಂಭೋಗಮಾಡಬಹುದು. ಅರ್ಧರಾತ್ರಿಯಾದನಂತರ 'ವಿಷ್ಣುರ್ಯೋನಿಂ ಕಲ್ಪಯತು' ಎಂಬ ಮಂತ್ರವನ್ನು ಹೇಳಿ ಸಂಭೋಗಮಾಡಬೇಕು. ಪ್ರತಿ ಋತುವಿನಲ್ಲಿಯೂ ಹೀಗೆಯೇ ಆಚರಿಸತಕ್ಕದು.

ಕಾತ್ಯಾಯನಗೃಹ್ಯಸೂತ್ರ.

ಅಕ್ಷಾರಲವಣಾಶಿನೌ ಸ್ಯಾತಾಮಧಶ್ಶಯೀಯಾತಾಂ ಸಂವತ್ಸರಂ ನ ಮಿಥುನ ಮುಪೇಯಾತಾಂ ದ್ವಾದಶರಾತ್ರಂ ಷಡ್ರಾತ್ರಂ ತ್ರಿರಾತ್ರಂ ವಾ ॥

ಅರ್ಥ.—ಕ್ಷಾರಲವಣಗಳನ್ನು ಬಿಟ್ಟು ನೆಲದಮೇಲೆ ಮಲಗಬೇಕು. ಒಂದು ವರ್ಷ, ಹನ್ನೆರಡುರಾತ್ರಿ, ಆರುರಾತ್ರಿ, ಅಥವಾ ಮೂರುರಾತ್ರಿಗಳ ಪರ್ಯಂತ ಅವರು ಸಂಭೋಗಮಾಡಕೂಡದು.

ಖಾದಿರ ಸಾಂಖ್ಯಾಯನಾದಿ ಬೇರೆ ಕೆಲವು ಗೃಹ್ಯಸೂತ್ರಕಾರರೂ ಇದೇರೀತಿಯಲ್ಲಿ ಅಪ್ಪಣೆ ಕೊಡಿಸಿರುವರು.

ಹೀಗೆ ಮೇಲೆ ಉದಾಹರಿಸಲ್ಪಟ್ಟ ಗೃಹ್ಯಸೂತ್ರಗಳಲ್ಲಿ, ಪಾಣಿಗ್ರಹಣ ಸಪ್ತಪದಿಯಾದ ಬಳಿಕ ವಧೂವರರು ಮೂರುರಾತ್ರಿಯ ಪರ್ಯಂತ ಬ್ರಹ್ಮಚರ್ಯವ್ರತವನ್ನಾಚರಿಸಿ ಆಮೇಲೆ ನಾಲ್ಕನೆಯ ರಾತ್ರಿಯಲ್ಲಿ ಸಂಭೋಗಮಾಡುವುದೆಂದು ಹೇಳಿರುವುದರಿಂದ, ಈ ಗೃಹ್ಯಸೂತ್ರಕಾರರು ಋತುಮತೀವಿವಾಹಕ್ಕೆ ಅಪ್ಪಣೆಕೊಡಿಸಿರುವರೆಂದು ದೃಢವಾಗಿ ಹೇಳಬಹುದು.

ಪ್ರಕರಣ ೧೧.

ವೇದಗಳು.

ಶಾಸ್ತ್ರಗಳಲ್ಲೆಲ್ಲ ಅತ್ಯಂತ ಶ್ರೇಷ್ಠಪ್ರಮಾಣಗಳಾದ ವೇದಗಳು ವಿವಾಹ ವಿಷಯದಲ್ಲಿ ಏನಪ್ಪಣೆಕೊಡಿಸುವುವೆಂಬುದು ಇಲ್ಲೀಗ ವಿಚಾರಮಾಡಲ್ಪಡುವುದು.

ಕೃಷ್ಣಯಜುರ್ವೇದ.

ಈ ವೇದದಲ್ಲಿ ಹೇಳಲ್ಪಟ್ಟಿರುವ ವಿವಾಹ ಮಂತ್ರಗಳಲ್ಲಿ ವರಪ್ರೇಷಣ, ಪಾಣಿಗ್ರಹಣ, ಸಪ್ತಪದಾಭಿಕ್ರಮಣ, ವರನ ಮನೆಗೆ ವಧೂವರರ ಪ್ರಯಾಣ, ಗೃಹಪ್ರವೇಶ, ಧ್ರುವಾರುಂಧತೀದರ್ಶನ, ದಂಡೋತ್ಥಾಪನ, ಚತುರ್ಥೀಹೋಮ, ಅನ್ಯೋನ್ಯಸಮೀಕ್ಷಣ, ವಿವಾಹಸಮಾವೇಶನ ಮತ್ತು ಋತುಸಮಾವೇಶನ—ಈ ಕರ್ಮಸಂಬಂಧವಾದ ಮಂತ್ರಗಳು ಯಥಾಕ್ರಮದಲ್ಲಿ ಉಕ್ತವಾಗಿರುವುವು. ಇವು ಋತುಮತೀವಿವಾಹವನ್ನು ನಿಸ್ಸಂದೇಹವಾಗಿ ಸೂಚಿಸುವುವು. ಈ ವೇದಮೂಲವನ್ನನುಸರಿಸಿ ಯಜುಶ್ಶಾಖಾಗೃಹ್ಯಸೂತ್ರಗಳು ಉಂಟಾಗಿರುವುವು. ಈ ವೇದಮಂತ್ರಗಳೇ ಆ ಸೂತ್ರಗಳಲ್ಲಿ ಹೇಳಲ್ಪಟ್ಟಿರುವುವು. ಆ ಗೃಹ್ಯಸೂತ್ರಗಳು ಋತುಮತೀವಿವಾಹವನ್ನು ಸೂಚಿಸುವುವೆಂದು ಮೊದಲೇ ತೋರಿಸಿಕೊಟ್ಟದ್ದಾಯಿತು. ಅವುಗಳಿಗೆ ಮೂಲವಾದ ಈ ವೇದವೂ ಕೂಡ ಋತುಮತೀವಿವಾಹವನ್ನು ಸೂಚಿಸುವುದೆಂದು ಇಲ್ಲಿ ತೋರಿಸಲ್ಪಡುವುದು. ಇದಕ್ಕಾಗಿ ಕೆಲವು ವೇದಮಂತ್ರಗಳು ಪರಿಶೀಲಿಸಲ್ಪಡುವುವು.—

ಕೃಷ್ಣಯಜುರ್ವೇದ, ಏಕಾಗ್ನಿಕಾಂಡ, ಪ್ರಪಾಠಕ ೧, ಖಂಡ ೯.

ದಂಡೋತ್ಥಾಪನ ಮಂತ್ರಗಳು.—

ಉದೀರ್ಷ್ವಾತೋ ವಿಶ್ವಾವಸೋ ನಮಸೇಡಾಮಹೇ ತ್ವಾ ।
ಅನ್ಯಾಮಿಚ್ಛ ಪ್ರಫರ್ವ್ಯಂ ಸಂ ಜಾಯಾಂ ಪತ್ಯಾ ಸೃಜ ॥ ೧ ॥

ಹರದತ್ತಮಿಶ್ರವ್ಯಾಖ್ಯಾ । ದಂಡೋತ್ಥಾಪನಮಂತ್ರಃ ಉದೀರ್ಷ್ವಾತ ಇತಿ । ಅತಃ ಶಯನಾತ್ । ವಿಶ್ವಾವಸೋ ವಿಶ್ವಾವಸುರ್ನಾಮ ಗಂಧರ್ವಃ, ತದುದ್ದಿಶ್ಯ ದಂಡಃ ಸ್ಥಾಪಿತಃ । ತೇನೈವ ಸಂಬೋಧ್ಯತೇ ॥

ಉದೀರ್ಷ್ವಾತಃ ಪತಿವತೀ ಹ್ಯೇಷಾ ವಿಶ್ವಾವಸುಂ ನಮಸಾ ಗೀರ್ಭಿರೀಟ್ಟೇ ।
ಅನ್ಯಾಮಿಚ್ಛ ಪಿತೃಷದಂ ವ್ಯಕ್ತಾಂ ಸ ತೇ ಭಾಗೋ ಜನುಷಾ ತಸ್ಯ ವಿದ್ಧಿ ॥ ೨ ॥

ಹರದತ್ತಮಿಶ್ರವ್ಯಾಖ್ಯಾ । ವ್ಯಕ್ತಾಂ ಅಸಮಾಪ್ತ ವಿವಾಹಾಂ ॥

ಅರ್ಥ.—ವಿಶ್ವಾವಸುವೆ, ಈ ಹಾಸಿಗೆಯಿಂದೇಳು. ನಮಸ್ಕಾರದಿಂದ ನಿನ್ನನ್ನು ಬೇಡಿಕೊಳ್ಳುತ್ತೇವೆ. ಪ್ರಫರ್ವಿಯಾದ ಬೇರೆ ಸ್ತ್ರೀಯನ್ನು ಅಪೇಕ್ಷಿಸು. ಈ ನನ್ನ ಹೆಂಡತಿಯನ್ನು ಪತಿಯಾದ ನನ್ನೊಂದಿಗೆ ಬಿಡು. ಹರದತ್ತಮಿಶ್ರವ್ಯಾಖ್ಯೆ.— ಉದೀರ್ಷ್ವಾತ ಇತ್ಯಾದಿ ಮಂತ್ರವು ದಂಡೋತ್ಥಾಪನ ಮಂತ್ರವು. ಅತಃ ಎಂದರೆ

ಹಾಸಿಗೆಯಿಂದ, ವಿಶ್ವಾವಸು—ವಿಶ್ವಾವಸುವೆಂಬ ಹೆಸರುಳ್ಳ ಗಂಧರ್ವನು. ವಿಶ್ವಾವಸುವೆಂಬ ಭಾವನೆಯಿಂದ ದಂಡವು ಸ್ಥಾಪಿಸಲ್ಪಟ್ಟಿರುವುದು. ಆದುದರಿಂದಲೇ ಹಾಗೆ ಕರೆಯಲ್ಪಡುತ್ತದೆ.

ಮಂತ್ರಾರ್ಥ.—ಈ ಹಾಸಿಗೆಯಿಂದೇಳು. ಇವಳು ಪತಿಯುಳ್ಳವಳಲ್ಲವೆ! ವಿಶ್ವಾವಸುವಾದ ನಿನ್ನನ್ನು ನಮಸ್ಕಾರದಿಂದಲೂ ಸ್ತುತಿಗಳಿಂದಲೂ ಯಾಚಿಸುತ್ತೇನೆ. ಮದಿವೆಯಾಗದೆ ತಂದೆಯಮನೆಯಲ್ಲಿರುವಂಥ ಅನ್ಯಳನ್ನಪೇಕ್ಷಿಸು. ಅಂಥವಳು ಸ್ವಾಭಾವಿಕವಾಗಿ ನಿನ್ನ ಭಾಗವಾಗಿರುವಳು. ಆ ಭಾಗವನ್ನು ಹೊಂದು.

ವ್ಯಾಖ್ಯೆ.—ವ್ಯಕ್ತಾಂ ಎಂದರೆ ವಿವಾಹವಿಲ್ಲದವಳನ್ನು ಎಂದರ್ಥವು.

ತಾತ್ಪರ್ಯ.—ವಿಶ್ವಾವಸುವೆಂಬ ಗಂಧರ್ವನು ಕಾವಲುಗಾರನಾಗಿ ಮದಿವೆಯಾಗದ ಸ್ತ್ರೀಯರನ್ನು ರಕ್ಷಿಸುವನೆಂದು ಶಾಸ್ತ್ರಗಳಲ್ಲಿ ಉಕ್ತವಾಗಿದೆ. ವಧೂವರರು ಮೂರುರಾತ್ರಿಗಳ ಪರ್ಯಂತ ಬ್ರಹ್ಮಚರ್ಯವನ್ನಾಚರಿಸುತ್ತ ಜತೆಯಲ್ಲಿ ಮಲಗಿರುವಾಗ ಅವರ ಮಧ್ಯದಲ್ಲಿಡಲ್ಪಟ್ಟ ದಂಡವು ವಿಶ್ವಾವಸುವೆಂದು ಭಾವಿಸಲ್ಪಡುವುದು. ಈಗ ವಧುವಿಗೆ ವಿವಾಹವು ಬೆಳೆದು ಪತಿಯೊಡನೆ ಸಂಭೋಗಮಾಡುವ ಕಾಲವು ಬಂದಿರುವುದರಿಂದ, ವಿಶ್ವಾವಸುವು ಆ ಸ್ಥಳವನ್ನು ಬಿಟ್ಟು ಹೋಗಬೇಕು. ಗಂಡಹೆಂಡರ ಸಂಭೋಗಕಾಲದಲ್ಲಿ ಅನ್ಯರಿರಬಾರದು. ಆದುದರಿಂದ ವಿಶ್ವಾವಸುವು ಪ್ರಾರ್ಥಿತನಾಗಿ ಕಳುಹಿಸಲ್ಪಡುವನು. ದಂಡವಿಸರ್ಜನೆಯು ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ಮಾಡಲ್ಪಡುವುದು. ಆಮೇಲೆ ವಧೂವರರು ಸಂಭೋಗಮಾಡುವರು ಎಂದು ಉಕ್ತವಾಗಿದೆ. ಇದರಿಂದ ಋತುಮತೀವಿವಾಹವು ಬೋಧಿತವಾಗುವುದು.

ವಧೂವರರು ಪರಸ್ಪರ ಸಮೀಕ್ಷಿಸುವಾಗ ಹೇಳುವ ಮಂತ್ರಗಳು.

(ಖಂಡ ೧೧.)

ಅಪಶ್ಯಂ ತ್ವಾ ಮನಸಾ ಚೇಕಿತಾನಂ ತಪಸೋ ಜಾತಂ ತಪಸೋ ವಿಭೂತಂ|
ಇಹ ಪ್ರಜಾಮಿಹ ರಯಿಂ ರರಾಣಃ ಪ್ರಜಾಯಸ್ವ ಪ್ರಜಯಾ ಪುತ್ರಕಾಮ ॥೧॥

ಅಪಶ್ಯಂ ತ್ವಾ ಮನಸಾ ದೀಧ್ಯಾನಾಂ ಸ್ವಾಯಾಂ ತನೂಂ ಋತ್ವಿಯೇ ನಾಥಮಾನಾಂ| ಉಪ ಮಾಮುಚ್ಚಾ ಯುವತಿರ್ಬಭೂಯಾಃ ಪ್ರಜಾಯಸ್ವ ಪ್ರಜಯಾ ಪುತ್ರಕಾಮೇ ॥೨॥

ಅರ್ಥ.—ತಪಸ್ಸಿನಿಂದ ಹುಟ್ಟಿ ತಪಸ್ಸಿನಿಂದ ವೃದ್ಧಿಹೊಂದಿದವನಾಗಿಯೂ ನನ್ನ ಅಭಿಪ್ರಾಯವನ್ನು ತಿಳಿದವನಾಗಿಯೂ ಇರುವ ನಿನ್ನನ್ನು ಸ್ನೇಹಭಾವದಿಂದ ನೋಡಿದೆನು. ಪುತ್ರಕಾಮನೆ, ಈ ನನ್ನ ಮನೆಗೆ ಪ್ರಜೆಯನ್ನೂ ಧನವನ್ನೂ ಕೊಡುವವನಾಗಿ ನನ್ನಲ್ಲಿ ಸಂತಾನವನ್ನು ಹೊಂದು (ಎಂದು ವಧುವು ವರನಿಗೆ ಹೇಳುವಳು). ಧ್ಯಾನಿಸುತ್ತಿರುವಳಾಗಿಯೂ ಋತುಮತಿಯಾದ ನಿನ್ನ ಶರೀರದಲ್ಲಿ

ಗರ್ಭವನ್ನಪೇಕ್ಷಿಸುವವಳಾಗಿಯೂ ಇರುವ ನಿನ್ನನ್ನು ಸ್ನೇಹಭಾವದಿಂದ ನೋಡಿದೆನು. ಪುತ್ರಕಾಮಳೆ, ಯುವತಿಯಾದ ನೀನು ನನ್ನನ್ನು ಮೇಲೆ ಮಲಗಿಸಿಕೊಂಡು ಸಂಭೋಗಮಾಡಿ ಸಂತಾನವನ್ನು ಹೊಂದು (ಎಂದು ವರನು ವಧುವಿಗೆ ಹೇಳುವನು).

ತಾತ್ಪರ್ಯ.—ಸಮಾವೇಶನಕ್ಕೆ ಸ್ವಲ್ಪಕಾಲ ಮುಂಚೆ ಈ ಮಂತ್ರಗಳನ್ನು ಹೇಳಿ ವಧೂವರರು ಒಬ್ಬರನ್ನೊಬ್ಬರು ನೋಡುವರು. ಇಲ್ಲಿ ವರನು ವಧುವನ್ನು ಕುರಿತು ನೀನು ಯುವತಿ, ಪುತ್ರನನ್ನು ಅಪೇಕ್ಷಿಸುತ್ತಿರುವೆ, ಸಂಭೋಗಮಾಡಿ ಪುತ್ರನನ್ನು ಹೊಂದು ಎಂದು ಹೇಳುವುದರಿಂದಲೂ ವಧುವು ವರನನ್ನು ಕುರಿತು ನೀನು ಪುತ್ರಕಾಮಿಯಾಗಿರುವೆ, ನನ್ನಲ್ಲಿ ಪುತ್ರನನ್ನು ಪಡೆ ಎಂದು ಹೇಳುವುದರಿಂದಲೂ ಋತುಮತೀವಿವಾಹವು ವ್ಯಕ್ತವಾಗಿ ಪ್ರಕಟವಾಗುವುದು.

ತಾಂ ಪೂಷಂಛಿವತಮಾಮೇರಯಸ್ವ ಯಸ್ಯಾಂ ಬೀಜಂ ಮನುಷ್ಯಾವಪಂತಿ। ಯಾ ನಊರೂ ಉಶತೀ ವಿಶ್ರಯಾತೇ ಯಸ್ಯಾಮುಶಂತಃ ಪ್ರಹರೇಮ ಶೇಫಂ॥೬

(ಖಂಡ ೬. ಪ್ರ. ೧)

ಅರ್ಥ.—ಎಲೈ ಪೂಷನೆ, ಯಾವಳಲ್ಲಿ ಮನುಷ್ಯರು ಬೀಜವನ್ನು ಬಿಡುವರೋ, ಸಂಭೋಗಾಪೇಕ್ಷೆಯುಳ್ಳವಳಾಗಿ ಯಾವಳು ನನಗೋಸ್ಕರ ತೊಡೆಯನ್ನು ತೆರೆಯುವಳೋ, ಮತ್ತು ಸಂಭೋಗಾಪೇಕ್ಷೆಯುಳ್ಳವನಾಗಿ ನಾನು ಯಾವಳಲ್ಲಿ ಶಿಶ್ನಪ್ರಹರಮಾಡುವೆನೋ, ಅಂಥ ಮಂಗಳತಮಳಾದ ಇವಳನ್ನು ನನಗೆ ಅನುಕೂಲಳಾಗುವಂತೆ ಪ್ರೇರಿಸು.

ಈ ಮಂತ್ರವನ್ನು ವರನು ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ಸಮಾವೇಶನಕ್ಕೆ ಸ್ವಲ್ಪಕಾಲ ಮೊದಲು ಹೇಳುವನು. ಹೆಂಡತಿಯನ್ನು ಸಂಭೋಗಕ್ಕೆ ಅನುಕೂಲಿಸುವಂತೆ ಮಾಡೆಂದು ಪೂಷನನ್ನು ಈ ಮಂತ್ರದಿಂದ ಪ್ರಾರ್ಥಿಸುವನು. ಆ ಬಳಿಕ ಸ್ವಲ್ಪಕಾಲದಲ್ಲಿಯೇ ಸಮಾವೇಶನವು ನಡೆಯುವುದು. ಇಂಥ ಸಂದರ್ಭದಲ್ಲಿ ಋತುಮತೀವಿವಾಹವು ದ್ಯೋತಿತವಾಗುವುದೆಂದು ಹೇಳಬೇಕಾದುದಿಲ್ಲ.

ವಿವಾಹಸಮಾವೇಶನಕಾಲದಲ್ಲಿ ಎಂದರೆ ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ವಧೂವರರು ಸಂಭೋಗಾರ್ಥವಾಗಿ ಒಂದೇ ಹಾಸಿಗೆಯಲ್ಲಿ ಮಲಗುವಾಗ ಹೇಳುವ ಮಂತ್ರಗಳು.

[ಖಂಡ ೧೨, ಪ್ರ. ೧)

ಆರೋಹೋರುಮುಪಬರ್ಹಸ್ವ ಬಾಹುಂ ಪರಿಷ್ವಜಸ್ವ ಜಾಯಾಂ ಸುಮನಸ್ಯಮಾನಃ। ತಸ್ಯಾಂ ಪುಷ್ಯತಂ ಮಿಥುನೌ ಸಯೋನೀ ಬಹ್ವೀಂ ಪ್ರಜಾಂ ಜನಯಂತೌ। ಸರೇತಸಾ ॥೧॥ ಆರ್ದ್ರಯಾರಣ್ಯಾ ಯತ್ರಾಮಂಥತ್ಪುರುಷಂ ಪುರುಷೇಣ ಶಕ್ರಃ ತದೇತೌ ಮಿಥುನೌ ಸಯೋನೀ ಪ್ರಜಯಾಮತೇನೇಹ ಗಚ್ಛತಂ ॥೨॥ ದಶಸ್ಯಂ

ತ್ವಾಮೃತಾಯು ಕಂ ಶಮುಥೋ ರೋಮಶಂಹಥೋ ದೇವೇಷು ಕೃಣುತೋ ದುವಃ ॥ ೫ ॥

ಹರದತ್ತಮಿಶ್ರವ್ಯಾಖ್ಯಾ । ಅಥ ಸಮಾವೇಶನಕಾಲೇ ಜಪಃ । ಅನ್ಯೋವೈನಾಮಭಿಮಂತ್ರಯೇತ । ಆರೋಹೋರುಮಿತಿ । ಜಪಪಕ್ಷೇ ತಾವದಾತ್ಮನಏವಾಯುಮಂತರಾತ್ಮನಃ ಪ್ರೈಷಃ ॥

ಅರ್ಥ.—ತೊಡೆಯನ್ನು ಹತ್ತು. ತೋಳನ್ನು ನೀಡು. ಹೆಂಡತಿಯನ್ನು ಆಲಿಂಗನ ಮಾಡು. ಪುಷ್ಟರಾಗಿ ಮಿಥುನರಾಗಿ ಉಪಸ್ಥೇಂದ್ರಿಯಗಳನ್ನು ಸೇರಿಸಿದವರಾಗಿ ಸರೇತಸರಾಗಿ ಬಹಳವಾದ ಪ್ರಜೆಯನ್ನುಂಟುಮಾಡಿರಿ. ಅಗ್ನಿಹೋತ್ರಿಯು ಅರಣಿಯಿಂದ ಮಥನವಮಾಡಿ ಅಗ್ನಿಯನ್ನುಂಟುಮಾಡಿದರೀತಿಯಲ್ಲಿ, ಹೇಗೆ ಇಂದ್ರನು ಪುರುಷೇಂದ್ರಿಯದಿಂದ ಗರ್ಭವನ್ನುಂಟುಮಾಡಿದನೋ, ಹಾಗೆ ನೀವು ಉಪಸ್ಥೇಂದ್ರಿಯಗಳನ್ನು ಸೇರಿಸಿ ಮಿಥುನರಾಗಿ ಸಂತತಿರೂಪವಾದ ಅಮೃತದಿಂದ ಕೂಡಿದವರಾಗಿರಿ. ಮರಣವಿಲ್ಲದ ದೇವತ್ವವನ್ನು ಹೊಂದುವುದಕ್ಕೋಸ್ಕರ, ಯಾಚಕರಿಗೆ ಕೇಳಿದ್ದನ್ನು ದಾನಮಾಡುತ್ತ, ರೋಮವಿಶಿಷ್ಟವಾದ ಉಪಸ್ಥೇಂದ್ರಿಯಗಳನ್ನು ಸೇರಿಸುವಂಥವರಾಗಿ, ದೇವತೆಗಳ ಸೇವೆಯನ್ನು ಮಾಡಿರಿ. ಹರದತ್ತಮಿಶ್ರವ್ಯಾಖ್ಯೆ.—ಈಗ ಸಮಾವೇಶನಕಾಲದ ಜಪವು ಹೇಳಲ್ಪಡುತ್ತದೆ. 'ಆರೋಹೋರುಂ, ಎಂಬ ಮತ್ತೊಂದು ಮಂತ್ರದಿಂದ ವರನು ವಧುವನ್ನು ಅಭಿಮಂತ್ರಿಸುತ್ತಾನೆ. ಜಪಪಕ್ಷದಲ್ಲಿ ಇದು ಅಂತರಾತ್ಮಕ್ಕೆ ಹೇಳುವಂಥ ಮಾತು.

ಈಗ ಋತುಸಮಾವೇಶನಕಾಲದಲ್ಲಿ ಹೇಳುವ ಮಂತ್ರಗಳು ಉದಾಹರಿಸಲ್ಪಡುವುವು.

(ಕಾಂಡ ೧೩, ಪ್ರ. ೧)

ವಿಷ್ಣುರ್ಯೋನಿಂ ಕಲ್ಪಯತು ತ್ವಷ್ಟಾ ರೂಪಾಣಿ ಪಿಂಶತು । ಆಸಿಂಚತು ಪ್ರಜಾಪತಿ ರ್ಧಾತಾ ಗರ್ಭಂ ದಧಾತು ತೇ ॥ ಗರ್ಭಂ ಧೇಹಿ ಸಿನೀವಾಲಿ ಗರ್ಭಂ ಧೇಹಿ ಸರಸ್ವತಿ । ಗರ್ಭಂ ತೇ ಅಶ್ವಿನೌ ದೇವಾವಾಧತ್ತಾಂ ಪುಷ್ಕರಸ್ರಜೌ ॥

ಹರದತ್ತಮಿಶ್ರವ್ಯಾಖ್ಯಾ । ಅಥ ಋತುಸಮಾವೇಶನೇ ಭಾರ್ಯಾಯಾ ಅಭಿಮಂತ್ರಣಂ ವಿಷ್ಣುರ್ಯೋನಿಮಿತಿ ॥

ಅರ್ಥ.—ವಿಷ್ಣುವು ನಿನ್ನ ಯೋನಿಯನ್ನು ಗರ್ಭಾಧಾನಯೋಗ್ಯವಾಗಿ ಮಾಡಲಿ. ತ್ವಷ್ಟನು ಅವಯವಗಳನ್ನು ಮಾಡಲಿ. ಪ್ರಜಾಪತಿಯು ರೇತಸ್ಸನ್ನು ಬಿಡಲಿ. ಧಾತೃವು ನಿನಗೆ ಗರ್ಭವನ್ನು ಕೊಡಲಿ. ಸಿನೀವಾಲಿಯೆ ಗರ್ಭವನ್ನು ಕೊಡು. ಸರಸ್ವತಿಯೆ ಗರ್ಭವನ್ನು ಕೊಡು. ಕಮಲಮಾಲಿಕೆಯುಳ್ಳ ಅಶ್ವಿನೀದೇವತೆಗಳು ನಿನಗೆ ಗರ್ಭವನ್ನು ಕೊಡಲಿ. ಹರದತ್ತಮಿಶ್ರವ್ಯಾಖ್ಯೆ.—ಋತು

ಸಮಾವೇಶನದಲ್ಲಿ “ ವಿಷ್ಣುರ್ಯೋನಿಂ ” ಎಂಬ ಮಂತ್ರದಿಂದ ಗಂಡನು ಹೆಂಡತಿಯನ್ನು ಅಭಿಮಂತ್ರಿಸುವನು.

ಹೀಗೆ ಮೇಲೆ ಹೇಳಿರುವ ಮಂತ್ರಗಳು ಋತುಮತೀವಿವಾಹವನ್ನು ಸೂಚಿಸುವವು. ವಿವಾಹದ ನಾಲ್ಕನೆಯ ರಾತ್ರಿ ಸಂಭೋಗಕಾಲದಲ್ಲಿ ಹೇಳುವ ಮಂತ್ರಗಳು ಬೇರೆಯಾಗಿರುವವು. ಆಮೇಲೆ ಋತುಕಾಲದಲ್ಲಿ ಸಂಭೋಗ ಮಾಡುವಾಗ ಹೇಳುವ ಮಂತ್ರಗಳೇ ಬೇರೆಯಾಗಿರುವವು. ಇದಲ್ಲದೆ ಋತುಮತೀವಿವಾಹವನ್ನು ಪ್ರಕಟಮಾಡುವ ಬೇರೆ ಕೆಲವು ವೈವಾಹಿಕ ಮಂತ್ರಗಳಿರುವವು. ಯಾವುವೆಂದರೆ:—

ಜೀವಾಂ ರುದಂತಿ ವಿಮಯಂತೇ ಅಧ್ವರೇ ದೀರ್ಘಾಮನು ಪ್ರಸಿತಿಂ ದೀಧಿಯುರ್ನರಃ । ವಾಮಂ ಪಿತೃಭ್ಯೋ ಯ ಇದಂ ಸಮೇರಿರೇ ಮಯಃ ಪತಿಭ್ಯೋ ಜನಯಃ ಪರಿಷ್ವಜೇ ॥ ೬ ॥

(ಖಂಡ ೧, ಪ್ರ. ೧)

ಹರದತ್ತಮಿಶ್ರವ್ಯಾಖ್ಯಾ । ಕನ್ಯಾವಿಯೋಗಕಾಲೇ ಬಂಧುಜನಸ್ಯ ರೋದನೇ ಜಪಃ । ಪರಿಷ್ವಜೇ ಪರಿಷ್ವಂಗಾಯ ಪರ್ಯಾಪ್ತಂ ಏವಂಭೂತಂ ವಿವಾಹಕರ್ಮ ಪ್ರವರ್ತಿತವಂತಃ, ತೇ ಕನ್ಯಾಬಂಧು ಮನುಷ್ಯಾಃ ಆವಯೋಃ ಭಾವಿನಂ ದೀರ್ಘಂ ಭಾವಬಂಧಮಾಲೋಚ್ಯ ಮಾರುದನ್ನಿತ್ಯರ್ಥಃ ॥

ಅರ್ಥ.—ಸಂತೋಷಪಡಬೇಕಾದಾಗ ಅವರು ಅಳುವುದು ಏಕೆ? ಅವರಿಗೂ ನಮಗೂ ಉಂಟಾಗುವಂಥ ಬಹುಕಾಲ ಸಂಬಂಧವನ್ನು ಕುರಿತು ಪರ್ಯಾಲೋಚಿಸಲಿ. ಕನ್ಯೆಯು ಮತ್ತು ನನ್ನ ಸಂಭೋಗದಲ್ಲಿ ಪರಿಸಮಾಪ್ತಿಯಾಗುವ ಈ ವಿವಾಹವನ್ನು ಅವರೇ ಪ್ರೇರಿಸಿರುವರು. ಹರದತ್ತಮಿಶ್ರವ್ಯಾಖ್ಯೆ.—ಕನ್ಯಾವಿಯೋಗಕಾಲದಲ್ಲಿ ಬಂಧುಜನಗಳು ಅತ್ತರೆ, ವರನು ಈ ಮಂತ್ರವನ್ನು ಜಪಿಸುವನು. ಸಂಭೋಗದಲ್ಲಿ ಸಮಾಪ್ತವಾಗುವ ಈ ವಿವಾಹಕರ್ಮದಲ್ಲಿ ಪ್ರವರ್ತಿಸಿರುವ ಕನ್ಯಾಬಂಧುಗಳು ನಮ್ಮಗಳಿಗೆ ಉಂಟಾಗುವ ದೀರ್ಘಬಾಂಧವ್ಯವನ್ನು ಪರ್ಯಾಲೋಚಿಸಿ ಅಳಕೂಡದೆಂದು ಅರ್ಥವು.

ತಾತ್ಪರ್ಯ.—ಕನ್ಯಾವಿಯೋಗಕಾಲವೆಂದರೆ ಪಾಣಿಗ್ರಹಣ ಸಪ್ತಪದಿಯಾದ ಬಳಿಕ ವರನು ಕನ್ಯೆಯನ್ನು ತನ್ನ ಮನೆಗೆ ಕರೆದುಕೊಂಡುಹೋಗುವ ಸಮಯ. ಹೀಗೆ ತಂದೆಯ ಮನೆಯನ್ನು ಬಿಟ್ಟು ಗಂಡನ ಮನೆಗೆ ಹೋಗುವಾಗ, ಕನ್ಯೆಯ ತಂದೆ ತಾಯಿ ಮತ್ತು ಇತರ ಬಂಧುಗಳು ಅತ್ತರೆ, ವರನು ಈ ಮಂತ್ರವನ್ನು ಜಪಿಸಬೇಕು. ಋತುಮತಿಯಾದ ಸ್ತ್ರೀಯು ತವರುಮನೆಯಿಂದ ಗಂಡನಮನೆಗೆ ಸಂಸಾರ ಮಾಡಲಿಕ್ಕೆ ಹೋಗುವಾಗ, ಆಕೆಯ ತಂದೆಕಡೆಯವರು ವಿಯೋಗದುಃಖವನ್ನು ಹೊಂದಿ ಅಳುವರೇ ಹೊರತು, ಈಗಿನ ವಿವಾಹಪದ್ಧತಿಯ ಪ್ರಕಾರ, ಚಿಕ್ಕ ಹುಡುಗಿಯನ್ನು ಗೃಹಪ್ರವೇಶಕ್ಕಾಗಿ ಗಂಡನಮನೆಗೆ ಬಂದುದಿವಸದಮಟ್ಟಿಗೆ

ಕರೆದುಕೊಂಡುಹೋಗಿ ಪುನಃ ತವರುಮನೆಗೆ ಕರೆದುಕೊಂಡುಬರುವ ಸಂದರ್ಭ ದಲ್ಲಿ ಯಾರೂ ಅಳುವುದಿಲ್ಲ. ಇದಲ್ಲದೆ ಈ ಮಂತ್ರದಲ್ಲಿ ವಿವಾಹಕರ್ಮವು ಸಂಭೋ ಗದಲ್ಲಿ ಪರಿಸಮಾಪ್ತಿಯಾಗುವುದು—ಎಂದರೆ ಮದಿವೆಯಾದ ಮೂರನೆ ರಾತ್ರಿಯಾದ ಬಳಿಕ ನಾಲ್ಕನೆಯ ರಾತ್ರಿ ಅಥವಾ ಬೇರೆ ರಾತ್ರಿಯಲ್ಲಿ ಗಂಡಹೆಂಡರಿಗೆ ಸಂಭೋಗ ನಡೆದು ಮದಿವೆಯು ಮುಗಿಯುವುದೆಂದು ಹೇಳಿರುವುದರಿಂದ, ಇಲ್ಲಿ ಋತುಮತೀ ವಿವಾಹವು ಸೂಚಿತವಾಗುವುದು.

ಶಂತಆಪಶ್ಶತಪವಿತ್ರಾಭವನ್ತ್ವಥಾಪತ್ಯಾ ತನ್ವಂ ಸಂಸೃಜಸ್ವ॥ (೧—೧—೧೦)

ಹರದತ್ತಮಿಶ್ರವ್ಯಾಖ್ಯಾ । ಅಥ—ಅನಂತರಂ, ಪತ್ಯಾ—ಮಯಾ, ತನ್ವಂ—ತನುಂ, ಸಂಸೃಜಸ್ವ—ಸಂಯೋಜಯ ಸಂಭೋಗಕಾಲೇ ॥

ಅರ್ಥ—ಈ ಪವಿತ್ರವಾದ ನೀರು ನಿನಗೆ ಸುಖಕರವಾಗಿ ಆಗಲಿ. ಆಮೇಲೆ ಪತಿಯೊಂದಿಗೆ ನಿನ್ನ ಶರೀರವನ್ನು ಸೇರಿಸು. ಹರದತ್ತಮಿಶ್ರವ್ಯಾಖ್ಯೆ.—ಅನಂತರ ಸಂಭೋಗಕಾಲದಲ್ಲಿ ನನ್ನೊಂದಿಗೆ ನಿನ್ನ ಶರೀರವನ್ನು ಸೇರಿಸು.

ಇಹ ಪ್ರಿಯಂ ಪ್ರಜಯಾ ತೇ ಸಮೃಧ್ಯತಾಮಸ್ಮಿನ್ಗೃಹೇ ಗಾರ್ಹಪತ್ಯಾಯ ಜಾಗೃಹಿ । ಏನಾ ಪತ್ಯಾ ತನ್ವಂ ಸಂಸೃಜಸ್ವಾಥಾಜೀವ್ರೀ ವಿದಥಮಾವದಾಸಿ ॥ ೧—೯—೪.

ಹರದತ್ತಮಿಶ್ರವ್ಯಾಖ್ಯಾ । ಪತ್ಯಾ—ಮಯಾ, ತನ್ವಂ—ತನುಂ ಶರೀರಂ, ಸಂಸೃಜಸ್ವ—ಸಂಭೋಗಕಾಲೆ ॥

ಅರ್ಥ—ಈ ಮನೆಯಲ್ಲಿ ಮಕ್ಕಳನ್ನು ಪಡೆದವಳಾಗಿ ಸುಖವಾಗಿರು. ಗೃಹ ಕೃತ್ಯದಲ್ಲಿ ಜಾಗರೂಕಳಾಗಿರು. ಪತಿಯೊಂದಿಗೆ ನಿನ್ನ ಶರೀರವನ್ನು ಸೇರಿಸು. ಆಮೇಲೆ ಮುದುಕಿಯಾದ ಬಳಿಕ ಯಜ್ಞವಿಷಯವನ್ನು ಪುತ್ರಪೌತ್ರಾದಿಗಳಿಗೆ ಹೇಳಿ ಕೊಡು. ಹರದತ್ತ ಮಿಶ್ರವ್ಯಾಖ್ಯೆ.—ಸಂಭೋಗಕಾಲದಲ್ಲಿ ನನ್ನೊಂದಿಗೆ ನಿನ್ನ ಶರೀರವನ್ನು ಸೇರಿಸು.

ಹೆಣ್ಣಿನ ತಂದೆಯ ಮನೆಯಲ್ಲಿ ಪಾಣಿಗ್ರಹಣ ಸಪ್ತಪದೀಗಮನವಾದಬಳಿಕ, ಆಕೆಯನ್ನು ವರನು ತನ್ನ ಮನೆಗೆ ಕರೆದುಕೊಂಡು ಹೋದತರುವಾಯ, ಮೇಲಿನ ಮಂತ್ರಗಳನ್ನು ಹೇಳುವನು. ನನ್ನೊಂದಿಗೆ ಸೇರು ಎಂದು ಪುನಃಪುನಃ ಹೇಳು ವುದರಿಂದ ಸಂಭೋಗಕಾಲವು ಸಮೀಪಿಸಿರುವುದೂ ಕನ್ಯೆಯು ಋತುಮತಿಯಾಗಿ ರುವುದೂ ಸೂಚಿಸಲ್ಪಡುವುವು.

ಈ ವೈವಾಹಿಕ ಮಂತ್ರಗಳಲ್ಲದೆ, ಋತುಮತೀವಿವಾಹ ಸೂಚಕವಾದ ಬೇರೆ ಮಂತ್ರಗಳೂ ಇರುವುವು. ಅವುಗಳಲ್ಲಿ ಕೆಲವು ಇಲ್ಲಿ ಉದಾಹರಿಸಲ್ಪಡುವುವು.—

ತೈತ್ತಿರೀಯಸಂಹಿತೆ, ಕಾಂಡ ೪, ಪ್ರಶ್ನ ೩, ಅನುವಾಕ ೧೧.

ವಧೂರ್ಜಜಾನ ನವಗನನಿತ್ರೀ ॥

ಭಾಷ್ಯಂ। ನವಂ ವರಂ ಗಚ ತೀತಿ ನವಗಸ್-ನೂತನವಿವಾಹವತೀ, ವಧೂಃ, ಜನಿತ್ರೀ—ಉತ್ತರೋತ್ತರಪ್ರಜೋತ್ಪಾದಿಕಾ, ಜಜಾನ—ಜಾತಾ ॥

ಅರ್ಥ.—ಹೊಸದಾಗಿ ಮದಿವೆಯಾದ ಸ್ತ್ರೀಯು ಮಕ್ಕಳನ್ನು ಹೆರುವಂಥ ವಳಾಗುವಳು. ಭಾಷ್ಯ.—ನೂತನವಿವಾಹವತಿಯಾದ ವಧುವು ಉತ್ತರೋತ್ತರ ವಾಗಿ ಮಕ್ಕಳನ್ನು ಹೆರುವಂಥವಳಾಗುವಳು.

ಈ ಮಂತ್ರವು ಋತುಮತೀವಿವಾಹವನ್ನು ಸೂಚಿಸುವುದು. ಹೊಸದಾಗಿ ಮದಿವೆಯಾದ ಯುವತಿಯು ಬಸುರಾಗಿ ಮಕ್ಕಳನ್ನು ಹೆರುವ ಸಂಭವವುಂಟು. ಎಂಟು ಅಥವಾ ಹತ್ತು ವರ್ಷದ ವಯಸ್ಸಿನವಳು ಮಕ್ಕಳನ್ನು ಹೆರುವುದು ಅಸಂಭ ವವು. ಇವಳು ದೊಡ್ಡವಳಾಗಿ ಮಕ್ಕಳನ್ನು ಹೆರಲಿಕ್ಕೆ ಕೆಲವು ವರ್ಷಗಳು ಬೇಕು. ಆಗಿವಳು ಹೊಸದಾಗಿ ಮದಿವೆಯಾದವಳೆಂದು ಹೇಳಲಾಸ್ಪದವಿಲ್ಲ. ಮದಿವೆಗೆ ಹಳ ಬಳಾಗುವಳು.

ತೈತ್ತಿರೀಯಾರಣ್ಯಕ, ಪ್ರಪಾಠಕ ೧, ಅನುವಾಕ ೨೭.

ಅಕೃಷ್ಟಾಯೇ ಚ ಕೃಷ್ಟಜಾಃ । ಕುಮಾರೀಷು ಕನೀನೀಷು । ಜಾರಿಣೀಷು ಚ ಯೇ ಹಿತಾಃ ॥೧೧೮॥

ಭಟ್ಟಭಾಸ್ಕರ ಮಿಶ್ರಭಾಷ್ಯಂ । ತಥಾ ಯೇ ಅಕೃಷ್ಟಾಃ—ಅಕರ್ಮಯೋಗ್ಯಾಃ ದುಷ್ಕುಲಪ್ರಸೂತಾಃ, ಯೇ ಚ ಕೃಷ್ಟಜಾಃ—ವಿಶುದ್ಧವಂಶಜಾತಾಃ, ಏವಂ ಸ್ವಯಮಕರ್ಮಯೋಗ್ಯಾಃ ಅಂಧಾದಯಃ ಪಾತಕಿನೋ ವಾ, ತೇ ಅಸ್ಮಾತ್ ಸ್ಥಾನಾತ್ ಅಪಯಂತು। ತಥಾ ಕುಮಾರೀಷು ಕನ್ಯಾಸು, ಯೇ ಹಿತಾಃ-ನಿಹಿತಾಃ-ಗರ್ಭತ್ವೇನಸ್ಥಾಪಿತಾಃ, ಯೇ ಚ ಕನೀನೀಷು ನಿಹಿತಾಃ—ಕನ್ಯಾವಸ್ಥಾಯಾಮೇವ ಪ್ರಸೂತಪುತ್ರಾಃ ಕನೀನ್ಯಃ, ತಾಸ್ವಪರಿಣೀತಾಸು ಯೇ ಗರ್ಭತ್ವೇನ ನಿಹಿತಾಃ, ಯೇ ಚ ಜಾರಿಣೀಷು ಜಾರವತೀಷು ನಿಹಿತಾಃ, ಚೋರಪತಿಃ ಜಾರಃ, ಉಪಲಕ್ಷಣಾತ್ ದುಷ್ಟಕ್ಷೇತ್ರಜಾಃ, ತೇ ಸರ್ವೇಽಪ್ಯಸ್ಮಾದುಪಧಾನಸ್ಥಾನಾತ್ ಅಪಯಂತು ॥

ಅರ್ಥ—ಯಾರು ದುಷ್ಕುಲಪ್ರಸೂತರೋ, ಮತ್ತು ಯಾರು ಶುದ್ಧವಂಶ ದಲ್ಲಿ ಹುಟ್ಟಿದವರಾದಾಗ್ಯೂ ಕರ್ಮಯೋಗ್ಯರಲ್ಲವೋ, ಮತ್ತು ಯಾರು ಕುಮಾರಿ ಗಳಲ್ಲಿಯೂ ಕನೀನಿಯರಲ್ಲಿಯೂ ಜಾರಿಣಿಯರಲ್ಲಿಯೂ ಹುಟ್ಟಿದವರೋ, (ಅಂಥ ವರು ಈ ಯಾಗಸ್ಥಾನದಿಂದ ಹೊರಟುಹೋಗಲಿ). ಭಟ್ಟಭಾಸ್ಕರ ಮಿಶ್ರಭಾಷ್ಯ.—ಹಾಗೆಯೇ ಯಾರು ಅಕರ್ಮಯೋಗ್ಯರೋ—ಎಂದರೆ ದುಷ್ಕುಲಪ್ರಸೂತರೋ, ಮತ್ತು ಯಾರು ಸತ್ಕುಲಪ್ರಸೂತರಾದಾಗ್ಯೂ ತಾವೇ ಕರ್ಮಕ್ಕೆ ಅಯೋಗ್ಯರಾ ಗುವರೋ—ಎಂದರೆ ಅಂಧಾದಿಗಳು ಅಥವಾ ಪಾತಕಿಗಳು—ಅಂಥವರು ಈ ಸ್ಥಾನ ದಿಂದ ಹೊರಟುಹೋಗಲಿ. ಹಾಗೆಯೇ ಯಾರು ಕುಮಾರಿಯರ ಗರ್ಭದಲ್ಲಿ ಹುಟ್ಟಿ ದವರೋ, ಯಾರು ಕನೀನಿಯರ ಗರ್ಭದಲ್ಲಿ ಹುಟ್ಟಿದವರೋ, ಮತ್ತು ಯಾರು

ಚಾರಿಣಿಯರಲ್ಲಿ ಹುಟ್ಟಿದವರೋ, ಅಂಥ ದುಷ್ಟ ಕ್ಷೇತ್ರಗಳಲ್ಲಿ ಹುಟ್ಟಿದವರೆಲ್ಲರೂ ಈ ಉಪಧಾನಸ್ಥಾನದಿಂದ ಹೊರಟುಹೋಗಲಿ. ಕುಮಾರಿಯರು—ಎಂದರೆ ಕನ್ಯೆಯರು. ಕನೀನಿಯರು—ಎಂದರೆ ಮದಿವೆಯಿಲ್ಲದೆ ಪುತ್ರನನ್ನು ಪಡೆದವರು. ಜಾರ—ಎಂದರೆ ಕಳ್ಳ ಗಂಡ.

ತಾತ್ಪರ್ಯ.—ಮೇಲೆ ಹೇಳಿದವರೆಲ್ಲರೂ ಯಾಗಸ್ಥಾನದಲ್ಲಿರುವುದಕ್ಕೆ ಅಯೋಗ್ಯರಾದುದರಿಂದ, ಅವರು ಹೊರಟುಹೋಗಲಿ ಎಂದು ದೇವತೆಗಳನ್ನು ಕುರಿತು ಪ್ರಾರ್ಥನೆಯು ಇಲ್ಲಿ ಮಾಡಲ್ಪಡುವುದು. ಇಲ್ಲಿ ಮದಿವೆಯಿಲ್ಲದ ಸ್ತ್ರೀಯರಲ್ಲಿ ಹುಟ್ಟಿದ ಮಕ್ಕಳ ವಿಷಯವು ಹೇಳಿರುವುದರಿಂದ, ವಿವಾಹಕ್ಕೆ ಪೂರ್ವದಲ್ಲಿ ಕನ್ಯೆಯರು ಋತುಮತಿಗಳಾಗಿರಬಹುದೆಂದು ಈ ವೇದಾನುವಾಕದಿಂದ ಸೂಚಿತವಾಗುವುದು. ಇದರಿಂದ ಪೂರ್ವಕಾಲದಲ್ಲಿ ಸ್ತ್ರೀಯರು ಋತುಮತಿಗಳಾದ ಬಳಿಕ ವಿವಾಹಮಾಡಿಕೊಳ್ಳುವ ಪದ್ಧತಿಯಿತ್ತೆಂದು ಸ್ಪಷ್ಟವಾಗುವುದು.

ತೈತ್ತಿರೀಯಬ್ರಾಹ್ಮಣ, ಕಾಂಡ ೨.

ಸಕೂತಿಮಿಂದ್ರ ಸಚ್ಯುತಿಂ । ಸಚ್ಯುತಿಂ ಜಘನಚ್ಯುತಿಂ । ಕಾನಾತ್ಕಾಭಾಂ ನ ಆಭರ । ಪ್ರಿಯಸ್ಸ್ಯನ್ನಿವ ಸಕ್ಥಾ ॥೧೩॥

ಸಾಯನಭಾಷ್ಯಂ। ಹೇ ಇಂದ್ರ, ಕಾನಾತ್ಕಾಭಾಂ - ಕನಕವದ್ಭಾಸಮಾನಾಂ ರೂಪವತೀಂ ಕನ್ಯಾಂ, ನಃ—ಅಸ್ಮದರ್ಥಂ, ಆಭರ— ಆನಯ, ಕೀದೃಶೀಂ? ಸಕೂತಿಂ—ಕೂತಿಃ ಆಕೂತಿಃ ಸಂಕಲ್ಪಃ ತೇನಸಹಿತಾಂ, ಅಸ್ಮಾಸ್ವನುರಕ್ತಾಮಿತ್ಯರ್ಥಃ॥ ಸಚ್ಯುತಿಂ—ಚ್ಯುತಿಃ ಕ್ಷರಣಂ ವೀರ್ಯಸ್ಯಂದನಂ ತೇನಸಹಿತಾಂ, ಅನುರಾಗಾತಿಶಯೇ ನಹಿ ಸಹಸಾ ವೀರ್ಯಂ ಸ್ಯಂದತಿ, ಏತದೇವ ಪುನಃ ಸಚ್ಯುತಿಮಿತ್ಯನೂದ್ಯ ಜಘನಚ್ಯುತಿಮಿತ್ಯನೇನ ವ್ಯಾಖ್ಯಾಯತೇ, ಆಹರಣೇ ದೃಷ್ಟಾಂತಃ, ಸಕ್ಥಾ ಪ್ರಿಯಸ್ಸ್ಯನ್ನಿವ— ಯಥಾ ಅತ್ಯಂತಂ ಕಾಮುಕಃ ಊರುದ್ವಯಂ ಪ್ರತಿ ಯಬ್ಧುಮುದ್ಯುಕ್ತಃ ಅತ್ಯಂತ ಸಾದರೇಣ ಸ್ತ್ರಿಯಮಾಹರತಿ ತದ್ವತ್ ॥

ಅರ್ಥ.—ಎಲೈ ಇಂದ್ರನೆ, ತೊಡೆಗಳಲ್ಲಿ ಶಿಶ್ನವನ್ನಿಟ್ಟು ಸ್ತ್ರೀಸಂಭೋಗಮಾಡುವ ಆತುರನಾದ ಕಾಮುಕನೋಪಾದಿಯಲ್ಲಿ ನಮ್ಮಗಳಲ್ಲಿ ಅನುರಾಗವುಳ್ಳವಳಾಗಿಯೂ ಸಂಭೋಗಾಪೇಕ್ಷೆಯಿಂದ ವೀರ್ಯಸ್ಯಂದನವುಳ್ಳವಳಾಗಿಯೂ ಬಂಗಾರದಂತೆ ಹೊಳೆಯುವವಳಾಗಿಯೂ ಇರುವ ಕನ್ಯೆಯನ್ನು ನಮಗೆ ತಂದುಕೊಡು.

ಸಾಯನಭಾಷ್ಯ.—ಇಂದ್ರನೆ, ಬಂಗಾರದಂತೆ ಹೊಳೆಯುವ ರೂಪವತಿಯಾದ ಕನ್ಯೆಯನ್ನು ನಮಗೆ ತಂದುಕೊಡು. ಅವಳು ಎಂಥವಳಾಗಿರಬೇಕೆಂದರೆ, ನಮ್ಮಲ್ಲಿ ಅನುರಾಗವುಳ್ಳವಳಾಗಿರಬೇಕು, ಮತ್ತು ಅನುರಾಗಾತಿಶಯದಿಂದ ವೀರ್ಯಸ್ಯಂದನವುಳ್ಳವಳಾಗಿರಬೇಕು. ತರುವುದರಲ್ಲಿ ದೃಷ್ಟಾಂತ.—ಅತ್ಯಂತ ಕಾಮುಕನು ಸ್ತ್ರೀಯ ತೊಡೆಗಳಲ್ಲಿ ಶಿಶ್ನವನ್ನಿಟ್ಟು ಸಂಭೋಗಮಾಡಲುದ್ಯುಕ್ತನಾಗಿ ಅತ್ಯಂತ

ಸಾದರದಿಂದ ಅವಳನ್ನು ಹೇಗೆ ಹಿಡಿದುಕೊಳ್ಳುವನೋ, ಆರೀತಿಯಲ್ಲಿ ಹಿಡಿದುತರುವುದು.

ಇಲ್ಲಿ ಆರಾಧಕನು ಇಂದ್ರನನ್ನು ಪ್ರಾರ್ಥಿಸುವ ವಿಷಯವು ಹೇಳಲ್ಪಟ್ಟಿರುವುದು. ಸಂಭೋಗಾಪೇಕ್ಷೆಯಿಂದ ವೀರ್ಯಸ್ಯಂದನವುಳ್ಳವಳಾದ ಕನ್ಯೆಯನ್ನು ತಂದುಕೊಡು ಎಂಬಲ್ಲಿ ಅಂಥ ಕನ್ಯೆಯು ಋತುಮತಿಯಾಗಿರಬೇಕೆಂಬುದು ಚೆನ್ನಾಗಿ ವ್ಯಕ್ತವಾಗುವುದು.

ಶುಕ್ಲಯಜುರ್ವೇದ.

ಅಧ್ಯಾಯ ೧೭, ಮಂತ್ರ ೯೭.

ಕನ್ಯಾಇವ ವಹತು ಮೇ ತವಾಉ ಅಂಜ್ಯಂಜಾನಾ ಅಭಿ ಚಾಕಶೀಮಿ ॥

ಮಹೀಧರಭಾಷ್ಯಂ । ಕೀದೃಶ್ಯಃ ಕನ್ಯಾಃ ಅಂಜಿ ಭಗಂ ಅಂಜಾನಾಃ ವ್ಯಕ್ತಂ ಯೋಗ್ಯಂ ಕುರ್ವಾಣಾಃ ಅಜ್ಯತೇ ವ್ಯಕ್ತೀಕ್ರಿಯತೇ ಸ್ತ್ರೀಪುಂವ್ಯಕ್ತಿರ್ಯೇನ ತತ್ ತದಂಜನಾಃ ಕನ್ಯಾಃ ಯಥಾ ಪತಿಂ ಗಚ್ಛಂತಿ ॥

ಅರ್ಥ.—ಮದಿವೆಮಾಡಿಕೊಂಡು ಗಂಡನ ಹತ್ತಿರ ಹೋಗಲು ತಮ್ಮ ಉಪಸ್ಥೇಂದ್ರಿಯಗಳನ್ನು ಯೋಗ್ಯವಾಗಿ ಮಾಡಿಕೊಳ್ಳುವ ಕನ್ಯೆಯರಂತಿರುವ ಘೃತಧಾರೆಗಳನ್ನು ನೋಡುತ್ತೇನೆ. ಮಹೀಧರಭಾಷ್ಯ.—ಎಂಥ ಕನ್ಯೆಯರು ಎಂದರೆ – ಉಪಸ್ಥೇಂದ್ರಿಯಗಳನ್ನು ಯೋಗ್ಯವಾಗಿ ಮಾಡಿಕೊಂಡು ಗಂಡನ ಬಳಿಗೆ ಹೋಗುವಂಥ ಕನ್ಯೆಯರು.

ಇಲ್ಲಿ 'ಉಪಸ್ಥೇಂದ್ರಿಯವನ್ನು ಯೋಗ್ಯವಾಗಿ ಮಾಡಿಕೊಂಡು ಗಂಡನ ಬಳಿಗೆ ಹೋಗುವ ಕನ್ಯೆಯರೆಂದು ಹೇಳಿರುವುದರಿಂದ, ಅವರು ಋತುಮತಿಗಳಾಗಿ ಸಂಭೋಗಕ್ಕೆ ಯೋಗ್ಯರಾಗಿರುವರೆಂದು ವ್ಯಕ್ತವಾಗುವುದು.

ಅಧ್ಯಾಯ ೩೦, ಮಂತ್ರ ೬.

ಪ್ರಮುದೇ ಕುಮಾರೀಪುತ್ರಂ ॥

ಅರ್ಥ.—ಪ್ರಮದ್ದೇವತೆಗೆ ಕುಮಾರೀಪುತ್ರನನ್ನು ಬಲಿಕೊಡಬೇಕು.

ಇಲ್ಲಿ ಹೇಳಿರುವ ವಿಷಯವು ಪುರುಷಮೇಧಕ್ಕೆ ಸಂಬಂಧಪಟ್ಟುದಾಗಿರುವುದು. ಕುಮಾರೀಪುತ್ರನೆಂದರೆ ಮದಿವೆಯಿಲ್ಲದ ಸ್ತ್ರೀಯಲ್ಲಿ ಹುಟ್ಟಿದವನೆಂದರ್ಥವು. ಮಗನನ್ನು ಹೆರುವಂಥವಳು ಋತುಮತಿಯಾಗಿರಬೇಕು. ಋತುವಾಗುವುದಕ್ಕೆ ಮೊದಲೇ ಸ್ತ್ರೀಯರಿಗೆ ಮದಿವೆಮಾಡಿದರೆ, ಕುಮಾರೀಪುತ್ರನಿರುವುದಕ್ಕೆ ಅವಕಾಶವಿಲ್ಲ. ಆದುದರಿಂದ ಪೂರ್ವದಲ್ಲಿ ಸ್ತ್ರೀಯರಿಗೆ ಋತುಮತಿಗಳಾದ ಬಳಿಕ ಮದಿವೆಮಾಡುವ ಪದ್ಧತಿಯಿತ್ತೆಂದು ಇದರಿಂದ ವ್ಯಕ್ತವಾಗುವುದು.

ಋಗ್ವೇದ.

ಅಷ್ಟಕ ೮, ಮಂಡಲ ೧೦, ಅಧ್ಯಾಯ ೩, ಸೂಕ್ತ ೮೫.

ಸೂರ್ಯಳ ಮದಿವೆ, ಮತ್ತು ಮದಿವೆಯ ಮಂತ್ರಗಳು.

ರೈಭ್ಯಾಸೀದನುದೇಯೀ ನಾರಾಶಂಸೀ ನ್ಯೋಚನೀ ।
ಸೂರ್ಯಾಯಾಭದ್ರಮಿದ್ವಾಸೋ ಗಾಥಯೈತಿ ಪರಿಷ್ಕೃತಂ ॥ ೬ ॥
ಸೋಮೋ ವಧೂಯುರಭವದಶ್ವಿನಾಸ್ತಾಮುಭಾ ವರಾ ।
ಸೂರ್ಯಾಂ ಯತ್ಪತ್ಯೇ ಶಂಸಂತೀಂ ಮನಸಾ ಸವಿತಾದದಾತ್ ॥ ೯ ॥

ಸಾಯನಭಾಷ್ಯಂ । ಪತ್ಯೇ ಶಂಸಂತೀಂ-ಪತಿಂ ಕಾಮಯಮಾನಾಂ, ಪರ್ಯಾಪ್ತಯೌವನಾಮಿತ್ಯರ್ಥಃ ॥

ಮನೋ ಅಸ್ಯಾಅನಆಸೀದ್ದ್ಯೌರಾಸೀದುತಚ್ಛದಿಃ ।
ಶುಕ್ರಾವನಡ್ವಾಹಾವಾಸ್ತಾಂ ಯದಯಾತ್ಸೂರ್ಯಾ ಗೃಹಂ ॥ ೧೦ ॥

ಅರ್ಥ—ರೈಭಿಯು ಸೂರ್ಯಳ ಸ್ನೇಹಿತಳಾಗಿದ್ದಳು. ನರಾಶಂಸಿಯು ಆಕೆಯ ಸೇವಕಳು. ಸೂರ್ಯಳ ಮಂಗಳಕರವಾದ ವಸ್ತ್ರವು ಗಾಥೆಯಿಂದ ಅಲಂಕರಿಸಲ್ಪಟ್ಟಿತು. ಸೋಮನು ಆಕೆಯನ್ನು ಪತ್ನಿಯಾಗಿ ವರಿಸಿದನು. ಅಶ್ವಿನಿದೇವತೆಗಳಿಬ್ಬರು ಆಕೆಯನ್ನು ಸೋಮನಿಗೋಸ್ಕರ ವರಣಮಾಡಿದರು—ಎಂದರೆ ಹುಡುಕಿ ಕೊಟ್ಟರು. ತರುಣಿಯಾಗಿ ಪತಿಯನ್ನಪೇಕ್ಷಿಸುತ್ತಿದ್ದ ಸೂರ್ಯಳನ್ನು ಆಕೆಯ ತಂದೆಯಾದ ಸವಿತನು ಸೋಮನಿಗೆ ಮದಿವೆ ಮಾಡಿಕೊಟ್ಟನು. ಸಾಯನಭಾಷ್ಯ.—ಪತಿಯನ್ನು ಕಾಮಿಸುವವಳು ಎಂದರೆ ಯೌವನಸ್ಥಳು ಎಂದರ್ಥವು. ಮಂತ್ರ.—ಸೂರ್ಯಳು ಗಂಡನಮನೆಗೆ ಹೋಗುವಾಗ ಆಕೆಗೆ ಮನಸ್ಸು ರಥವಾಗಿತ್ತು. ಅಂತರಿಕ್ಷವು ಹೊದ್ದಿಕೆಯಾಗಿತ್ತು. ರಥವನ್ನೆಳೆದ ಹೋರಿಗಳು ಪ್ರಕಾಶಮಾನವಾಗಿದ್ದುವು.

ಇಲ್ಲಿ ಸೂರ್ಯಳ ಮದಿವೆ ವಿಷಯವು ಹೇಳಲ್ಪಟ್ಟಿದೆ. ತರುಣಿಯಾಗಿದ್ದ ಸೂರ್ಯಳು ಪತಿಯನ್ನಪೇಕ್ಷಿಸಿದಳು. ಸೋಮನು ಆಕೆಯನ್ನು ವರಿಸಿದನು. ಅಶ್ವಿನಿಗಳು ವರಣ ಮಾಡಿದರು. ತಂದೆಯಾದ ಸವಿತನು ಆಕೆಯನ್ನು ಸೋಮನಿಗೆ ವಿವಾಹ ಮಾಡಿ ಕೊಟ್ಟನು. ಮದಿವೆಯಾಗುತ್ತಲೆ ಸೂರ್ಯಳು ಗಂಡನ ಮನೆಗೆ ಹೋದಳು ಎಂದು ತಾತ್ಪರ್ಯವು. ಇದರಿಂದ ಈ ವೇದದಲ್ಲಿ ಋತುಮತೀವಿವಾಹಕ್ಕೆ ಅಪ್ಪಣೆಯಿದೆಯೆಂದು ಸ್ಪಷ್ಟವಾಗುವುದು. ಗೃಹ್ಯಸೂತ್ರಕಾರರು ಈ ಸೂರ್ಯಳ ವಿವಾಹ ವಿಧಾನವನ್ನನುಸರಿಸಿ ದ್ವಿಜರ ವಿವಾಹಕ್ರಮವನ್ನು ವಿಧಿಸಿರುವರು. ದ್ವಿಜರ ವಿವಾಹಗಳಲ್ಲಿ ಮೇಲೆ ಉದಾಹರಿಸಲ್ಪಟ್ಟ ವೇದಮಂತ್ರಗಳೂ ಬೇರೆ ಕೆಲವು ವೇದಮಂತ್ರಗಳೂ ಹೇಳಲ್ಪಡುವುವು.

ಇಹ ಪ್ರಿಯಂ ಪ್ರಜಯಾ ತೇ ಸಮೃಧ್ಯತಾಮಸ್ಮಿನ್ಗೃಹೇ ಗಾರ್ಹಪತ್ಯಾಯ ಜಾಗೃಹಿ ।

ಏನಾ ಪತ್ಯಾ ತನ್ವಂ ಸಂಸೃಜಸ್ವಾಥಾಜಿವ್ರೀ ವಿದಥಮಾವದಾಥಃ ॥ ೨೮ ॥

ಸಾಯಣಭಾಷ್ಯಂ । ಏನಾ--ಅನೇನ ಪತ್ಯಾ ಸಹ, ತನ್ವಂ—ಸ್ವೀಯಂ ಶರೀರಂ, ಸಂಸೃಜಸ್ವ—ಸಂಸೃಷ್ಟಾ ಭವ ॥

ಅರ್ಥ.— ಇಲ್ಲಿ ನೀನು ಸುಖವಾಗಿ ಪ್ರಜೆಯಿಂದ ಸಮೃದ್ಧಿಯನ್ನು ಹೊಂದುವವಳಾಗು. ಈ ಮನೆಯಲ್ಲಿ ಗೃಹಕೃತ್ಯ ವಿಷಯದಲ್ಲಿ ಜಾಗರೂಕಳಾಗಿರು. ಈ ನಿನ್ನ ಗಂಡನೊಂದಿಗೆ ನಿನ್ನ ಶರೀರವನ್ನು ಚೆನ್ನಾಗಿ ಸೇರಿಸು. ಹೀಗೆ ನೀವಿಬ್ಬರೂ ಪೂರ್ಣಾಯುಗಳಾಗಿ ಜತೆಯಲ್ಲಿ ಇರಿ. ಸಾಯಣಭಾಷ್ಯ.—ಈ ಗಂಡನೊಂದಿಗೆ ನಿನ್ನ ಶರೀರವನ್ನು ಸೇರಿಸು.

ಇಹೈವ ಸ್ತಂ ಮಾವಿಯೌಷ್ಟಂ ವಿಶ್ವಮಾಯುರ್ವ್ಯಶ್ನುತಂ ।
ಕ್ರೀಳಂತೌ ಪುತ್ರೈರ್ನಪ್ತೃಭಿರ್ಮೋದಮಾನೌ ಸ್ವೇ ಗೃಹೇ ॥ ೪೨ ॥

ಅರ್ಥ.—ದಂಪತಿಗಳಾದ ನೀವು ಅಗಲದೆ ಇಲ್ಲೇ ಇರಿ. ಪೂರ್ಣಾಯುಷ್ಯವನ್ನು ಪಡೆಯಿರಿ. ಸ್ವಗೃಹದಲ್ಲಿ ಸಂತೋಷಯುಕ್ತರಾಗಿ ಪುತ್ರರೊಂದಿಗೂ ಪೌತ್ರರೊಂದಿಗೂ ಆಡಿಕೊಂಡಿರಿ.

ವಧುವು ಗಂಡನ ಮನೆಗೆ ಬಂದ ಬಳಿಕ ಈ ಮಂತ್ರಗಳು ಹೇಳಲ್ಪಡುವುವು. ಇವುಗಳ ಅರ್ಥವನ್ನು ಪರ್ಯಾಲೋಚಿಸಿದರೆ, ವಧುವು ಋತುಮತಿಯಾದವಳೆಂದು ವ್ಯಕ್ತವಾಗುವುದು. ಇವಲ್ಲದೆ ಕೃಷ್ಣಯಜುರ್ವೇದದಲ್ಲಿ ಕಾಣಿಸಿರುವ ಋತುಮತೀವಿವಾಹದ್ಯೋತಕವಾದ ಬೇರೆ ಕೆಲವು ವೈವಾಹಿಕ ಮಂತ್ರಗಳೂ ಋಗ್ವೇದದಲ್ಲಿ ಉಕ್ತವಾಗಿರುವುವು. ಅವನ್ನು ಪುನಃ ಇಲ್ಲಿ ಉದಾಹರಿಸುವುದು ಆವಶ್ಯಕವಲ್ಲ.

ಇವುಗಳಲ್ಲದೆ ಋಗ್ವೇದದಲ್ಲಿ ಋತುಮತೀವಿವಾಹಸೂಚಕವಾದ ಬೇರೆ ಮಂತ್ರಗಳೂ ಇರುವುವು. ಅವುಗಳು ಇಲ್ಲಿ ಉದಾಹರಿಸಲ್ಪಡುವುವು.

ಅಷ್ಟಕ ೮, ಮಂಡಲ ೧೦, ಸೂಕ್ತ ೧೦೭.

ಭೋಜಾಯಾಶ್ವಂ ಸಂಮೃಜನ್ತ್ಯಾಶುಂ ಭೋಜಾಯಾಸ್ತೇ ಕನ್ಯಾ ೩ ಶುಂಭಮಾನಾ ॥ ೧೦ ॥

ಸಾಯಣಭಾಷ್ಯಂ । ಕನ್ಯಾತ್ವೇನಾತ್ರ ಸನ್ನಿಕರ್ಷಾದಭಿನವಂ ಯೌವನಂ ಲಕ್ಷ್ಯತೇ. ಅಭಿನವಯೌವನಾ ಶುಂಭಮಾನಾ ಶರೀರಾವಯವವಿಶೇಷಶೋಭಯಾ ತಥಾ ವಸ್ತ್ರಾದ್ಯಲಂಕಾರಶೋಭಯಾ ಚ ಶೋಭಮಾನಾ ಸ್ತ್ರೀ ತಸ್ಮೈ ಭೋಜಾಯ ದಾತ್ರೇ ಆಸ್ತೇ ॥

ಅರ್ಥ.—ವೇಗವಾಗಿ ಹೋಗುವ ಕುದುರೆಯನ್ನು ದಾತೃವಿಗೋಸ್ಕರ ಅಲಂಕರಿಸುವರು. ಹಾಗೆಯೇ ಅಲಂಕೃತಗಳಾದ ಯೌವನವತಿಯಾದ ಕನ್ಯೆಯು ಅವನಿಗೋಸ್ಕರ ಕಾದಿರುವಳು. ಸಾಯಣಭಾಷ್ಯ.—ಇಲ್ಲಿ ಕನ್ಯಾತ್ವದಿಂದ ಅಭಿನವ ಯೌವನವು ಲಕ್ಷಿತವಾಗುತ್ತದೆ. ಅಭಿನವ ಯೌವನವುಳ್ಳಂಥಾ ಅವಯವಗಳಿಂ

ದಲೂ ಅಲಂಕಾರಗಳಿಂದಲೂ ಪ್ರಕಾಶಮಾನಳಾದ ಸ್ತ್ರೀಯು ದಾತೃವಿಗೋಸ್ಕರ ಕಾದಿರುತ್ತಾಳೆ.

ಇಲ್ಲಿ ದಾತೃವಿಗೋಸ್ಕರ ಯೌವನೋನ್ನತಿಯಾದ ಕನ್ಯೆಯು ಕಾದಿರುವಳೆಂದು ಉಕ್ತವಾಗಿರುವುದರಿಂದ ಋತುಮತೀವಿವಾಹವು ಸೂಚಿತವಾಗುವುದು.

ಮಂಡಲ ೧, ಸೂಕ್ತ ೬೬,

ಯಮೋ ಹ ಜಾತೋ ಯಮೋ ಜನಿತ್ವಂ ಜಾರಃ ಕನೀನಾಂ ಪತಿರ್ಜನೀನಾಂ ॥ ೪ ॥

ಸಾಯನಭಾಷ್ಯಂ । ತಥಾ ಚಾಮ್ನಾಯತೇ । ಅನುಪಜಾತಪುರುಷಸಂಭೋಗೇಚ್ಛಾವಸ್ಥಾಂ ಸ್ತ್ರಿಯಂ ಸೋಮೋ ಲೇಭೇ । ಸ ಚ ಸೋಮಃ ಈಷದುಪಜಾತಭೋಗೇಚ್ಛಾವಸ್ಥಾಂ ತಾಂ ವಿಶ್ವಾವಸವೇ ಗಂಧರ್ವಾಯ ಪ್ರಾದಾತ್ । ಸ ಚ ಗಂಧರ್ವೋ ವಿವಾಹಸಮಯೇ ಅಗ್ನಯೇ ಪ್ರದದೌ । ಅಗ್ನಿಶ್ಚ ಮನುಜಾಯ ಭರ್ತ್ರೇ ಧನಪುತ್ರೈಃ ಸಹಿತಾಮಿಮಾಂ ಪ್ರಾಯಚ್ಛದಿತಿ ।

ಅರ್ಥ.—ಅಗ್ನಿಯು ಈ ಜನ್ಮಕ್ಕೂ ಮುಂದಿನ ಜನ್ಮಕ್ಕೂ ನಿಯಾಮಕನು, ಕನ್ಯಾಜಾರನು, ಮತ್ತು ಮುತ್ತೈದೆಯರಿಗೆ ಪತಿಯು. ಸಾಯನಭಾಷ್ಯ.—ಹಾಗೆಯೇ ಹೇಳಲ್ಪಟ್ಟದೆ. ಪುರುಷ ಸಂಭೋಗೇಚ್ಛೆಯು ಹುಟ್ಟದೆ ಇರುವಾಗ ಸ್ತ್ರೀಯನ್ನು ಸೋಮನು ಹೊಂದಿದನು. ಆ ಸೋಮನು ಸ್ವಲ್ಪಮಟ್ಟಿಗೆ ಪುರುಷ ಸಂಭೋಗೇಚ್ಛೆಯು ಹುಟ್ಟಿದಾಗ ಅವಳನ್ನು ವಿಶ್ವಾವಸುವೆಂಬ ಗಂಧರ್ವನಿಗೆ ಕೊಟ್ಟನು. ಆ ಗಂಧರ್ವನು ವಿವಾಹಸಮಯದಲ್ಲಿ ಅವಳನ್ನು ಅಗ್ನಿಗೆ ಕೊಟ್ಟನು. ಅಗ್ನಿಯು ಅವಳನ್ನು ಧನಪುತ್ರರ ಸಹಿತವಾಗಿ ಮನುಷ್ಯನಾದ ಗಂಡನಿಗೆ ಕೊಟ್ಟನು.

ಹೀಗೆ ಅಗ್ನಿಯು ಮನುಷ್ಯನಿಗೆ ಕನ್ಯೆಯನ್ನು ಕೊಟ್ಟ ಸಮಯದಲ್ಲಿ ಅವಳಿಗೆ ಪುರುಷಸಂಭೋಗಾಪೇಕ್ಷೆಯುಂಟಾಗಿದ್ದುದನ್ನು ಸೂಚಿಸಿರುವುದರಿಂದ ಕನ್ಯೆಯು ಋತುಮತಿಯೆಂದು ಬೋಧಿತವಾಗುತ್ತದೆ.

ಮಂಡಲ ೪, ಸೂಕ್ತ ೫೮.

ಕನ್ಯಾ ಇವ ವಹತು ಮೇ ತವಾ ಉ ಅಂಜ್ಯಂಜಾನಾ ಅಭಿ ಚಾಕಶೀಮಿ॥ ೯ ॥

ಅರ್ಥ—ಮದುವೆಮಾಡಿಕೊಂಡು ಗಂಡನಹತ್ತಿರ ಹೋಗಲು ತಮ್ಮ ಉಪಸ್ಥೇಂದ್ರಿಯಗಳನ್ನು ಯೋಗ್ಯವಾಗಿ ಮಾಡಿಕೊಳ್ಳುವ ಕನ್ಯೆಯರಂತಿರುವ ಘೃತಧಾರೆಗಳನ್ನು ನೋಡುತ್ತೇನೆ.

ಮಂಡಲ ೩, ಸೂಕ್ತ ೩೩.

ನಿ ತೇ ನಂಸೈ ಪೀಪ್ಯಾನೇವ ಯೋಷಾ ಮರ್ಯಾಯೇವ ಕನ್ಯಾ ಶಶ್ವಚೈ ತೇ॥೧೦

ಸಾಯನಭಾಷ್ಯಂ । ಕನ್ಯಾ ಯುವತಿಃ ॥

ಅರ್ಥ.—ಸ್ತನ್ಯವನ್ನು ಕೊಡುವ ತಾಯಿಯಂತೆ ಬಗ್ಗುವೆನು; ಮತ್ತು ವರನಿಗೆ ಯುವತಿಯಾದ ಕನ್ಯೆಯು ಅಧೀನಳಾಗುವಂತೆ ನಾನು ಅಧೀನನಾಗುವೆನು.

ಸಾಯನಭಾಷ್ಯ — ಕನ್ಯೆಯೆಂದರೆ ಯುವತಿ.

ಯುವತಿಯಾದ ಕನ್ಯೆಯು ಋತುಮತಿಯಾದವಳೆಂದು ಹೇಳಬೇಕಾದುದಿಲ್ಲ.

ಹೀಗೆ ಮೇಲೆ ಉದಾಹರಿಸಲ್ಪಟ್ಟ ಋಗ್ವೇದ ವಾಕ್ಯಗಳನ್ನು ಪರ್ಯಾಲೋಚಿಸಿದರೆ ಋತುಮತೀವಿವಾಹವು ವಿಹಿತವಾಗಿರುವುದು ಸ್ಪಷ್ಟವಾಗುವುದು.

ಸಾಮವೇದ ಅಥರ್ವಣವೇದಗಳಲ್ಲಿಯೂ ಮೇಲೆ ಉದಾಹೃತವಾದ ಋತುಮತೀವಿವಾಹದ್ಯೋತಕವಾದ ಕೆಲವು ವೈವಾಹಿಕ ಮಂತ್ರಗಳು ಉಕ್ತವಾಗಿರುವುವು. ಅವನ್ನು ಪುನಃ ಇಲ್ಲಿ ಕಾಣಿಸುವುದು ಅವಶ್ಯಕವಲ್ಲ. ಆದರೆ ಅಥರ್ವಣವೇದದಲ್ಲಿ ಋತುಮತೀವಿವಾಹ ಸೂಚಕವಾದ ಬೇರೆ ಒಂದು ವಚನವಿರುವುದು. ಯಾವುದೆಂದರೆ :—

ಕಾ ೧೧, ಪ್ರ ೨೪, ಅ ೩, ಮ ೧೮.

ಬ್ರಹ್ಮಚರ್ಯೇಣ ಕನ್ಯಾ ಯುವಾನಂ ವಿಂದತೇ ಪತಿಂ ॥

ಅರ್ಥ.—ಬ್ರಹ್ಮಚರ್ಯದಿಂದ ಕನ್ಯೆಯು ಯೌವನಶಾಲಿಯಾದ ಪತಿಯನ್ನು ಹೊಂದುವಳು.

ಬ್ರಹ್ಮಚರ್ಯವೆಂದರೆ (೧) ಪುರುಷಸಂಭೋಗವಿಲ್ಲದೆಯಿರುವುದು; (೨) ಬ್ರಹ್ಮಚರ್ಯಾಶ್ರಮದಲ್ಲಿದ್ದುಕೊಂಡು ವೇದಾಧ್ಯಯನಮಾಡುವುದು. ಪೂರ್ವದಲ್ಲಿ ಸ್ತ್ರೀಯರು ಉಪನಯನ ಮಾಡಿಕೊಂಡು ವೇದಾಧ್ಯಯನ ಮಾಡುವ ಪದ್ಧತಿಯಿದ್ದಿತೆಂದು ಶಾಸ್ತ್ರವಚನಗಳಿಂದ ಗೊತ್ತಾಗುತ್ತದೆ. ವೇದಾಧ್ಯಯನವನ್ನು ಪೂರೈಸಬೇಕಾದರೆ, ಕನ್ಯೆಯು ಯೌವನದಶೆಗೆ ಬಂದಿರಬೇಕಾಗುತ್ತದೆ.

ಹೀಗೆ ಬ್ರಹ್ಮಚರ್ಯವೆಂಬ ಪದಕ್ಕೆ ಈಯೆರಡು ಅರ್ಥಗಳಲ್ಲಿ ಯಾವುದೊಂದನ್ನು ಇಟ್ಟುಕೊಂಡಾಗ್ಗೂ ಕನ್ಯೆಯು ಋತುಮತಿಯಾಗಿರಬೇಕೆಂಬುದು ವ್ಯಕ್ತವಾಗುವುದು.

ಈರೀತಿಯಾಗಿ ಮೇಲೆ ಉದಾಹರಿಸಲ್ಪಟ್ಟ ವಾಕ್ಯಗಳಿಂದ ಋತುಮತೀವಿವಾಹವು ಅತ್ಯಂತ ಪ್ರಬಲಪ್ರಮಾಣಗಳಾದ ವೇದಗಳಿಗೆ ಸಮ್ಮತವಾಗಿರುವುದೆಂದು ಸಿದ್ಧವಾಗುವುದು.

ಪ್ರಕರಣ ೧೨.

ಸಂಕೀರ್ಣ ವಿಷಯಗಳು.

ಋತುಮತೀವಿವಾಹಸೂಚಕವಾದ ಬೇರೆ ಶಾಸ್ತ್ರವಚನಗಳು ಅನೇಕವಿರುವುವು. ಅವುಗಳಲ್ಲಿ ಕೆಲವು ಇಲ್ಲಿ ಉದಾಹರಿಸಲ್ಪಡುವುವು.

ಲಘುವಿಷ್ಣುಸ್ಮೃತಿ. ಅಧ್ಯಾಯ ೧.

ಅನೇನೈವ ವಿಧಾನೇನ ಕುರ್ಯಾದ್ದಾರಪರಿಗ್ರಹಂ ॥ ೨೬ ॥
ಪರಿಣೀಯ ತು ಷಣ್ಮಾಸಾನ್ವತ್ಸರಂ ವಾ ನ ಸಂವಿಶೇತ್ ।
ಔದುಂಬರಾಯಣೋ ನಾಮ ಬ್ರಹ್ಮಚಾರೀ ಗೃಹೇಗೃಹೇ ॥ ೨೭ ॥
ಋತುಕಾಲೇ ತು ಸಂಪ್ರಾಪ್ತೇ ಪುತ್ರಾರ್ಥೀ ಸಂವಿಶೇತ್ತದಾ ॥ ೨೮ ॥

ಅರ್ಥ.—ಈ ವಿಧಾನದಿಂದ ಮದಿವೆಮಾಡಿಕೊಳ್ಳಬೇಕು. ವಿವಾಹಮಾಡಿಕೊಂಡಾಗ್ಗೂ ಆರುತಿಂಗಳು ಅಥವಾ ವರ್ಷ ಪರ್ಯಂತ ಪತ್ನೀ ಸಂಭೋಗ ಮಾಡಕೂಡದು. ಬ್ರಹ್ಮಚಾರಿಯಾಗಿ ಮನೆಮನೆಯಲ್ಲಿ ಭಿಕ್ಷಬೇಡುತ್ತಿರಬೇಕು. ಅಂಥವನಿಗೆ ಔದುಂಬರಾಯಣನೆಂದು ಹೆಸರು. ಆಮೇಲೆ ಋತುಕಾಲವು ಪ್ರಾಪ್ತವಾಗಲು ಪುತ್ರಾರ್ಥಿಯು ಪತ್ನೀ ಸಂಭೋಗ ಮಾಡತಕ್ಕದು.

ಮದಿವೆ ಮಾಡಿಕೊಂಡಾಗ್ಗೂ ಆರುತಿಂಗಳು ಅಥವಾ ವರ್ಷ ಪರ್ಯಂತ ಸಂಭೋಗವು ಕೂಡದು ಎಂಬಲ್ಲಿ ಸ್ತ್ರೀಯು ಋತುಮತಿಯಾಗಿ ಮೈಥುನಯೋಗ್ಯಳಾಗಿದ್ದಾಗ್ಗೂ ಮೈಥುನವನ್ನು ಬಿಡಬೇಕು ಎಂದು ಧ್ವನಿ ತೋರುವುದು. ಮೈನೆರೆಯದ ಚಿಕ್ಕಹುಡುಗಿಯ ವಿಷಯದಲ್ಲಿ ಹೀಗೆ ಹೇಳಬೇಕಾದ ಆವಶ್ಯಕವಿಲ್ಲ.

ಮನುಸ್ಮೃತಿ, ಅಧ್ಯಾಯ ೧೦.

ಸರ್ವವರ್ಣೇಷು ತುಲ್ಯಾಸು ಪತ್ನೀಷ್ವಕ್ಷತಯೋನಿಷು ।
ಅನುಲೋಮ್ಯೇನ ಸಂಭೂತಾ ಜಾತ್ಯಾಜ್ಞೇಯಾಸ್ತ ಏವ ತೇ ॥ ೫ ॥

ಅರ್ಥ.—ಸರ್ವವರ್ಣಗಳವರಲ್ಲಿಯೂ ಪತಿಗೆ ಸಮಾನಜಾತೀಯರಾಗಿಯೂ ಅಕ್ಷತಯೋನಿಗಳಾಗಿಯೂ ಇರುವ ಪತ್ನಿಯರಲ್ಲಿ ಅನುಲೋಮಕ್ರಮದಿಂದ ಹುಟ್ಟಿದ ಮಕ್ಕಳು ಆಯಾ ಜಾತಿಗಳಿಗೆ ಸೇರಿದವರೆಂದು ತಿಳಿಯಲ್ಪಡತಕ್ಕವರು.

ಇಲ್ಲಿ ಅಕ್ಷತಯೋನಿಗಳಾದ ಪತ್ನಿಯರಲ್ಲಿ ಎಂದು ಪ್ರಯೋಗವಿರುವುದರಿಂದ ಋತುಮತೀ ವಿವಾಹವು ಸೂಚಿತವಾಗುವುದು. ಋತುಮತಿಗಳಾದ ಕನ್ಯೆಯರು ಕ್ಷತಯೋನಿಗಳಾಗಲು ಅವಕಾಶವಿರುವುದರಿಂದ, ಅಂಥವರಲ್ಲಿ ಅಕ್ಷತಯೋನಿತ್ವವನ್ನು

ಹೇಳಬೇಕಾದುದು ಆವಶ್ಯಕವೇ ಹೊರತು, ಮೈನೆರೆಯದ ಚಿಕ್ಕಹುಡುಗಿಯರ ವಿಷಯದಲ್ಲಿ ಹೇಳತಕ್ಕ ಆವಶ್ಯಕವಿಲ್ಲ.

ಬೃಹತ್ಪರಾಶರಸಂಹಿತೆ, ಅಧ್ಯಾಯ ೧೦.

ಉದ್ವಾಹ ಉದಿತಃ ಸ್ತ್ರೀಣಾಂ ಯೌವನೇ ಬಂಧುಕಾರಣಾತ್ ॥

ಅರ್ಥ.—ಬಂಧುಕಾರಣದದೆಸೆಯಿಂದ ಸ್ತ್ರೀಯರಿಗೆ ವಿವಾಹವು ಯೌವನದಲ್ಲಿ ಹೇಳಲ್ಪಟ್ಟಿದೆ.

ಎಂದರೆ ಸ್ತ್ರೀಯರು ಯೌವನಾವಸ್ಥೆಯಲ್ಲಿ ಮದಿವೆಮಾಡಿಕೊಳ್ಳತಕ್ಕದು.

ವೃದ್ಧಗೌತಮಸ್ಮೃತಿ, ಅಧ್ಯಾಯ ೪.

ಬ್ರಾಹ್ಮಾದಿಷು ವಿವಾಹೇಷು ಪರಿಣೀತಾ ಯಥಾವಿಧಿ ।
ಸಾ ಪ್ರಶಸ್ತಾ ವರಾರೋಹಾ ಶುದ್ಧಯೋನಿಃ ಪ್ರಶಸ್ಯತೇ ॥

ಅರ್ಥ.—ಬ್ರಾಹ್ಮಾದಿ ವಿವಾಹಗಳಲ್ಲಿ ಯಥಾವಿಧಿಯಾಗಿ ಮದಿವೆಮಾಡಲ್ಪಟ್ಟವಳಾಗಿಯೂ ಉತ್ತಮಳಾಗಿಯೂ ಒಳ್ಳೆಯ ಜಘನವುಳ್ಳವಳಾಗಿಯೂ ಅಕ್ಷತಯೋನಿಯಾಗಿಯೂ ಇರುವಂಥವಳು ಶ್ಲಾಘ್ಯಳು.

ವಾಸಿಷ್ಠಧರ್ಮಶಾಸ್ತ್ರ, ಅಧ್ಯಾಯ ೨.

ಪ್ರಾಪ್ನೋತಿ ತತ್ಸಹ ತದುದ್ವಪತಿ ಗಾಂ ಚಾವಿಂ ಚಾಜಾನಶ್ವಾನಶ್ವತರಖರೋಷ್ಟ್ರಾಂಶ್ಚ ಪ್ರಭೂತ್ವರ್ಯ್ಯಂ ಚ ಪೀವರೀಂ ದರ್ಶನೀಯಾಂ ಕಲ್ಯಾಣೀಂ ಚ ಪ್ರಥಮಯುವತೀಂ ॥ ೩೫ ॥

ಅರ್ಥ—ಎಳ್ಳಿನ ಯಜಮಾನನು ಎಳ್ಳಿನೊಂದಿಗೆ ದನ ಕುರಿ ಆಡುಗಳನ್ನೂ ಕುದುರೆಗಳನ್ನೂ ಹಾಸರಕತ್ತೆ ಕತ್ತೆ ಒಂಟೆಗಳನ್ನೂ ಒಳ್ಳೆ ಜಘನವುಳ್ಳ ಪುಷ್ಟಳಾದ ಸುಂದರಳಾದ ಕಲ್ಯಾಣಿಯಾದ ಪ್ರಥಮ ಯುವತಿಯನ್ನೂ ಹೊಂದುವನು.

ಇಲ್ಲಿ ಸ್ವಂತ ಬೇಸಾಯಮಾಡಿ ಎಳ್ಳನ್ನು ಬೆಳೆಯುವ ಬ್ರಾಹ್ಮಣನಿಗೆ ಉಂಟಾಗುವ ಫಲವು ಹೇಳಲ್ಪಟ್ಟಿದೆ. ಅವನಿಗೆ ಪ್ರಥಮಯುವತಿಯು ಸಿಕ್ಕುವಳೆಂದು ಹೇಳಿರುವುದರಿಂದ, ಋತುಮತೀವಿವಾಹವು ಸೂಚಿತವಾಗುತ್ತದೆ.

ಬ್ರಹ್ಮಪುರಾಣವಚನ, ಶ್ರೀನಾಥಚೂಡಾಮಣಿಕೃತ ವಿವಾಹ ತತ್ವಾರ್ಣವದಲ್ಲಿ ಉದಾಹರಿಸಲ್ಪಟ್ಟದ್ದು.—

ದ್ವಾತ್ರಿಂಶದ್ವರ್ಷಪೂರ್ಣೇನ ಯದಿ ಷೋಡಶವಾರ್ಷಿಕೀ ।
ಲಬ್ಧಾ ತದಾ ಸ್ನಾತವ್ಯಂ ಷಡ್ರಾತ್ರಂ ಸಂಯುತೇನ ತು ॥

ವಿಂಶತ್ಯಬ್ದಾ ಯದಾ ಕನ್ಯಾ ವಸ್ತವ್ಯಂ ತತ್ರ ವೈ ತ್ರ್ಯಹಂ ।
ಅತಊರ್ಧ್ವಮಹೋರಾತ್ರಂ ವಸ್ತವ್ಯಂ ಸಂಯತೇನ ತು ॥

ಅರ್ಥ.—ವರನು ೩೦ ವರ್ಷದವನಾಗಿಯೂ ಕನ್ಯೆಯು ೧೬ ವರ್ಷದವಳಾಗಿಯೂ ಇದರೆ, ಆರು ರಾತ್ರಿಗಳ ಪರ್ಯಂತ ಸಂಭೋಗವಿಲ್ಲದೆ ನಿಯಮದಿಂದಿರಬೇಕು. ಕನ್ಯೆಯು ೨೦ ವರ್ಷದವಳಾದರೆ, ಮೂರುದಿವಸಗಳ ಪರ್ಯಂತ ನಿಯಮದಿಂದಿರಬೇಕು. ಅದಕ್ಕೆ ಮೇಲ್ಪಟ್ಟ ವಯಸ್ಸಿನವಳಾದರೆ, ಒಂದು ದಿವಸ ನಿಯಮದಿಂದಿರತಕ್ಕದು.

ಇಲ್ಲಿ ಋತುಮತೀವಿವಾಹವು ಬಹುವ್ಯಕ್ತವಾಗಿ ಸೂಚಿತವಾಗಿರುವುದೆಂದು ಹೇಳಬೇಕಾದ ಅವಶ್ಯಕವಿಲ್ಲ.

ಪತಂಜಲಿಮಹಾಭಾಷ್ಯ, ಅಧ್ಯಾಯ ೪, ಪಾದ ೧.

ಕನ್ಯಾಯಾಃ ಕಾನೀನ ಚ ॥ ಕನ್ಯಾಶಬ್ದೋಽಯಂ ಪುಂಸಾ ಅಭಿಸಂಬಂಧಪೂರ್ವಕೇ ಸಂಪ್ರಯೋಗೇ ನಿವರ್ತತೇ । ಯಾ ಚೇದಾನೀಂ ಪ್ರಾಗಭಿಸಂಬಂಧಾತ್ಪುಂಸಾ ಸಹ ಪ್ರಯೋಗಂ ಗಚ್ಛತಿ, ತಸ್ಯಾಃ ಕನ್ಯಾಶಬ್ದೋ ವರ್ತತಏವ ॥ ಅತ್ರಕೈಯ್ಯಟಃ—ಅಕ್ಷತಯೋನಿಃ ಕನ್ಯಾ, ಸಾ ಕಥಂ ಅಪತ್ಯೇನ ಸಂಬಧ್ಯೇತೇತಿ ಭಾವಃ. ಶಾಸ್ತ್ರೋಕ್ತೋ ವಿವಾಹೋಽಭಿಸಂಬಂಧಃ, ತತ್ಪೂರ್ವಕೇ ಪುರುಷಸಂಯೋಗೇ ಕನ್ಯಾಶಬ್ದೋ ನಿವರ್ತತೇ ॥

ಅರ್ಥ.—ಕನ್ಯೆಯ ಮಗ ಕಾನೀನನು. ಈ ಕನ್ಯಾಶಬ್ದವು ಶಾಸ್ತ್ರೋಕ್ತವಿವಾಹಪೂರ್ವಕವಾದ ಪುರುಷ ಸಂಭೋಗದಲ್ಲಿ ನಿವೃತ್ತಿಯಾಗುತ್ತದೆ. ಆದರೆ ಯಾವಳು ಶಾಸ್ತ್ರೋಕ್ತವಿವಾಹಕ್ಕೆ ಮೊದಲೇ ಪುರುಷಸಂಭೋಗವನ್ನು ಹೊಂದುವಳೋ, ಅವಳಿಗೆ ಕನ್ಯಾಶಬ್ದವು ಇದ್ದೇ ಇರುವುದು. ಈ ವಿಷಯದಲ್ಲಿ ಕೈಯ್ಯಟನು ಹೇಳುವನು.—ಅಕ್ಷತಯೋನಿಯಾದವಳು ಕನ್ಯೆಯು; ಅವಳು ಹೇಗೆ ಮಗನ ಸಂಬಂಧವುಳ್ಳವಳಾಗುವಳು ಎಂದರೆ—ಶಾಸ್ತ್ರೋಕ್ತವಿವಾಹವು ಅಭಿಸಂಬಂಧವೆನ್ನಿಸುವುದು; ಅಂಥ ಅಭಿಸಂಬಂಧಪೂರ್ವಕವಾದ ಪುರುಷಸಂಭೋಗದಲ್ಲಿ ಕನ್ಯಾಶಬ್ದವು ನಿವೃತ್ತಿಯಾಗುವುದು.

ತಾತ್ಪರ್ಯ.—ಶಾಸ್ತ್ರವಿಧಿಪ್ರಕಾರ ಮದಿವೆಯಾದಬಳಿಕ ಪುರುಷಸಂಭೋಗ ಮಾಡಿದವಳಿಗೆ ಕನ್ಯಾಶಬ್ದ ಪ್ರಯೋಗವಿಲ್ಲ. ಆದರೆ ಹಾಗೆ ಮದಿವೆಯಾಗುವುದಕ್ಕೆ ಮುಂಚೆ ಪುರುಷಸಂಭೋಗಮಾಡಿದವಳಿಗೆ ಕನ್ಯಾಶಬ್ದ ಪ್ರಯೋಗವಿದ್ದೇ ಇರುವುದು. ಇಂಥವಳಲ್ಲಿ ಹುಟ್ಟಿದ ಮಗನು ಕಾನೀನನೆನ್ನಿಸುವನು. ಹೀಗೆ ಕನ್ಯೆಗೆ ಮದುವೆಯಾಗುವುದಕ್ಕೆ ಮೊದಲೇ ಪುರುಷ ಸಂಭೋಗಮಾಡಿ ಮಕ್ಕಳನ್ನು ಹೆರಲು

ಅವಕಾಶವು ಕಂಡುಬರುವುದು. ಇದರಿಂದ ಕನ್ಯೆಯು ಋತುಮತಿಯಾದ ಬಳಿಕ ವಿವಾಹಮಾಡಿಕೊಳ್ಳಬಹುದೆಂದು ವ್ಯಕ್ತವಾಗುವುದು.

ಭೀಮಸೇನಶರ್ಮ ಮಂತ್ರಿಯವರಿಂದ ಉದಾಹರಿಸಲ್ಪಟ್ಟ ಮನುವಚನ.—

ಅಜ್ಞಾತಪತಿಮರ್ಯಾದಾಮಜ್ಞಾತಪತಿಸೇವನಾಮ್ ।
ನೋದ್ವಾಹಯೇತ್ ಪಿತಾ ಕನ್ಯಾಮಜ್ಞಾತ ಧರ್ಮಸೇವನಾಮ್ ॥

ಅರ್ಥ.—ತಂದೆಯು ಪತಿಮರ್ಯಾದೆಯನ್ನೂ ಪತಿಸೇವೆಯನ್ನೂ ಧರ್ಮಸೇವನವನ್ನೂ ಅರಿಯದವಳಾದ ಕನ್ನೆಗೆ ಮದಿವೆ ಮಾಡಕೂಡದು.

ತಾತ್ಪರ್ಯ.—ಪತಿಮರ್ಯಾದಾದಿಗಳನ್ನು ಬಲ್ಲಂಥ—ಎಂದರೆ ದೊಡ್ಡವಳಾಗಿ ಬುದ್ಧಿಬಂದಿರುವ—ಕನ್ಯೆಯನ್ನು ಮದಿವೆ ಮಾಡಬೇಕೇ ಹೊರತು, ಅವನ್ನರಿಯದ ಚಿಕ್ಕಹುಡುಗಿಗೆ ವಿವಾಹವು ಕೂಡದು. ಇಲ್ಲಿಯೂ ಋತುಮತೀವಿವಾಹಧ್ವನಿಯು ತೋರುವುದು.

ವಾತ್ಸ್ಯಾಯನ ಕಾಮಸೂತ್ರ, ಅಧಿಕರಣ ೩, ಅಧ್ಯಾಯ ೨.

ತಸ್ಮಿನ್ನೇತಾಂ ನಿಶಿ ವಿಜನೇ ಮೃದುಭಿರುಪಚಾರೈರುಪಕ್ರಮೇತ ।
ತ್ರಿರಾತ್ರಮವಚನಂ ಹಿ ಸ್ತಂಭಮಿವ ನಾಯಕಂ ಪಶ್ಯಂತೀ ಕನ್ಯಾ ನಿರ್ವಿದ್ಯೇತ ಪರಿಭವೇಚ್ಚ ತೃತೀಯಾಮಿವ ಪ್ರಕೃತಿಂ।
ಉಪಕ್ರಮೇತ ವಿಸ್ರಂಭಯೇಚ್ಚ, ನ ತು ಬ್ರಹ್ಮಚರ್ಯಮತಿವರ್ತೇತ ॥

ಅರ್ಥ.—ವಿಜನವಾದ ರಾತ್ರಿಯಲ್ಲಿ ವರನು ಮೃದೂಪಚಾರಗಳಿಂದ ಕನೆಯ ಸಮೀಪಕ್ಕೆ ಹೋಗಿ ಪ್ರೀತಿಯನ್ನು ತೋರಿಸಬೇಕು. ಆ ಮೂರು ರಾತ್ರಿಗಳಲ್ಲಿ ವರನು ಮಾತಾಡದೆ ಕಂಬದಂತೆ ಸುಮ್ಮನಿದ್ದರೆ, ಕನ್ಯೆಯು ಅಸಮಾಧಾನಪಟ್ಟು ಅವನನ್ನು ನಪುಂಸಕನೆಂದು ಅವಮಾನಿಸಬಹುದು. ಬ್ರಹ್ಮಚರ್ಯವನ್ನತಿಕ್ರಮಿಸದಂತೆ ವರನು ಕನ್ಯೆಯ ಸಮೀಪಕ್ಕೆ ಹೋಗಿ ಪ್ರೀತಿಯನ್ನು ತೋರಿಸುತ್ತ ನಂಬಿಕೆಯನ್ನು ಹುಟ್ಟಿಸಬೇಕು.

ಇದು ವಿವಾಹದಲ್ಲಿ ಮೂರುರಾತ್ರಿಗಳ ಪರ್ಯಂತ ವಧೂವರರು ಬ್ರಹ್ಮಚರ್ಯವನ್ನಾಚರಿಸಿ ಜತೆಯಲ್ಲಿ ಮಲಗಬೇಕು ಎಂದು ಗೃಹ್ಯಸೂತ್ರಕಾರರು ಅಪ್ಪಣೆ ಕೊಡಿಸಿರುವ ವಿಷಯದಲ್ಲಿ ಕಾಮಸೂತ್ರಕಾರನಾದ ವಾತ್ಸ್ಯಾಯನನು ಹೇಳಿದ ಮಾತು. ಇದರಿಂದ ಕನ್ಯೆಯು ಋತುಮತಿಯೆಂಬುದು ಚೆನ್ನಾಗಿ ವ್ಯಕ್ತವಾಗುವುದು.

ಬೃಹಸ್ಪತಿ.

ಚತುರ್ಥೀಹೋಮಮಂತ್ರೇಣ ತ್ವಙ್ಮಾಂಸಹೃದಯೇಂದ್ರಿಯೈಃ ।
ಭರ್ತ್ರಾ ಸಂಯುಜ್ಯತೇ ಪತ್ನೀ ತದ್ಗೋತ್ರಾ ತೇನ ಸಾ ಭವೇತ್ ॥

ಅರ್ಥ.—ವಿವಾಹದ ಚತುರ್ಥೀಹೋಮಮಂತ್ರದಿಂದ ಪತ್ನಿಯು ಗಂಡನೊಂದಿಗೆ ತ್ವಕ್ಕು ಮಾಂಸ ಹೃದಯೇಂದ್ರಿಯಗಳಿಂದ ಸೇರುವಳು. ಅದರಿಂದ ಆಕೆಯು ಗಂಡನ ಗೋತ್ರದವಳಾಗುವಳು.

ಮನುಸ್ಮೃತಿ, ಅಧ್ಯಾಯ ೫.

ಬಾಲ್ಯೇ ಪಿತುರ್ವಶೇ ತಿಷ್ಠೇತ್ಪಾಣಿಗ್ರಾಹಸ್ಯ ಯೌವನೇ ॥ ೧೪೮ ॥

ಅಧ್ಯಾಯ, ೯.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ॥ ೩ ॥

ಅರ್ಥ.—ಸ್ತ್ರೀಯು ಬಾಲ್ಯದಲ್ಲಿ ತಂದೆಯ ವಶದಲ್ಲಿಯೂ ಯೌವನದಲ್ಲಿ ಗಂಡನ ವಶದಲ್ಲಿಯೂ ಇರಬೇಕು. ಸ್ತ್ರೀಯನ್ನು ಬಾಲ್ಯದಲ್ಲಿ ತಂದೆಯೂ ಯೌವನದಲ್ಲಿ ಗಂಡನೂ ರಕ್ಷಿಸುವರು.

ಯಾಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ.

ರಕ್ಷೇತ್ಕನ್ಯಾಂ ಪಿತಾ ವಿನ್ನಾಂ ಪತಿಃ ಪುತ್ರಾಸ್ತು ವಾರ್ಧಕೇ ॥ ೮೬ ॥

ಅರ್ಥ.—ಕನ್ನೆಯನ್ನು ತಂದೆಯೂ ಮದಿವೆಯಾದವಳನ್ನು ಗಂಡನೂ ಮುಪ್ಪಿನಲ್ಲಿ ಸ್ತ್ರೀಯನ್ನು ಮಕ್ಕಳೂ ರಕ್ಷಿಸಬೇಕು.

ಬೌಧಾಯನಸ್ಮೃತಿ, ಪ್ರಶ್ನ ೨, ಅಧ್ಯಾಯ ೨.

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ ॥ ೪೫ ॥

ಅರ್ಥ.—ಸ್ತ್ರೀಯನ್ನು ಬಾಲ್ಯದಲ್ಲಿ ತಂದೆಯೂ ಯೌವನದಲ್ಲಿ ಗಂಡನೂ ರಕ್ಷಿಸುವರು.

ಇನ್ನೂ ಅನೇಕ ಶಾಸ್ತ್ರಕಾರರು ಹೀಗೆಯೇ ಹೇಳಿರುವರು. ಪೂರ್ವದಲ್ಲಿ ಸ್ತ್ರೀಯರು ಮದಿವೆಯಾದೊಡನೆಯೇ ಗಂಡನ ಮನೆಗೆ ಹೋಗಿ ಅಲ್ಲಿ ಆತನಿಗೆ ಗೃಹಸ್ಥಾಶ್ರಮಧರ್ಮಾಚರಣೆಯಲ್ಲಿ ಸಹಾಯಮಾಡುವ ಪದ್ಧತಿಯಿದ್ದಿತು. ಮೇಲಿನ ವಚನಗಳಲ್ಲಿ ಸ್ತ್ರೀಯು ಬಾಲ್ಯದಲ್ಲಿ ತಂದೆಯ ರಕ್ಷಣೆಯಲ್ಲಿಯೂ ಯೌವನದಲ್ಲಿ ಗಂಡನ ರಕ್ಷಣೆಯಲ್ಲಿಯೂ ಇರಬೇಕೆಂದು ಹೇಳಿರುವುದರಿಂದ, ಪೂರ್ವದ ಸ್ತ್ರೀಯರು ಯೌವನದಶೆಯಲ್ಲಿ ವಿವಾಹ ಮಾಡಿಕೊಂಡು ಗಂಡನ ಮನೆಗೆ ಹೋಗುತ್ತಿದ್ದರೆಂದು ಧ್ವನಿ ತೋರುತ್ತದೆ.

ಸುಶ್ರುತಃ ।

ಪಂಚವಿಂಶೇ ತತೋ ವರ್ಷೇ ಪುಮಾನ್ನಾರೀ ತು ಷೋಡಶೇ ।
ಸಮತ್ವಾಗತವೀರ್ಯೌ ತೌ ಜಾನೀಯಾತ್ಕುಶಲೋ ಭಿಷಕ್ ॥
ಊನಷೋಡಶವರ್ಷಾಯಾಮಪ್ರಾಪ್ತಃ ಪಂಚವಿಂಶತಿಂ ।
ಯದ್ಯಾಧತ್ತೇ ಪುಮಾನ್ಗರ್ಭಂ ಕುಕ್ಷಿಸ್ಥಃ ಸ ವಿಪದ್ಯತೇ ।
ಜಾತೋ ವಾ ನ ಚಿರಂ ಜೀವೇಜ್ಜೀವೇದ್ವಾ ದುರ್ಬಲೇಂದ್ರಿಯಃ ।
ತಸ್ಮಾದತ್ಯಂತಬಾಲಾಯಾಂ ಗರ್ಭಾಧಾನಂ ನ ಕಾರಯೇತ್ ॥

ಅರ್ಥ — ಪುರುಷನು ೨೫ ನೆಯ ವರ್ಷದಲ್ಲಿಯೂ ಸ್ತ್ರೀಯು ೧೬ ನೆಯ ವರ್ಷದಲ್ಲಿಯೂ ಸಮವಾದ ವೀರ್ಯವುಳ್ಳವರಾಗುವರೆಂದು ಬುದ್ಧಿಶಾಲಿಯಾದ ವೈದ್ಯನು ತಿಳಿಯತಕ್ಕದು. ಇಪ್ಪತ್ತೈದಕ್ಕಿಂತ ಕಡಮೆ ವಯಸ್ಸಿನ ಗಂಡಸು ಹದಿನಾರಕ್ಕಿಂತ ಕಡಮೆ ವಯಸ್ಸಿನ ಸ್ತ್ರೀಯಲ್ಲಿ ಗರ್ಭಾಧಾನ ಮಾಡಿದರೆ, ಆ ಗರ್ಭವು ಹೊಟ್ಟೆಯೊಳಗೆ ಇರುವಾಗಲೇ ನಾಶವಾಗುವುದು. ಮಗು ಹುಟ್ಟಿದರೂ ಚಿರಕಾಲ ಬದುಕುವುದಿಲ್ಲ. ಬದುಕಿದರೂ ದುರ್ಬಲವಾದ ಇಂದ್ರಿಯಗಳುಳ್ಳದಾಗುವುದು. ಆದುದರಿಂದ ಅತ್ಯಂತ ಬಾಲೆಯಲ್ಲಿ ಗರ್ಭಾಧಾನ ಮಾಡಬಾರದು.

ನಾರದಸ್ಮೃತಿ, ೧೨—೨೩.

ಸುವರ್ಣಮನುರೂಪಂ ಚ ಕುಲಶೀಲವಯಶ್ಶ್ರುತೈಃ ।
ಸಹ ಧರ್ಮಂ ಚರೇತ್ ತೇನ ಪುತ್ರಾಂಶ್ಚೋತ್ಪಾದಯೇತ್ತತಃ ॥

ಅರ್ಥ — ಸವರ್ಣದವನಾಗಿಯೂ ಕುಲ ಶೀಲ ವಯಸ್ಸು ಜ್ಞಾನಗಳಿಂದ ಅನುರೂಪನಾಗಿಯೂ ಇರುವವನನ್ನು ಮದಿವೆಯಾಗಿ ಅವನೊಂದಿಗೆ ಧರ್ಮವನ್ನಾಚರಿಸಿ ಅವನಿಂದ ಪುತ್ರರನ್ನು ಪಡೆಯಬೇಕು.

ಪರಾಶರಮಾಧವೀಯ, ಆಚಾರಕಾಂಡ, ಅಧ್ಯಾಯ ೨.

ಲೋಕಪ್ರಸಿದ್ಧಸ್ತು ಕನ್ಯಾಶಬ್ದೋ ವಿವಾಹರಹಿತಸ್ತ್ರೀಮಾತ್ರಮಾಚಷ್ಟೇ । ತಥಾಚಾನುಶಾಸನಿಕೇ ಅಷ್ಟಾವಕ್ರೋಪಾಖ್ಯಾನೇ ವೃದ್ಧಸ್ತ್ರಿಯಾಂ ಪ್ರಯುಕ್ತಃ । ಕೌಮಾರಂ ಬ್ರಹ್ಮಚರ್ಯಂ ಮೇ ಕನ್ಯೈವಾಸ್ಮಿ ನ ಸಂಶಯಃ ॥ ಶಲ್ಯಪರ್ವಣ್ಯಪಿ ವೃದ್ಧಸ್ತ್ರಿಯಾಂ ನಾರದೇನ ಪ್ರಯುಕ್ತಃ । ಅಸಂಸ್ಕೃತಾಯಾಃ ಕನ್ಯಾಯಾಃ ಕುತೋ ಲೋಕಾಸ್ತವಾನಘೇ ॥ ಉಮಾಮಹೇಶ್ವರಸಂವಾದೇಪಿ । ಋತುಸ್ನಾತಾ ತು ಯಾ ಶುದ್ಧಾ ಸಾ ಕನ್ಯೇತ್ಯಭಿಧೀಯತೇ ॥

ಅರ್ಥ.—ಲೋಕಪ್ರಸಿದ್ಧವಾದ ಕನ್ಯಾಶಬ್ದವಾದರೋ, ವಿವಾಹವಿಲ್ಲದ ಸ್ತ್ರೀಯನ್ನು ಮಾತ್ರ ಹೇಳುವುದು. ಹಾಗೆಯೇ ಆನುಶಾಸನಿಕಪರ್ವದಲ್ಲಿ ಅಷ್ಟಾವಕ್ರೋಪಾಖ್ಯಾನದಲ್ಲಿ ಅದು ವೃದ್ಧಸ್ತ್ರೀಯಲ್ಲಿ ಪ್ರಯೋಗಿಸಲ್ಪಟ್ಟಿದೆ:—ನಾನು ಕೌಮಾರ ಬ್ರಹ್ಮಚರ್ಯವುಳ್ಳವಳು, ನಿಸ್ಸಂದೇಹವಾಗಿ ಕನ್ಯೆಯಾಗಿಯೇ ಇರುವೆನು. ಶಲ್ಯಪರ್ವದಲ್ಲಿಯೂ ಕೂಡ ಕನ್ಯಾಶಬ್ದವು ನಾರದನಿಂದ ವೃದ್ಧಸ್ತ್ರೀಯಲ್ಲಿ ಪ್ರಯೋಗಮಾಡಲ್ಪಟ್ಟಿರುವುದು :—ಎಲೈ ಪಾಪರಹಿತಳೆ, ಅಸಂಸ್ಕೃತಳಾದ ಕನ್ಯೆಯಾದ ನಿನಗೆಲ್ಲಿ ಲೋಕಗಳು ಸಿಕ್ಕುವುವು? ಉಮಾಮಹೇಶ್ವರ ಸಂವಾದದಲ್ಲಿಯೂ ಹಾಗೆಯೇ ಹೇಳಲ್ಪಟ್ಟಿರುವುದು.—ಋತುಸ್ನಾನ ಮಾಡಿ ಶುಚಿಯಾಗಿರುವವಳು ಕನ್ಯೆಯು.

ಹೀಗೆ ಮೇಲಿನ ವಚನಗಳು ಋತುಮತೀ ವಿವಾಹವನ್ನು ಸೂಚಿಸುವಂಥವಾಗಿರುವುವು.

ಪ್ರಕರಣ ೧೩.

ಸ್ತ್ರೀಯರಿಗೆ ವಿವಾಹವು ಐಚ್ಛಿಕವು.

ಇದುವರೆಗೂ ಮಾಡಿದ ವಿಚಾರಗಳಿಂದಲ್ಲದೆ, ಇನ್ನೊಂದು ರೀತಿಯಲ್ಲಿಯೂ ಋತುಮತೀ ವಿವಾಹವು ಸೂಚಿತವಾಗುವುದು. ಹೇಗೆಂದರೆ, ಸ್ತ್ರೀಯರಿಗೆ ವಿವಾಹವು ಬಲವಂತವಲ್ಲ. ಅದು ಐಚ್ಛಿಕವೆಂದು ಶಾಸ್ತ್ರವಚನಗಳಿಂದ ಗೊತ್ತಾಗುತ್ತದೆ. ವ್ಯವಾಯವನ್ನಪೇಕ್ಷಿಸುವ ಸ್ತ್ರೀಯರಾಗಲಿ ಪುರುಷರಾಗಲಿ ಮದಿವೆಮಾಡಿಕೊಂಡೇ ಅದರಲ್ಲಿ ಪ್ರವರ್ತಿಸಬೇಕೇಹೊರತು, ಮದಿವೆಯಿಲ್ಲದೆ ಸ್ವೇಚ್ಛಾನುಸಾರವಾಗಿ ವ್ಯವಾಯವನ್ನು ಮಾಡಕೂಡದು. ಹಾಗೆ ವ್ಯಭಿಚಾರ ಮಾಡಿದರೆ, ಪಾಪವು ಪ್ರಾಪ್ತವಾಗಿ ಅಧೋಗತಿಯುಂಟಾಗುವುದು. ಮದಿವೆಯಾದ ಸ್ತ್ರೀಪುರುಷರು ವ್ಯವಾಯವನ್ನು ಬಿಟ್ಟರೂ ದೋಷಕ್ಕೆ ಗುರಿಯಾಗುವರು. ಆದರೆ ಯಾರು ವ್ಯವಾಯವನ್ನೇ ಅಪೇಕ್ಷಿಸುವುದಿಲ್ಲವೋ, ಅಂಥವರು ಮದಿವೆಯಿಲ್ಲದೆ ವಿರಕ್ತರಾಗಿ ನಿವೃತ್ತಿಮಾರ್ಗದಲ್ಲಿರಬೇಕು. ಅವರಿಗೆ ಆಮೇಲೆ ಮಹಾಫಲವಾದ ಮೋಕ್ಷವು ಪ್ರಾಪ್ತವಾಗುವುದು. ಇದಲ್ಲದೆ ಪ್ರಬಲವಾದ ದೀರ್ಘರೋಗವುಳ್ಳವರೂ ಕೆಲವು ವಿಧವಾದ ಅಂಗವಿಕಾರಗಳುಳ್ಳವರೂ ವಿವಾಹಕ್ಕೆ ಯೋಗ್ಯರಲ್ಲ. ಇಂಥವರೂ ಮದಿವೆಯಿಲ್ಲದೆ ವಿರಕ್ತರಾಗಿರತಕ್ಕದು. ಇವರಿಗೂ ಆಮೇಲೆ ಸದ್ಗತಿಯುಂಟಾಗುವುದು. ಹೀಗೆಂದು ಶಾಸ್ತ್ರಗಳು ಅಪ್ಪಣೆ ಕೊಡಿಸುವುವು.

ಆದಪ್ರಯುಕ್ತ ಸ್ತ್ರೀಯರಿಗೆ ಬಾಲ್ಯದಲ್ಲಿಯೇ ವಿವಾಹವನ್ನು ಮಾಡದೆ, ಅವರು ಯುವತಿಯರಾದ ಬಳಿಕ ಅವರಿಗೆ ಸಂಸಾರದಲ್ಲಿ ಅಭಿಲಾಷೆಯುಂಟೆಂದು ಕಂಡುಬಂದರೆ ಮದಿವೆಯನ್ನು ಮಾಡತಕ್ಕದು. ಹಾಗಿಲ್ಲದೆ ವೈರಾಗ್ಯಶಾಲಿನಿಗಳಾಗಿದ್ದರೆ ಅವರಿಗೆ ವಿವಾಹವನ್ನು ಮಾಡದೆ ಅವರು ನಿವೃತ್ತಿಮಾರ್ಗವನ್ನವಲಂಬಿಸಿ ಮೋಕ್ಷಭಾಗಿಗಳಾಗಲು ಅವಕಾಶವನ್ನು ಕೊಡತಕ್ಕದು. ಹೀಗೆ ಮಾಡದೆ ಅವರಿಗೆ ಏನೂ ತಿಳಿಯದೆ ಇರುವಾಗ ಬಾಲ್ಯದಲ್ಲಿಯೇ ವಿವಾಹ ಮಾಡಿದರೆ, ಅವರಿಗೆ ಬಹಳವಾಗಿ ಅನ್ಯಾಯಮಾಡಿದಂತಾಗುವುದು. ಅವರು ವಿರಕ್ತರಾಗುವ ಪಕ್ಷದಲ್ಲಿ ಅವರಿಗೆ ನಿವೃತ್ತಿಮಾರ್ಗದಲ್ಲಿ ಪ್ರವೇಶಿಸಲು ಅವಕಾಶವೇ ಇಲ್ಲದೆ ಹೋಗಿ ಮೋಕ್ಷಪ್ರಾಪ್ತಿಗೆ ಬಾಧಕವುಂಟಾಗುವುದು. ಇದಲ್ಲದೆ ಸಂಸಾರದಲ್ಲಿ ಅಭಿರುಚಿಯಿಲ್ಲದವರಿಗೆ ಬಲವಂತದಿಂದ ಕಟ್ಟಿದ ಸಂಸಾರವು ಮಹಾಕ್ಲೇಶವಾಗಿ ಪರಿಣಮಿಸದೆ ಇರಲಾರದು. ಹೀಗೆ ಅವರಿಗೆ ಇಹಪರ ಸೌಖ್ಯಗಳೂ ತಪ್ಪಿಹೋಗುವುವು. ಆದುದ

ರಿಂದ ಸ್ತ್ರೀಯರು ಋತುಮತಿಗಳಾಗಿ ಯೌವನದಶೆಗೆ ಬಂದ ಬಳಿಕ ಅವರು ಸಂಸಾರ ಪ್ರವೃತ್ತಿಯನ್ನಪೇಕ್ಷಿಸಿದರೆ ಅವರಿಗೆ ಮದಿವೆ ಮಾಡತಕ್ಕದು. ಅಪೇಕ್ಷಿಸದಿದ್ದರೆ ನಿವೃತ್ತಿಮಾರ್ಗದಲ್ಲಿರಲು ಅವಕಾಶವನ್ನು ಕೊಡತಕ್ಕದು. ಹೀಗೆ ಮಾಡುವುದು ವಿವೇಕಿಗಳಾದ ತಾಯಿ ತಂದೆ ಮುಂತಾದ ಪೋಷಕರ ಕರ್ತವ್ಯವಾಗಿರುವುದು.

ಈಗ ಪುರುಷರಿಗೂ ಸ್ತ್ರೀಯರಿಗೂ ವಿವಾಹವು ಐಚ್ಛಿಕವೆಂಬ ವಿಷಯದಲ್ಲಿ ಕೆಲವು ಶಾಸ್ತ್ರವಚನಗಳು ಉದಾಹರಿಸಲ್ಪಡುವುವು.—

ಅಮೃತಬಿಂದೂಪನಿಷತ್ತು.

ಮನೋ ಹಿ ದ್ವಿವಿಧಂ ಪ್ರೋಕ್ತಂ ಶುದ್ಧಂ ಚಾಶುದ್ಧಮೇವ ಚ ।
ಅಶುದ್ಧಂ ಕಾಮಸಂಕಲ್ಪಂ ಶುದ್ಧಂ ಕಾಮವಿವರ್ಜಿತಂ ॥ ೧ ॥
ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ।
ಬಂಧಾಯ ವಿಷಯಾಸಕ್ತಂ ಮುಕ್ತ್ಯೈ ನಿರ್ವಿಷಯಂ ಸ್ಮೃತಂ ॥ ೨ ॥
ಯತೋ ನಿರ್ವಿಷಯಸ್ಯಾಸ್ಯ ಮನಸೋ ಮುಕ್ತಿರಿಷ್ಯತೇ ।
ಅತೋ ನಿರ್ವಿಷಯಂ ನಿತ್ಯಂ ಮನಃ ಕಾರ್ಯಂ ಮುಮುಕ್ಷುಣಾ ॥ ೩ ॥

ಅರ್ಥ.—ಮನಸ್ಸು ಶುದ್ಧವೆಂದೂ ಅಶುದ್ಧವೆಂದೂ ಎರಡುಪ್ರಕಾರವಾಗಿ ಉಕ್ತವಾಗಿರುವುದು. ಕಾಮಸಂಕಲ್ಪವುಳ್ಳದ್ದು ಅಶುದ್ಧ ಮನಸ್ಸಾಗಿರುವುದು. ಕಾಮವಿಲ್ಲದ್ದು ಶುದ್ಧಮನಸ್ಸೆನ್ನಿಸುವುದು. ಮನುಷ್ಯರಿಗೆ ಬಂಧಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣವಾಗಿರುವುದು. ವಿಷಯಾಸಕ್ತಿಯುಳ್ಳ ಮನಸ್ಸು ಬಂಧಕ್ಕೂ, ನಿರ್ವಿಷಯಕವಾದ ಮನಸ್ಸು ಮುಕ್ತಿಗೂ ಹೇಳಲ್ಪಟ್ಟಿರುವುವು. ನಿರ್ವಿಷಯಕವಾದ ಮನಸ್ಸಿಗೆ ಮುಕ್ತಿಯು ಹೇಳಲ್ಪಟ್ಟಿರುವಕಾರಣ, ಮುಮುಕ್ಷುವಿನಿಂದ ನಿರಂತರದಲ್ಲಿಯೂ ಮನಸ್ಸು ನಿರ್ವಿಷಯಕವಾಗಿ ಮಾಡಲ್ಪಡಬೇಕು.

ತಾತ್ಪರ್ಯ.—ಇದು ಸ್ತ್ರೀಯರಿಗೂ ಪುರುಷರಿಗೂ ಹೇಳಿದ ಮಾತು. ಪುರುಷರಿಗೆ ಮಾತ್ರವಲ್ಲ. ಮನಸ್ಸು ಸ್ತ್ರೀಪುರುಷರಿಬ್ಬರಿಗೂ ಇರುವುದು. ಇಲ್ಲಿ ಪ್ರಯೋಗಿಸಲ್ಪಟ್ಟ ಮನುಷ್ಯಾಣಾಂ ಎಂಬ ಪದವು ಪುಲ್ಲಿಂಗದಲ್ಲಿದ್ದಾಗ್ಯೂ ಅದನ್ನು ಪುರುಷರಿಗೆ ಮಾತ್ರವಲ್ಲದೆ ಸ್ತ್ರೀಯರಿಗೂ ಸಹ ಅನ್ವಯಿಸಿಕೊಳ್ಳಬೇಕು. ಸಾಮಾನ್ಯವಾಗಿ ಶಾಸ್ತ್ರಗಳಲ್ಲಿ ಒಂದೇ ವಿಷಯವನ್ನು ಸ್ತ್ರೀಪುರುಷರಿಗೆ ಬೋಧಿಸುವಾಗಲೂ ವಿಧಿಸುವಾಗಲೂ ಅಥವಾ ನಿಷೇಧಿಸುವಾಗಲೂ ಪುಲ್ಲಿಂಗವನ್ನೇ ಪ್ರಯೋಗಿಸುವ ಪದ್ಧತಿಯುಂಟು.

ಉದಾಹರಣೆ :—ಮನುಷ್ಯಾಣಾಂ ಹಿತಂ ಧರ್ಮಂ ವರ್ತಮಾನೇ ಕಲೌ ಯುಗೇ । ಶೌಚಾಚಾರಂ ಯಥಾವಚ್ಚ ವದ ಸತ್ಯವತೀಸುತ ॥ (ಪರಾಶರಸ್ಮೃತಿ, ಆಚಾರಕಾಂಡ, ಅಧ್ಯಾಯ ೧, ಶ್ಲೋಕ ೨).

ಅರ್ಥ--ಎಲೈ ಸತ್ಯವತೀಕುಮಾರನಾದ ವ್ಯಾಸನೆ, ಈಗ ನಡೆಯುತ್ತಿರುವ ಕಲಿಯುಗದಲ್ಲಿ ಮನುಷ್ಯರಿಗೆ ಇಷ್ಟವಾದ ಫಲಗಳನ್ನು ಕೊಡುವಂಥ ಶೌಚಾಚಾರರೂಪವಾದ ಧರ್ಮಗಳನ್ನು ಹೇಳು—ಎಂದು ಋಷಿಗಳು ಕೇಳಿದರು. ಮತ್ತು,

ಅನ್ಯೇ ಕಲಿಯುಗೇ ನೃಣಾಂ ಯುಗರೂಪಾನುಸಾರತಃ ॥ ಶ್ಲೋಕ ೨೩.

ಅರ್ಥ.—ಯುಗರೂಪಾನುಸಾರವಾಗಿ ಮನುಷ್ಯರಿಗೆ ಕಲಿಯುಗದಲ್ಲಿ ಧರ್ಮಗಳು ಬೇರೆಯಾಗಿರುವುವು. ಹೀಗೆ ಈ ಶ್ಲೋಕಗಳಲ್ಲಿ ಪ್ರಯೋಗಿಸಲ್ಪಟ್ಟಿರುವ ಮನುಷ್ಯಾಣಾಂ ಮತ್ತು ನೃಣಾಂ ಎಂಬ ಪುಲ್ಲಿಂಗಸೂಚಕವಾದ ಪದಗಳನ್ನು ಪುರುಷರಿಗೆ ಮಾತ್ರವಲ್ಲದೆ ಸ್ತ್ರೀಯರಿಗೂ ಅನ್ವಯಿಸಿಕೊಳ್ಳಬೇಕು. ಇಲ್ಲದಿದ್ದರೆ ಸ್ತ್ರೀಯರಿಗೆ ಧರ್ಮಗಳನ್ನೇ ಹೇಳಿದಂತಾಗುವುದಿಲ್ಲ.

ಮತ್ತು ಮೇಲಿನ ಉಪನಿಷತ್ತಿನಲ್ಲಿ ಪ್ರಯೋಗಿಸಲ್ಪಟ್ಟಿರುವ ಮುಮುಕ್ಷುಣಾ ಎಂಬ ಪುಲ್ಲಿಂಗಪದವನ್ನು ಪುರುಷರಿಗೆ ಮಾತ್ರವಲ್ಲದೆ ಸ್ತ್ರೀಯರಿಗೂ ಅನ್ವಯಿಸಿಕೊಳ್ಳಬೇಕು. ಇಲ್ಲಿ ಮುಮುಕ್ಷುವು ಮನಸ್ಸನ್ನು ನಿರ್ವಿಷಯಕವಾಗಿ ಮಾಡಬೇಕೆಂದು ಉಕ್ತವಾಗಿದೆ. ವಿಷಯಾಸಕ್ತಿಗಳಲ್ಲಿ ಮುಖ್ಯವಾದುದು ವ್ಯವಾಯವು. ಅದುದರಿಂದ ಮುಮುಕ್ಷುವಾದ ಸ್ತ್ರೀಯುಕೂಡ ವ್ಯವಾಯವನ್ನು ಬಿಡಬೇಕು ಎಂದರೆ ಮದಿವೆಯನ್ನು ಬಿಡಬೇಕೆಂದು ಹೇಳಿದಂತಾಯಿತು.

ಕೈವಲ್ಯೋಪನಿಷತ್ತು.

ನ ಕರ್ಮಣಾ ನ ಪ್ರಜಯಾ ಧನೇನ ।
ತ್ಯಾಗೇನೈಕೇ ಅಮೃತತ್ವಮಾನಶುಃ ॥೨॥

ಅರ್ಥ.—ದೊಡ್ಡವರು ಮೋಕ್ಷವನ್ನು ಕರ್ಮದಿಂದಲೂ ಪ್ರಜೆಯಿಂದಲೂ ಧನದಿಂದಲೂ ಹೊಂದಲಿಲ್ಲ. ವಿರಕ್ತಿಯಿಂದ ಮಾತ್ರ ಅದನ್ನು ಹೊಂದಿದರು—ಎಂದು ಆಶ್ವಲಾಯನನಿಗೆ ಪರಮೇಷ್ಠಿಯು ಹೇಳಿದನು.

ತಾತ್ಪರ್ಯ—ಪ್ರಜೆಯಿಂದ ಕರ್ಮದಿಂದ ಮತ್ತು ಧನದಿಂದ ಮೋಕ್ಷವನ್ನು ಹೊಂದಲಿಲ್ಲವೆಂದರೆ ಮದಿವೆಮಾಡಿಕೊಂಡು ಪ್ರಜೋತ್ಪಾದನಮಾಡುವುದು, ಯಾಗಾದಿಕರ್ಮಗಳನ್ನು ಮಾಡುವುದು-ಇವೇ ಮೊದಲಾದುವು ಮೋಕ್ಷವನ್ನು ಹೊಂದಲು ಪ್ರಯೋಜಕಗಳಲ್ಲ, ಅದಕ್ಕೆ ವಿರಕ್ತಿಯೇ ಪ್ರಯೋಜಕವಾದುದು ಎಂದು ಹೇಳಿದಂತಾಯಿತು. ಅದುದರಿಂದ ಕೇವಲ ಮುಮುಕ್ಷುಗಳಾದ ಸ್ತ್ರೀಯರೂ ಪುರುಷರೂ ವಿವಾಹವನ್ನು ಬಿಟ್ಟು ವಿರಕ್ತರಾಗಿರಬೇಕೆಂದು ಅಭಿಪ್ರಾಯವು.

ಭಾಗವತ, ಸ್ಕಂಧ ೧೧, ಅಧ್ಯಾಯ ೫.

ಲೋಕೇ ಚಮಸಃ ವ್ಯವಾಯಾಮಿಷಮದ್ಯಸೇವಾನಿತ್ಯಾಸ್ತು ಜಂತೋರ್ನಹಿ ತತ್ರ ಚೋದನಾ । ವ್ಯವಸ್ಥಿತಿಸ್ತಾಸು ವಿವಾಹಯಜ್ಞಸುರಾಗ್ರಹೈರಾಸು ನಿವೃತ್ತಿರಿಷ್ಟಾ ॥೧೧॥

ಶ್ರೀಧರಟೀಕಾ । ವಿವಾಹವಿಷಯ ಏವ ವ್ಯವಾಯಃ ಕಾರ್ಯಃ । ಯಜ್ಞ ಏವ ಆ ಮಿಷಸೇವಾ । ಸೌತ್ರಾಮಣ್ಯಾಂ ಸುರಾಗ್ರಹಾನ್ ಗೃಹ್ಣಾತೀತಿ ಶ್ರುತೇಃ ತತ್ರೈವ ಮದ್ಯಸೇವೇತಿ ನಿಯಮಃ ಕ್ರಿಯತೇ । ತಾಸು ವ್ಯವಾಯಾಮಿಷಮದ್ಯಸೇವಾಸು ನಿವೃತ್ತಿರಿಷ್ಟಾ ॥

ಅರ್ಥ.—ಚಮಸನು ಹೇಳುವನು:—ಲೋಕದಲ್ಲಿ ಜಂತುವಿಗೆ ವ್ಯವಾಯ ಆಮಿಷ ಮತ್ತು ಮದ್ಯಗಳ ಸೇವೆಯು ನಿತ್ಯವಾದುದು. ಈ ವಿಷಯದಲ್ಲಿ ಪ್ರೇರಣೆಯಿಲ್ಲ. ಇವುಗಳಿಗೆ ವಿವಾಹ ಯಜ್ಞ ಸುರಾಗ್ರಹಗಳಿಂದ ವ್ಯವಸ್ಥೆಯಾಗಿರುವುದು. ಆದರೆ ಇವುಗಳ ನಿವೃತ್ತಿಯು ಇಷ್ಟವಾದುದು. ಶ್ರೀಧರಟೀಕೆ.—ವಿವಾಹವಿಷಯದಲ್ಲಿಯೇ ವ್ಯವಾಯವು ಮಾಡಲ್ಪಡತಕ್ಕದು. ಯಜ್ಞದಲ್ಲಿಯೇ ಮಾಂಸಭಕ್ಷಣೆಯು. ಸೌತ್ರಾಮಣಿಯಲ್ಲಿಯೇ ಸುರಾಪಾನವೆಂದು ಶ್ರುತಿಪ್ರಮಾಣವಿರುವುದರಿಂದ ಅಲ್ಲಿಯೇ ಮದ್ಯಸೇವೆಯೆಂದು ನಿಯಮವು ಮಾಡಲ್ಪಟ್ಟಿದೆ. ಆದರೆ ವ್ಯವಾಯಾಮಿಷಮದ್ಯಸೇವೆಗಳಲ್ಲಿ ನಿವೃತ್ತಿಯು ಇಷ್ಟವಾದುದು.

ತಾತ್ಪರ್ಯ.—ಇಲ್ಲಿ ಜಂತು ಎಂಬ ಪದವು ಸ್ತ್ರೀಗೂ ಪುರುಷನಿಗೂ ಅನ್ವಯಿಸುವುದು. ವ್ಯವಾಯವನ್ನಪೇಕ್ಷಿಸುವವರು ಮದಿವೆ ಮಾಡಿಕೊಂಡು ಅದರಲ್ಲಿ ಪ್ರವರ್ತಿಸಬಹುದು. ಅನ್ಯಥಾ ಕೂಡದು. ಹಾಗೆಯೇ ಯಜ್ಞದಲ್ಲಿ ಮದ್ಯಮಾಂಸಸೇವನವಾಗಬಹುದೇ ಹೊರತು, ಅನ್ಯಥಾ ಕೂಡದೆಂದು ನಿಯಮವು ಮಾಡಲ್ಪಟ್ಟಿರುವುದು. ಆದರೆ ವ್ಯವಾಯಾದಿಗಳನ್ನು ಬಿಟ್ಟುಬಿಡುವುದು ಇಷ್ಟವಾದುದು.

ಭಾಗವತ, ಸ್ಕಂಧ ೧೧, ಅಧ್ಯಾಯ ೨೧.

ಯತೋಯತೋ ನಿವರ್ತೇತ ವಿಮುಚ್ಯೇತ ತತಸ್ತತಃ ।
ಏಷಧರ್ಮೋ ನೃಣಾಂ ಕ್ಷೇಮಃ ಶೋಕಮೋಹಭಯಾಪಹಃ ॥೧೯॥

ಅರ್ಥ.—ಪುರುಷನಾಗಲೀ ಸ್ತ್ರೀಯಾಗಲೀ ಯಾವಯಾವಕರ್ಮಗಳಿಂದ ವಿಮುಖರಾಗುತ್ತಾರೋ ಅವವುಗಳಿಂದ ವಿಮುಕ್ತರಾಗುವರು. ಈ ಧರ್ಮವು ಮನುಷ್ಯರಿಗೆ ಕ್ಷೇಮಕರವಾಗಿಯೂ ದುಃಖಮೋಹಭಯಗಳನ್ನು ನಾಶಮಾಡುವಂಥಾದ್ದಾಗಿಯೂ ಇರುವುದು.

ತಾತ್ಪರ್ಯ.—ನಿವೃತ್ತಿಧರ್ಮವು ಸ್ತ್ರೀಯರಿಗೂ ಪುರುಷರಿಗೂ ಕ್ಷೇಮಕರವಾಗಿಯೂ, ಶೋಕಮೋಹಭಯಗಳನ್ನು ನಾಶಮಾಡುವಂಥಾದ್ದಾಗಿಯೂ ಇರುವುದು. ಯಾರುಯಾರು ಎಷ್ಟೆಷ್ಟುಮಟ್ಟಿಗೆ ನಿವೃತ್ತರಾಗಲು ಶಕ್ತರಾಗಿರುವರೋ, ಅಷ್ಟಷ್ಟುಮಟ್ಟಿಗೆ ನಿವೃತ್ತರಾಗಬಹುದು. ಅದರಿಂದ ಅವರಿಗೆ ಕ್ಷೇಮವುಂಟು. ಹಾಗೆಯೇ ವ್ಯವಾಯದಿಂದಲೂ ವಿವಾಹದಿಂದಲೂ ನಿವೃತ್ತರಾಗಲು ಶಕ್ತಿಯುಳ್ಳವರು ಅವುಗಳಿಂದ ವಿಮುಖರಾಗಬಹುದು.

ಮನುಸ್ಮೃತಿ, ಅಧ್ಯಾಯ ೫.

ನ ಮಾಂಸಭಕ್ಷಣೇ ದೋಷೋ ನ ಮದ್ಯೇ ನ ಚ ಮೈಥುನೇ ।
ಪ್ರವೃತ್ತಿರೇಷಾ ಭೂತಾನಾಂ ನಿವೃತ್ತಿಸ್ತು ಮಹಾಫಲಾ ॥೫೬॥

ಮೇಧಾತಿಥಿವ್ಯಾಖ್ಯಾನಂ। ಯಸ್ತು ತೇನ ವಿನಾಪಿ ಶಕ್ನೋತಿ ಜೀವಿತುಂ, ತಸ್ಯ ನಿವೃತ್ತಿರ್ಮಹಾಫಲಾ ॥

ಸರ್ವಜ್ಞನಾರಾಯಣವ್ಯಾಖ್ಯಾನಂ। ಯತಃ ಪ್ರವೃತ್ತಿರೇಷಾ ಭೂತಾನಾಂ ರಾಗವಶಾತ್ ಸರ್ವಸಾಧಾರಣಾ ಪ್ರವೃತ್ತಿರ್ನ ವೈಧೀ॥ ಕುಲ್ಲೂಕವ್ಯಾಖ್ಯಾನಂ। ಪ್ರಾಣಿನಾಂ ಭಕ್ಷಣಮೈಥುನಾದೌ ಪ್ರವೃತ್ತಿಃ ಸ್ವಾಭಾವಿಕೋಯಂ ಧರ್ಮಃ। ವರ್ಜನಂ ಪುನರ್ಮಹಾಫಲಂ ॥

ರಾಮಚಂದ್ರವ್ಯಾಖ್ಯಾನಂ । ರಾಗವಶಾತ್ಸರ್ವಸಾಧಾರಣಪ್ರವೃತ್ತಿರ್ನಚೈತಸ್ಮಾತ್ಪುಣ್ಯಂ ॥

ಅರ್ಥ.-ಮಾಂಸಭಕ್ಷಣದಲ್ಲಿಯೂ, ಮದ್ಯಪಾನದಲ್ಲಿಯೂ, ಮೈಥುನದಲ್ಲಿಯೂ ದೋಷವಿಲ್ಲ. ಇದು ಭೂತಗಳ ಪ್ರವೃತ್ತಿಯು. ಆದರೆ ಇವುಗಳ ನಿವೃತ್ತಿಯಾದರೋ ಮಹಾಫಲದಾಯಕವಾದುದು. ಮೇಧಾತಿಥಿವ್ಯಾಖ್ಯಾನ.—ಮಾಂಸಮದ್ಯ ಮೈಥುನಗಳಿಲ್ಲದೆ ಯಾವನು ಜೀವಿಸಲು ಸಮರ್ಥನೋ ಅವನಿಗೆ ಅವುಗಳ ನಿವೃತ್ತಿಯು ಮಹಾಫಲದಾಯಕವಾಗಿರುವುದು. ಸರ್ವಜ್ಞನಾರಾಯಣವ್ಯಾಖ್ಯಾನ.—ಮೈಥುನಾದಿಗಳಲ್ಲಿ ಪ್ರವೃತ್ತಿಯು ಭೂತಗಳಿಗೆ ರಾಗವಶದದೆಸೆಯಿಂದ ಸರ್ವಸಾಧಾರಣವಾದ ಕಾರಣ, ಅದನ್ನು ವಿಧಿಸಬೇಕಾದುದಿಲ್ಲ. ಕುಲ್ಲೂಕವ್ಯಾಖ್ಯಾನ.—ಪ್ರಾಣಿಗಳಿಗೆ ಭಕ್ಷಣ ಮೈಥುನಾದಿಗಳಲ್ಲಿ ಪ್ರವೃತ್ತಿಯು ಸ್ವಾಭಾವಿಕಧರ್ಮವಾಗಿರುವುದು. ಅವುಗಳ ನಿವೃತ್ತಿಯಾದರೋ ಮಹಾಫಲವನ್ನುಂಟುಮಾಡುವುದು. ರಾಮಚಂದ್ರವ್ಯಾಖ್ಯಾನ.—ಇದು ರಾಗವಶದಿಂದಾದ ಸರ್ವಸಾಧಾರಣ ಪ್ರವೃತ್ತಿಯು. ಇದರಿಂದ ಪುಣ್ಯವೇನೂ ಇಲ್ಲ.

ತಾತ್ಪರ್ಯ.—ಈ ಮಾತು ಸ್ತ್ರೀಗೂ ಪುರುಷನಿಗೂ ಹೇಳಿದ್ದಾಗಿರುವುದು. ಇಲ್ಲಿ ಭೂತಾನಾಂ ಎಂಬ ಪದವು ಪುರುಷರಿಗೂ ಸ್ತ್ರೀಯರಿಗೂ ಸಹ ಅನ್ವಯಿಸುವುದು. ಆದರೆ ಮಾಂಸಭಕ್ಷಣ ಮುಂತಾದವುಗಳಲ್ಲಿ ದೋಷವಿಲ್ಲವೆಂದು ಹೇಳಿದ ಮಾತ್ರಕ್ಕೆ ಸ್ವೇಚ್ಛೆಯಾಗಿ ಮಾಂಸಾದಿಗಳ ಸೇವನೆಗೆ ಮನುಋಷಿಯು ಅಪ್ಪಣೆಕೊಟ್ಟಿರುವನೆಂದು ಭಾವಿಸಕೂಡದು. ಕೆಲವು ಯಜ್ಞಗಳಲ್ಲಿ ಮಾತ್ರ ಮಾಂಸಭಕ್ಷಣವನ್ನೂ, ಮದ್ಯಪಾನವನ್ನೂ ಮಾಡಬಹುದು. ಅನ್ಯಥಾ ಮಾಡಿದರೆ ದೋಷವು ಪ್ರಾಪ್ತವಾಗಿ ಅಧೋಗತಿಯುಂಟಾಗುವುದು. ಹಾಗೆಯೇ ಮೈಥುನವನ್ನೂ, ಮನಸ್ಸಿಗೆ ಬಂದಂತೆ ಮಾಡಲು ಅಪ್ಪಣೆಯಿಲ್ಲ. ಸ್ತ್ರೀಪುರುಷರು ವಿವಾಹ ಮಾಡಿಕೊಂಡೇ ಅದರಲ್ಲಿ ಪ್ರವರ್ತಿಸತಕ್ಕದು. ಅನ್ಯಥಾ ಮಾಡಿದರೆ ಪಾಪವು ಸಂಭವಿಸಿ ಅಧೋ

ಗತಿಯುಂಟಾಗುವುದು. ಹೀಗೆಂದು ಮನುಪ್ರೋಕ್ತವಾದ ಬೇರೆ ವಚನಗಳಿಂದ ಗೊತ್ತಾಗುವುದು. ಆದರೆ ಮಾಂಸ, ಮದ್ಯ, ಮೈಥುನಗಳನ್ನು ಬಿಟ್ಟರೆ, ಮಹಾಫಲ ವೆಂದರೆ—ಮೋಕ್ಷವು ಉಂಟಾಗುವುದು. ಆದುದರಿಂದ ಮಹಾಫಲವನ್ನಪೇಕ್ಷಿಸುವ ಸ್ತ್ರೀಪುರುಷರು ಅವುಗಳನ್ನು ಬಿಡತಕ್ಕುದು. ಮೈಥುನವನ್ನು ಬಿಡಬೇಕೆಂದರೆ ವಿವಾಹವನ್ನೇ ಬಿಡಬೇಕಾಯಿತು.

ಈ ವಿಷಯದಲ್ಲಿ ಇನ್ನೂ ಬೇರೆ ವಚನಗಳಿರುವುವು. ಮೇಲಿನ ವಚನಗಳಿಂದ ಸ್ತ್ರೀಯರಿಗೂ ಪುರುಷರಿಗೂ ವಿವಾಹವು ಐಚ್ಛಿಕವೆಂಬುದು ಸ್ಪಷ್ಟವಾಗುವುದು. ವ್ಯವಾಯವನ್ನಪೇಕ್ಷಿಸುವವರು ವಿವಾಹವನ್ನು ಮಾಡಿಕೊಳ್ಳಬೇಕು. ಅದನ್ನಪೇಕ್ಷಿಸದವರು ವಿವಾಹವನ್ನು ಬಿಡಬೇಕು. ವ್ಯವಾಯವನ್ನಪೇಕ್ಷಿಸುವುದು ಅಥವಾ ಅಪೇಕ್ಷಿಸದೆ ಇರುವುದು ಸ್ತ್ರೀಪುರುಷರಿಗೆ ಐಚ್ಛಿಕವೇ ಹೊರತು ಬಲವಂತವಾದುದಲ್ಲ. ಆದಪ್ರಯುಕ್ತ ವಿವಾಹವೂ ಐಚ್ಛಿಕವಾಗಿರುವುದು.

ಕೆಳಗಿನ ವಚನಗಳು ಪುರುಷರಿಗೆ ವಿವಾಹವು ಐಚ್ಛಿಕವೆಂಬುದನ್ನು ಸೂಚಿಸುವುವು. ಇಷ್ಟವಿದ್ದವನು ಮದುವೆಮಾಡಿಕೊಳ್ಳಬಹುದು. ಇಲ್ಲದಿದ್ದರೆ ನೈಷ್ಠಿಕ ಬ್ರಹ್ಮಚಾರಿಯಾಗಿ ಸಾಯುವವರೆಗೂ ಆಚಾರ್ಯಕುಲದಲ್ಲಿಯೇ ವಾಸಮಾಡತಕ್ಕುದು ಅಥವಾ ಬ್ರಹ್ಮಚರ್ಯಾಶ್ರಮದಿಂದಲೇ ಸನ್ಯಾಸಿಯಾಗಬಹುದೆಂದು ಸಹ ಅಪ್ಪಣೆ ಕೊಡಿಸುವುವು.

ಮನುಸ್ಮೃತಿ, ಅಧ್ಯಾಯ, ೨.

ಯದಿ ತ್ವಾತ್ಯಂತಿಕಂ ವಾಸಂ ರೋಚಯೇತ ಗುರೋಃ ಕುಲೇ ।
ಯುಕ್ತಃ ಪರಿಚರೇದೇನಮಾಶರೀರವಿಮೋಕ್ಷಣಾತ್ ॥ ೨೪೩ ॥
ಸ ಗಚ್ಛತ್ಯುತ್ತಮಂ ಸ್ಥಾನಂ ನ ಚೇಹಾಜಾಯತೇ ಪುನಃ ॥ ೨೪೯ ॥

ಅರ್ಥ.—ಬ್ರಹ್ಮಚಾರಿಯು ಯಾವಜ್ಜೀವವೂ ಗುರುಕುಲದಲ್ಲಿಯೇ ವಾಸ ಮಾಡಿಕೊಂಡಿರಬೇಕೆಂದು ಅಪೇಕ್ಷೆಯುಳ್ಳವನಾದರೆ ತನ್ನ ಶರೀರಹೋಗುವವರೆಗೂ ಗುರುಸೇವೆಯನ್ನು ಮಾಡಿಕೊಂಡಿರಬೇಕು. ಇಂಥ ಬ್ರಹ್ಮಚಾರಿಯು ಉತ್ತಮಸ್ಥಾನವನ್ನು ಹೊಂದುವನು. ಪುನಃ ಈ ಲೋಕದಲ್ಲಿ ಹುಟ್ಟುವುದಿಲ್ಲ.

ಯಾಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ.

ನೈಷ್ಠಿಕೋ ಬ್ರಹ್ಮಚಾರೀ ತು ವಸೇದಾಚಾರ್ಯಸನ್ನಿಧೌ ॥ ೪೯ ॥
ಅನೇನ ವಿಧಿನಾ ದೇಹಂ ಸಾಧಯನ್ವಿಜಿತೇಂದ್ರಿಯಃ ।
ಬ್ರಹ್ಮಲೋಕಮವಾಪ್ನೋತಿ ನ ಚೇಹಾಜಾಯತೇ ಪುನಃ ॥ ೫೦ ॥

ಅರ್ಥ.—ನೈಷ್ಠಿಕಬ್ರಹ್ಮಚಾರಿಯು ಗುರುಸನ್ನಿಧಿಯಲ್ಲಿಯೇ ವಾಸಮಾಡಬೇಕು. ಈಪ್ರಕಾರ ಜಿತೇಂದ್ರಿಯನಾಗಿ ದೇಹಸಾರ್ಥಕ್ಯ ಮಾಡಿಕೊಂಡವನು ಬ್ರಹ್ಮಲೋಕವನ್ನು ಹೊಂದುವನು. ಪುನಃ ಭೂಲೋಕದಲ್ಲಿ ಹುಟ್ಟುವುದಿಲ್ಲ.

ಹಾರೀತಸ್ಮೃತಿ, ಅಧ್ಯಾಯ, ೩.

ಯಸ್ಯೈತಾನಿ ಸುಗುಪ್ತಾನಿ ಜಿಹ್ವೋಪಸ್ಥೋದರಂ ಕರಃ ॥ ೧೩ ॥
ತಸ್ಮಿನ್ನೇವ ನಯೇತ್ಕಾಲಮಾಚಾರ್ಯೇ ಯಾವದಾಯುಷಂ ॥ ೧೪ ॥
ನ ವಿವಾಹೋ ನ ಸನ್ಯಾಸೋ ನೈಷ್ಠಿಕಸ್ಯ ವಿಧೀಯತೇ ।
ಇಮಂ ಯೋ ವಿಧಿಮಾಸ್ಥಾಯ ತ್ಯಜೇದ್ದೇಹಮತಂದ್ರಿತಃ ॥ ೧೫ ॥
ನೇಹ ಭೂಯೋಭಿಜಾಯೇತ ಬ್ರಹ್ಮಚಾರೀ ದೃಢವ್ರತಃ ॥ ೧೬ ॥

ಅರ್ಥ. - ಯಾವನ ನಾಲಿಗೆ, ಉಪಸ್ಥ, ಹೊಟ್ಟೆ, ಕೈಗಳು ನಿಗ್ರಹಿಸಲ್ಪಟ್ಟು ಚೆನ್ನಾಗಿ ರಕ್ಷಿಸಲ್ಪಟ್ಟವೆಯೋ ಅವನು ಯಾವಜ್ಜೀವವೂ ಆಚಾರ್ಯಗೃಹದಲ್ಲಿಯೇ ಇದ್ದುಕೊಂಡು ಕಾಲಕಳೆಯಬೇಕು. ನೈಷ್ಠಿಕನಿಗೆ ವಿವಾಹವೂ ಸನ್ಯಾಸವೂ ವಿಧಿಸಲ್ಪಡುವುದಿಲ್ಲ. ಈ ವಿಧದಲ್ಲಿ ಜಿತೇಂದ್ರಿಯನಾಗಿದ್ದು ದೇಹವನ್ನು ಬಿಡಬೇಕು. ಇಂಥ ದೃಢವ್ರತವುಳ್ಳ ಬ್ರಹ್ಮಚಾರಿಯು ಪುನಃ ಭೂಲೋಕದಲ್ಲಿ ಹುಟ್ಟುವುದಿಲ್ಲ.

ವಿಷ್ಣುಪುರಾಣ, ಅಂಶ, ೩ ಅಧ್ಯಾಯ, ೧೦.

ಗಾರ್ಹಸ್ಥ್ಯಮಿಚ್ಛನ್ ಭೂಪಾಲ ಕುರ್ಯಾದ್ದಾರಪರಿಗ್ರಹಂ ॥ ೧೩ ॥
ಬ್ರಹ್ಮಚರ್ಯೇಣ ವಾ ಕಾಲಂ ಕುರ್ಯಾತ್ಸಂಕಲ್ಪಪೂರ್ವಕಂ ॥ ೧೪ ॥
ವೈಖಾನಸೋ ವಾಪಿ ಭವೇತ್ಪರಿವ್ರಾಡಥವೇಚ್ಛಯಾ ।
ಪೂರ್ವಂ ಸಂಕಲ್ಪಿತಂ ಯಾದೃಕ್ ತಾದೃಕ್ಕುರ್ಯಾನ್ಮಹೀಪತೇ ॥ ೧೫ ॥

ಅರ್ಥ.—ಎಲೈ ಭೂಪಾಲನೆ, ಗೃಹಸ್ಥಾಶ್ರಮವನ್ನಪೇಕ್ಷಿಸುವವನು ಮದಿವೆ ಮಾಡಿಕೊಳ್ಳಬೇಕು. ಅಥವಾ ಸಂಕಲ್ಪಪೂರ್ವಕವಾಗಿ ಬ್ರಹ್ಮಚರ್ಯದಿಂದಲೇ ಕಾಲವನ್ನು ಕಳೆಯಬೇಕು. ಅಥವಾ ಅಪೇಕ್ಷೆಯಿದ್ದರೆ ವಾನಪ್ರಸ್ಥನಾಗಲಿ ಅಥವಾ ಸನ್ಯಾಸಿಯಾಗಲಿ ಆಗಬಹುದು. ಮೊದಲು ಹೇಗೆ ಸಂಕಲ್ಪ ಮಾಡಲ್ಪಟ್ಟಿರುವುದೋ ಹಾಗೆ ಮಾಡಬೇಕು.

ಮಾರ್ಕಂಡೇಯಪುರಾಣ, ಅಧ್ಯಾಯ, ೨೮.

ಗಾರ್ಹಸ್ಥ್ಯಾಶ್ರಮಕಾಮಸ್ತು ಗೃಹಸ್ಥಾಶ್ರಮಮಾವಸೇತ್ ।
ವಾನಪ್ರಸ್ಥಾಶ್ರಮಂ ವಾಪಿ ಚತುರ್ಥಂ ಚೇಚ್ಛಯಾತ್ಮನಃ ॥ ೧೫ ॥
ತತ್ರೈವ ವಾ ಗುರೋರ್ಗೇಹೇ ದ್ವಿಜೋ ನಿಷ್ಠಾಮವಾಪ್ನುಯಾತ್ ॥ ೧೬ ॥

ಅರ್ಥ.—ಗೃಹಸ್ಥಾಶ್ರಮವನ್ನಪೇಕ್ಷಿಸುವವನು ಗೃಹಸ್ಥನಾಗಬಹುದು. ಅಥವಾ ಇಷ್ಟವಿದ್ದರೆ ವಾನಪ್ರಸ್ಥಾಶ್ರಮವನ್ನಾಗಲಿ ಅಥವಾ ನಾಲ್ಕನೆಯದಾದ ಸನ್ಯಾಸಾಶ್ರಮವನ್ನಾಗಲಿ ಆಶ್ರಯಿಸಬಹುದು. ಇಲ್ಲದಿದ್ದರೆ ದ್ವಿಜನು ಗುರುವಿನ ಮನೆಯಲ್ಲಿಯೇ ನೈಷ್ಠಿಕನಾಗಿರಬಹುದು.

ಜಾಬಾಲೋಪನಿಷತ್ತು.

ಯದಿ ವೇತರಥಾ ಬ್ರಹ್ಮಚರ್ಯಾದೇವ ಪ್ರವ್ರಜೇದ್ಗೃಹಾದ್ವಾ ವನಾದ್ವಾ ॥೪

ಅರ್ಥ.—ಬೇರೇಪ್ರಕಾರವಾಗಿ,/ಬ್ರಹ್ಮಚರ್ಯದಿಂದಲೇ ಸನ್ಯಾಸಿಯಾಗ ಬಹುದು. ಅಥವಾ ಗಾರ್ಹಸ್ಥ್ಯದಿಂದಲಾದರೂ ವಾನಪ್ರಸ್ಥದಿಂದಲಾದರೂ ಸನ್ಯಾಸಿ ಯಾಗಬಹುದು.

ಈ ವಿಷಯದಲ್ಲಿ ಹೀಗೆಯೇ ಇನ್ನೂ ಅನೇಕ ವಚನಗಳಿರುವುವು. ಮೇಲಿನ ವಚನಗಳಿಂದ ಪುರುಷರಿಗೆ ವಿವಾಹವು ಐಚ್ಛಿಕವೆಂಬುದು ವ್ಯಕ್ತವಾಗುವುದು. ಪುರುಷರಿಗೆ ಹೇಗೋ ಹಾಗೆಯೇ ಸ್ತ್ರೀಯರಿಗೂ ಕೂಡ ವಿವಾಹವು ಐಚ್ಛಿಕವೆಂಬುದು ಕೆಳಗೆ ಉದಾಹರಿಸಲ್ಪಟ್ಟ ವಚನಗಳಿಂದ ಸೂಚಿತವಾಗುವುದು. ಸ್ತ್ರೀಯರು ನೈಷ್ಠಿಕಬ್ರಹ್ಮಚಾರಿಗಳಂತೆ ಮದಿವೆಯಿಲ್ಲದೆ ಕೌಮಾರಬ್ರಹ್ಮಚಾರಿಣಿಗಳಾಗಿರ ಬಹುದು. ಅಥವಾ ಬ್ರಹ್ಮಚರ್ಯದಿಂದಲೇ ಸನ್ಯಾಸಿನಿಯರಾಗಬಹುದು.

ದೇವೀಭಾಗವತ, ಸ್ಕಂಧ, ೫ ಅಧ್ಯಾಯ, ೧೭.

ನ ಚ ವಾಂಛತಿ ಭರ್ತಾರಂ ಕೌಮಾರವ್ರತಧಾರಿಣೀ ।
ವ್ರತಜಾಪ್ಯಪರಾ ನಿತ್ಯಂ ಸಂಸಾರಾದ್ವಿಮುಖೀ ಸದಾ ॥೨೮॥

ಅರ್ಥ.—ಆಕೆಯು ಮದಿವೆಯನ್ನಪೇಕ್ಷಿಸುವುದಿಲ್ಲ. ಕೌಮಾರವ್ರತಧಾರಿಣಿ ಯಾಗಿಯೂ ನಿತ್ಯದಲ್ಲಿಯೂ ವ್ರತ ಜಪಪರಳಾಗಿಯೂ ಸದಾಸಂಸಾರವಿಮುಖಿಯಾಗಿಯೂ ಇರುವಳು.

ಸ್ಕಂದಪುರಾಣ, ಸನತ್ಕುಮಾರಸಂಹಿತೆ, ಅಧ್ಯಾಯ, ೪೩.

ನೋಚೇತ್ತಪಃ ಕರಿಷ್ಯಾಮಿ ಕುಮಾರೀ ಬ್ರಹ್ಮಚಾರಿಣೀ ॥

ಅರ್ಥ.—ಹಾಗಲ್ಲದಿದ್ದರೆ ಕೌಮಾರಬ್ರಹ್ಮಚಾರಿಣಿಯಾಗಿ ತಪಸ್ಸನ್ನು ಮಾಡುವೆನು.

ಮಹಾಭಾರತ, ಅನುಶಾಸನಿಕಪರ್ವ, ಅಧ್ಯಾಯ. ೨೦.

ಕೌಮಾರಂ ಬ್ರಹ್ಮಚರ್ಯಂ ಮೇ ಕನ್ಯೈವಾಸ್ಮಿ ನ ಸಂಶಯಃ ॥೨೨॥

ಅರ್ಥ.—ನಾನು ಕೌಮಾರ ಬ್ರಹ್ಮಚರ್ಯವುಳ್ಳವಳು. ನಿಸ್ಸಂದೇಹವಾಗಿ ಕನ್ಯೆಯಾಗಿಯೇ ಇರುವೆನು.

ಮಹಾಭಾರತ, ಶಲ್ಯಪರ್ವ, ಗದಾಯುದ್ಧಪರ್ವ, ಅಧ್ಯಾಯ, ೫೪.

ತತ್ರೈವ ಬ್ರಾಹ್ಮಣೀ ಸಿದ್ಧಾ ಕೌಮಾರಬ್ರಹ್ಮಚಾರಿಣೀ ।
ಯೋಗಯುಕ್ತಾ ದಿವಂ ಯಾತಾ ತಪಸ್ಸಿದ್ಧಾ ತಪಸ್ವಿನೀ ॥೬॥

ಅಲ್ಲಿಯೇ ಬ್ರಾಹ್ಮಣಳೂ ಸಿದ್ಧಳೂ ಕೌಮಾರಬ್ರಹ್ಮಚಾರಿಣಿಯೂ ಯೋಗಿನಿಯೂ ತಪಸ್ಸಿದ್ಧಳೂ ತಪಸ್ವಿನಿಯೂ ಆದ ಶಾಂಡಿಲಿಯು ಸ್ವರ್ಗಕ್ಕೆ ಹೋದಳು.

ಮಹಾಭಾರತ, ಶಲ್ಯಪರ್ವ, ಗದಾಯುದ್ಧಪರ್ವ, ಅಧ್ಯಾಯ ೪೮.

ಶ್ರುವಾವತೀ ನಾಮ ವಿಭೋ ಕುಮಾರೀ ಬ್ರಹ್ಮಚಾರಿಣೀ ॥ ೨॥

ಅರ್ಥ.—ಎಲೈ ವಿಭುವೆ, ಶ್ರುವಾವತಿಯೆಂಬುವಳು ಕೌಮಾರಬ್ರಹ್ಮಚಾರಿಣಿಯು.

ಋಗ್ವೇದ, ಮಂಡಲ, ೨ ಸೂಕ್ತ ೧೭, ಋಕ್ಕು, ೭.

ಅಮಾಜೂರಿವ ಪಿತ್ರೋಃ ಸ ಚಾಸತೀ ಸಮಾನಾದಾಸದಸಸ್ತ್ವಾಮಿಯೇ ಭಗಂ ॥

ಸಾಯನಭಾಷ್ಯಂ । ಹೇ ಇಂದ್ರ ಅಮಾಜೂಃ ಇವಯಾವಜ್ಜೀವಂ ಗೃಹೇ ಏವ ಜೀರ್ಯಂತೀ ಪಿತ್ರೋಃ ಸ ಚಾಮಾತಾ ಪಿತೃಭ್ಯಾಂ ಸಹ ಭವಂತೀ ತಯೋಃ ಶುಶ್ರೂಷಣಪರಾ ಪತಿಮಲಭಮಾನಾ ಸತೀ ದುಹಿತಾ ಸಮಾನಾದಾತ್ಮನಃ ಪಿತ್ರೋಶ್ಚ ಸಾಧಾರಣಾತ್ ಸದಸೋ ಗೃಹಾತ್ ಗೃಹಉಪಸ್ಥಾಯ್ಯೈವ ಯಥಾಭಾಗಂ ಯಾಚತೇ ತಥಾ ಸ್ತೋತಾಹಂ ಭಜನೀಯಂ ಧನಂ ತ್ವಾಮಿಯೇ ಯಾಚೇ ॥

ಅರ್ಥ.—ತನಗೂ ತನ್ನ ತಾಯಿತಂದೆಗಳಿಗೂ ಸಮಾನವಾದ ಗೃಹದಲ್ಲಿದ್ದುಕೊಂಡಿರುವ ಅಮಾಜುವಿನಂತೆ ನಾನು ಧನಕ್ಕೋಸ್ಕರ ನಿನ್ನನ್ನು ಪ್ರಾರ್ಥಿಸುತ್ತೇನೆ. ಸಾಯನಭಾಷ್ಯ.—ಎಲೈ ಇಂದ್ರನೆ, ಯಾವಜ್ಜೀವವೂ ತಾಯಿತಂದೆಗಳ ಮನೆಯಲ್ಲಿಯೇ ಇದ್ದುಕೊಂಡು ಮುದುಕಿಯಾಗುವವಳಾಗಿಯೂ, ಪತಿಯನ್ನು ಪಡೆಯದವಳಾಗಿಯೂ ತಾಯಿತಂದೆಗಳ ಜತೆಯಲ್ಲಿದ್ದುಕೊಂಡು ಅವರ ಶುಶ್ರೂಷೆಯನ್ನು ಮಾಡುವವಳಾಗಿಯೂ ಇರುವ ಮಗಳು ತನಗೂ ತನ್ನ 'ತಾಯಿತಂದೆಗಳಿಗೂ ಸಾಧಾರಣವಾದ ಮನೆಯಲ್ಲಿಯೇ ಇದ್ದುಕೊಂಡು ತನ್ನ ಪಾಲನ್ನು ಹೇಗೆ ಕೇಳುವಳೋ ಹಾಗೆಯೇ ಸ್ತೋತ್ರಮಾಡುವವನಾದ ನಾನು ಭಜನೀಯಧನಕ್ಕಾಗಿ ನಿನ್ನನ್ನು ಯಾಚಿಸುತ್ತೇನೆ.

ಇಲ್ಲಿ ಅಮಾಜು ಎಂದರೆ ಮದಿವೆಯಿಲ್ಲದೆ ತಾಯಿತಂದೆಗಳ ಮನೆಯಲ್ಲಿಯೇ ಜೀವಿಸುತ್ತ ಮುದುಕಿಯಾಗುವ ಸ್ತ್ರೀಯೆಂದರ್ಥವು.

ಪರಾಶರಮಾಧವೀಯದಲ್ಲಿ ಮಾಧವವಚನ.

ವಿವಾಹರಹಿತಾನಾಮಪಿ ಬ್ರಹ್ಮವಾದಿನೀನಾಮುಪನಯನಾಧ್ಯಯನಾದಿಭಿರುತ್ತಮಲೋಕಸಂಭವಾತ್ ॥

ಅರ್ಥ.—ವಿವಾಹವಿಲ್ಲದ ಬ್ರಹ್ಮವಾದಿನಿಯರಿಗೂ ಉಪನಯನ, ವೇದಾಧ್ಯಯನ ಮುಂತಾದವುಗಳಿಂದ ಉತ್ತಮಲೋಕಪ್ರಾಪ್ತಿಯು ಸಂಭವಿಸಬಹುದಾದ ಕಾರಣ.

ಪರಾಶರಮಾಧವೀಯದಲ್ಲಿ ಹಾರೀತವಚನ.

ದ್ವಿವಿಧಾಃ ಸ್ತ್ರಿಯೋ ಬ್ರಹ್ಮವಾದಿನ್ಯಸ್ಸದ್ಯೋವಧ್ವಶ್ಚ । ತತ್ರ ಬ್ರಹ್ಮವಾದಿನೀನಾಮುಪನಯನಮಗ್ನೀಂಧನಂ ಸ್ವಗೃಹೇ ಭಿಕ್ಷಾಚರ್ಯಾ । ಸದ್ಯೋವಧೂನಾಂ ತೂಪಸ್ಥಿತೇ ವಿವಾಹೇ ಕಥಂಚಿದುಪನಯನಮಾತ್ರಂ ಕೃತ್ವಾ ವಿವಾಹಃ ಕಾರ್ಯಃ ॥

ಅರ್ಥ.—ಬ್ರಹ್ಮವಾದಿನಿಗಳೂ ಸದ್ಯೋವಧುಗಳೂ ಎಂದು ಸ್ತ್ರೀಯರು ಎರಡು ಪ್ರಕಾರವು. ಅವರಲ್ಲಿ ಬ್ರಹ್ಮವಾದಿನಿಯರಿಗೆ—ಉಪನಯನ ಅಗ್ನಿಹೋತ್ರ ಸ್ವಗೃಹದಲ್ಲಿ ಭಿಕ್ಷೆ – ಇವುಗಳು ವಿಹಿತವು. ಸದ್ಯೋವಧುಗಳಿಗೆ ವಿವಾಹವು ಸಮೀಪಿಸಲು ಹೇಗಾದರೂ ಉಪನಯನವನ್ನು ಮಾತ್ರ ಮಾಡಿ ವಿವಾಹವನ್ನು ಮಾಡಬೇಕು.

ಪರಾಶರಮಾಧವೀಯ, ಯಮ.—

ಪುರಾಕಲ್ಪೇ ಕುಮಾರೀಣಾಂ ಮೌಂಜೀಬಂಧನಮಿಷ್ಯತೇ ।
ಅಧ್ಯಾಪನಂ ಚ ವೇದಾನಾಂ ಸಾವಿತ್ರೀವಚನಂ ತಥಾ ॥
ಪಿತಾ ಪಿತೃವ್ಯೋ ಭ್ರಾತಾ ವಾ ನೈನಾಮಧ್ಯಾಪಯೇತ್ಪರಃ ।
ಸ್ವಗೃಹೇ ಚೈವ ಕನ್ಯಾಯಾಃ ಭೈಕ್ಷಚರ್ಯಾ ವಿಧೀಯತೇ ॥
ವರ್ಜಯೇದಜಿನಂ ಚೀರಂ ಜಟಾಧಾರಣಮೇವ ಚ ॥

ಅರ್ಥ.—ಪೂರ್ವಕಲ್ಪದಲ್ಲಿ ಕುಮಾರಿಯರಿಗೆ ಮೌಂಜೀಬಂಧನವೂ ವೇದಾಧ್ಯಾಪನೆಯೂ ಗಾಯತ್ರೀವಚನವೂ ಉಕ್ತವಾಗಿವೆ. ತಂದೆ ಚಿಕ್ಕಪ್ಪ ಅಣ್ಣ— ಇವರು ಈಕೆಗೆ ಅಧ್ಯಯನಮಾಡಿಸಬೇಕೇ ಹೊರತು ಇತರರು ಕೂಡದು. ಕನ್ಯೆಗೆ ತನ್ನ ಮನೆಯಲ್ಲಿಯೇ ಭಿಕ್ಷೆಯು ವಿಧಿಸಲ್ಪಟ್ಟಿದೆ. ಈಕೆಯು ಚರ್ಮ ನಾರುಬಟ್ಟೆ ಜಟೆ—ಇವನ್ನು ಧರಿಸಬಾರದು.

ಇಲ್ಲಿ ಕಲ್ಪಪದಕ್ಕೆ ಶಾಸ್ತ್ರವಿಧಿ, ವಿಕಲ್ಪವಿಧಿ, ವಿಧಾನ, ಕಲ್ಪವೆಂಬ ವೇದಾಂಗ, ಮತ್ತು ಬ್ರಹ್ಮಕಲ್ಪವೆಂತಲೂ ಅರ್ಥ ಮಾಡಬಹುದು. ಮೌಂಜೀಬಂಧನವೆಂದರೆ—ಮೌಂಜೀಹುಲ್ಲನ್ನು ಕಟ್ಟುವುದು, ಎಂದರೆ ಉಪನಯನವೆಂದರ್ಥವು.

ಹಾರೀತಸೂತ್ರ. ೨೧, ೨೨—೨೪.

ನ ಶೂದ್ರಸಮಾಃ ಸ್ತ್ರಿಯಃ । ನ ಹಿ ಶೂದ್ರಯೋನೌ ಬ್ರಾಹ್ಮಣ ಕ್ಷತ್ರಿಯ ವೈಶ್ಯಾಜಾಯಂತೇ । ತಸ್ಮಾಚ್ಛಂದಸಾಃ ಸ್ತ್ರಿಯಃ ಸಂಸ್ಕಾರ್ಯಾಃ । ತಾಸಾಂ ದ್ವಿವಿಧೋ ವಿಕಲ್ಪಃ, ಬ್ರಹ್ಮವಾದಿನ್ಯಃ ಸದ್ಯೋದ್ವಹಾಶ್ಚೇತಿ । ಬ್ರಹ್ಮವಾದಿನೀನಾಮುಪನಯನಮಗ್ನಿಸಂಸ್ಕಾರಃ ಸ್ವಗೃಹೇಧ್ಯಯನಂ ಭೈಕ್ಷಚರ್ಯಾಚ । ಪ್ರಾಪ್ತೇ ರಜಸಃ ಸಮಾವರ್ತನಂ । ಅತಿರಿಕ್ತೇ ಅಪ್ರಧಾನಂ । ಸದ್ಯೋಪಧ್ವಂಸನಂವಾ ॥

ಅರ್ಥ.—ಸ್ತ್ರೀಯರು ಶೂದ್ರರಿಗೆ ಸಮಾನರಲ್ಲ. ಶೂದ್ರಯೋನಿಯಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರು ಹುಟ್ಟುವುದಿಲ್ಲ. ಆದುದರಿಂದ ಸ್ತ್ರೀಯರು ವೇದ

ಮಂತ್ರಗಳಿಂದ ಸಂಸ್ಕೃತರಾಗಬೇಕು. ಅವರಲ್ಲಿ ಬ್ರಹ್ಮವಾದಿನಿಯರೆಂದೂ ಸದ್ಯೋವಧುಗಳೆಂದೂ ಎರಡುವಿಧಗಳುಂಟು. ಬ್ರಹ್ಮವಾದಿನಿಯರಿಗೆ ಉಪನಯನ ಅಗ್ನಿಸಂಸ್ಕಾರ ಮತ್ತು ಸ್ವಗೃಹದಲ್ಲಿ ಅಧ್ಯಯನಭಿಕ್ಷಾಚರ್ಯೆಗಳುಂಟು. ರಜಸ್ಸು ಪ್ರಾಪ್ತವಾಗಲು ಸಮಾವರ್ತನ ಮಾಡತಕ್ಕದು. ಅತಿಕ್ರಮವು ಅಪ್ರಧಾನವು. ಅಥವಾ ವೇದವ್ರತವು ಕೂಡಲೇ ಮುಗಿಯತಕ್ಕದು.

ನಿರ್ಣಯಸಿಂಧುವಿನಲ್ಲಿ ಹಾರೀತವಚನ.

ದ್ವಿವಿಧಾಃ ಸ್ತ್ರಿಯಃ ಬ್ರಹ್ಮವಾದಿನ್ಯಃ ಸದ್ಯೋವಧ್ವಶ್ಚ ॥

ಮದನಪಾರಿಜಾತವಲ್ಲಿ ಹಾರೀತವಚನ.

ದ್ವಿವಿಧಾಃ ಸ್ತ್ರಿಯಃ ಬ್ರಹ್ಮವಾದಿನ್ಯಃ ಸದ್ಯೋವಧ್ವಶ್ಚ ॥

ಅರ್ಥ.— ಬ್ರಹ್ಮವಾದಿನಿಯರೆಂತಲೂ ಸದ್ಯೋವಧುಗಳೆಂತಲೂ ಸ್ತ್ರೀಯರು ಎರಡು ಪ್ರಕಾರವಾಗಿರುವರು.

ಮೇಲಿನ ವಚನಗಳಿಂದ ಬ್ರಹ್ಮವಾದಿನಿಯರಿಗೆ ಉಪನಯನಾದಿಗಳುಂಟೆಂಬುದು ವ್ಯಕ್ತವಾಗುವುದು. ಇವರಿಗೆ ಮದಿವೆಯಿಲ್ಲವೆಂದು ಕೆಲವರು ಹೇಳುವರು. ಇವರೂಕೂಡ, ಬೇಕಾದರೆ ಮದಿವೆಮಾಡಿಕೊಳ್ಳಬಹುದೆಂದು ಬೇರೆ ಕೆಲವರು ಹೇಳುವರು. ಏನಂದ ಬ್ರಹ್ಮವಾದಿನಿಯರಾದ ಸ್ತ್ರೀಯರಿಗೆ ವಿವಾಹವು ಐಚ್ಛಿಕವೆಂಬುದು ಸಿದ್ಧವಾಗುವುದು. ಯಾವ ಸ್ತ್ರೀಯು ವಿವಾಹವನ್ನಪೇಕ್ಷಿಸುವುದಿಲ್ಲವೋ, ಆಕೆಯು ಯಾವಜ್ಜೀವವೂ ಬ್ರಹ್ಮವಾದಿನಿಯಾಗಿ ಬ್ರಹ್ಮಚರ್ಯವನ್ನಾಶ್ರಯಿಸಿಕೊಂಡಿರಬಹುದು. ಸ್ತ್ರೀಯರಿಗೆ ಉಪನಯನವೂ ಉಕ್ತವಾಗಿರುವುದರಿಂದ, ಅವರು ಬ್ರಹ್ಮಚರ್ಯಾಶ್ರಮದಿಂದಲೇ ಸನ್ಯಾಸಿನಿಯರೂ ಆಗಬಹುದು. ಸ್ತ್ರೀಯರಿಗೆ ಸನ್ಯಾಸಾಶ್ರಮವುಂಟೆಂಬುದು ಕೆಳಗಿನ ಶಾಸ್ತ್ರವಚನಗಳಿಂದ ದೃಢವಾಗುವುದು.

ಮನುಸ್ಮೃತಿ, ಅಧ್ಯಾಯ ೮.

ಕಿಂಚಿದೇವ ತು ದಾಪ್ಯಃ ಸ್ಯಾತ್ಸಂಭಾಷಾಂ ತಾಭಿರಾಚರನ್ ।
ಪ್ರೈಷ್ಯಾಸು ಚೈಕಭಕ್ತಾಸು ರಹಃ ಪ್ರವ್ರಜಿತಾಸು ಚ ॥೩೬೩॥

ಅರ್ಥ.—ಮೇಲೆ ಹೇಳಲ್ಪಟ್ಟ ಚಾರಣಪತ್ನಿ ಮುಂತಾದವರ ಸಂಗಡಲೂ ಒಬ್ಬ ಸ್ವಾಮಿಯನ್ನೇ ಆಶ್ರಯಿಸಿರುವ ದಾಸಿಗಳ ಸಂಗಡಲೂ ಸನ್ಯಾಸಿನಿಯರ ಸಂಗಡಲೂ ರಹಸ್ಯದಲ್ಲಿ ಸಂಭಾಷಿಸುವ ಪುರುಷನು ಅಲ್ಪದಂಡಕ್ಕೆ ಗುರಿಮಾಡಲ್ಪಡತಕ್ಕವನು.

ಯಾಜ್ಞವಲ್ಕ್ಯಸ್ಮೃತಿ, ವ್ಯವಹಾರಾಧ್ಯಾಯ.

ಚತುರ್ವಿಂಶತಿಕೋ ದಂಡಸ್ತಥಾ ಪ್ರವ್ರಜಿತಾಗಮೇ ॥೨೯೩॥

ಅರ್ಥ.—ಹಾಗೆಯೇ ಸನ್ಯಾಸಿನಿಯ ಸಂಗಮಾಡಿದವನಿಗೆ ೨೪ ಪಣವನ್ನು ದಂಡಹಾಕಬೇಕು.

ಯಮಸ್ಮೃತಿ.

ರಾಜ್ಞೀಂ ಪ್ರವ್ರಜಿತಾಂ ಧಾತ್ರೀಂ ತಥಾ ವರ್ಣೋತ್ತಮಾಮಪಿ।
ಕೃಚ್ಛ್ರದ್ವಯಂ ಪ್ರಕುರ್ವೀತ ಸಗೋತ್ರಾಮಭಿಗಮ್ಯ ಚ ॥೩೬॥

ಅರ್ಥ.—ರಾಣಿ, ಸನ್ಯಾಸಿನಿ, ಧಾತ್ರಿ, ಉತ್ತಮವರ್ಣದ ಸ್ತ್ರೀ, ಸಗೋತ್ರದವಳು-ಇವರ ಸಂಗ ಮಾಡಿದವನು (ಪಾಪ ಪರಿಹಾರಾರ್ಥವಾಗಿ) ಎರಡು ಕೃಚ್ಛ್ರಗಳನ್ನು ಮಾಡಬೇಕು.

ವಿಷ್ಣುಸ್ಮೃತಿ, ಅಧ್ಯಾಯ ೩೬,

ಶರಣಾಗತಾಯಾಃ ಪ್ರವ್ರಜಿತಾಯಾಃ ನಿಕ್ಷಿಪ್ತಾಯಾಶ್ಚ ॥೭॥

ಅರ್ಥ.—ಶರಣಾಗತಳು, ಸನ್ಯಾಸಿನಿ, ತನ್ನವಶಕ್ಕೆ ಕೊಡಲ್ಪಟ್ಟವಳು—ಇವರುಗಳ ಸಂಗಮಾಡುವುದು ಗುರುಪತ್ನೀಸಂಗಕ್ಕೆ ಸಮವಾದ ಪಾತಕವಾಗಿರುವುದು.

ವೃದ್ಧಹಾರೀತಸಂಹಿತೆ, ಅಧ್ಯಾಯ ೬.

ಸಾಧ್ವೀ ಪ್ರವ್ರಜಿತಾ ರಾಜ್ಞೀ ನಿಕ್ಷಿಪ್ತಾ ಚ ರಜಸ್ವಲಾ।
ಆಸಾಮನ್ಯತಮಾಂ ಗಚ್ಛೇದ್ಗುರುತಲ್ಪಗ ಉಚ್ಯತೇ।

ಅರ್ಥ.—ಸಾಧ್ವಿ, ಸನ್ಯಾಸಿನಿ, ರಾಣಿ, ನಿಕ್ಷಿಪ್ತಳು, ಮುಟ್ಟಾದವಳು—ಇವರುಗಳ ಸಂಭೋಗಮಾಡಿದವನು ಗುರುತಲ್ಪಗನೆಂದು ಹೇಳಲ್ಪಡುವನು.

ಸಂವರ್ತ ಸ್ಮೃತಿ.

ನಿಯಮಸ್ಥಾಂ ವ್ರತಸ್ಥಾಂ ವಾ ಯೋಽಭಿಗಚ್ಛೇತ್ ಸ್ತ್ರಿಯಂ ದ್ವಿಜಃ।
ಸ ಕುರ್ಯಾತ್ಪ್ರಾಕೃತಂ ಕೃಚ್ಛ್ರಂ ಧೇನುಂ ದದ್ಯಾತ್ಪಯಸ್ವಿನೀಂ ॥೧೬೭॥
ಸನ್ಯಸ್ಯ ದುರ್ಮತಿಃ ಕಶ್ಚಿದಪತ್ಯಾರ್ಥಂ ಸ್ತ್ರಿಯಂ ವ್ರಜೇತ್ ॥೧೬೮॥
ಕುರ್ಯಾತ್ಕೃಚ್ಛ್ರಂ ಸಮಾನಂ ತತ್ ಷಣ್ಮಾಸಾಂಸ್ತದನಂತರಂ ॥೧೬೯॥
ಸ್ತ್ರೀಣಾಂ ತಥಾ ಚ ಚರಣೇ ಹ್ಯಧಿಮಾಸಗಮೇ ತಥಾ।
ಪತನೇಷ್ವಪ್ಯಯಂ ದೃಷ್ಟಃ ಪ್ರಾಯಶ್ಚಿತ್ತವಿಧಿಃ ಶುಭಃ ॥೧೭೦॥

ಅರ್ಥ.—ನಿಯಮವುಳ್ಳ ಸ್ತ್ರೀಯು ಅಥವಾ ಬ್ರಹ್ಮಚರ್ಯಾದಿ ವ್ರತವುಳ್ಳ ಸ್ತ್ರೀಯ ಸಂಗವನ್ನು ಮಾಡಿದ ದ್ವಿಜನು (ಪಾಪ ಪರಿಹಾರಾರ್ಥವಾಗಿ) ಪ್ರಾಕೃತ ಕೃಚ್ಛ್ರವನ್ನು ಮಾಡಿ ಹಾಲು ಕರೆಯುವ ಆಕಳನ್ನು ದಾನಕೊಡಬೇಕು. ದುರ್ಮತಿಯಾದ ಯಾವನಾದರೂ ಸನ್ಯಾಸಿಯಾಗಿ ಪುನಃ ಪುತ್ರಾಪೇಕ್ಷೆಯುಳ್ಳವನಾಗಿ ಮದಿವೆಮಾಡಿಕೊಂಡರೆ, ಅವನು ಆರುತಿಂಗಳ ಪರ್ಯಂತ ಸಮವಾದ ಕೃಚ್ಛ್ರವನ್ನು ಮಾಡಬೇಕು., ಸ್ತ್ರೀಯರೂ ಕೂಡ ಸನ್ಯಾಸಿನಿಯರಾಗಿ ಪುನಃ ಮದಿವೆ ಮಾಡಿಕೊಂಡು ಒಂದು ತಿಂಗಳವರೆಗೂ ಪುರುಷಸಂಪರ್ಕದಲ್ಲಿದ್ದರೆ, ಪತಿತರಾದ ಆ ಸ್ತ್ರೀಯರಿಗೂ ಶುಭವಾದೀ ಪ್ರಾಯಶ್ಚಿತ್ತವಿಧಿಯೇ ತೋರಿಸಲ್ಪಟ್ಟಿರುವುದು.

ಮದನಪಾರಿಜಾತ, ಸ್ತ್ರೀವರ್ಗ.

ಶಂಖಃ - ಜ್ಞಾನಾಪಹಾರೀ ಮೂಕಃ ಚಾಂಡಾಲೀಪುಕ್ಕಸೀಗಮನೇ ।
ಅಜಗರಃ ಪ್ರವ್ರಜಿತಾಗಮನೇ ಮರುಪಿಶಾಚಃ ॥

ಅರ್ಥ.—ಶಂಖವಚನ.—ಜ್ಞಾನಾಪಹಾರಿಯು ಮೂಕನಾಗಿಯೂ ಚಂಡಾಲ ಮತ್ತು ಪುಕ್ಕಸ ಸ್ತ್ರೀಯರಲ್ಲಿ ಸಂಭೋಗಮಾಡಿದವನು ಹೆಬ್ಬಾವಾಗಿಯೂ, ಸನ್ಯಾಸಿನಿಯು ಸಂಭೋಗಮಾಡಿದವನು ಮರುಪಿಶಾಚಿಯಾಗಿಯೂ ಆಗುವರು.

ಬೃಹದ್ಯಮಃ.—

ಮಾತುಲಾನೀಂ ಪ್ರವ್ರಜಿತಾಂ ಸ್ವಗೋತ್ರಾಂ ನೃಪಯೋಷಿತಂ ।
ಶಿಷ್ಯಭಾರ್ಯಾಂ ಗುರೋರ್ಭಾರ್ಯಾಂ ಗತ್ವಾ ಚಾಂದ್ರಾಯಣಂ ಚರೇತ್ ॥

ಅರ್ಥ.—ಬೃಹದ್ಯಮವಚನ.—ಮಾತುಲೆಯನ್ನು ಸನ್ಯಾಸಿನಿಯನ್ನು ಸಗೋತ್ರದವಳನ್ನು ರಾಜಪತ್ನಿಯನ್ನು ಶಿಷ್ಯನ ಹೆಂಡತಿಯನ್ನು ಅಥವಾ ಗುರುಭಾರ್ಯೆಯನ್ನು ಸಂಭೋಗಿಸಿದವನು ಶುದ್ಧಿಗಾಗಿ ಚಾಂದ್ರಾಯಣವನ್ನು ಮಾಡಬೇಕು.

ಶಾತಾತಪಸ್ಮೃತಿ, ಅಧ್ಯಾಯ ೫.

ತಪಸ್ವಿನೀಸಂಗಮನೇ ಜಾಯತೇ ಚಾಶ್ಮರೀಗದಃ ॥೨೬॥

ಅರ್ಥ.—ತಪಸ್ವಿನಿಯ ಸಂಗ ಮಾಡಿದವನಿಗೆ ಅಶ್ಮರೀರೋಗವು ಉಂಟಾಗುವುದು.

ನಾರದಸ್ಮೃತಿ, ೧೨ ನೆಯ ವ್ಯವಹಾರಪದ.

ರಾಜ್ಞೀ ಪ್ರವ್ರಜಿತಾ ಧಾತ್ರೀ ಸಾಧ್ವೀ ವರ್ಣೋತ್ತಮಾ ಚ ಯಾ ॥೭೪॥
ಆಸಾಮನ್ಯತಮಾಂ ಗತ್ವಾ ಗುರುತಲ್ಪಗಉಚ್ಯತೇ ।
ಶಿಶ್ನಸ್ಯೋತ್ಕರ್ತನಂ ತಸ್ಯ ನಾನ್ಯೋ ದಂಡೋ ವಿಧೀಯತೇ ॥೭೫॥

ಅರ್ಥ.—ರಾಣಿ, ಸನ್ಯಾಸಿನಿ, ದಾದಿ, ಸಾಧ್ವಿ, ಉತ್ತಮಜಾತಿಸ್ತ್ರೀ—ಇವರಲ್ಲಿ ಯಾರ ಸಂಗವನ್ನಾದರೂ ಮಾಡಿದವನು ಗುರುತಲ್ಪಗನೆಂದು ಹೇಳಲ್ಪಡುವನು. ಇಂಥವನಿಗೆ ಶಿಶ್ನಚ್ಛೇದವೇ ಹೊರತು ಬೇರೆ ಶಿಕ್ಷೆಯು ವಿಧಿಸಲ್ಪಡುವುದಿಲ್ಲ.

ಹೀಗೆ ಮೇಲಿನ ವಚನಗಳಿಂದ ಸ್ತ್ರೀಯರಿಗೆ ಸನ್ಯಾಸವುಂಟೆಂಬುದು ಸ್ಪಷ್ಟವಾಗುವುದು. ಬ್ರಹ್ಮಚರ್ಯದಿಂದಲಾಗಲಿ ಅಥವಾ ಗೃಹಸ್ಥಾಶ್ರಮದಿಂದಲಾಗಲಿ ಸನ್ಯಾಸಾಶ್ರಮವನ್ನು ಪ್ರವೇಶಿಸಬಹುದೆಂದು ಶಾಸ್ತ್ರಾನುಮತಿಯಿರುವುದು. ಸ್ತ್ರೀಯರಿಗೂ ಕೂಡ ಬ್ರಹ್ಮಚರ್ಯಾಶ್ರಮವು ಉಕ್ತವಾಗಿರುವುದು. ಆದುದರಿಂದ ಸ್ತ್ರೀಯರೂ ಕೂಡ ಬ್ರಹ್ಮಚರ್ಯದಿಂದಲೇ ಸನ್ಯಾಸಿನಿಯರಾಗಬಹುದು. ಈ ವಿಚಾರದಿಂದ ಸ್ತ್ರೀಯರು ಮದಿವೆ ಯಿಲ್ಲದೆ ಇರಬಹುದೆಂಬುದು ವ್ಯಕ್ತವಾಗುತ್ತದೆ.

ಇದಲ್ಲದೆ ಬೇರೆ ಕೆಲವು ಸಂದರ್ಭಗಳಲ್ಲಿಯೂ ಸ್ತ್ರೀಯರು ವಿವಾಹವಿಲ್ಲದೆ ಇರಬಹುದೆಂದು ಕೆಳಗೆ ಉದಾಹರಿಸಲ್ಪಟ್ಟ ಶಾಸ್ತ್ರವಚನಗಳಿಂದ ಗೊತ್ತಾಗುವದು.—

ಮನುಸ್ಮೃತಿ, ಅಧ್ಯಾಯ ೯.

ಕಾಮಮಾಮರಣಾತ್ತಿಷ್ಠೇದ್ಗೃಹೇ ಕನ್ಯರ್ತುಮತ್ಯಪಿ ।
ನ ಚೈವೈನಾಂ ಪ್ರಯಚ್ಛೇತ್ತು ಗುಣಹೀನಾಯ ಕರ್ಹಿಚಿತ್ ॥೯॥

ಅರ್ಥ.—ಕನ್ಯೆಯು ಋತುಮತಿಯಾದಾಗ್ಯೂ ಕೂಡ ತನ್ನ ತಂದೆಯ ಮನೆಯಲ್ಲಿಯೇ ಮರಣಾವಧಿ ಧಾರಾಳವಾಗಿರಲಿ. ಆಕೆಯನ್ನು ಗುಣಹೀನನಾದವನಿಗೆ ಎಂದಿಗೂ ವಿವಾಹಮಾಡಿ ಕೊಡಬಾರದು.

ತಾತ್ಪರ್ಯ.—ಕನ್ಯೆಯ ಮನಸ್ಸಿಗೆ ಸಮರ್ಪಕನಾದ ಗುಣವಂತನಾದ ವರನು ಸಿಕ್ಕದಿದ್ದರೆ, ಆಕೆಯು ಸಾಯುವವರೆಗೂ ಮದಿವೆಯಿಲ್ಲದೆ ಇರತಕ್ಕದು. ಗುಣಹೀನನಾದವನನ್ನು ಎಂದಿಗೂ ಮದಿವೆಯಾಗಬಾರದು.

ಯಾಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ.

ತೇನೋಪಸೃಷ್ಟೋ ಲಭತೇ ನ ರಾಜ್ಯಂ ರಾಜನಂದನಃ ।
ಕುಮಾರೀ ನ ಚ ಭರ್ತಾರಮಪತ್ಯಂ ಗರ್ಭಮಂಗನಾ ॥೨೭೫॥

ಅರ್ಥ.—ವಿನಾಯಕನಿಂದ ಹಿಡಿಯಲ್ಪಟ್ಟ ರಾಜಪುತ್ರನು ರಾಜ್ಯವನ್ನೂ ವಿನಾಯಕನಿಂದ ಹಿಡಿಯಲ್ಪಟ್ಟ ಕುಮಾರಿಯು ಗಂಡನನ್ನೂ ವಿನಾಯಕನಿಂದ ಹಿಡಿಯಲ್ಪಟ್ಟ ಸ್ತ್ರೀಯು ಗರ್ಭವನ್ನೂ ಮಗುವನ್ನೂ ಪಡೆಯುವದಿಲ್ಲ.

ಹೀಗೆ ವಿನಾಯಕನ ದೆಸೆಯಿಂದ ಗಂಡನನ್ನು ಪಡೆಯದ ಕನ್ಯೆಯು ಯಾವಜ್ಜೀವವೂ ಮದಿವೆಯಿಲ್ಲದೆ ಇರಬೇಕಾಗುವದು.

ಮನುಸ್ಮೃತಿ, ಅಧ್ಯಾಯ ೩.

ಮಹಾಂತ್ಯಪಿ ಸಮೃದ್ಧಾನಿ ಗೋಜಾವಿಧನಧಾನ್ಯತಃ ।
ಸ್ತ್ರೀಸಂಬಂಧೇ ದಶೈತಾನಿ ಕುಲಾನಿ ಪರಿವರ್ಜಯೇತ್ ॥೬॥
ಹೀನಕ್ರಿಯಂ ನಿಷ್ಪುರುಷಂ ನಿಶ್ಛಂದೋ ರೋಮಶಾರ್ಶಸಂ ।
ಕ್ಷಯ್ಯಾಮಯಾವ್ಯಪಸ್ಮಾರಿ ಶ್ವಿತ್ರಿಕುಷ್ಠಿಕುಲಾನಿ ಚ ॥೭॥
ನೋದ್ವಹೇತ್ಕಪಿಲಾಂ ಕನ್ಯಾಂ ನಾಧಿಕಾಂಗೀಂ ನ ರೋಗಿಣೀಂ ।
ನಾಲೋಮಿಕಾಂ ನಾತಿಲೋಮಾಂ ನ ವಾಚಾಟಾಂ ನ ಪಿಂಗಳಾಂ ॥೮॥
ನರ್ಕ್ಷವೃಕ್ಷನದೀನಾಮ್ನೀಂ ನಾಂತ್ಯಪರ್ವತನಾಮಿಕಾಂ ।
ನ ಪಕ್ಷ್ಯಹಿಪ್ರೇಷ್ಯನಾಮ್ನೀಂ ನ ಚ ಭೀಷಣನಾಮಿಕಾಂ ॥೯॥

ಅರ್ಥ.—ಗೋವು ಆಡು ಕುರಿ ಧನ ಧಾನ್ಯಗಳಿಂದ ಸಮೃದ್ಧಿಯಾಗಿ ಮಹತ್ತಾಗಿದ್ದರೂ ಕೂಡ, ಸ್ತ್ರೀ ಸಂಬಂಧದಲ್ಲಿ ಈ ಹತ್ತು ಕುಲಗಳನ್ನೂ ಬಿಡಬೇಕು.

ಯಾವುವೆಂದರೆ—ಹೀನಕ್ರಿಯವುಳ್ಳದ್ದು, ಪುರುಷಸಂತತಿಯಿಲ್ಲದ್ದು, ವೇದಾಧ್ಯಯನವಿಲ್ಲದ್ದು, ಬಹು ರೋಮಯುಕ್ತವಾದದ್ದು, ಮೂಲವ್ಯಾಧಿಯುಳ್ಳದ್ದು, ಕ್ಷಯರೋಗವುಳ್ಳದ್ದು, ದೀರ್ಘರೋಗವುಳ್ಳದ್ದು, ಅಪಸ್ಮಾರರೋಗವುಳ್ಳದ್ದು, ಬಿಳೀ ಕುಷ್ಠವುಳ್ಳದ್ದು, ಮತ್ತು ಕರೀಕುಷ್ಠವುಳ್ಳದ್ದು— ಇವುಗಳು. ಕಪಿಲವರ್ಣವುಳ್ಳವಳು, ಅಧಿಕಾಂಗಿ, ರೋಗಿಣಿ, ರೋಮವಿಲ್ಲದವಳು, ಅತಿರೋಮವುಳ್ಳವಳು, ನಿಂದಾರ್ಹವಾದ ಬಹು ಮಾತುಗಳನ್ನಾಡುವವಳು, ಪಿಂಗಲ ವರ್ಣದವಳು, ನಕ್ಷತ್ರ ವೃಕ್ಷ ನದಿಗಳ ಹೆಸರುಳ್ಳವಳು, ಅಂತ್ಯಜಾತಿಯವರ ಮತ್ತು ಪರ್ವತಗಳ ಹೆಸರುಳ್ಳವಳು, ಪಕ್ಷಿ ಸರ್ಪದಾಸಿಗಳ ಹೆಸರುಳ್ಳವಳು, ಭಯಂಕರವಾದ ಹೆಸರುಳ್ಳವಳು—ಇಂಥ ಕನ್ಯೆಯರನ್ನು ಮದಿವೆಮಾಡಿಕೊಳ್ಳಬಾರದು.

ಆಪಸ್ತಂಬ ಗೃಹ್ಯಸೂತ್ರ, ಪಟಲ ೩.

ದತ್ತಾಂ ಗುಪ್ತಾಂ ದ್ಯೋತಾಮೃಷಭಾಂ ಶರಭಾಂ ವಿನತಾಂ ವಿಕಟಾಂ ಮುಂಡಾಂ ಮಂಡೂಷಿಕಾಂ ಸಾಂಕಾರಿಕಾಂ ರಾತಾಂ ಪಾಲೀಂ ಮಿತ್ರಾಂ ಸ್ವನುಜಾಂ ವರ್ಷಕಾರೀಂ ಚ ವರ್ಜಯೇತ್ ॥೧೨॥ ನಕ್ಷತ್ರನಾಮಾನದೀನಾಮಾ ವೃಕ್ಷನಾಮಾಶ್ಚ ಗರ್ಹಿತಾಃ ॥೧೩॥ ಸರ್ವಾಶ್ಚ ರೇಫಲಕಾರೋ ಪಾಂತಾವರಣೇ ಪರಿವರ್ಜಯೇತ್ ॥೧೪॥

ಅರ್ಥ.—ವಾಗ್ದಾನ ಮಾಡಲ್ಪಟ್ಟವಳು ಅಥವಾ ಉದಕಪೂರ್ವಕವಾಗಿ ದಾನ ಮಾಡಲ್ಪಟ್ಟವಳು, ದೇಹದೋಷಗಳನ್ನೂ ಸ್ವಭಾವದೋಷಗಳನ್ನೂ ಮುಚ್ಚಿಕೊಂಡವಳು, ವಿಷಮದೃಷ್ಟಿಯುಳ್ಳವಳು, ಎತ್ತಿನಂತಿರುವವಳು, ಕಾಂತಿಹೀನಳು, ಕುಬ್ಜಳು ಅಥವಾ ಡೊಂಕಾದ ಮೊಣಕಾಲುಳ್ಳವಳು, ಉದ್ದಕಾಲಿನವಳು, ಕೂದಲಿಲ್ಲದವಳು, ಕಪ್ಪೆ ಚರ್ಮದಂತೆ ಚರ್ಮ ವುಳ್ಳವಳು, ಮನೆಯನ್ನು ಬಿಟ್ಟು ಹೋದವಳು, ಆಟಗಳಲ್ಲಿ ಹೆಚ್ಚಾಗಿ ಆಸಕ್ತಳಾದವಳು, ಗದ್ದೆ ಹೊಲ ದನಗಳನ್ನು ಕಾಯುವವಳು, ಬಹು ಸ್ನೇಹಿತರುಳ್ಳವಳು, ರೂಪವತಿಯರಾದ ಸಹೋದರಿಯರುಳ್ಳವಳು, ವರನು ಹುಟ್ಟಿದ ವರ್ಷದಲ್ಲಿಯೇ ಹುಟ್ಟಿದವಳು—ಇಂಥಾ ಸ್ತ್ರೀಯರನ್ನು ಮದಿವೆ ಮಾಡಿಕೊಳ್ಳಬಾರದು. ನಕ್ಷತ್ರ ನದೀ ವೃಕ್ಷಗಳ ಹೆಸರುಳ್ಳವರು ತಿರಸ್ಕರಿಸಲ್ಪಡತಕ್ಕವರು. ಮತ್ತು ರೇಫಲಕಾರಾಂತವಾದ ಹೆಸರುಳ್ಳವರನ್ನೂ ವಿವಾಹವಾಗಬಾರದು.

ವಿಷ್ಣುಸ್ಮೃತಿ, ಅಧ್ಯಾಯ ೨೪.

ನ ಚ ವ್ಯಾಧಿತಾಂ। ನಾಧಿಕಾಂಗೀಂ। ನ ಹೀನಾಂಗೀಂ। ನಾತಿಕಪಿಲಾಂ ನ ವಾಚಾಟಾಂ॥ ೧೨--೧೬.

ಅರ್ಥ.—ರೋಗಿಯಾದವಳು, ಅಧಿಕಾಂಗಿ, ಅಂಗಹೀನಳು, ಅತಿಕಪಿಲಳು, ಬಹು ಹರಟೆಯವಳು—ಇಂಥಾ ಕನ್ಯೆಯರನ್ನು ಮದಿವೆ ಮಾಡಿಕೊಳ್ಳಬಾರದು.

ಬೃಹತ್ಪರಾಶರಸಂಹಿತೆ, ಅಧ್ಯಾಯ ೪.

ಪಿಂಗಲಾಂ ಕಪಿಲಾಂ ಕೃಷ್ಣಾಂ ದುಷ್ಟವಾಕ್ಕಾಕನಿಸ್ವನಾಂ।
ಸ್ಥೂಲಾಂಗಜಂಘಪಾದಾಂ ಚ ಸದಾsಪ್ರಿಯವಾದಿನೀಂ।
ತ್ಯಜೇನ್ನಾಗನದೀನಾಮ್ನೀಂ ಪಕ್ಷಿವೃಕ್ಷರ್ಕ್ಷನಾಮಿಕಾಂ।
ಅಹಿಪ್ರೇಷ್ಯಾಲ್ಯನಾಮ್ನೀಂ ಚ ತಥಾ ಭೀಷಣನಾಮಿಕಾಂ॥

ಅರ್ಥ.—ಪಿಂಗಲ ವರ್ಣವುಳ್ಳವಳು, ಕಪಿಲ ವರ್ಣವುಳ್ಳವಳು, ಕೃಷ್ಣ ವರ್ಣವುಳ್ಳವಳು, ದುಷ್ಟವಾಕ್ಕುಳ್ಳವಳು, ಕಾಗೆಯ ಧ್ವನಿಯಂತೆ ಧ್ವನಿಯುಳ್ಳವಳು, ಸ್ಥೂಲವಾದ ಅಂಗ ಜಂಘ ಪಾದಗಳುಳ್ಳವಳು, ಸರ್ವದಾ ಅಪ್ರಿಯವಾದ ಮಾತುಗಳನ್ನಾಡುವವಳು, ನಾಗನದಿಗಳ ಹೆಸರುಳ್ಳವಳು, ಪಕ್ಷಿ ವೃಕ್ಷ ನಕ್ಷತ್ರಗಳ ಹೆಸರುಳ್ಳವಳು, ಅಹಿಪ್ರೇಷ್ಯಾಲ್ಯನಾಮ್ನಿಯಾದವಳು, ಭಯಂಕರವಾದ ಹೆಸರುಳ್ಳವಳು - ಇಂಥ ಕನ್ಯೆಯರನ್ನು ಮದಿವೆಯಾಗಬಾರದು.

ಹೀಗೆಯೇ ವರ್ಜನೀಯ ಕನ್ಯಾವಿಷಯದಲ್ಲಿ ಇನ್ನೂ ಅನೇಕ ಶಾಸ್ತ್ರವಚನಗಳಿರುವವು. ಶಾಸ್ತ್ರಾಭಿಮಾನಿಗಳಾದವರು ಇಂಥ ಕನ್ನೆಯರನ್ನು ವಿವಾಹ ಮಾಡಿಕೊಳ್ಳದಿದ್ದರೆ, ಅವರಿಗೆ ಏನುಗತಿ! ಅಂಥ ಸ್ತ್ರೀಯರು ಮದಿವೆಯಿಲ್ಲದೆ ಯಾವಜ್ಜೀವವೂ ವಿರಕ್ತರಾಗಿರಬೇಕಾಗುವದು.

ಇದಲ್ಲದೆ ಪೂರ್ವದಲ್ಲಿ ಅನೇಕ ದ್ವಿಜಸ್ತ್ರೀಯರು ವಿವಾಹ ಮಾಡಿಕೊಳ್ಳಲಿಲ್ಲವೆಂದು ಇತಿಹಾಸಗಳಿಂದ ಗೊತ್ತಾಗುತ್ತದೆ. ಇವರ ವಿಷಯವು ಇತಿಹಾಸಪ್ರಕರಣದಲ್ಲಿ ಸೂಚಿಸಲ್ಪಟ್ಟಿದೆ. ಹೀಗೆ ಮೇಲಿನ ವಿಚಾರದಿಂದ ಸ್ತ್ರೀಯರಿಗೆ ವಿವಾಹವು ಐಚ್ಛಿಕವಾದುದೆಂದು ವ್ಯಕ್ತವಾಗುವದು. ವ್ಯವಾಯವನ್ನಪೇಕ್ಷಿಸುವವರು ವಿವಾಹವನ್ನು ಮಾಡಿಕೊಳ್ಳಬೇಕು; ಅದನ್ನಪೇಕ್ಷಿಸದವರು ವಿವಾಹವಿಲ್ಲದೆ ವಿರಕ್ತರಾಗಿರತಕ್ಕದು. ವ್ಯವಾಯವನ್ನು ಅಪೇಕ್ಷಿಸುವದು—ಅಥವಾ ಅಪೇಕ್ಷಿಸದೆ ಇರುವದು—ಸ್ತ್ರೀಯರಿಗೆ ಐಚ್ಛಿಕವಾದುದೇ ಹೊರತು ಬಲವಂತವಲ್ಲ. ಅದಪ್ರಯುಕ್ತ ವಿವಾಹವೂ ಐಚ್ಛಿಕವಾಗಿಯೇ ಇರುವದು. ಹೀಗೆ ಶಾಸ್ತ್ರಾನುಸಾರವಾಗಿ ಸ್ತ್ರೀಯರಿಗೆ ವಿವಾಹವೇ ಐಚ್ಛಿಕವಾಗಿರುವದರಿಂದ, ಅವರಿಗೆ ಬಾಲ್ಯದಲ್ಲಿಯೇ ಮದಿವೆ ಮಾಡಬೇಕೆಂಬ ನಿರ್ಬಂಧಕ್ಕೆ ಶಾಸ್ತ್ರರೀತ್ಯಾ ಅವಕಾಶವೇ ಇಲ್ಲ. ಅದಪ್ರಯುಕ್ತ ಸ್ತ್ರೀಯರಿಗೆ ಬಾಲ್ಯದಲ್ಲಿಯೇ ಮದಿವೆ ಮಾಡದೆ, ಅವರು ಯೌವನದಶೆಗೆ ಬಂದಬಳಿಕ ಸಂಸಾರದಲ್ಲಿ ಇಷ್ಟವುಳ್ಳವರಿಗೆ ವಿವಾಹಮಾಡಿಕೊಳ್ಳಲಿಕ್ಕೂ ಇಷ್ಟವಿಲ್ಲದವರಿಗೆ ವಿರಕ್ತರಾಗಿರಲಿಕ್ಕೂ ಅವಕಾಶವನ್ನು ಕೊಡುವದು ವಿವೇಕಿಗಳ ಕರ್ತವ್ಯವಾಗಿದೆ.

ಪ್ರಕರಣ ೧೪.

ಇತಿಹಾಸಗಳು.

ಇದುವರೆಗೂ ಮಾಡಿದ ವಿಚಾರದಿಂದ ಋತುಮತೀವಿವಾಹವು ಶಾಸ್ತ್ರಸಮ್ಮತವೆಂಬುದು ವ್ಯಕ್ತವಾಗುವುದು. ಆದರೆ ಅದನ್ನು ಆಚರಣೆಗೆ ತಂದುದಕ್ಕೆ ನಿದರ್ಶನವೇನಾದರೂ ಉಂಟೇ—ಎಂಬುದು ಈಗ ವಿಚಾರಿಸಲ್ಪಡುವುದು.

ಪೂರ್ವದಲ್ಲಿ ಋತುಮತಿಗಳಾದ ಕ್ಷತ್ರಿಯ ಸ್ತ್ರೀಯರ ವಿವಾಹವು ನಡೆದುದಕ್ಕೆ ಅನೇಕ ಇತಿಹಾಸಗಳಿರುವುವು. ಇವು ಪ್ರಸಿದ್ಧ ವಿಷಯಗಳಾಗಿರುವುದರಿಂದಲೂ ವಿಪಕ್ಷದವರಲ್ಲನೇಕರು ಋತುಮತಿಗಳಾದ ಕ್ಷತ್ರಿಯ ಸ್ತ್ರೀಯರ ವಿವಾಹವು ಶಾಸ್ತ್ರಸಮ್ಮತವೆಂದು ಒಪ್ಪಿಕೊಳ್ಳುವುದರಿಂದಲೂ, ಪುನಃ ಅವರ ವಿಷಯವನ್ನು ಚರ್ಚಿಸಬೇಕಾದುದು ಆವಶ್ಯಕವಲ್ಲ. ಆದರೆ ಬ್ರಾಹ್ಮಣರಲ್ಲಿ ಋತುಮತೀವಿವಾಹವನ್ನು ಆಚರಣೆಗೆ ತಂದುದಕ್ಕೆ ನಿದರ್ಶನವುಂಟೇ—ಎಂದರೆ, ನಿದರ್ಶನವಿರುವುದು. ಆ ವಿಷಯದಲ್ಲಿ ಕೆಲವು ಇತಿಹಾಸಗಳು ಇಲ್ಲಿ ಉದಾಹರಿಸಲ್ಪಡುವುವು.

ಭವಿಷ್ಯೋತ್ತರಪುರಾಣ, ಅನಂತವ್ರತ ಕಥೆ.

ಶ್ರೀಕೃಷ್ಣ ಉವಾಚ—

ಆಸೀತ್ಪುರಾ ಕೃತಯುಗೇ ಸುಮಂತೋ ನಾಮ ವೈ ದ್ವಿಜಃ ।
ಪಿತಾ ದೃಷ್ಟ್ವಾ ಸುಮಂತೋಪಿ ಸ್ತ್ರೀಚಿಹ್ನಾಂ ಯೌವನೇ ಸ್ಥಿತಾಂ ।
ಕಸ್ಮೈ ದೇಯಾ ಮಯಾ ಬಾಲೇತ್ಯಚಿಂತಯದತೀವ ಸಃ ॥
ಮುನಿಃ ಕೌಂಡಿನ್ಯನಾಮಾ ವೈ ವಿವಾಹೇಚ್ಛುರಥಾಗತಃ ।
ತಸ್ಮೈ ಪ್ರದೇಯಾ ಕನ್ಯೇತಿ ಸುಮಂತೇನಾಪಿ ನಿಶ್ಚಿತಂ ॥
ಕೌಂಡಿನ್ಯೋಪಿ ವಿವಾಹ್ಯೈನಾಂ ಪಥಿ ಗಚ್ಛನ್ ಶನೈಶ್ಶನೈಃ ।
ಶೀಲಾಂ ಸುಶೀಲಾಮಾದಾಯ ನವೋಢಾಂ ಗೋರಥೇನ ಚ ॥

ಅರ್ಥ.—ಶ್ರೀ ಕೃಷ್ಣನು ಧರ್ಮರಾಜನಿಗೆ ಹೇಳಿದನು. ಪೂರ್ವದಲ್ಲಿ ಕೃತಯುಗದಲ್ಲಿ ಸುಮಂತನೆಂದು ಹೆಸರುಳ್ಳ ಬ್ರಾಹ್ಮಣನಿದ್ದನು. ತಂದೆಯಾದ ಸುಮಂತನು ಸ್ತ್ರೀ ಚಿಹ್ನೆಯುಳ್ಳವಳಾಗಿಯೂ ಯೌವನಸ್ಥಳಾಗಿಯೂ ಇರುವ ಮಗಳನ್ನು ನೋಡಿ ಈ ನನ್ನ ಮಗಳನ್ನು ಯಾವನಿಗೆ ಕೊಡಲಿ ಎಂದು ಬಹಳವಾಗಿ ಚಿಂತಿಸಿದನು. ಸರಿ, ವಿವಾಹವನ್ನಪೇಕ್ಷಿಸಿ ಕೌಂಡಿನ್ಯಮುನಿಯು ಈಗ ಬಂದಿರುವನು; ಆತನಿಗೆ ನನ್ನ ಮಗಳನ್ನು ಕೊಡತಕ್ಕದು ಎಂದು ಸುಮಂತನು ನಿಶ್ಚಯಮಾಡಿಕೊಂ

ಡನು. ವಿವಾಹವನ್ನು ಮಾಡಿಕೊಂಡಬಳಿಕ ಕೌಂಡಿನ್ಯನು ಸದ್ವೃತ್ತಳಾದ ನವೀನ ಪತ್ನಿಯಾದ ಸುಶೀಲೆಯನ್ನು ಎತ್ತಿನಗಾಡಿಯಲ್ಲಿ ಕೂರಿಸಿಕೊಂಡು ಮೆಲ್ಲಮೆಲ್ಲನೆ ಪ್ರಯಾಣಬೆಳೆಸಿದನು (ಎಂದರೆ ತನ್ನ ಆಶ್ರಮವನ್ನು ಕುರಿತು ಹೊರಟನು.)

ಹೀಗೆ ಬ್ರಾಹ್ಮಣಪುತ್ರಿಯಾದ ಸುಶೀಲೆಗೆ ಯೌವನದಶೆಯಲ್ಲಿ ಮದಿವೆಯಾಗಿರುವುದು.

ಮಹಾಭಾರತ, ಶಲ್ಯಪರ್ವ, ಗದಾಯುದ್ಧಪರ್ವ, ಅಧ್ಯಾಯ ೫೨.

ಗಾರ್ಗ್ಯಋಷಿಯ ಮಗಳಾದ ಸುಭ್ರುವಿನ ಕಥೆ.

ಸಾ ಪಿತ್ರಾ ದೀಯಮಾನಾಽಪಿ ತತ್ರ ನೈಚ್ಛದನಿಂದಿತಾ।
ಆತ್ಮನಃ ಸದೃಶಂ ಸಾ ತು ಭರ್ತಾರಂ ನಾನ್ವಪದ್ಯತ ॥೬॥
ತತಃ ಸಾ ತಪಸೋಗ್ರೇಣ ಪೀಡಯಿತ್ವಾತ್ಮನಸ್ತನುಂ।
ಪಿತೃದೇವಾರ್ಚನರತಾ ಬಭೂವ ವಿಜನೇ ವನೇ ॥೭॥
ವಾರ್ಧಕ್ಯೇನ ಚ ರಾಜೇಂದ್ರ ತಪಸಾ ಚೈವ ಕರ್ಶಿತಾ ॥೮॥
ಚಕಾರ ಗಮನೇ ಬುದ್ಧಿಂ ಪರಲೋಕಾಯ ವೈ ತದಾ ॥೯॥
ಮೋಕ್ತುಕಾಮಾಂ ತು ತಾಂ ದೃಷ್ಟ್ವಾ ಶರೀರಂ ನಾರದೋಽಬ್ರವೀತ್ ।
ಅಸಂಸ್ಕೃತಾಯಾಃ ಕನ್ಯಾಯಾಃ ಕುತೋ ಲೋಕಾಸ್ತವಾನಘೇ ॥೧೦॥
ಏವಂ ತು ಶ್ರುತಮಸ್ಮಾಭಿರ್ದೇವಲೋಕೇ ಮಹಾವ್ರತೇ ।
ತಪಃ ಪರಮಕಂ ಪ್ರಾಪ್ತಂ ನ ತು ಲೋಕಾಸ್ತ್ವಯಾ ಜಿತಾಃ ॥೧೧॥
ತನ್ನಾರದವಚಃ ಶ್ರುತ್ವಾ ಸಾಬ್ರವೀದೃಷಿಸಂಸದಿ ।
ತಪಸೋಽರ್ಧಂ ಪ್ರಯಚ್ಛಾಮಿ ಪಾಣಿಗ್ರಾಹಸ್ಯ ಸತ್ತಮ ॥೧೨॥
ಇತ್ಯುಕ್ತೇ ಚಾಸ್ಯ ಜಗ್ರಾಹ ಪಾಣಿಂ ಗಾಲವಸಂಭವಃ ॥೧೩॥
ಯಥಾದೃಷ್ಟೇನ ವಿಧಿನಾ ಹುತ್ವಾ ಚಾಗ್ನಿಂ ವಿಧಾನತಃ ।
ಚಕ್ರೇ ಚ ಪಾಣಿಗ್ರಹಣಂ ತಸ್ಯೋದ್ವಾಹಂ ಚ ಗಾಲವಿಃ ॥೧೫॥

ಅರ್ಥ.—ಅನಿಂದಿತಳಾದ ಆಕೆಯು ತಂದೆಯಿಂದ ಮದಿವೆಮಾಡಲ್ಪಡುವವಳಾಗಿದ್ದಾಗ್ಗೂ ಮದಿವೆಯನ್ನಪೇಕ್ಷಿಸಲಿಲ್ಲ. ಯಾಕೆಂದರೆ, ಆಕೆಗೆ ಸದೃಶನಾದ ಗಂಡನು ದೊರಕಲಿಲ್ಲ. ಆಬಳಿಕ ಆಕೆಯು ವಿಜನವಾದ ವನದಲ್ಲಿ ಉಗ್ರವಾದ ತಪಸ್ಸಿನಿಂದ ದೇಹವನ್ನು ಪೀಡಿಸಿ ಪಿತೃದೇವಾರ್ಚನ ತತ್ಪರಳಾಗಿದ್ದಳು. ವಾರ್ಧಕ್ಯದಿಂದಲೂ ತಪಸ್ಸಿನಿಂದಲೂ ಕೃಶಳಾದಳು. ಆಗ ಪರಲೋಕಕ್ಕೆ ಹೋಗಬೇಕೆಂದು ಸಂಕಲ್ಪಮಾಡಿದವಳಾದಳು. ಹೀಗೆ ಶರೀರವನ್ನು ತ್ಯಾಗಮಾಡಲಿಚ್ಛೈಸಿದ ಆಕೆಯನ್ನು ನೋಡಿ ನಾರದ ಋಷಿಯು, ಎಲೈ ಪಾಪರಹಿತಳೆ, ಅಸಂಸ್ಕೃತಳಾದ ಕನ್ಯೆಯಾದ ನಿನಗೆ ಲೋಕಗಳೆಲ್ಲಿ? ಎಲೈ ಮಹಾವ್ರತಳೆ,ದೇವಲೋಕದಲ್ಲಿ ನಮ್ಮಿಂದ ಹೀಗೆ ಕೇಳಲ್ಪಟ್ಟಿತು, ಏನೆಂದರೆ, ನಿನಗೆ ಪರಮ ತಪಸ್ಸು ಪ್ರಾಪ್ತವಾಯಿತು ಆದರೆ

ನಿನ್ನಿಂದ ಲೋಕಗಳು ಜಯಿಸಲ್ಪಡಲಿಲ್ಲ—ಎಂದು ಹೇಳಿದನು. ಆ ನಾರದವಚನವನ್ನು ಕೇಳಿ ಆಕೆಯು ಋಷಿಗಳ ಸಭೆಯಲ್ಲಿ, ಎಲೈ ಶ್ರೇಷ್ಠನೆ, ನನ್ನ ಪಾಣಿಗ್ರಹಣ ಮಾಡಿದವನಿಗೆ ಅರ್ಧ ತಪಸ್ಸನ್ನು ಕೊಡುತ್ತೇನೆ ಎಂದು ನುಡಿದಳು. ಹೀಗೆ ಹೇಳಲು ಗಾಲವಪುತ್ರನು ಅವಳ ಪಾಣಿಗ್ರಹಣ ಮಾಡಿದನು. ಯಥಾವಿಧಿಯಾಗಿ ಅಗ್ನಿಯನ್ನು ಹೊತ್ತಿಸಿ ಗಾಲವಿಯು ಅವಳ ಪಾಣಿಗ್ರಹಣಮಾಡಿ ಅವಳನ್ನು ಮದಿವೆ ಮಾಡಿಕೊಂಡನು.

ಹೀಗೆ ಬ್ರಾಹ್ಮಣ ಸ್ತ್ರೀಯಾದ 'ಸುಭ್ರು' ಎಂಬಾಕೆಯು ಮುದುಕಿಯಾದ ಮೇಲೆ ಮದಿವೆ ಮಾಡಿಕೊಂಡಳು.

ಮಹಾಭಾರತ, ಶಲ್ಯಪರ್ವ, ಗದಾಯುದ್ಧಪರ್ವ, ಅಧ್ಯಾಯ ೪೮.

ಶ್ರುವಾವತೀ ಕಥೆ.

ಭಾರದ್ವಾಜಸ್ಯ ದುಹಿತಾ ರೂಪೇಣಾಪ್ರತಿಮಾ ಭುವಿ |
ಶ್ರುವಾವತೀ ನಾಮ ವಿಭೋ ಕುಮಾರೀ ಬ್ರಹ್ಮಚಾರಿಣೀ ॥೨॥
ತಪಶ್ಚಚಾರ ಸಾತ್ಯುಗ್ರಂ ನಿಯಮೈರ್ಬಹುಭಿರ್ವೃತಾ |
ಭರ್ತಾ ಮೇ ದೇವರಾಜಃ ಸ್ಯಾದಿತಿ ನಿಶ್ಚಿತ್ಯ ಭಾಮಿನೀ ॥೩॥
ಸಮಾಸ್ತಸ್ಯಾ ವ್ಯತಿಕ್ರಾಂತಾಃ ಬಹ್ವ್ಯಃ ಕುರುಕುಲೋದ್ವಹ ॥೪॥
ಉತ್ಸೃಜ್ಯ ತು ಶುಭಾ ದೇಹಂ ಜಗಾಮೇಂದ್ರಸ್ಯ ಭಾರ್ಯತಾಂ ॥೫೯॥

ಅರ್ಥ.—ಎಲೈ ವಿಭುವೆ, ಭಾರದ್ವಾಜನ ಮಗಳಾಗಿಯೂ ಭೂಲೋಕದಲ್ಲಿ ತನ್ನ ರೂಪಕ್ಕೆ ಎಣೆಯಿಲ್ಲದವಳಾಗಿಯೂ ಕುಮಾರಿಯಾಗಿಯೂ ಬ್ರಹ್ಮಚಾರಿಣಿಯಾಗಿಯೂ ಇದ್ದ ಶ್ರುವಾವತಿಯೆಂದು ಹೆಸರುಳ್ಳ ಭಾಮಿನಿಯು ತನಗೆ ದೇವರಾಜನಾದ ಇಂದ್ರನು ಗಂಡನಾಗಲಿ ಎಂದು ನಿಶ್ಚಯಿಸಿ ಬಹುನಿಯಮಗಳಿಂದ ವ್ರತಶೀಲಳಾಗಿ ಅತ್ಯುಗ್ರವಾದ ತಪಸ್ಸನ್ನು ಮಾಡಿದಳು. ಕುರುಕುಲೋದ್ವಹನೆ, (ಹೀಗೆ) ಆಕೆಗೆ ಬಹುವರ್ಷಗಳು ಕಳೆದುವು. (ಅನಂತರ) ಆ ಮಂಗಳೆಯು ದೇಹವನ್ನು ಬಿಟ್ಟು ಇಂದ್ರಭಾರ್ಯಾತ್ವವನ್ನು ಪಡೆದಳು.

ಹೀಗೆ ಈ ಕಥೆಯಿಂದ, ಬ್ರಾಹ್ಮಣಪುತ್ರಿಯಾದ ಶ್ರುವಾವತಿಗೆ, ಆಕೆಯು ಋತುಮತಿಯಾಗಿ ಬಹುವರ್ಷಗಳಾದಾಗ್ಯೂ ಮದಿವೆಯಿರಲಿಲ್ಲವೆಂದು ವ್ಯಕ್ತವಾಗುವುದು.

ಶುಕ್ರಾಚಾರ್ಯರ ಮಗಳಾದ ದೇವಯಾನಿಯ ಕಥೆಯನ್ನು ಪರ್ಯಾಲೋಚಿಸಿದರೆ, ವಿವಾಹವಾಗುವಾಗ ಆಕೆಯು ಯೌವನದಶೆಯಲ್ಲಿದ್ದಳೆಂದು ತೋರಿಬರುತ್ತದೆ.

ಶಕುಂತಲೆಯ ಸಖಿಯರಾದ ಬ್ರಾಹ್ಮಣಪುತ್ರಿಯರಾದ ಅನಸೂಯೆ ಮತ್ತು ಪ್ರಿಯಂವದೆ ಎಂಬುವರು ಶಕುಂತಳೆಗೆ ಸಮಾನವಾದ ವಯಸ್ಕರಾಗಿಯೂ ಮದಿವೆ

ಯಿಲ್ಲದವರಾಗಿಯೂ ಇದ್ದರೆಂದು ದುಷ್ಯಂತನ ವಚನದಿಂದ ತೋರಿಬರುತ್ತದೆ. ದುಷ್ಯಂತನು ಶಕುಂತಲೆಯನ್ನು ಮದುವೆಯಾದಾಗ ಆಕೆಯು ಋತುಮತಿಯಾದವಳಾಗಿ ಯೌವನವತಿಯಾಗಿ ಇದ್ದಳೆಂಬುದು ವ್ಯಕ್ತವಾಗಿದೆ. ಆದುದರಿಂದ ಆ ಬ್ರಾಹ್ಮಣಸ್ತ್ರೀಯರೂ ಸಹ ಋತುಮತಿಗಳಾಗಿ ಯೌವನವತಿಯರಾಗಿದ್ದರೆಂದೂ ಆದಾಗ್ಯೂ ಅವರಿಗೆ ಅಗ್ಗೆ ಇನ್ನೂ ಮದುವೆಯಾಗಿರಲಿಲ್ಲವೆಂದೂ ಗೊತ್ತಾಗುತ್ತದೆ.

ಶ್ರೀವಿಲ್ಲಿ ಪುತ್ತೂರಿನಲ್ಲಿ ವಾಸವಾಗಿದ್ದ ವಿಷ್ಣುಚಿತ್ತರ್ ಎಂಬೊಬ್ಬ ಬ್ರಾಹ್ಮಣನ ಮಗಳಾದ ಆಂಡಾಳ್ ಎಂಬ ಸ್ತ್ರೀಯು ಮೈನೆರೆದು ಯುವತಿಯಾದ ಬಳಿಕ ಶ್ರೀರಂಗದಲ್ಲಿ ಶ್ರೀರಂಗನಾಥಸ್ವಾಮಿಯನ್ನು ಮದುವೆಯಾದಳೆಂದು ಆಕೆಯ ಇತಿಹಾಸದಿಂದ ಕಂಡುಬರುತ್ತದೆ.

ಪರಾಶರಮಾಧವೀಯ, ವ್ಯವಹಾರಕಾಂಡ, ವ್ಯವಹಾರಭೇದ.

ಕೇರಲದೇಶೇ ಕನ್ಯಾಯಾಃ ಋತುಮತೀತ್ವಂ ನ ದೋಷಾಯೇತ್ಯೇವಮಾದಿಕಸ್ತತ್ತದ್ದೇಶಸಮಯಃ । ತತ್ರ ತತ್ರ ಪತ್ರಾದಿಶಾಸನಂ ಚ ತಿಷ್ಠತಿ ॥

ಅರ್ಥ.—ಕೇರಲದೇಶದಲ್ಲಿ ಕನ್ಯೆಯ ಋತುಮತೀತ್ವವು ದೋಷವಲ್ಲ ಎಂಬುದೇ ಮೊದಲಾದುದು ಆಯಾದೇಶದ ಸಮಯವು. ಅಲ್ಲಲ್ಲಿ ಪತ್ರಾದಿಶಾಸನವು ಇರುತ್ತದೆ.

ಇದರಿಂದ ಶ್ರೀ ಮಾಧವಾಚಾರ್ಯರವರ ಕಾಲದಲ್ಲಿ ಕೇರಲದೇಶದಲ್ಲಿ ದ್ವಿಜರಲ್ಲಿ ಋತುಮತೀವಿವಾಹವು ಮಾಡಲ್ಪಡುತ್ತಿತ್ತೆಂದು ವ್ಯಕ್ತವಾಗುತ್ತದೆ. ಈಗಲೂ ಆ ದೇಶದಲ್ಲಿ ನಂಬುದ್ರಿ ಬ್ರಾಹ್ಮಣರು ಋತುಮತಿಯರಾದ ಕನ್ಯೆಯರಿಗೆ ವಿವಾಹವನ್ನು ಮಾಡುವರು. ಕನ್ಯಾಕುಬ್ಜದ ಬ್ರಾಹ್ಮಣರೂ ಕೂಡ ಋತುಮತಿಯರಾದ ಕನ್ಯೆಯರಿಗೆ ಪೂರ್ವದಲ್ಲಿ ಮದುವೆಮಾಡುತ್ತಿದ್ದರು. ಈಗಲೂ ಮಾಡುತ್ತಿರುವರು ಎಂಬುದು ಪ್ರಸಿದ್ಧವಿಷಯವಾಗಿದೆ.

ಹೀಗೆ ಋತುಮತೀವಿವಾಹವು ಆಚರಣೆಯಲ್ಲಿಯೂ ಕಂಡುಬಂದಿರುವುದು.

ಇದಲ್ಲದೆ ಪೂರ್ವದಲ್ಲಿ ಅನೇಕ ಸ್ತ್ರೀಯರು ವಿವಾಹ ಮಾಡಿಕೊಳ್ಳಲಿಲ್ಲವೆಂದು ಇತಿಹಾಸಗಳಿಂದ ಗೊತ್ತಾಗುತ್ತದೆ. ಆ ವಿಷಯದಲ್ಲಿ ಕೆಲವು ಉದಾಹರಣೆಗಳು ಇಲ್ಲಿ ಕಾಣಿಸಲ್ಪಡುವುವು.

ಐತಿಹಾಸಿಕ ಕೋಶ, ಪತ್ರ ೫೧೮.

ಬಡವಾ ಪ್ರಾಚೀಥೇಯೀ ಬ್ರಹ್ಮಚರ್ಯ್ಯಕ್ರಮೇಣ ಸ್ಥಿತಾ ಕಾಚಿತ್ ಬ್ರಾಹ್ಮಣಕನ್ಯಾ ॥

ಅರ್ಥ.—'ಬಡವಾ ಪ್ರಾಚೀಥೇಯಿ' ಎಂಬುವಳು ಬ್ರಹ್ಮಚರ್ಯಾಶ್ರಮನಿಷ್ಠಳಾದ ಒಬ್ಬ ಬ್ರಾಹ್ಮಣ ಕನ್ಯೆಯು.

ಭಾರತ, ಶಲ್ಯಪರ್ವ, ಗದಾಯುದ್ಧಪರ್ವ, ಅಧ್ಯಾಯ ೫೪,

ತತ್ರೈವ ಬ್ರಾಹ್ಮಣೀ ಸಿದ್ಧಾ ಕೌಮಾರಬ್ರಹ್ಮಚಾರಿಣೀ ।
ಯೋಗಯುಕ್ತಾ ದಿವಂ ಯಾತಾ ತಪಸ್ಸಿದ್ಧಾ ತಪಸ್ವಿನೀ ॥೬॥
ಬಭೂವ ಶ್ರೀಮತೀ ರಾಜನ್ ಶಾಂಡಿಲಸ್ಯ ಮಹಾತ್ಮನಃ ।
ಸುತಾ ಧೃತವ್ರತಾ ಸಾಧ್ವೀ ನಿಯತಾ ಬ್ರಹ್ಮಚಾರಿಣೀ ॥೭॥
ಸಾ ತು ತಪ್ತ್ವಾ ತಪೋ ಘೋರಂ ದುಶ್ಚರಂ ಸ್ತ್ರೀಜನೇನ ಹ ।
ಗತಾ ಸ್ವರ್ಗಂ ಮಹಾಭಾಗಾ ದೇವಬ್ರಾಹ್ಮಣಪೂಜಿತಾ ॥೮॥

ಅರ್ಥ.—ಅಲ್ಲಿಯೇ ಬ್ರಾಹ್ಮಣಳೂ ಸಿದ್ಧಳೂ ಕೌಮಾರ ಬ್ರಹ್ಮಚಾರಿಣಿಯೂ ಯೋಗಯುಕ್ತಳೂ ತಪಸ್ಸಿದ್ಧಳೂ ತಪಸ್ವಿನಿಯೂ ಆದ ಮಹಾತ್ಮನಾದ ಶಾಂಡಿಲನ ಮಗಳು ಸ್ವರ್ಗಕ್ಕೆ ಹೋದಳು. ಎಲೈ ರಾಜನೆ, ಆಕೆಯು ವ್ರತವನ್ನು ಧರಿಸಿದವಳಾಗಿಯೂ ಸಾಧ್ವಿಯಾಗಿಯೂ ನಿಯತಳಾಗಿಯೂ ಬ್ರಹ್ಮಚಾರಿಣಿಯಾಗಿಯೂ ಶ್ರೀಮತಿಯಾಗಿಯೂ ಆದಳು. ಮಹಾಭಾಗಳಾದ ಅವಳು ಸ್ತ್ರೀಯರಿಂದ ಮಾಡಲು ಕಷ್ಟವಾದ ಘೋರತಪಸ್ಸನ್ನು ಮಾಡಿ ದೇವಬ್ರಾಹ್ಮಣರಿಂದ ಪೂಜಿತಳಾಗಿ ಸ್ವರ್ಗಕ್ಕೆ ಹೋದಳು.

ಕೌಮಾರಬ್ರಹ್ಮಚಾರಿಣಿ ಎಂದರೆ—ಮದಿವೆಯಿಲ್ಲದೆ ಬ್ರಹ್ಮಚರ್ಯವ್ರತವನ್ನಾಚರಿಸುವವಳು. ಸಾಧ್ವಿಯೆಂದರೆ ಇಲ್ಲಿ ಸಾಧುಶೀಲಳೆಂದರ್ಥವು. ಇಲ್ಲಿ ಕೌಮಾರ ಬ್ರಹ್ಮಚಾರಿಣಿಯೆಂಬ ವಿಶೇಷಣವಿರುವುದರಿಂದ ಇದರೊಂದಿಗೆ ಸಾಧ್ವಿಯೆಂಬ ಪದಕ್ಕೆ ಬೇರೆ ಅರ್ಥವಾದ ಪತಿವ್ರತೆಯೆಂಬ ಅರ್ಥವನ್ನು ಇಲ್ಲಿ ಅನ್ವಯಿಸಲಾಗುವುದಿಲ್ಲ.

ಭಾಗವತ, ಸ್ಕಂಧ ೪, ಅಧ್ಯಾಯ ೧.

ತೇಭ್ಯೋ ದಧಾರ ಕನ್ಯೇ ದ್ವೇ ವಯುನಾಂ ಧಾರಿಣೀಂ ಸ್ವಧಾ ।
ಉಭೇ ತೇ ಬ್ರಹ್ಮವಾದಿನ್ಯೌ ಜ್ಞಾನವಿಜ್ಞಾನಪಾರಗೇ ॥೬೪॥

ಶ್ರೀಧರವ್ಯಾಖ್ಯಾನಂ—ತಯೋಸ್ತು ಸಂತತಿರ್ನಾಭವತ್ ಜೀವನ್ಮುಕ್ತತ್ವಾತ್ ॥ ವೀರರಾಘವವ್ಯಾಖ್ಯಾನಂ—ಸನಕಾದಿವತ್ ಊರ್ಧ್ವರೇತಸ್ಕೇ ತೇ ಇತಿ ಭಾವಃ ॥

ಅರ್ಥ.—ಸ್ವಧೆಯು ಅವರುಗಳ ದೆಸೆಯಿಂದ ವಯುನೆ ಮತ್ತು ಧಾರಿಣಿ ಎಂಬ ಎರಡು ಕನ್ಯೆಯರನ್ನು ಪಡೆದಳು. ಆಯಿಬ್ಬರು ಹುಡುಗಿಯರೂ ಬ್ರಹ್ಮವಾದಿನಿಯರಾಗಿಯೂ ಮೋಕ್ಷಜ್ಞಾನದಲ್ಲಿಯೂ ಶಾಸ್ತ್ರಜ್ಞಾನದಲ್ಲಿಯೂ ಪಾರಂಗತರಾಗಿಯೂ ಇದ್ದರು. ಶ್ರೀಧರವ್ಯಾಖ್ಯಾನ.—ಜೀವನ್ಮುಕ್ತರಾದುದರಿಂದ ಆಯಿಬ್ಬರು ಹೆಂಗಸರಿಗೂ ಸಂತತಿಯಾಗಲಿಲ್ಲ. ವೀರರಾಘವವ್ಯಾಖ್ಯಾನ.—ಸನಕಾದಿಗಳಂತೆ ಅವರಿಬ್ಬರೂ ಊರ್ಧ್ವರೇತಸ್ಕರಾಗಿದ್ದರೆಂದು ಅಭಿಪ್ರಾಯವು.

ಕೂರ್ಮಪುರಾಣ, ಗೌರೀಶ್ವರ ಸಂವಾದ.

ಸಂಪ್ರಾಪ್ತಾ ಪರಮಾಂ ಸಿದ್ಧಿಂ ಪೂರ್ವಾಭ್ಯಸ್ತಸ್ವಯೋಗತಃ ;
ಮೈತ್ರೇಯೀ ಸುಲಭಾ ಶಾರ್ಙ್ಗೀ ಶಾಂಡಿಲೀ ಚ ತಪಸ್ವಿನೀ ॥

ಅರ್ಥ.—ಪೂರ್ವದಲ್ಲಿ ಅಭ್ಯಾಸಿಸಲ್ಪಟ್ಟ ಸ್ವಯೋಗದಿಂದ ತಪಸ್ವಿನಿಯರಾದ ಮೈತ್ರೇಯಿ, ಸುಲಭಾ, ಶಾರ್ಙ್ಗಿ, ಶಾಂಡಿಲಿ—ಇವರು ಪರಮಗತಿಯನ್ನು ಹೊಂದಿದರು.

ಮಹಾಭಾರತ, ಉದ್ಯೋಗಪರ್ವ, ಅಧ್ಯಾಯ ೧೧೨.

ಋಷಭಸ್ಯ ತತಃ ಶೃಂಗಂ ನಿಪತ್ಯ ದ್ವಿಜ ಪಕ್ಷಿಣೌ ।
ಶಾಂಡಿಲೀಂ ಬ್ರಾಹ್ಮಣೀಂ ತತ್ರ ದದೃಶಾತೇ ತಪೋನ್ವಿತಾಂ ॥

ಅರ್ಥ.—ಎಲೈ ದ್ವಿಜನೆ, ಅನಂತರ ಎರಡು ಪಕ್ಷಿಗಳು ಋಷಭಪರ್ವತದ ಶಿಖರಕ್ಕೆ ಬಂದು, ಅಲ್ಲಿ ತಪಸ್ಸು ಮಾಡುತ್ತಿದ್ದ ಬ್ರಾಹ್ಮಣಿಯಾದ ಶಾಂಡಿಲಿಯೆಂಬ ಸ್ತ್ರೀಯನ್ನು ನೋಡಿದುವು.

ತಪಸ್ವಿನಿಯಾದ ಶಾಂಡಿಲಿಗೆ ವಿವಾಹವಾಗಿರಲಿಲ್ಲವೆಂದು ತೋರುತ್ತದೆ.

ವಿಷ್ಣುಪುರಾಣ, ಅಂಶ ೧, ಅಧ್ಯಾಯ ೧೦.

ತೇಭ್ಯಃ ಸ್ವಧಾ ಸುತೇ ಜಜ್ಞೇ ಮೇನಾಂ ವೈಧಾರಿಣೀಂ ತಥಾ ।
ತೇ ಉಭೇ ಬ್ರಹ್ಮವಾದಿನ್ಯೌ ಯೋಗಿನ್ಯೌ ಚಾಪ್ಯುಭೇ ದ್ವಿಜ ॥ ೧೯ ॥

ಶ್ರೀಧರವ್ಯಾಖ್ಯಾನಂ :—

ತಯೋಃ ವಿವಾಹಾದಿಕಂ ನಾಭೂದಿತ್ಯಾಹ ತೇ ಉಭೇ ಇತಿ ॥

ಅರ್ಥ.—ಸ್ವಧೆಯೆಂಬವಳು ಅವರುಗಳ ದೆಸೆಯಿಂದ ಮೇನೆ ಮತ್ತು ವೈಧಾರಿಣಿ ಎಂಬ ಎರಡು ಹೆಣ್ಣು ಮಕ್ಕಳನ್ನು ಹೆತ್ತಳು. ಎಲೈ ದ್ವಿಜನೆ ಅವರಿಬ್ಬರೂ ಬ್ರಹ್ಮವಾದಿನಿಯರಾಗಿಯೂ ಯೋಗಿನಿಯರಾಗಿಯೂ ಇದ್ದರು. ಶ್ರೀಧರವ್ಯಾಖ್ಯಾನ – ಅವರಿಬ್ಬರಿಗೆ ವಿವಾಹಾದಿಗಳಿರಲಿಲ್ಲವೆಂದು ಇದರಿಂದ ಹೇಳಲ್ಪಟ್ಟಿತು.

ಮಾರ್ಕಂಡೇಯಪುರಾಣ, ಅಧ್ಯಾಯ ೫೨.

ತೇಭ್ಯಃ ಸ್ವಧಾ ಸುತೇ ಜಜ್ಞೇ ಮೇನಾಂ ವೈಧಾರಿಣೀಂ ತಥಾ ।
ತೇ ಉಭೇ ಬ್ರಹ್ಮವಾದಿನ್ಯೌ ಯೋಗಿನ್ಯೌ ಚಾಪ್ಯುಭೇ ದ್ವಿಜ ॥ ೩೧ ॥

ಅರ್ಥ :—ಮೇಲಿನಂತೆಯೇ.

ಅಧ್ಯಾತ್ಮರಾಮಾಯಣ, ಕಿಷ್ಕಿಂಧಾಕಾಂಡ, ಸರ್ಗ ೬.

ಸ್ವಯಂಪ್ರಭಾ ಕಥೆ.

ಯೋಗಿನೀ ಚ ತಥಾ ದೃಷ್ಟ್ವಾ ವಾನರಾನ್ ಪ್ರಾಹ ಹೃಷ್ಟಧೀಃ ॥ ೪೮ ॥
ಸ್ನಾಪಿ ತ್ಯಕ್ತ್ವಾ ಗುಹಾಂ ಶೀಘ್ರಂ ಯಯೌ ರಾಘವಸನ್ನಿಧಿಂ ॥ ೫೯ ॥

ದಾಸೀ ತವಾಹಂ ರಾಜೇಂದ್ರ ದರ್ಶನಾರ್ಥಮಿಹಾಗತಾ ॥ ೬೧ ॥
ಗುಹಾಯಾಂ ದರ್ಶನಾರ್ಥಂ ತೇ ಫಲಿತಂ ಮೇಽದ್ಯ ತತ್ತಪಃ ॥ ೬೨ ॥
ಏವಂ ಸ್ತುತೋ ರಘುಶ್ರೇಷ್ಠಃ ಪ್ರಸನ್ನಃ ಪ್ರಣತಾಘಹೃತ್ ।
ಉವಾಚ ಯೋಗಿನೀಂ ಭಕ್ತಾಂ ಕಿಂ ತೇ ಮನಸಿ ಕಾಂಕ್ಷಿತಂ ॥ ೭೮ ॥

ಅರ್ಥ.—ಯೋಗಿನಿಯಾದ ಸ್ವಯಂಪ್ರಭೆಯು ಹಾಗೆಯೇ ವಾನರರನ್ನು ನೋಡಿ ಹರ್ಷಯುಕ್ತಳಾಗಿ ತನ್ನ ವೃತ್ತಾಂತವನ್ನು ಹೇಳಿದಳು. ಆಬಳಿಕ ಆಕೆಯು ಶೀಘ್ರದಲ್ಲಿಯೇ ಗವಿಯನ್ನು ಬಿಟ್ಟು ರಾಮನಬಳಿಗೆ ಬಂದು, ಎಲೈ ರಾಜಶ್ರೇಷ್ಠನೆ, ನಾನು ನಿನ್ನ ದಾಸಿಯು, ನಿನ್ನ ದರ್ಶನಕ್ಕೋಸ್ಕರ ಇಲ್ಲಿಗೆ ಬಂದೆನು, ನಿನ್ನ ದರ್ಶನಾರ್ಥವಾಗಿ ನಾನು ಆಗುಹೆಯಲ್ಲಿ ಮಾಡುತ್ತಿದ್ದ ತಪಸ್ಸು ಈ ದಿವಸ ಫಲಿಸಿತು.—ಎಂದು ಹೇಳಿದಳು. ನಮಸ್ಕರಿಸುವವರ ಪಾಪವನ್ನು ನಾಶಮಾಡುವಂಥವನಾದ ರಾಮನು ಈಪ್ರಕಾರವಾಗಿ ಸ್ತುತಿಸಲ್ಪಟ್ಟು ಪ್ರಸನ್ನನಾಗಿ ತನ್ನ ಭಕ್ತಳಾದ ಆ ಯೋಗಿನಿಯನ್ನು ಕುರಿತು ನೀನು ಏನನ್ನು ಅಪೇಕ್ಷಿಸುತ್ತೀಯೆಂದು ಕೇಳಿದನು.

ಗುಹೆಯಲ್ಲಿ ತಪಸ್ಸುಮಾಡುತ್ತಿದ್ದ ಈ ಸ್ವಯಂಪ್ರಭೆಗೆ ಪ್ರಾಯಕವಾಗಿ ಮದಿವೆಯಾಗಿರಲಿಲ್ಲವೆಂದು ತೋರುತ್ತದೆ.

ಮಹಾಭಾರತ, ಉದ್ಯೋಗಪರ್ವ, ಅಧ್ಯಾಯ ೧೧೮.

ನಿರ್ದಿಶ್ಯಮಾನೇಷು ತು ಸಾ ವರೇಷು ವರವರ್ಣಿನೀ ।
ವರಾನುತ್ಕ್ರಮ್ಯ ಸರ್ವಾಂಸ್ತಾನ್ ವರಂ ವೃತವತೀ ವನಂ ।
ಅವತೀರ್ಯ ರಥಾತ್ಕನ್ಯಾ ನಮಸ್ಕೃತ್ಯ ಚ ಬಂಧುಷು ।
ಉಪಗಮ್ಯ ವನಂ ಪುಣ್ಯಂ ತಪಸ್ತೇಪೇ ಯಯಾತಿಜಾ ॥

ಅರ್ಥ.—ತರುಣಿಯಾದ ಯಯಾತಿಪುತ್ರಿಯು ತಂದೆಯಿಂದ ತೋರಿಸಲ್ಪಟ್ಟ ಎಲ್ಲಾ ವರರುಗಳನ್ನೂ ತಿರಸ್ಕರಿಸಿ ವನವನ್ನೇ ವರವನ್ನಾಗಿ ವರಿಸಿ ರಥದಿಂದಿಳಿದು ಬಂಧುಗಳಿಗೆ ನಮಸ್ಕರಿಸಿ ಪುಣ್ಯಕರವಾದ ವನಕ್ಕೆ ಹೋಗಿ ತಪಸ್ಸನ್ನು ಮಾಡಿದಳು.

ಮಹಾಭಾರತ ಶಾಂತಿಪರ್ವ, ಅಧ್ಯಾಯ ೩೨೦.

ಮಹೀಮನುಚಚಾರೈಕಾ ಸುಲಭಾ ನಾಮ ಭಿಕ್ಷುಕೀ ।
ಭೈಕ್ಷಚರ್ಯಾಪದೇಶೇನ ದದರ್ಶ ಮಿಥಿಲೇಶ್ವರಂ ।
ತವ ರಾಜರ್ಷ ಸವರ್ಣಾಸ್ಮಿ ಶುದ್ಧಯೋನಿರವಿಪ್ಲುತಾ ।
ಪ್ರಧಾನೋ ನಾಮ ರಾಜರ್ಷಿರ್ವ್ಯಕ್ತಂ ತೇ ಶ್ರೋತ್ರಮಾಗತಃ ।
ಕುಲೇ ತಸ್ಯ ಸಮುತ್ಪನ್ನಾಂ ಸುಲಭಾಂ ನಾಮ ವಿದ್ಧಿ ಮಾಂ ।
ಸಾಹಂ ತಸ್ಮಿನ್ಕುಲೇಜಾತಾ ಭರ್ತರ್ಯ ಸತಿಮದ್ವಿಧೇ ।
ವಿನೀತಾ ಮೋಕ್ಷಧರ್ಮೇಷು ಚರಾಮ್ಯೇಕಾ ಮುನಿವ್ರತಂ ॥

ಅರ್ಥ.—ಸುಲಭಾ ಎಂದು ಹೆಸರುಳ್ಳ ಸನ್ಯಾಸಿನಿಯು ಏಕಾಂಗಿಯಾಗಿ ಭೂಮಿಯಲ್ಲಿ ಸಂಚರಿಸುತ್ತಾ ಭಿಕ್ಷಾಟನವ್ಯಾಜದಿಂದ ಮಿಥಿಲಾಪತಿಯಾದ ಜನಕ

ನನ್ನು ನೋಡಿ ಹೀಗೆ ಹೇಳಿದಳು.—ರಾಜನೆ, ನಾನು ನಿನ್ನ ಸಮಾನವರ್ಣದವಳು. ಶುದ್ಧಯೋನಿಯು-ಮತ್ತು ಅವಿಪ್ಲುತ ಬ್ರಹ್ಮಚರ್ಯವುಳ್ಳವಳು. ಪ್ರಧಾನನೆಂಬ ರಾಜರ್ಷಿಯುನ್ನು ಕೇಳಿದ್ದೀಯಷ್ಟೆ. ನಾನು ಆತನ ಕುಲದಲ್ಲಿ ಹುಟ್ಟಿದವಳು. ನನ್ನ ಹೆಸರು ಸುಲಭಾ ಎಂದು ತಿಳಿ. ನನಗೆ ಸರಿಯಾದ ಗಂಡನು ದೊರೆಯದ್ದರಿಂದ, ಮೋಕ್ಷಧರ್ಮೋಪದಿಷ್ಟಳಾಗಿ ಏಕಾಂಗಿಯಾಗಿ ಮುನಿವ್ರತವನ್ನಾಚರಿಸುತಿರುವೆನು.
ಮಾರ್ಕಂಡೇಯಪುರಾಣ, ಅಧ್ಯಾಯ ೧೨೪.

ಕನ್ಯೋವಾಚ—

ವರಂ ವೃಣೋಮ್ಯಹಂ ತಾತ ಮಾಮೇಷ ಯದಿ ನೇಚ್ಛತಿ ।
ತಪಸೋನ್ಯೋ ನ ಮೇ ಭರ್ತಾ ಜನ್ಮನ್ಯಸ್ಮಿನ್ ಭವಿಷ್ಯತಿ ॥ ೪೬ ॥
ಸಾಪಿ ಕನ್ಯಾ ವರಂ ಗತ್ವಾ ನಿಸೃಷ್ಟಾ ನಿಜಬಾಂಧವೈಃ ।
ತಪಸ್ತೇಪೇ ನಿರಾಹಾರಾ ವೈರಾಗ್ಯಂ ಪರಮಾಸ್ಥಿತಾ ॥ ೪೯ ॥

ಅರ್ಥ.—ಕನ್ಯೆಯು ಹೇಳಿದಳು—ಎಲೈ ತಂದೆಯೆ, ಇವನು ನನ್ನನ್ನು ಅಪೇಕ್ಷಿಸದಿದ್ದರೆ, ನಾನು ಬೇರೆ ವರನನ್ನು ಹುಡುಕುವೆನು. ತಪಸ್ಸನ್ನು ಬಿಟ್ಟು ಬೇರೆ ಗಂಡನು ನನಗೀಜನ್ಮದಲ್ಲಿಲ್ಲ. ಕನ್ಯೆಯು ಹೀಗೆ ಹೇಳಿ ತನ್ನ ಬಂಧುಗಳಿಂದ ಅನುಮತಿಸಲ್ಪಟ್ಟವಳಾಗಿ ವನಕ್ಕೆ ಹೋಗಿ ಪರವೈರಾಗ್ಯವನ್ನು ಹೊಂದಿ ನಿರಾಹಾರಳಾಗಿ ತಪಸ್ಸು ಮಾಡಿದಳು.
ದೇವೀಭಾಗವತ, ಸ್ಕಂಧ ೪, ಅಧ್ಯಾಯ ೧೩.

ಮಂದೋದರೀ—

ನಾಹಂ ಪತಿಂ ಕರಿಷ್ಯಾಮಿ ನೇಚ್ಛಾ ಮೇಸ್ತಿ ಪರಿಗ್ರಹೇ ॥೧೫॥
ಏವಂ ಪ್ರೋಕ್ತಾ ತದಾ ಮಾತಾ ಪತಿಂ ಪ್ರಾಹ ನೃಪಾತ್ಮಜಾ ॥೨೬॥
ನ ಚ ವಾಂಛತಿ ಭರ್ತಾರಂ ಕೌಮಾರವ್ರತಧಾರಿಣೀ ।
ವ್ರತಜಾಪ್ಯಪರಾ ನಿತ್ಯಂ ಸಂಸಾರಾದ್ವಿಮುಖೀ ಸದಾ ॥೨೮॥
ನ ಕಾಂಕ್ಷತಿ ಪತಿಂ ಕರ್ತುಂ ಬಹುದೋಷವಿಚಕ್ಷಣಾ ।
ಭಾರ್ಯಾಯಾಭಾಷಿತಂ ಶ್ರುತ್ವಾ ತಥೈವ ಸಂಸ್ಥಿತೋ ನೃಪಃ ॥೨೯॥
ವಿವಾಹೋ ನ ಕೃತಃ ಪುತ್ರ್ಯಾಃ ಜ್ಞಾತ್ವಾ ಭಾವವಿವರ್ಜಿತಾಂ ॥೩೦॥

ಅರ್ಥ.—ಮಂಡೋದರಿಯು ಹೇಳಿದಳು—ನಾನು ಗಂಡನನ್ನು ಮಾಡಿಕೊಳ್ಳುವುದಿಲ್ಲ. ನನಗೆ ವಿವಾಹವಲ್ಲಿ ಅಪೇಕ್ಷೆಯಿಲ್ಲ. ಈಪ್ರಕಾರವಾಗಿ ತಾಯಿಯು ಹೇಳಲ್ಪಟ್ಟವಳಾಗಿ ತನ್ನ ಪತಿಯನ್ನು ಕುರಿತು, ರಾಜಪುತ್ರಿಯು ಕೌಮಾರವ್ರತವನ್ನು ಧರಿಸಿರುವಳು. ಗಂಡನನ್ನಪೇಕ್ಷಿಸುವುದಿಲ್ಲ, ಸರ್ವದಾ ಸಂಸಾರವಿಮುಖಳಾಗಿರುವಳು, ನಿರಂತರ ವ್ರತಗಳಲ್ಲಿಯೂ ಜಪಗಳಲ್ಲಿಯೂ ಆಸಕ್ತಳಾಗಿರುವಳು ಬಹುದೋಷವಿಚಕ್ಷಣಳಾಗಿರುವಳು, ಪತಿಯನ್ನು ಮಾಡಿಕೊಳ್ಳಲಪೇಕ್ಷಿಸುವುದಿಲ್ಲ

ವೆಂದು ಹೇಳಿದಳು. ರಾಜನು ಹೆಂಡತಿಯ ಮಾತನ್ನು ಕೇಳಿ ಹಾಗೆಯೇ ಆಲೋಚನಪರನಾಗಿದ್ದುಕೊಂಡು, ಮಗಳು ವಿವಾಹಾಪೇಕ್ಷಾರಹಿತಳಾಗಿರುವುದನ್ನು ತಿಳಿದು ಆಕೆಗೆ ಮದುವೆ ಮಾಡಲಿಲ್ಲ.

ಹೀಗೆ ಮೇಲಿನ ಇತಿಹಾಸಗಳಿಂದ ಸ್ತ್ರೀಯರಿಗೆ ವಿವಾಹವೇ ಐಚ್ಛಿಕವೆಂದು ವ್ಯಕ್ತವಾಗುವುದು. ಹೀಗಿರುತ್ತಾ ಋತುಮತಿಯರಿಗೆ ವಿವಾಹವು ಕೂಡದೆಂದು ಹೇಳಲವಕಾಶವೆಲ್ಲಿರುವುದು?

ಪ್ರಕರಣ ೧೮.

ಆಕ್ಷೇಪಗಳು.

ಇದುವರೆಗೂ ಮಾಡಿದ ವಿಚಾರದಿಂದ ಋತುಮತೀವಿವಾಹವು ಶಾಸ್ತ್ರಸಮ್ಮತವೆಂದು ಚೆನ್ನಾಗಿ ವ್ಯಕ್ತವಾಗುವುದು. ಹೀಗಿದ್ದಾಗ್ಯೂ ಅದು ಅಶಾಸ್ತ್ರೀಯವು, ಅದನ್ನಾಚರಿಸಕೂಡದೆಂದು ವಿಪಕ್ಷದವರು ಬಗೆಬಗೆಯ ಆಕ್ಷೇಪಗಳನ್ನು ಮಾಡುವರು. ಈಗ ಆ ಆಕ್ಷೇಪಗಳನ್ನು ಚರ್ಚಿಸಿ ಅವಕ್ಕೆ ಉತ್ತರವನ್ನು ಹೇಳುವೆವು.

ಆಕ್ಷೇಪ ೧.

ಕಲ್ಪಿತ ವಚನಗಳು.

ನೀವು ಉದಾಹರಿಸಿದ ಋತುಮತೀವಿವಾಹಪರವಾದ ವಚನಗಳು ಕಲ್ಪಿತವಾದವೇ ಹೊರತು ಸತ್ಯವಾದವುಗಳಲ್ಲ; ಅವು ಪುರಾತನಶಾಸ್ತ್ರವಚನಗಳ ಮಧ್ಯದಲ್ಲಿ ಹೊಸತಾಗಿ ಸೇರಿಸಲ್ಪಟ್ಟಿರುವುವು; ಆದುದರಿಂದ ಅವನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಪರಪಕ್ಷದವರಲ್ಲಿ ಕೆಲವರು ಹೇಳುವರು.

ಉತ್ತರ.—ಇದಕ್ಕೆ ಋತುಮತೀ ವಿವಾಹಪಕ್ಷದವರಲ್ಲಿ ಅನೇಕರು, ನೀವು ಉದಾಹರಿಸಿರುವ ನಿಷೇಧಕ ವಚನಗಳು ಕಲ್ಪಿತವಾದುವು, ಅವು ಹೊಸತಾಗಿ ಸೇರಿಸಲ್ಪಟ್ಟಿರುವುದರಿಂದ ಅವನ್ನು ಒಪ್ಪುವುದಕ್ಕಾಗುವುದಿಲ್ಲ, ನಾವು ಉದಾಹರಿಸಿದ ವಚನಗಳೇ ಸತ್ಯವಾದವುಗಳೆಂದು ಪ್ರತ್ಯುತ್ತರ ಕೊಡುವರು.

ಹೀಗೆ ಎರಡುಪಕ್ಷದವರೂ – ನಿಮ್ಮ ವಚನಗಳು ಸುಳ್ಳು ನಿಮ್ಮ ವಚನಗಳು ಸುಳ್ಳು—ಎಂದು ವಿವಾದಿಸುವರು. ಇಂಥ ವಿವಾದವು ನಿಷ್ಪ್ರಯೋಜನವಾದುದು. ನಮ್ಮ ಶಾಸ್ತ್ರವಚನಗಳು ನಮಗೆ ಯಥಾಸ್ಥಿತಿಯಲ್ಲಿ ದೊರಕಿಲ್ಲವೆಂಬುದೇನೋ ಸತ್ಯವಾಗಿದೆ. ಅವುಗಳಲ್ಲಿ ಅನೇಕವಾದ ಪಾಠಾಂತರಗಳಿರುವುದೇ ಇದಕ್ಕೆ ಸಾಕ್ಷಿಯಾಗಿದೆ. ಇದಲ್ಲದೆ ಕೆಲವು ಪುಸ್ತಕಗಳಲ್ಲಿರುವ ವಚನಗಳು ಬೇರೆ ಪುಸ್ತಕಗಳಲ್ಲಿ

ಸಿಕ್ಕುವುದಿಲ್ಲ; ಮತ್ತು ಅನೇಕ ವಚನಗಳು ಅಲ್ಲಲ್ಲಿ ಬದಲಾಯಿಸಲ್ಪಟ್ಟಿರುವುದು ವ್ಯಕ್ತವಾಗಿ ಕಂಡುಬರುವುದು. ಅನೇಕ ಸಹಸ್ರ ವರ್ಷಗಳ ಹಳೆಯ ಗ್ರಂಥಗಳು ವ್ಯತ್ಯಾಸವನ್ನು ಹೊಂದುವ ಸಂಭವವು ಹೆಚ್ಚೆಂದು ಹೇಳಬೇಕಾದುದಿಲ್ಲ.

ಆದರೆ ಆ ವಚನರಾಶಿಗಳಲ್ಲಿ ಯಾವುವು ಸತ್ಯವಾದುವು—ಯಾವುವು ಬದಲಾಯಿಸಲ್ಪಟ್ಟವು—ಯಾವುವು ಹೊಸತಾಗಿ ಸೇರಿಸಲ್ಪಟ್ಟುವೆಂದು ಕಂಡುಹಿಡಿಯಲು ಸಾಧ್ಯವಿಲ್ಲ. ಅದುದರಿಂದ ಸಮದರ್ಶಿಗಳು ಇರುವ ವಚನಗಳನ್ನು ಯಥಾರೀತಿಯಲ್ಲಿ ತೆಗೆದುಕೊಂಡು ಅವಕ್ಕೆಲ್ಲ ಸಮವಾದ ಗೌರವವನ್ನು ಕೊಡಬೇಕಾಗುವುದು. ಪಕ್ಷಪಾತವನ್ನು ಬಿಡಬೇಕು. ಒಂದು ಸತ್ಯವೆಂತಲೂ ಮತ್ತೊಂದು ಅಸತ್ಯವೆಂತಲೂ ಹೇಳಲಾಗದು. ಹಾಗೆ ಪಕ್ಷಪಾತ ಮಾಡಿದರೆ ವಿವಾದವು ತಪ್ಪಿ ವ್ಯವಸ್ಥೆಯಾಗುವುದಿಲ್ಲ. ಎಲ್ಲ ವಚನಗಳನ್ನೂ ಗೌರವಿಸಬೇಕು.

ಆದರೆ ಇದರಿಂದ ವಚನಗಳಿಗೆ ಪರಸ್ಪರ ವಿರೋಧವು ತಪ್ಪುವುದಿಲ್ಲ. ಅದನ್ನು ತಪ್ಪಿಸುವುದು ಅಸಾಧ್ಯವಾಗಿರುವುದು. ಎಲ್ಲಿ ವಚನಗಳು ಸರಿ ಅಥವಾ ತಪ್ಪೆಂದು ಕಂಡುಹಿಡಿಯಲಸಾಧ್ಯವೋ, ಅಲ್ಲಿ ಅವುಗಳಿಗೆಲ್ಲ ಸಮವಾದ ಗೌರವವನ್ನು ತೋರಿಸಬೇಕೇಹೊರತು ಪಕ್ಷಪಾತವನ್ನು ಮಾಡಕೂಡದು. ಹಾಗೆ ಪಕ್ಷಪಾತವನ್ನು ಮಾಡಿದರೆ ನ್ಯಾಯವು ದೊರಕುವುದಿಲ್ಲ. ಆದುದರಿಂದ ಋತುಮತೀವಿವಾಹಪಕ್ಷದವರು ಬಾಲ್ಯವಿವಾಹಪಕ್ಷದವರಿಂದ ಉದಾಹರಿಸಲ್ಪಟ್ಟ ನಿಷೇಧಕ ವಚನಗಳನ್ನು ಅಸತ್ಯವೆಂದು ಹೇಳಲು ಮಾರ್ಗವಿಲ್ಲ. ಹಾಗೆಯೇ ಬಾಲ್ಯವಿವಾಹಪಕ್ಷದವರು ಋತುಮತೀವಿವಾಹಪರವಾದ ವಚನಗಳು ಸುಳ್ಳೆಂದು ತಿರಸ್ಕರಿಸಲಾಸ್ಪದವಿಲ್ಲ. ಆ ಯೆರಡುಬಗೆಯ ವಚನಗಳನ್ನೂ ಉಭಯಪಕ್ಷದವರೂ ಸ್ವೀಕರಿಸಬೇಕು.

ಆಕ್ಷೇಪ ೨.

ನಿಮ್ಮ ಅರ್ಥವು ತಪ್ಪು.

ನೀವು ಶಾಸ್ತ್ರವಚನಗಳಿಗೆ ಹೇಳಿರುವ ಅರ್ಥವು ಸರಿಯಲ್ಲ. ತರ್ಕ ವ್ಯಾಕರಣ ಮೀಮಾಂಸಾದಿಗಳನ್ನನುಸರಿಸಿ ಶಾಸ್ತ್ರವಚನಗಳಿಗೆ ಪರಸ್ಪರ ವಿರೋಧವಿಲ್ಲದಂತೆ ಅರ್ಥಮಾಡಬೇಕು. ಋತುಮತೀವಿವಾಹವಾಗಬಹುದೆಂದು ನೀವು ಅರ್ಥಮಾಡಿದರೆ, ನಿಸ್ಸಂದೇಹವಾಗಿ ಆದಾಗಕೂಡದು.—ಬಾಲ್ಯವಿವಾಹವೇ ಆಗಬೇಕೆಂದು ಘಂಟಾಘೋಷವಾಗಿ ಹೇಳುತ್ತಿರುವ ಅನೇಕ ಶಾಸ್ತ್ರವಚನಗಳಿಗೆ ವಿರೋಧಬರುತ್ತದೆ. ಆದುದರಿಂದ ನಿಮ್ಮ ಅರ್ಥವು ತಪ್ಪು. ನೀವು ಉದಾಹರಿಸಿರುವ ವಚನಗಳಿಗೆಲ್ಲ ಬಾಲ್ಯವಿವಾಹಪರವಾಗಿಯೇ ಅರ್ಥ ಮಾಡಬೇಕು.

ಉತ್ತರ.—ನಾವೂ ತರ್ಕ ವ್ಯಾಕರಣ ಮೀಮಾಂಸಾದಿಗಳ ಆಧಾರದಮೇಲೆಯೇ ಅರ್ಥಮಾಡಿರುವೆವು. ನೀವು ಯಾವ ಆಧಾರಗಳಮೇಲೆ ಅರ್ಥಮಾಡುವಿರೋ, ನಾವೂ ಆ ಆಧಾರಗಳಮೇಲೇ ಅರ್ಥಮಾಡುವೆವು. ನಮ್ಮ ಅರ್ಥವು ತಪ್ಪೆಂದು ಹೇಳಲಾಸ್ಪದವಿಲ್ಲ. ನಾವು ಮೊದಲು ತೋರಿಸಿರುವಂತೆ ಋತುಮತೀ

ವಿವಾಹಪರವಾದ ಶಾಸ್ತ್ರವಚನಗಳು ಇದ್ದೇ ಇರುವುವು. ಹೀಗಿರುತ್ತಾ ನಮ್ಮ ಅರ್ಥವು ಹೇಗೆ ತಪ್ಪಾಗುವುದು? ನೀವು ತಪ್ಪೆಂದು ಹೇಳುವಮಾತೇ ತಪ್ಪು. ಎಲ್ಲಾ ವಿಷಯಗಳಲ್ಲಿಯೂ ಎಲ್ಲಾ ಶಾಸ್ತ್ರಗ್ರಂಥಗಳಿಗೆ ಏಕರೀತಿಯಾದ ಅರ್ಥಗಳನ್ನು ಕಲ್ಪಿಸಲು ಸಾಧ್ಯವಿಲ್ಲ. ಅವು ಅನೇಕವಿಷಯಗಳಲ್ಲಿ ವಿರೋಧಾರ್ಥಗಳನ್ನು ಬೋಧಿಸುವಂಥವಾಗಿಯೇ ಇರುವುವು. ಶಾಸ್ತ್ರವಚನಗಳಿಗೆ ಪರಸ್ಪರ ವಿರೋಧವಿರುವುದೆಂದು ಶಾಸ್ತ್ರಕಾರರೇ ಒಪ್ಪಿಕೊಂಡಿರುವರು. ಹೀಗಿರುತ್ತಾ ವಿರುದ್ಧವಾದ ಬೇರೆಬೇರೆ ಶಾಸ್ತ್ರವಚನಗಳಿಗೆಲ್ಲಾ ವಿರೋಧವಿಲ್ಲದಂತೆ ಏಕರೀತಿಯಾದ ಅರ್ಥಗಳನ್ನು ಕಲ್ಪಿಸುವುದು ಅಸಾಧ್ಯ.

ಒಂದುವೇಳೆ ಹಾಗೆ ಕಲ್ಪಿಸುವ ಪಕ್ಷದಲ್ಲಿ ಎಲ್ಲಾ ಅರ್ಥಗಳನ್ನೂ ಅನೃತುಮತೀಪರವಾಗಿ ಏತಕ್ಕೆ ಕಲ್ಪಿಸಬೇಕು? ಋತುಮತೀಪರವಾಗಿ ಏತಕ್ಕೆ ಕಲ್ಪಿಸಬಾರದು? ನಮ್ಮ ಅರ್ಥವು ತಪ್ಪೆಂದು ನೀವು ಹೇಳುವುದರಿಂದಲೂ ನಿಮ್ಮ ಅರ್ಥವು ತಪ್ಪೆಂದು ನಾವು ಹೇಳುವುದರಿಂದಲೂ ಯಾವ ವ್ಯವಸ್ಥೆಯೂ ಆಗುವುದಿಲ್ಲ. ಆದುದರಿಂದ ಪಕ್ಷಪಾತವಿಲ್ಲದೆ ಯಾವಯಾವ ವಚನಗಳಿಗೆ ಯಾವಯಾವ ಅರ್ಥಗಳು ಸಹಜವಾಗಿವೆಯೋ ಆಯಾ ಅರ್ಥಗಳನ್ನೇ ಹೇಳುವುದು ಉಚಿತವಾಗಿದೆ. ಬಾಲ್ಯವಿವಾಹಪರವಾದ ವಚನಗಳಿರುವುವೆಂದು ನಾವು ಒಪ್ಪಿಕೊಳ್ಳುವೆವು. ಅವುಗಳ ಆ ಅರ್ಥವು ತಪ್ಪು, ಅವಕ್ಕೆ ಋತುಮತೀವಿವಾಹಪರವಾಗಿ ಅರ್ಥವನ್ನು ಕಲ್ಪಿಸಬೇಕೆಂದು ನಾವು ಹೇಳುವುದಿಲ್ಲ. ಇವಲ್ಲದೆ ಋತುಮತೀವಿವಾಹಪರವಾದ ಶಾಸ್ತ್ರವಚನಗಳೂ ಇರುವುವು. ಅವನ್ನು ನೀವೂ ಯಥಾರೀತಿಯಲ್ಲಿ ಒಪ್ಪತಕ್ಕುದು. ಅವುಗಳ ಅರ್ಥವು ತಪ್ಪೆಂದು ಹೇಳಲವಕಾಶವಿಲ್ಲ. ಋತುಮತೀವಿವಾಹಪರವಾದ ಶಾಸ್ತ್ರವಚನಗಳಿದ್ದಾಗ್ಯೂ, ಅವಿಲ್ಲವೆಂದು ಹೇಳಿದರೆ ಅನೃತದೋಷಕ್ಕೆ ಗುರಿಯಾಗಬೇಕಾಗುವುದು.

ಆಕ್ಷೇಪ ೩.

ಋತುಮತೀವಿವಾಹವು ಕಲಿಯುಗನಿಷಿದ್ಧ.

ಋತುಮತೀವಿವಾಹವು ಯುಗಾಂತರವಿಷಯವೇ ಹೊರತು ಕಲಿಯುಗಕ್ಕೆ ಸಂಬಂಧಪಟ್ಟುದಲ್ಲ. ಪರಾಶರಸ್ಮೃತಿಯು ಕಲಿಯುಗಕ್ಕೆ ಮುಖ್ಯ ಪ್ರಮಾಣವಾಗಿರುವುದರಿಂದಲೂ ಪರಾಶರ ಮಾಧವೀಯದಲ್ಲಿ, ಋತುಮತೀವಿವಾಹವು ನಿಷೇಧಿಸಲ್ಪಟ್ಟಿರುವುದರಿಂದಲೂ ಕಲಿಯುಗದಲ್ಲಿ ಋತುಮತೀವಿವಾಹವನ್ನಾಚರಿಸಲಾಗುವುದಿಲ್ಲ. ಇದಲ್ಲದೆ ಕಲಿವರ್ಜನೀಯ ಧರ್ಮಗಳ ಪಟ್ಟಿಯಲ್ಲಿ ದೀರ್ಘಕಾಲ ಬ್ರಹ್ಮಚರ್ಯವೂ ಕೂಡದೆಂದು ಉಕ್ತವಾಗಿರುವುದರಿಂದಲೂ ಕಲಿಯುಗದಲ್ಲಿ ಋತುಮತೀ ವಿವಾಹಕ್ಕೆ ಅವಕಾಶವಿಲ್ಲ.

ಉತ್ತರ.—ಪರಾಶರಮಾಧವೀಯದಲ್ಲಿ ಋತುಮತೀವಿವಾಹವು ನಿಷಿದ್ಧವೆಂದು ಆಪಾತತಃ ತೋರಿದಾಗ್ಯೂ ಬೃಹತ್ಪರಾಶರಸ್ಮೃತಿಯಲ್ಲಿ, ನಾವು ಮೇಲೆ ಕಾಣಿಸಿರುವಪ್ರಕಾರ ದ್ವಿಜಸ್ತ್ರೀಯರಿಗೆ ಸ್ವಯಂವರವೂ ಗಾಂಧರ್ವವಿವಾಹವೂ ಯೌವನ

ದಲ್ಲಿ ಮದುವೆಯೂ ಹೇಳಲ್ಪಟ್ಟಿವೆ. ಮತ್ತು ಅಲ್ಲಿ ಕಾನೀನ ಸಹೋಢ ಪುತ್ರರೂ ಸ್ವೀಕೃತರಾಗಿರುವರು. ಇದಲ್ಲದೆ ಅಲ್ಲಿ ಕಾಣಿಸಿರುವ ಕನ್ಯಾಲಕ್ಷಣವನ್ನು ಪರ್ಯಾಲೋಚಿಸಿದರೂ ಋತುಮತೀ ವಿವಾಹವು ಸೂಚಿತವಾಗುವುದು. ಪರಾಶರ ಧರ್ಮಶಾಸ್ತ್ರದಲ್ಲಿಯೂ ಕಾನೀನನು ಸ್ವೀಕೃತನಾಗಿರುವನು. ಇದಲ್ಲದೆ ಪರಾಶರ ಮಾಧವೀಯದಲ್ಲಿಯೂ ಕೂಡ, ಮಾಧವ ವ್ಯಾಖ್ಯಾನದಿಂದ ದ್ವಾದಶವಿಧ ಪುತ್ರರು ಉಪಲಕ್ಷಿಸಲ್ಪಟ್ಟಿರುವರೆಂದು ವ್ಯಕ್ತವಾಗುತ್ತದೆ. ಹೀಗಿರುವುದರಿಂದ ಪರಾಶರ ವಚನವು ಒಂದುಕಡೆಯಲ್ಲಿ ಋತುಮತೀವಿವಾಹ ನಿಷೇಧಕವಾಗಿಯೂ, ಬೇರೆ ಕಡೆಗಳಲ್ಲಿ ಋತುಮತೀ ವಿವಾಹಾನುಮೋದಕವಾಗಿಯೂ ಇರುವಂತೆ ತೋರುತ್ತದೆ.

ಇಂಥ ಸಂದರ್ಭದಲ್ಲಿ ಋತುಮತೀವಿವಾಹವು ಕಲಿಯುಗದಲ್ಲಿ ನಿಷಿದ್ಧವೆಂದು ಹೇಗೆ ಹೇಳಲಾಗುವುದು? ಪರಾಶರ ಋಷಿಯು ಅನುಮೋದಕ ವಚನಗಳನ್ನು ತಿರಸ್ಕರಿಸಿ ನಿಷೇಧಕ ವಚನವನ್ನು ಏತಕ್ಕೆ ಪುರಸ್ಕರಿಸಬೇಕು? ನಿಷೇಧಕ ವಚನವನ್ನು ತಿರಸ್ಕರಿಸಿ ಅನುಮೋದಕ ವಚನಗಳನ್ನೇ ಏತಕ್ಕೆ ಪುರಸ್ಕರಿಸಬಾರದು? ಪರಾಶರ ವಚನಗಳು ಎರಡುಪ್ರಕಾರವಾಗಿಯೂ ಇರುವುದರಿಂದ ಋತುಮತೀವಿವಾಹವು ಕಲಿಯುಗದಲ್ಲಿ ನಿಷಿದ್ಧವೆಂದು ಹೇಳಲಾಗುವುದಿಲ್ಲ.

ಇದಲ್ಲದೆ ಕಲಿಯುಗದಲ್ಲಿಯೂ ಕೂಡ ಆಪಸ್ತಂಬ ಬೋಧಾಯನಾದಿಗಳ ಗೃಹ್ಯಸೂತ್ರಗಳನ್ನೇ ಅನುಸರಿಸಿ ದ್ವಿಜರು ವಿವಾಹಕರ್ಮವನ್ನಾಚರಿಸುವರು. ಈ ಸೂತ್ರಗಳಲ್ಲಿ ಋತುಮತೀವಿವಾಹವು ಬೋಧಿತವಾಗಿರುವುದೆಂದು ನಾವು ಮೊದಲೇ ತೋರಿಸಿಕೊಟ್ಟಿರುವೆವು. ಋತುಮತೀವಿವಾಹವು ಕಲಿಯುಗಕ್ಕೆ ನಿಷಿದ್ಧವಾದ ಪಕ್ಷದಲ್ಲಿ, ಅಂಥ ನಿಷಿದ್ಧ ಕರ್ಮಬೋಧಕಗಳಾದ ಆ ಸೂತ್ರಗಳನ್ನು ದ್ವಿಜರು ಏತಕ್ಕೆ ಅನುಸರಿಸುವರು? ಆ ಸೂತ್ರಗಳನ್ನು ಏತಕ್ಕೆ ತ್ಯಜಿಸಲಿಲ್ಲ?

ಕಲಿವರ್ಜನೀಯ ಧರ್ಮಗಳ ಪಟ್ಟಿಯಲ್ಲಿ ದೀರ್ಘಕಾಲ ಬ್ರಹ್ಮಚರ್ಯವು ಕೂಡದೆಂದು ಉಕ್ತವಾಗಿರುವುದು ಸತ್ಯ. ಆದರೆ ಇದರಿಂದ ಋತುಮತೀವಿವಾಹವು ಹೇಗೆ ನಿಷಿದ್ಧವಾಗುವುದು? ದೀರ್ಘಕಾಲ ಬ್ರಹ್ಮಚರ್ಯವು ಗಂಡಸರಿಗೂ ಹೆಂಗಸರಿಗೂ ಸಹ ಕೂಡದೆಂದು ಬೋಧಿತವಾಗುತ್ತದೆ. ಆದರೆ ಗಂಡಸರಲ್ಲಿ ಅನೇಕರು ಈಗಿನಕಾಲದಲ್ಲಿ ಇಪ್ಪತ್ತು—ಇಪ್ಪತ್ತೈದು ವರ್ಷಗಳಾದ ಮೇಲೆಯೂ ಪ್ರಥಮವಿವಾಹ ಮಾಡಿಕೊಳ್ಳುವುದನ್ನು ನಾವು ನೋಡುತ್ತಿರುವೆವು. ಈ ವಯಸ್ಸು ಗಂಡಸರ ವಿಷಯದಲ್ಲಿ ದೀರ್ಘಕಾಲವಲ್ಲದಿದ್ದರೆ, ಹೆಂಗಸರ ಪಕ್ಷದಲ್ಲಿ ಹೇಗೆ ದೀರ್ಘಕಾಲವಾಗುವುದು? ಇದಲ್ಲದೆ ಗಂಡಸರು ಯಾವಜ್ಜೀವವೂ ಮದುವೆಯಿಲ್ಲದೇ ಇದ್ದಾಗ್ಯೂ ಬಹಿಷ್ಕೃತರಾಗುವುದಿಲ್ಲ. ಹೆಂಗಸರೂ ಏತಕ್ಕೆ ಮದುವೆಯಿಲ್ಲದೆ ಇರಬಾರದು?.

ಮತ್ತು ಕಲಿವರ್ಜನೀಯ ಧರ್ಮಗಳ ಪಟ್ಟಿಯಲ್ಲಿ ಸನ್ಯಾಸವೂ ಕೂಡದೆಂದು ಉಕ್ತವಾಗಿದೆ. ಆದರೆ ಇದನ್ನು ಲಕ್ಷ್ಯಕ್ಕೆ ತರದೆ ಪುರುಷರಲ್ಲಿ ಅನೇಕರು ಕಲಿಯುಗ

ದಲ್ಲಿಯೂ ಹೇಗೆ ಸನ್ಯಾಸಿಗಳಾಗುವರು? ಅವರಲ್ಲಿಯೂ ಕೆಲವರು ಬ್ರಹ್ಮಚರ್ಯಾಶ್ರಮದಿಂದಲೇ ಸನ್ಯಾಸಿಗಳಾಗುವರು. ಹೀಗೆ ಕಲಿಯುಗ ನಿಷಿದ್ಧವಾದ ಧರ್ಮವನ್ನು ಇವರು ಹೇಗೆ ಆಚರಿಸುವರು? ಇದಕ್ಕೆ ವಿಪಕ್ಷದವರ ಉತ್ತರವೇನು? ಬೇರೆ ಶಾಸ್ತ್ರವಚನಗಳ ಆಧಾರದಮೇಲೆ ಗಂಡಸರು ನೈಷ್ಠಿಕ ಬ್ರಹ್ಮಚಾರಿಗಳೂ ಸನ್ಯಾಸಿಗಳೂ ಆಗಬಹುದೆಂದು ಉತ್ತರಹೇಳುವರು. ಹಾಗಾದರೆ ಸ್ತ್ರೀಯರಿಗೂಕೂಡ ವಿವಾಹವಿಲ್ಲದೆ ಇರುವುದಕ್ಕೂ ಸನ್ಯಾಸಿನಿಯರಾಗುವುದಕ್ಕೂ ಬೇರೆ ವಚನಗಳ ಆಧಾರವಿರುವುದರಿಂದ, ಅವರೂ ಕೂಡ ಗಂಡಸರಂತೆಯೇ ಆಚರಿಸಬಹುದಾಗಿದೆ.

ಮೇಲಿನ ವಿಚಾರದಿಂದ, ದೀರ್ಘಕಾಲ ಬ್ರಹ್ಮಚರ್ಯವೂ ಕೂಡದು ಎಂಬ ವಚನವು ಪುರುಷರಿಗೆ ಇಪ್ಪತ್ತು ವರ್ಷಗಳಮೇಲೆ ವಿವಾಹ ಮಾಡಿಕೊಳ್ಳಲಿಕ್ಕೂ ಅಥವಾ ನೈಷ್ಠಿಕ ಬ್ರಹ್ಮಚಾರಿಗಳಾಗಲಿಕ್ಕೂ ಸನ್ಯಾಸಿಗಳಾಗಲಿಕ್ಕೂ ಹೇಗೆ ಬಾಧಿಸುವುದಿಲ್ಲವೋ, ಹಾಗೆಯೇ ಸ್ತ್ರೀಯರಿಗೂ ಅದೇರೀತಿಯಲ್ಲಿ ಆಚರಿಸಲಿಕ್ಕೆ ಆ ವಚನವು ಬಾಧಕವಾಗುವುದಿಲ್ಲವೆಂಬುದು ವ್ಯಕ್ತವಾಗುತ್ತದೆ. ಆದಪ್ರಯುಕ್ತ ಋತುಮತೀವಿವಾಹವು ಕಲಿಯುಗ ನಿಷಿದ್ಧವೆಂದು ಹೇಳಲು ಅವಕಾಶವಿಲ್ಲ.

ಇದಲ್ಲದೆ ಚಾಣಕ್ಯ, ಕೌಟಿಲ್ಯ, ಅಥವಾ ವಿಷ್ಣುಗುಪ್ತನೆಂಬ ಬ್ರಾಹ್ಮಣನು ಕಲಿಯುಗದಲ್ಲಿ ಈಗ್ಗೆ ಬಹುವರ್ಷಗಳ ಹಿಂದೆ ಜೀವಿಸುತ್ತಿದ್ದನೆಂಬುದು ಪ್ರಸಿದ್ಧವಾದ ಐತಿಹಾಸಿಕವಿಷಯವಾಗಿದೆ. ಆತನು ರಚಿಸಿರುವ ಅರ್ಥಶಾಸ್ತ್ರವೆಂಬ ಗ್ರಂಥದಿಂದ ಆಗಿನಕಾಲದಲ್ಲಿ ಸರ್ವವರ್ಣದವರಲ್ಲಿಯೂ ಋತುಮತೀವಿವಾಹವು ಆಚರಣೆಯಲ್ಲಿದ್ದಿತೆಂದು ಗೊತ್ತಾಗುತ್ತದೆ, ಹೇಗೆಂದರೆ;—

ಅರ್ಥಶಾಸ್ತ್ರ, ೩ ನೆಯ ಅಧಿಕರಣ, ೧೫ ನೆಯ ಅಧ್ಯಾಯ.—

ಕನ್ಯಾದೋಷಮೌಪಶಾಯಿಕಮನಾಖ್ಯಾಯ ಪ್ರಯಚ್ಛತಃ ಕನ್ಯಾಂ ಷಣ್ಣವತಿರ್ದಂಡಃ ಶುಲ್ಕ ಸ್ತ್ರೀಧನಪ್ರತಿದಾನಂ ಚ ॥

ಅರ್ಥಶಾಸ್ತ್ರ, ೪ ನೆಯ ಅಧಿಕರಣ, ೧೨ ನೆಯ ಅಧ್ಯಾಯ.

ಸಪ್ತಾರ್ತವಪ್ರಜಾತಾಂ ವರಣಾಮೂರ್ಧ್ವಮಲಭಮಾನಾಂ ಪ್ರಕೃತ್ಯ ಪ್ರಾಕಾಮೀ ಸ್ಯಾತ್ । ನ ಚ ಪಿತುರಪಹೀನಂ ದದ್ಯಾತ್ ಋತುಪ್ರತಿರೋಧಿಭಿಃ ಸ್ವಾಮ್ಯಾದಪಕ್ರಾಮತಿ । ತ್ರಿವರ್ಷಪ್ರಜಾತಾರ್ತವಾಯಾಸ್ತುಲ್ಯೋ ಗಂತುಮದೋಷಃ । ತತಃ ಪರಮತುಲ್ಯೋಽಪ್ಯನಲಂಕೃತಾಯಾಃ । ಪಿತೃದ್ರವ್ಯಾದಾನೇ ಸ್ತೇಯಂ ಭಜೇತ ॥

ಅರ್ಥ.—ಅನ್ಯನಹತ್ತಿರ ಮಲಗಿದ ಎಂದರೆ ಸಂಭೋಗಮಾಡಿದ ಕನ್ಯಾದೋಷವನ್ನು ತಿಳಿಸದೆ ಅವಳನ್ನು ಮತ್ತೊಬ್ಬನಿಗೆ ಮದುವೆಮಾಡಿಕೊಟ್ಟವನಿಗೆ ೯೬ ಹಣಗಳನ್ನು ದಂಡಹಾಕಬೇಕು ಮತ್ತು ಶುಲ್ಕವನ್ನೂ ಸ್ತ್ರೀಧನವನ್ನೂ ಅವನಿಂದ

ಹಿಂದಕ್ಕೆ ಕೊಡಿಸಬೇಕು. ಏಳುಸಾರಿ ಮುಟ್ಟಾದರೂ ಮದುವೆಯಿಲ್ಲದವಳನ್ನು ಸ್ವೀಕರಿಸಲು ಯಾವನಾದರೂ ಸ್ವತಂತ್ರನಾಗಿರುವನು. ಅವನು ಅವಳ ತಂದೆಗೆ ಪ್ರತಿಫಲವನ್ನು ಕೊಡತಕ್ಕುದಿಲ್ಲ. ಋತುಗಳನ್ನು ತಡೆದುದರಿಂದ ತಂದೆಯು ಸ್ವಾಮಿತ್ವವನ್ನು ಕಳೆದುಕೊಳ್ಳುವನು. ಋತುಮತಿಯಾಗಿ ಮೂರು ವರ್ಷಗಳಾದವಳನ್ನು ಸಮಾನಜಾತಿಯುವನು ವರಿಸಿದರೆ ದೋಷವಿಲ್ಲ. ಮೂರುವರ್ಷಗಳಾದ ಬಳಿಕ ಹೀನಜಾತಿಯುವನೂಕೂಡ ಅವಳನ್ನು ವರಿಸಬಹುದು. ಆದರೆ ಅವಳು ತವರುಮನೆಯ ಒಡವೆಗಳಿಂದಲಂಕೃತಳಾಗಿರಕೂಡದು. ತಂದೆಯ ದ್ರವ್ಯವನ್ನು ತೆಗೆದುಕೊಂಡರೆ ಕಳ್ಳತನವಾಗುತ್ತದೆ.

ಹೀಗೆ ಮೇಲಿನ ವಾಕ್ಯಗಳಿಂದ, ಕಲಿಯುಗದಲ್ಲಿಯೂ ನಮ್ಮ ಪೂರ್ವಿಕರಾದ ಚಾಣಕ್ಯನಕಾಲದ ಜನರು ಋತುಮತೀವಿವಾಹವನ್ನು ಆಚರಿಸುತ್ತಿದ್ದರೆಂದು ವ್ಯಕ್ತವಾಗುತ್ತದೆ. ಕಾರಣಾಂತರದಿಂದ ಈಚೆಗೆ ತಪ್ಪಿಹೋಗಿರುವ ಆ ವಿವಾಹವನ್ನು ಪುನಃ ಈಗ ಆಚರಣೆಗೆ ತರಲು ಬಾಧಕವೇನೂ ಇರುವುದಿಲ್ಲ.

ಆಕ್ಷೇಪ ೪.

ಆಚಾರವಿಲ್ಲ.

ಮತ್ತು ಕೆಲವರು ಹೀಗೆ ಹೇಳುವರು :—

ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪತೇ ।
ಆಚಾರಪ್ರಭವೋ ಧರ್ಮೋ ಧರ್ಮಸ್ಯ ಪ್ರಭುರಚ್ಯುತಃ ॥

ಭಾರತ.

ಅರ್ಥ—ಎಲ್ಲಾ ಆಗಮಗಳಲ್ಲಿಯೂ ಆಚಾರವು ಮೊದಲು ಎಣಿಸಲ್ಪಡುತ್ತದೆ. ಆಚಾರದಿಂದ ಧರ್ಮವು ಹುಟ್ಟುತ್ತದೆ. ಧರ್ಮಕ್ಕೆ ಪ್ರಭುವು ಅಚ್ಯುತನು.

ಆಚಾರಃ ಪರಮೋ ಧರ್ಮಃ ಸರ್ವೇಷಾಮಿತಿ ನಿಶ್ಚಯಃ ॥

ವಾಸಿಷ್ಠಸ್ಮೃತಿ.

ಅರ್ಥ—ಆಚಾರವು ಎಲ್ಲರಿಗೂ ಪರಮಧರ್ಮವಾಗಿರುವುದೆಂದು ನಿರ್ಣಯವಾಗಿರುವುದು.

ಧರ್ಮಜ್ಞಸಮಯಃ ಪ್ರಮಾಣಂ ॥

ಆಪಸ್ತಂಬ ಧರ್ಮಸೂತ್ರ.

ಅರ್ಥ—ಧರ್ಮಗಳನ್ನು ಬಲ್ಲವರ ಸಮಯವು ಎಂದರೆ ಆಚಾರವು ಪ್ರಮಾಣವಾಗಿರುವುದು.

ದೇಶೇದೇಶೇ ಯಆಚಾರಃ ಪಾರಂಪರ್ಯಕ್ರಮಾಗತಃ ।
ಸ ಶಾಸ್ತ್ರಾರ್ಥಬಲಾನ್ನೈವ ಲಂಘನೀಯಃ ಕದಾಚನ ॥

ಅಸಹಾಯಭಾಷ್ಯ.

ಅರ್ಥ—ದೇಶದೇಶದಲ್ಲಿಯೂ ಯಾವ ಆಚಾರವು ಪರಂಪರೆಯಾಗಿ ಕ್ರಮವಾಗಿ ಬಂದಿರುತ್ತದೋ, ಅದು ಶಾಸ್ತ್ರಾರ್ಥಬಲದಿಂದಲೇ ಎಂದಿಗೂ ಅತಿಕ್ರಮಿಸಲ್ಪಡತಕ್ಕದಲ್ಲ.

ಶಾಸ್ತ್ರಕರ್ತಾ ಗ್ರಂಥಕರ್ತಾ ಯದ್ಯಪಿ ಸ್ಯಾತ್ ಷಡಂಗವಿತ್ ।
ಕಾಲದೇಶೋಚಿತಂ ಕರ್ಮ ಯಸ್ತ್ಯಕ್ತ್ವಾನ್ಯವಾಚರೇತ್ ।
ಕಾಮಾದ್ವಾ ಯದಿ ವಾ ಮೋಹಾತ್ಸ ಪ್ರೇತೋ ಜಾಯತೇ ನರಃ ॥

ಸ್ಕಾಂದ, ಚಮತ್ಕಾರಖಂಡ.

ಅರ್ಥ—ಶಾಸ್ತ್ರಕರ್ತನಾದರೂ ಗ್ರಂಥಗರ್ತನಾದರೂ ಷಡಂಗಜ್ಞಾನಿಯಾದರೂ ಕಾಲದೇಶೋಚಿತವಾದ ಕರ್ಮವನ್ನು ಬಿಟ್ಟು ತಿಳಿದಾಗಲಿ ತಿಳಿಯದೆ ಆಗಲಿ ಇತರ ಧರ್ಮಗಳನ್ನಾಚರಿಸಿದರೆ ಅಂಥವನು ಪ್ರೇತಜನ್ಮವನ್ನು ಹೊಂದುವನು.

ಇತ್ಯಾದಿವಚನಗಳಿಂದ ನಮಗೆ ಆಚಾರವು ಮುಖ್ಯವಾದುದೆಂಬುದು ವ್ಯಕ್ತವಾಗುವುದು. ಋತುಮತೀವಿವಾಹಕ್ಕೆ ಆಚಾರವಿಲ್ಲ. ಆದುದರಿಂದ ಅದನ್ನು ಮಾಡಲಾಗುವುದಿಲ್ಲ. ಹೀಗೆಂದು ವಾದಿಸುವರು.

ಉತ್ತರ—ಇಲ್ಲಿ ಆಚಾರವೆಂದರೆ ಶಿಷ್ಟಾಚಾರ ಅಥವಾ ಸದಾಚಾರವೇ ಹೊರತು ದುರಾಚಾರವಲ್ಲ. ಶಿಷ್ಟರು ನಡೆಸಿದ ಅಥವಾ ಹೇಳಿದ ಆಚಾರವು ಶಿಷ್ಟಾಚಾರವೆನ್ನಿಸುವುದು. ಹಾಗೆಯೇ ಸಾಧುಗಳು ನಡೆಸಿದ ಅಥವಾ ಹೇಳಿದ ಆಚಾರವು ಸದಾಚಾರವೆನಿಸುವುದು. ವೇದಾದಿಶಾಸ್ತ್ರಗಳನ್ನು ಬಲ್ಲವರಾಗಿ ಶಾಸ್ತ್ರೋಕ್ತಧರ್ಮಗಳನ್ನು ಮಾಡುವವರು ಶಿಷ್ಟರು ಅಥವಾ ಸಾಧುಗಳು ಎನ್ನಿಸುವರು. ಆದುದರಿಂದ ಶಿಷ್ಟಾಚಾರ ಅಥವಾ ಸದಾಚಾರವು ಶಾಸ್ತ್ರಾನುಸಾರವಾದುದಾಗಿಯೂ ಶಾಸ್ತ್ರಕ್ಕೆ ಅವಿರೋಧವಾಗಿಯೂ ಇರಬೇಕು. ಶಾಸ್ತ್ರವಿರುದ್ಧವಾದ ಆಚಾರವು ದುರಾಚಾರವಾಗುವುದು.

ವೇದಗಳೇ ಸಕಲಧರ್ಮಗಳಿಗೂ ಮೂಲವಾಗಿಯೂ ಶ್ರೇಷ್ಠಪ್ರಮಾಣವಾಗಿಯೂ ಇರುವುವು. ವೇದಮೂಲವನ್ನನುಸರಿಸಿಯೇ ಸ್ಮೃತ್ಯಾದಿ ಇತರ ಶಾಸ್ತ್ರಗಳುಂಟಾಗಿರುವುವು. ಆದುದರಿಂದ ಕಾರ್ಯಾಕಾರ್ಯನಿರ್ಣಯಕ್ಕೆ ವೇದಶಾಸ್ತ್ರವೇ ಮುಖ್ಯಪ್ರಮಾಣವಾಗಿರುವುದು. ಶಾಸ್ತ್ರಪ್ರಮಾಣಸಿಕ್ಕದ ವಿಷಯಗಳಲ್ಲಿ ಶಿಷ್ಟಾಚಾರ ಅಥವಾ ಸದಾಚಾರವು ಪ್ರಮಾಣವಾಗುವುದು. ಎಂದರೆ—ಶಾಸ್ತ್ರಪ್ರಮಾಣವು ದೊರಕದಿದ್ದಾಗ ಶಿಷ್ಟಾಚಾರ ಅಥವಾ ಸದಾಚಾರವನ್ನನುಸರಿಸಿ ನಡೆಯ

ತಕ್ಕುದು. ಕೆಳಗೆ ಉದಾಹರಿಸಲ್ಪಟ್ಟ ವಚನಗಳು ಇದೇ ಅರ್ಥವನ್ನು ದೃಢೀಕರಿಸುವುವು.

ವೃದ್ಧಗೌತಮ, ಅಧ್ಯಾಯ ೧೪.

ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪ್ರಥಮಂ ಶ್ರುತಿಃ ।
ದ್ವಿತೀಯಂ ತು ಸ್ವಶಾಸ್ತ್ರಾಣಿ ತೃತೀಯಂ ಲೋಕಸಂಗ್ರಹಃ ॥

ಅರ್ಥ—ದರ್ಮಜಿಜ್ಞಾಸಮಾಡುವವರಿಗೆ ಶ್ರುತಿಯು ಮೊದಲನೆಯ ಪ್ರಮಾಣವು, ಧರ್ಮಶಾಸ್ತ್ರಗಳು ಎರಡನೆಯವು, ಲೋಕಸಂಗಹವು ಮೂರನೆಯದು. ಇಲ್ಲಿ ಲೋಕಸಂಗ್ರಹವೆಂದರೆ ಆಚಾರವೆಂದರ್ಥ.

ಮನುಸ್ಮೃತಿ, ಅಧ್ಯಾಯ ೨.

ವೇದೋಽಖಿಲೋ ಧರ್ಮಮೂಲಂ ಸ್ಮೃತಿಶೀಲೇ ಚ ತದ್ವಿದಾಂ ।
ಆಚಾರಶ್ಚೈವ ಸಾಧೂನಾಮಾತ್ಮನಸ್ತುಷ್ಟಿರೇವ ಚ ॥೬॥
ಧರ್ಮಂ ಜಿಜ್ಞಾಸಮಾನಾನಾಂ ಪ್ರಮಾಣಂ ಪರಮಂ ಶ್ರುತಿಃ ॥೧೩॥

ಅಧ್ಯಾಯ ೧೨.

ಅನಾಮ್ನಾತೇಷು ಧರ್ಮೇಷು ಕಥಂ ಸ್ಯಾದಿತಿ ಚೇದ್ಭವೇತ್ ।
ಯಂ ಶಿಷ್ಟಾಬ್ರಾಹ್ಮಣಾಬ್ರೂಯುಃ ಸ ಧರ್ಮಃ ಸ್ಯಾದಶಂಕಿತಃ ॥೧೦೮॥
ಧರ್ಮೇಣಾಧಿಗತೋ ಯೈಸ್ತು ವೇದಃ ಸಪರಿಬೃಂಹಣಃ ।
ತೇ ಶಿಷ್ಟಾಬ್ರಾಹ್ಮಣಾಜ್ಞೇಯಾಃ ಶ್ರುತಿಪ್ರತ್ಯಕ್ಷಹೇತವಃ ॥೧೦೯॥

ಅರ್ಥ—ಸಕಲವೇದವೂ ಧರ್ಮಮೂಲವಾಗಿರುವುದು. ಮತ್ತು ವೇದವನ್ನು ಬಲ್ಲವರ ಸ್ಮೃತಿಶೀಲಗಳೂ ವೇದವನ್ನು ಬಲ್ಲ ಸಾಧುಗಳ ಆಚಾರವೂ ಆತ್ಮತುಷ್ಟಿಯೂ ಧರ್ಮಮೂಲವಾಗಿರುವುವು. ಧರ್ಮವಿಚಾರ ಮಾಡುವವರಿಗೆ ಶ್ರುತಿಯೇ ಶ್ರೇಷ್ಠವಾದ ಪ್ರಮಾಣವಾಗಿರುವುದು. ಉಕ್ತವಾಗದ ಧರ್ಮಗಳ ವಿಷಯದಲ್ಲಿ ಹೇಗೆಮಾಡಬೇಕೆಂದರೆ, ಅಂಥಸಂದರ್ಭಗಳಲ್ಲಿ ಶಿಷ್ಟರಾದ ಬ್ರಾಹ್ಮಣರು ಹೇಳಿದ್ದೇ ನಿಸ್ಸಂದೇಹವಾಗಿ ಧರ್ಮವಾಗುವುದು. ವಿಧಿಪ್ರಕಾರವಾಗಿ ಅಂಗಗಳ ಸಹಿತವಾಗಿ ವೇದಾಧ್ಯಯನಮಾಡಿ ಶ್ರುತ್ಯರ್ಥವನ್ನು ಪ್ರತ್ಯಕ್ಷವಾಗಿ ಯಾವ ಬ್ರಾಹ್ಮಣರು ಉಪದೇಶಿಸುವರೋ, ಅವರೇ ಶಿಷ್ಟರೆಂದು ತಿಳಿಯಲ್ಪಡತಕ್ಕವರು.

ವಾಯುಪುರಾಣ, ಅಧ್ಯಾಯ ೫೯.

ತಸ್ಮಾತ್ಸ್ಮಾರ್ತಃ ಸ್ಮೃತೋ ಧರ್ಮೋ ವರ್ಣಾಶ್ರಮವಿಭಾಗಜಃ ॥೩೨॥
ಸಏಷ ದ್ವಿವಿಧೋ ಧರ್ಮಃ ಶಿಷ್ಟಾಚಾರಇಹೋಚ್ಯತೇ ॥೩೩॥

ಅರ್ಥ—ಆದುದರಿಂದ ವರ್ಣಾಶ್ರಮ ವಿಭಾಗಗಳಿಂದಾದ ಧರ್ಮವು ಸ್ಮಾರ್ತವೆಂದು ಹೇಳಲ್ಪಟ್ಟಿತು. ಈ ಯೆರಡುವಿಧವಾದ ಸ್ಮಾರ್ತಧರ್ಮವೇ ಇಲ್ಲಿ ಶಿಷ್ಟಾಚಾರವೆಂದು ಕರೆಯಲ್ಪಡುವುದು.

ಮತ್ಸ್ಯಪುರಾಣ, ಅಧ್ಯಾಯ ೧೪೩.

ತಸ್ಮಾತ್ಸ್ಮಾರ್ತಃ ಸ್ಮೃತೋ ಧರ್ಮೋ ವರ್ಣಾಶ್ರಮವಿಭಾಗಶಃ ॥೩೩॥
ಏವಂ ವೈ ದ್ವಿವಿಧೋ ಧರ್ಮಃ ಶಿಷ್ಟಾಚಾರಃ ಸ ಉಚ್ಯತೇ ॥೩೪॥

ಅರ್ಥ—ಆದಕಾರಣ ವರ್ಣಾಶ್ರಮವಿಭಾಗವುಳ್ಳ ಧರ್ಮವು ಸ್ಮಾರ್ತವೆಂದು ಹೇಳಲ್ಪಟ್ಟಿತು. ಈ ದ್ವಿವಿಧ ಧರ್ಮವೇ ಶಿಷ್ಟಾಚಾರವೆಂದು ಕರೆಯಲ್ಪಡುವುದು.

ಇಲ್ಲಿ ಸ್ಮಾರ್ತಧರ್ಮವೆಂದರೆ ಸ್ಮೃತ್ಯುಕ್ತಧರ್ಮವೆಂದರ್ಥವು. ಆದುದರಿಂದ ಸ್ಮೃತಿಗಳಲ್ಲಿ ವಿಹಿತವಾದ ಧರ್ಮವೇ ಶಿಷ್ಟಾಚಾರವೆನ್ನಿಸುವುದು. ಪುನಃ ಈ ಸ್ಮೃತಿಗಳು ವೇದಪ್ರಮಾಣವನ್ನನುಸರಿಸಿದವುಗಳಾಗಿರುವುವು.

ವಾಸಿಷ್ಠಧರ್ಮಶಾಸ್ತ್ರ, ಅಧ್ಯಾಯ ೧.

ಶ್ರುತಿಸ್ಮೃತಿವಿಹಿತೋ ಧರ್ಮಃ ॥೪॥ ತದಲಾಭೇ ಶಿಷ್ಟಾಚಾರಃ ಪ್ರಮಾಣಂ॥ ॥೫॥ ದೇಶಧರ್ಮಜಾತಿಧರ್ಮಕುಲಧರ್ಮಾನ್ ಶ್ರುತ್ಯಭಾವಾದಬ್ರವೀನ್ಮನುಃ ॥೧೭॥

ಅಧ್ಯಾಯ ೬.

ಪಾರಂಪರ್ಯಗತೋ ಯೇಷಾಂವೇದಃ ಸಪರಿಬೃಂಹಣಃ।
ತೇ ಶಿಷ್ಟಬ್ರಾಹ್ಮಣಾಜ್ಞೇಯಾಃ ಶ್ರುತಿಪ್ರತ್ಯಕ್ಷಹೇತವಃ ॥೪೩॥

ಅರ್ಥ—ಧರ್ಮವು ಶ್ರುತಿಸ್ಮೃತಿಗಳಿಂದ ವಿಹಿತವಾಗಿರುವುದು. ಶ್ರುತಿಸ್ಮೃತಿಗಳ ವ್ಯವಸ್ಥೆಯಿಲ್ಲದಾಗ ಶಿಷ್ಟಾಚಾರವು ಪ್ರಮಾಣವಾಗುವುದು. ವೇದವ್ಯವಸ್ಥೆಯಿಲ್ಲದಾಗ ದೇಶಧರ್ಮ ಜಾತಿಧರ್ಮ ಮತ್ತು ಕುಲಧರ್ಮಗಳನ್ನನುಸರಿಸಬಹುದೆಂದು ಮನುವು ಹೇಳಿರುವನು. ಯಾರ ವಂಶದಲ್ಲಿ ಅಂಗಸಹಿತವಾದ ವೇದಗಳು ಪರಂಪರೆಯಾಗಿ ಅಧ್ಯಯನಮಾಡಲ್ಪಡುತ್ತವೋ, ಮತ್ತು ಯಾರು ಶ್ರುತ್ಯರ್ಥವನ್ನು ಪ್ರತ್ಯಕ್ಷವಾಗಿ ಉಪದೇಶಿಸುವರೋ, ಅಂಥ ಬ್ರಾಹ್ಮಣರು ಶಿಷ್ಟರೆನ್ನಿಸುವರು.

ದೇಶ ಜಾತಿ ಕುಲಧರ್ಮಗಳು ಎಂದರೆ ಆಚಾರಗಳೆಂದರ್ಥವು.

ವಿಷ್ಣುಪುರಾಣ, ಅಂಶ ೩, ಅಧ್ಯಾಯ ೧೦,

ಸಪ್ತರ್ಷಯೋಥ ಮನವಃ ಪ್ರಜಾನಾಂ ಪತಯಸ್ತಥಾ।
ಸದಾಚಾರಸ್ಯ ವಕ್ತಾರಃ ಕರ್ತಾರಶ್ಚ ಮಹೀಪತೇ ॥೩॥

ಅರ್ಥ—ಎಲೈ ರಾಜನೆ, ಏಳುಋಷಿಗಳೂ ಮನುಗಳೂ ಪ್ರಜಾಪತಿಗಳೂ ಸದಾಚಾರವನ್ನು ಮಾಡಿದವರಾಗಿಯೂ ಹೇಳಿದವರಾಗಿಯೂ ಇರುವರು.

ಇವರಿಗೆಲ್ಲ ವೇದಗಳೇ ಪ್ರಮಾಣವು.

ಗೌತಮಸ್ಮೃತಿ, ಅಧ್ಯಾಯ ೧.

ವೇದೋ ಧರ್ಮಮೂಲಂ ತದ್ವಿದಾಂ ಚ ಸ್ಮೃತಿಶೀಲೇ ॥

ಅಧ್ಯಾಯ ೧೧.

ದೇಶಜಾತಿಕುಲಧರ್ಮಾಶ್ಚಾಮ್ನಾಯೈರವಿರುದ್ಧಾಃ ಪ್ರಮಾಣಂ ॥

ಅರ್ಥ—ವೇದವೂ ಮತ್ತು ಅದನ್ನು ಬಲ್ಲವರ ಸ್ಮೃತಿಶೀಲಗಳೂ ಧರ್ಮ ಮೂಲಗಳಾಗಿರುವುವು. ದೇಶಜಾತಿ ಕುಲಧರ್ಮಗಳು ವೇದಗಳಿಗೆ ವಿರೋಧವಾಗದಿದ್ದಾಗ ಪ್ರಮಾಣಗಳಾಗುವುವು.

ಬೌಧಾಯನ.

ಯಸ್ಮಿನ್ ದೇಶೇ ಯಆಚಾರಃ ಪಾರಂಪರ್ಯಸ್ಮೃಥೈವ ಚ ।
ಶ್ರುತಿಸ್ಮೃತ್ಯವಿರೋಧೇನ ಸದಾಚಾರಸ್ಸಉಚ್ಯತೇ ॥

ಅರ್ಥ—ಯಾವ ದೇಶದಲ್ಲಿ ಯಾವ ಆಚಾರವು ಶ್ರುತಿಸ್ಮೃತಿಗಳಿಗೆ ವಿರೋಧವಿಲ್ಲದೆ ಪರಂಪರೆಯಾಗಿ ಬಂದಿರುತ್ತದೋ, ಆ ಆಚಾರವು ಸದಾಚಾರವೆಂದು ಹೇಳಲ್ಪಡುವುದು.

ಮಹಾಭಾರತ, ವನಪರ್ವ, ಅಧ್ಯಾಯ ೨೦೭.

ವೇದೋಕ್ತಃ ಪರಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರಃ ।
ಶಿಷ್ಟಾಚಾರಶ್ಚ ಶಿಷ್ಟಾನಾಂ ತ್ರಿವಿಧಂ ಧರ್ಮಲಕ್ಷಣಂ ॥

ಅರ್ಥ.— ವೇದೋಕ್ತವಾದುದು ಶ್ರೇಷ್ಠವಾದ ಧರ್ಮವು, ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟದು ಎರಡನೆಯದು, ಶಿಷ್ಟರ ಶಿಷ್ಟಾಚಾರವು ಮೂರನೆಯದು. ಹೀಗೆ ಧರ್ಮಲಕ್ಷಣವು ಮೂರುವಿಧವಾಗಿರುವುದು.

ಆದುದರಿಂದ ಆಚಾರವು ಶ್ರುತಿಸ್ಮೃತಿಗಳಷ್ಟು ಪ್ರಬಲವಾದ ಪ್ರಮಾಣವಲ್ಲ.

ಯಾಜ್ಞವಲ್ಕ್ಯಸ್ಮೃತಿ ಆಚಾರಾಧ್ಯಾಯ.

ಶ್ರುತಿಃ ಸ್ಮೃತಿಃ ಸದಾಚಾರಃ ಸ್ವಸ್ಯ ಚ ಪ್ರಿಯಮಾತ್ಮನಃ ।
ಸಮ್ಯಕ್ಸಂಕಲ್ಪಜಃ ಕಾಮೋ ಧರ್ಮಮೂಲಮಿದಂ ಸ್ಮೃತಂ ॥೭॥

ವಿಜ್ಞಾನೇಶ್ವರವ್ಯಾಖ್ಯಾನಂ । ಶ್ರುತಿಃ ವೇದಃ, ಸ್ಮೃತಿಃ ಧರ್ಮಶಾಸ್ತ್ರಂ, ಸದಾಚಾರಃ ಸತಾಂ ಶಿಷ್ಟಾನಾಂ ಆಚಾರಃ, ಸ್ವಸ್ಯ ಆತ್ಮನಃ ಪ್ರಿಯಂ ।

ಏತೇ ಧರ್ಮಸ್ಯ ಮೂಲಂ ಪ್ರಮಾಣಂ |
ಏತೇಷಾಂ ವಿರೋಧೇ ಪೂರ್ವಪೂರ್ವಬಲೀಯಸ್ತ್ವಮ್ ॥

ಅರ್ಥ.— ಶ್ರುತಿ ಸ್ಮೃತಿ ಸದಾಚಾರ ಆತ್ಮಹಿತ ಮತ್ತು ಸುಸಂಕಲ್ಪದಿಂದ ಹುಟ್ಟಿದ ಅಭಿಲಾಷೆ.—ಇವು ಧರ್ಮಮೂಲಗಳೆನ್ನಿಸುವುವು. ವಿಜ್ಞಾನೇಶ್ವರ ವ್ಯಾಖ್ಯಾನ.—ಶ್ರುತಿಯೆಂದರೆ ವೇದ, ಸ್ಮೃತಿಯೆಂದರೆ ಧರ್ಮಶಾಸ್ತ್ರ, ಸದಾಚಾರವೆಂದರೆ ಶಿಷ್ಟಾಚಾರ, ಆತ್ಮಹಿತ—ಇವು ಧರ್ಮಮೂಲವು, ಎಂದರೆ ಧರ್ಮಕ್ಕೆ ಪ್ರಮಾಣವಾಗಿರುವುವು. ಇವುಗಳಿಗೆ ವಿರೋಧಬಂದರೆ, ಪೂರ್ವಪೂರ್ವದ್ದು ಬಲವಾದುದು. ಎಂದರೆ ಸದಾಚಾರಕ್ಕಿಂತ ಸ್ಮೃತಿಯು ಶ್ರೇಷ್ಠವಾದ ಪ್ರಮಾಣವು, ಸ್ಮೃತಿಗಿಂತ ಶ್ರುತಿಯು ಶ್ರೇಷ್ಠವಾದ ಪ್ರಮಾಣವು.

ಸ್ಕಂದಪುರಾಣ.

ನ ಯತ್ರ ಸಾಕ್ಷಾದ್ವಿಧಯೋ ನ ನಿಷೇಧಾಃ ಶ್ರುತೌ ಸ್ಮೃತೌ ।
ದೇಶಾಚಾರಕುಲಾಚಾರೈಸ್ತತ್ರ ಧರ್ಮೋ ನಿರೂಪ್ಯತೇ ॥

ಅರ್ಥ.—ಯಾವ ವಿಷಯದಲ್ಲಿ ಶ್ರುತಿಸ್ಮೃತಿಗಳಲ್ಲಿ ಸಾಕ್ಷಾತ್ತಾಗಿ ವಿಧಿನಿಷೇಧಗಳು ಇಲ್ಲವೋ ಆ ವಿಷಯದಲ್ಲಿ ದೇಶಾಚಾರ ಕುಲಾಚಾರಗಳಿಂದ ಧರ್ಮವು ನಿರೂಪಿಸಲ್ಪಡುವುದು.

ಭಗವದ್ಗೀತೆ, ಅಧ್ಯಾಯ ೧೬.

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ |
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ॥೨೩॥
ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ |
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ॥೨೪॥

ಶಂಕರಭಾಷ್ಯಂ—ಶಾಸ್ತ್ರಂ= ವೇದಃ ॥
ರಾಮಾನುಜಭಾಷ್ಯಂ—ಶಾಸ್ತ್ರಂ=ವೇದಾಖ್ಯಂ ವಿಧಿಃ ॥
ಶ್ರೀಧರೀಯಟೀಕಾ.—ಶಾಸ್ತ್ರವಿಧಿಂ= ವೇದವಿಹಿತಂ ಧರ್ಮಂ ॥

ಅರ್ಥ.—ವೇದವಿಧಿಯನ್ನು ಬಿಟ್ಟು ಮನಸ್ಸಿಗೆ ಬಂದಂತೆ ಪ್ರವರ್ತಿಸುವವನು ಸಿದ್ಧಿಯನ್ನೂ ಸುಖವನ್ನೂ ಪರಮಗತಿಯನ್ನೂ ಪಡೆಯುವುದಿಲ್ಲ. ಆದುದರಿಂದ ಕಾರ್ಯಾಕಾರ್ಯವ್ಯವಸ್ಥೆಯಲ್ಲಿ ನಿನಗೆ ವೇದವೇಪ್ರಮಾಣವು. ವೇದವಿಹಿತವಾದ ಧರ್ಮವನ್ನು ತಿಳಿದು, ಇಲ್ಲಿ ಕಾರ್ಯಮಾಡಲು ನೀನು ಅರ್ಹನಾಗಿರುತ್ತಿ.

ಭಾಷ್ಯ—ಶಾಸ್ತ್ರವೆಂದರೆ ಇಲ್ಲಿ ವೇದವೆಂದರ್ಥವು.

ಚತುರ್ವಿಂಶತಿಮತ.

ಸ್ಮೃತೇರ್ವೇದವಿರೋಧೇ ತು ಪರಿತ್ಯಾಗೋ ಯಥಾ ಭವೇತ್ ।
ತಥೈವ ಲೌಕಿಕಂ ವಾಕ್ಯಂ ಸ್ಮೃತಿಬಾಧೇ ಪರಿತ್ಯಜೇತ್ ॥

ಅರ್ಥ.—ವೇದಕ್ಕೆ ವಿರೋಧವಾದಾಗ ಸ್ಮೃತಿಯು ಹೇಗೆ ತ್ಯಜಿಸಲ್ಪಡುತ್ತದೋ, ಹಾಗೆಯೇ ಸ್ಮೃತಿಗೆ ವಿರೋಧವಾದಾಗ ಲೌಕಿಕವಾಕ್ಯವು ತ್ಯಜಿಸಲ್ಪಡುವುದು.

ಇಲ್ಲಿ ಲೌಕಿಕವಾಕ್ಯವೆಂದರೆ ಆಚಾರವಿಷಯವು.

ಆಪಸ್ತಂಬಧರ್ಮಸೂತ್ರ, ಪ್ರಶ್ನ ೧, ಪಟಲ ೧, ಖಂಡ ೪.

ಶ್ರುತಿರ್ಹಿ ಬಲೀಯಸ್ಯಾನುಮಾನಿಕಾದಾಚಾರಾತ್ ॥೮॥

ಹರದತ್ತಮಿಶ್ರವ್ಯಾಖ್ಯಾ—ಆನುಮಾನಿಕಾದಾಚಾರಾತ್ಪ್ರತ್ಯಕ್ಷಾ ಶ್ರುತಿರ್ಬಲೀಯಸೀ। ತದ್ವಿರೋಧೇ ನಾನುಮಾತುಂ ಶಕ್ಯತೇ ಅನುಮಾನಮಬಾಧಿತಂ ಇತಿ ನ್ಯಾಯಾತ್ ॥

ಅರ್ಥ.—ಆನುಮಾನಿಕವಾದ ಆಚಾರಕ್ಕಿಂತ ಶ್ರುತಿಯು ಪ್ರಬಲವಾದುದು. ಹರದತ್ತಮಿಶ್ರವ್ಯಾಖ್ಯೆ—ಆನುಮಾನಿಕವಾದ ಆಚಾರಕ್ಕಿಂತ ಪ್ರತ್ಯಕ್ಷಶ್ರುತಿಯು ಬಲವಾದುದು. ಅನುಮಾನವು ಅಬಾಧಿತವಾಗಿರಬೇಕೆಂಬ ನ್ಯಾಯವಿರುವುದರಿಂದ ಪ್ರತ್ಯಕ್ಷಶ್ರುತಿಗೆ ವಿರೋಧವಾದರೆ ಅನುಮಾನಿಸಲಿಕ್ಕೆ ಶಕ್ಯವಾಗುವುದಿಲ್ಲ.

ತಾತ್ಪರ್ಯ—ಯಾವ ಆಚಾರಕ್ಕೆ ಪ್ರತ್ಯಕ್ಷವಾದ ಶ್ರುತಿಮೂಲವಿರುವುದಿಲ್ಲವೋ, ಅಂಥ ಆಚಾರವು ಆನುಮಾನಿಕಶ್ರುತಿಮೂಲವುಳ್ಳದೆಂದು ಹೇಳಬಹುದು. ಎಂದರೆ ಆ ಆಚಾರವು ಪ್ರಚ್ಛನ್ನವಾದ ಶ್ರುತಿವಚನವನ್ನನುಸರಿಸಿ ಉಂಟಾಗಿರಬಹುದೆಂದು ಊಹಿಸಬಹುದು. ಆದರೆ ಅಂಥ ಆಚಾರವು ಪ್ರತ್ಯಕ್ಷಶ್ರುತಿಗೆ ವಿರೋಧವಾಗಿರಕೂಡದು. ವಿರೋಧವಾಗಿದ್ದರೆ ಆ ಆಚಾರವನ್ನು ತಿರಸ್ಕರಿಸಿ ಪ್ರತ್ಯಕ್ಷ ಶ್ರುತಿಯಲ್ಲಿ ಉಕ್ತವಾದ ಕರ್ಮವನ್ನೇ ಮಾಡಬೇಕು. ಇದಲ್ಲದೆ ಆನುಮಾನಿಕವಾದ ಆಚಾರಕ್ಕಿಂತಲೂ ಪ್ರತ್ಯಕ್ಷಶ್ರುತಿಯು ಶ್ರೇಷ್ಠಪ್ರಮಾಣವಾದುದರಿಂದ, ಅಂಥ ಪ್ರತ್ಯಕ್ಷಶ್ರುತ್ಯುಕ್ತಧರ್ಮವು ಒಂದುವೇಳೆ ಅಂಥ ಆನುಮಾನಿಕ ಆಚಾರಕ್ಕೆ ವಿರುದ್ಧವಾಗಿದ್ದರೂ, ಆ ಶ್ರುತ್ಯುಕ್ತ ಧರ್ಮವನ್ನು ಆಚರಣೆಗೆ ತರಬಹುದು.

ದೇವೀಭಾಗವತ, ಸ್ಕಂಧ ೧೧, ಅಧ್ಯಾಯ ೧.

ನಾರಾಯಣಉವಾಚ ॥

ಯೋ ವೇದಧರ್ಮಮುಜ್ಝಿತ್ವಾ ವರ್ತತೇನ್ಯಪ್ರಮಾಣತಃ ।
ಕುಂಡಾನಿ ತಸ್ಯ ಶಿಕ್ಷಾರ್ಥಂ ಯಮಲೋಕೇ ವಸಂತಿ ಹಿ ॥೨೭॥
ತಸ್ಮಾತ್ಸರ್ವಪ್ರಯತ್ನೇನ ವೇದೋಕ್ತಂ ಧರ್ಮಮಾಶ್ರಯೇತ್ ॥೨೮॥

ಅರ್ಥ.—ನಾರಾಯಣನು ಹೇಳಿದನು:—ಯಾವನು ವೇದೋಕ್ತಧರ್ಮವನ್ನು ಬಿಟ್ಟು ಅನ್ಯಪ್ರಮಾಣವನ್ನವಲಂಬಿಸಿರುವನೋ, ಅಂಥವನ ಶಿಕ್ಷೆಗಾಗಿ ಯಮಲೋಕದಲ್ಲಿ ಕುಂಡಗಳಿರುವುವು. ಆದಕಾರಣ ಸರ್ವಪ್ರಯತ್ನದಿಂದಲೂ ವೇದೋಕ್ತಧರ್ಮವನ್ನೇ ಆಶ್ರಯಿಸತಕ್ಕದು.

ಮನುಸ್ಮೃತಿ, ಅಧ್ಯಾಯ ೨

ಶ್ರುತಿಸ್ಮೃತ್ಯುದಿತಂ ಧರ್ಮಮನುತಿಷ್ಠನ್ಹಿ ಮಾನವಃ।
ಇಹ ಕೀರ್ತಿಮವಾಪ್ನೋತಿ ಪ್ರೇತ್ಯ ಚಾನುತ್ತಮಂ ಸುಖಂ ||೯||

ಅರ್ಥ—ಶ್ರುತಿಸ್ಮೃತಿಗಳಲ್ಲಿ ಹೇಳಲ್ಪಟ್ಟ ಧರ್ಮವನ್ನಾಚರಿಸುವ ಮನುಷ್ಯನು ಇಹಲೋಕದಲ್ಲಿ ಕೀರ್ತಿಯನ್ನೂ ಪರಲೋಕದಲ್ಲಿ ಉತ್ತಮಸುಖವನ್ನೂ ಪಡೆಯುವನು.

ಈ ವಿಷಯದಲ್ಲಿ ಹೀಗೆಯೇ ಇನ್ನೂ ಅನೇಕ ವಚನಗಳಿರುವುವು. ಈ ವಚನಗಳಿಂದ ಆಚಾರಕ್ಕೆ ಶ್ರುತಿಸ್ಮೃತಿಗಳೇ ಮೂಲವೆಂತಲೂ, ಕಾರ್ಯಾಕಾರ್ಯವಿಚಾರದಲ್ಲಿ ಆಚಾರಕ್ಕಿಂತ ಶ್ರುತಿಸ್ಮೃತಿಗಳೇ ಶ್ರೇಷ್ಠಪ್ರಮಾಣಗಳೆಂತಲೂ, ಆಚಾರವು ಶ್ರುತಿಸ್ಮೃತಿಗಳಿಗೆ ವಿರೋಧವಾದಾಗ ಆಚಾರವನ್ನು ತ್ಯಜಿಸಿ ಶ್ರುತಿಸ್ಮೃತ್ಯುಕ್ತ ಧರ್ಮಗಳನ್ನೇ ಆಶ್ರಯಿಸತಕ್ಕದೆಂತಲೂ ವ್ಯಕ್ತವಾಗುವುದು. ಹೀಗೆ ಆಚಾರಕ್ಕೆ ಆಚಾರತ್ವವು ಶಾಸ್ತ್ರದ್ವಾರವೇ ಉಂಟಾಗಿರುವುದು. ಆದಪ್ರಯುಕ್ತ ಶ್ರುತಿಸ್ಮೃತಿಗಳಲ್ಲಿ ನಾವು ಮೇಲೆ ಕಾಣಿಸಿದಂತೆ ಋತುಮತೀ ವಿವಾಹಕ್ಕೆ ಅನುಜ್ಞೆಯಿರುವುದರಿಂದ, ಅದನ್ನು ಆಚರಣೆಗೆ ತರಲು ಅಭ್ಯಂತರವಿರುವುದಿಲ್ಲ.

ಶಾಸ್ತ್ರಾಚಾರಗಳನ್ನು ಕುರಿತು ಇಲ್ಲಿ ಮತ್ತೊಂದು ರೀತಿಯಲ್ಲಿ ವಿಚಾರಮಾಡುವುದು ಅವಶ್ಯಕವಾಗಿರುವುದು. ಏನೆಂದರೆ, ಶಾಸ್ತ್ರದಿಂದ ಆಚಾರವು ಉಂಟಾಗಿರುವುದೋ—ಅಥವಾ ಆಚಾರದಿಂದ ಶಾಸ್ತ್ರವು ಉಂಟಾಗಿರುವುದೋ ಎಂಬುದನ್ನು ಪರ್ಯಾಲೋಚಿಸಬೇಕು.

ವೇದವು ನಿತ್ಯವಾದ ಮುಖ್ಯಶಾಸ್ತ್ರವು, ಸಕಲ ಧರ್ಮಗಳಿಗೂ ಮೂಲವು, ಅದನ್ನನುಸರಿಸಿ ಸ್ಮೃತ್ಯಾದಿ ಇತರ ಶಾಸ್ತ್ರಗಳೂ ಸದಾಚಾರಗಳೂ ಉಂಟಾಗಿರುವುವು, ಆಚಾರಕ್ಕಿಂತ ಶಾಸ್ತ್ರವೇ ಶ್ರೇಷ್ಠವಾದ ಪ್ರಮಾಣವೆಂದು ಶಾಸ್ತ್ರೈಕ ಶರಣರ ಮತವಾಗಿರುವುದು. ಆದಪ್ರಯುಕ್ತ ಶಾಸ್ತ್ರಸಮ್ಮತವಾದ ಋತುಮತೀ ವಿವಾಹವನ್ನು ಇವರ ಮತಾನುಸಾರವಾಗಿ ಆಚರಣೆಗೆ ತರಲು ಅಭ್ಯಂತರವಿಲ್ಲ. ಶಾಸ್ತ್ರಸಮ್ಮತವಾದ ವಿಷಯವನ್ನು ಆಚರಣೆಗೆ ತರಕೂಡದೆಂದು ಹೇಳುವವರು ಶಾಸ್ತ್ರೈಕಶರಣರೇ ಆಗುವುದಿಲ್ಲ.

ಆಚಾರದಿಂದ ಶಾಸ್ತ್ರವು ಉಂಟಾಗುವುದೆಂದು ಕೆಲವರ ಅಭಿಪ್ರಾಯವಾಗಿರುವುದು. ಈ ಮತವನ್ನು ಶಾಸ್ತ್ರೈಕಶರಣರು ಒಪ್ಪುವದಿಲ್ಲ. ಆಚಾರದಿಂದ ಶಾಸ್ತ್ರವು ಉಂಟಾಗಿದೆ ಎಂಬ ಮತಪ್ರಕಾರ ಶಾಸ್ತ್ರವು ಪೂರ್ವಾಚಾರಲೇಖ್ಯಪತ್ರವಾಗಿರುವುದು. ಲೇಖ್ಯಪತ್ರವೆಂದರೆ ರಿಕಾರ್ಡ್. ನಾವು ಮೇಲೆ ಕಾಣಿಸಿರುವಂತೆ ಶಾಸ್ತ್ರಗಳಲ್ಲಿ ಋತುಮತೀ ವಿವಾಹವು ಅನುಮೋದಿಸಲ್ಪಟ್ಟಿರುವುದರಿಂದ ಅದೂ ಪೂರ್ವಾಚಾರವಾಗಿಯೇ ಇರಬೇಕು. ಮಧ್ಯದಲ್ಲಿ ಯಾವ ಕಾರಣದಿಂದಲೋ ಅದರ

ಆಚರಣೆಯು ನಿಂತುಹೋಗಿರುವುದು. ಪುನಃ ಅದನ್ನೀಗ ನಡೆಸಿದರೆ ಪೂರ್ವಾಚಾರವನ್ನೇ ಅನುಸರಿಸಿದಂತಾಗುವುದೇ ಹೊರತು, ನವೀನಾಚಾರವನ್ನು ತಂದಂತಾಗುವುದಿಲ್ಲ.

ಒಂದುವೇಳೆ ಋತುಮತೀವಿವಾಹವು ನವೀನ ಸಂಪ್ರದಾಯವೆಂದು ಹೇಳುವುದಾದರೂ, ಅದು ನಮ್ಮ ಈಗಿನಕಾಲಕ್ಕೆ ಲಾಭಕರವಾಗಿರುವುದರಿಂದ, ಅದನ್ನು ಆಚರಣೆಗೆ ತರಲಿಕ್ಕೆ ಮಾರ್ಗವುಂಟು. ಶಾಸ್ತ್ರಸಮ್ಮತವಾದ ವಿಷಯವನ್ನು ಹೊಸದಾಗಿ ಆಚರಣೆಗೆ ತರಬೇಕಾದರೆ, ಶಾಸ್ತ್ರವನ್ನು ಬಲ್ಲಂಥವರ ಪರಿಷತ್ತನ್ನು ಸೇರಿಸಿ, ಆ ಪರಿಷತ್ತಿನಲ್ಲಿ ಅದನ್ನು ಆಚರಣೆಗೆ ತರಬಹುದೆಂದು ಅನುಮೋದಿಸಿದ ಬಳಿಕ ರಾಜನ ಅಪ್ಪಣೆಯನ್ನು ಪಡೆಯಬೇಕು. ಪೂರ್ವದಲ್ಲಿ ಆಗಾಗ ಹೊಸವಿಷಯಗಳನ್ನು ಆಚರಣೆಗೆ ತರಬೇಕಾದರೆ, ಹೀಗೆಯೇ ಮಾಡುತ್ತಿದ್ದಂತೆ ತೋರುತ್ತದೆ. ಈಗಲೂ ಹೀಗೆ ಮಾಡಲು ಅಡ್ಡಿಯಿಲ್ಲ.

ಇದಲ್ಲದೆ ಹೊಸವಿಷಯವನ್ನು ಆಚರಣಕ್ಕೆ ತರಲು ಪೂರ್ವಿಕರು ಅನುಸರಿಸಿದ ಮತ್ತೊಂದು ಮಾರ್ಗವೂ ಇರುವುದು. ಧರ್ಮಜ್ಞರಾದ ಪಂಡಿತರಿಂದ ಅಥವಾ ಋಷಿಗಳಿಂದ ವೇದವಿರುದ್ಧವಲ್ಲದ ಹೊಸವಿಷಯಗಳನ್ನು ಆಯಾಕಾಲದೇಶಗಳಿಗೆ ತಕ್ಕಂತೆ ಏರ್ಪಡಿಸಿ ಧರ್ಮಶಾಸ್ತ್ರಗ್ರಂಥಗಳನ್ನು ಬರೆಯಿಸುತ್ತಿದ್ದರು. ಆ ಗ್ರಂಥಗಳು ಪ್ರಮಾಣಗ್ರಂಥಗಳಾಗುತ್ತಿದ್ದವು. ಅವುಗಳಲ್ಲಿ ಬರೆಯಲ್ಪಟ್ಟ ಧರ್ಮಗಳನ್ನು ಋಷಿಗಳು ಅಥವಾ ಪಂಡಿತರು ಇತರರಿಗೆ ಬೋಧಿಸುತ್ತಿದ್ದರು. ಹೀಗೆ ಕಾಲದೇಶಭೇದಾನುಸಾರವಾಗಿ ಋಷಿಗಳು ಧರ್ಮಶಾಸ್ತ್ರಗಳನ್ನು ಬೇರೆಬೇರೆ ಕಾಲಗಳಲ್ಲಿ ರಚಿಸುವುದರಿಂದಲೇ ಈಗ ನಮ್ಮಲ್ಲಿ ಸುಮಾರು ೨೦೦ ಸ್ಮೃತಿಗಳವರೆಗೂ ಇರುವುವು. ನಷ್ಟವಾದ ಸ್ಮೃತಿಗಳ ಸಂಖ್ಯೆಯು ಎಷ್ಟೋ ಗೊತ್ತಿಲ್ಲ. ಈ ಕಾರಣದಿಂದಲೇ ಅಷ್ಟು ಸ್ಮೃತಿಗಳುಂಟಾಗಿರುವುವು. ಮತ್ತು ಅವುಗಳಲ್ಲಿ ಪರಸ್ಪರ ಭೇದಗಳೂ ಕಂಡುಬರುವುವು. ಹಾಗಲ್ಲದಪಕ್ಷದಲ್ಲಿ ನಾಲ್ಕು ಯುಗಗಳಿಗೆ ನಾಲ್ಕು ಸ್ಮೃತಿಗಳಿದ್ದರೆ ಸಾಕಾಗುತ್ತಿತ್ತು. ಮಿಕ್ಕ ಸ್ಮೃತಿಗಳು ಆವಶ್ಯಕವಾಗಿರುತ್ತಿರಲಿಲ್ಲ. ಹೀಗಿರುವುದರಿಂದ ಈಗ ನಾವು ನಮ್ಮ ಕಾಲಕ್ಕೆ ಯೋಗ್ಯರಾದ ಧರ್ಮಜ್ಞರಾದ ಪಂಡಿತರಿಂದ ಈಕಾಲಕ್ಕೆ ಅನುಕೂಲಿಸುವಂತೆಯೂ ವೇದವಿರುದ್ಧವಾಗದಂತೆಯೂ ಧರ್ಮಶಾಸ್ತ್ರಗಳನ್ನು ಬರೆಯಿಸಬಹುದಾಗಿದೆ.

ಹೀಗೆ ಪೂರ್ವಿಕರು ಧರ್ಮಾಚರಣೆಗಳನ್ನು ಆಗಾಗ್ಗೆ ಬದಲಾಯಿಸಿಕೊಳ್ಳುತ್ತಿದ್ದರೆಂಬುದು ಆ ಧರ್ಮಶಾಸ್ತ್ರಗಳಿಂದಲೇ ಗೊತ್ತಾಗುವುದು. ಈಗಲೂ ನಾವು ನಮ್ಮ ಪೂರ್ವಿಕರಂತೆಯೇ ಮಾಡಲು ಅಡ್ಡಿಯಿಲ್ಲ. ಆದರೆ ನಮ್ಮಲ್ಲಿ ಈಚೀಚೆಗೆ ಮೇಲ್ಕೈಹೇಳಿದ ಪರಿಷತ್ತು ಪಂಡಿತರ ಏರ್ಪಾಟಿಲ್ಲದೆ, ಅನೇಕ ವಿಷಯಗಳಲ್ಲಿ ಆಚರಣೆಗಳನ್ನು ಬದಲಾಯಿಸುತ್ತಿರುವುದು ವ್ಯಕ್ತವಾಗಿದೆ. ಕೆಲವು ಪೂರ್ವಸಂಪ್ರದಾ

ಯುಗಳು ಬಿಡಲ್ಪಟ್ಟಿರುವುವು. ಅನೇಕ ಹೊಸಸಂಪ್ರದಾಯುಗಳು ಆಚರಿಸಲ್ಪಡು ತ್ತಿರುವುವು. ಈ ವಿಷಯದಲ್ಲಿ ಒಂದೆರಡು ಉದಾಹರಣೆಗಳು ಸಾಕಾಗಿವೆ. ಏನೆಂದರೆ—ದ್ವಿಜರಲ್ಲಿ ಉಪನಯನವಾದ ಬಳಿಕ ಪೂರ್ವಿಕರು ಆಚರಿಸುತ್ತಿದ್ದ ಗುರುಕುಲ ವಾಸ, ವೇದಾಧ್ಯಯನ, ಭಿಕ್ಷಾಚರ್ಯೆ, ಅಜಿನಧಾರಣ, ಅಗ್ನಿಕಾರ್ಯ ಮುಂತಾದವುಗಳೂ, ಗೃಹಸ್ಥರಾದ ಬಳಿಕ ಮಾಡಬೇಕಾದ ವೈಶ್ವದೇವ ಮೊದಲಾದ ಕರ್ಮಗಳೂ ಈಗ ಲೋಪವಾಗಿರುವುದೂ, ಹಾಗೆಯೇ ರೈಲಿನಲ್ಲಿ ಚಂಡಾಲಸ್ಪರ್ಶ, ಟೀ ಕಾಫಿ ಸೋಡಾವಾಟರ್ ಮುಂತಾದವುಗಳ ಪಾನ, ಚುಟ್ಟಸೇವನ ಮೊದಲಾದ ನವೀನಾ ಚಾರಗಳು ಪ್ರಾಪ್ತವಾಗಿರುವುದೂ ಎಲ್ಲರಿಗೂ ತಿಳಿದ ವಿಷಯವಾಗಿದೆ. ಇವು ಶಾಸ್ತ್ರಸಮ್ಮತವೋ—ಅಥವಾ ವಿರುದ್ಧವೋ—ಎಂಬುದನ್ನು ಶಾಸ್ತ್ರೈಕಶರಣರೇ ಪರ್ಯಾಲೋಚಿಸತಕ್ಕದು. ಹೀಗಿರುತ್ತ ಶಾಸ್ತ್ರಸಮ್ಮತವಾದ ಮತ್ತು ಪೂರ್ವದಲ್ಲಿ ಆಚರಿಸಲ್ಪಡುತ್ತಿದ್ದ ಋತುಮತೀವಿವಾಹವನ್ನು ಈಗ ಆಚರಿಸಲಿಕ್ಕೆ ಆಚಾರವಿಲ್ಲವೆಂದು ಹೇಳುವುದು ಎಷ್ಟರಮಟ್ಟಿಗೆ ನ್ಯಾಯವಾಗಿರುವುದೆಂಬುದನ್ನು ವಾಚಕರೇ ಪರ್ಯಾಲೋಚಿಸತಕ್ಕದು.

ಪ್ರಕೃತದಲ್ಲಿ ವಿಪಕ್ಷದವರಿಂದ ಉದಾಹರಿಸಲ್ಪಟ್ಟಿರುವ ವಚನಗಳ ತಾತ್ಪರ್ಯವೇನೆಂದರೆ :—ಜನರು ಓದಿಯಾಗಲಿ ಕೇಳಿಯಾಗಲಿ ಅಥವಾ ಶಾಸ್ತ್ರಜ್ಞರ ಆಚರಣೆಯನ್ನು ನೋಡಿಯಾಗಲಿ ಶಾಸ್ತ್ರವಿಧಿಗಳನ್ನು ತಿಳಿಯಬೇಕು. ತಿಳಿಯುವುದು ಮಾತ್ರವಲ್ಲದೆ ಅವನ್ನು ಅನುಸರಿಸಲೂಬೇಕು. ಅವುಗಳನ್ನಾಚರಿಸದೆ ಸುಮ್ಮನಿರಕೂಡದು. ಅವುಗಳಿಗೆ ವಿರೋಧವಾಗಿಯೂ ಆಚರಿಸಕೂಡದು. ಅವುಗಳನ್ನು ಅನುಷ್ಠಾನಮಾಡಬೇಕು. ಅವುಗಳ ಆಚರಣೆಯು ಪರಮಧರ್ಮವಾಗಿರುವುದು. ಇದಲ್ಲದೆ ಶಾಸ್ತ್ರವಚನಗಳಿಗೆ ಬೇರೆ ಬೇರೆ ಅರ್ಥಗಳು ತೋರುವುದುಂಟು. ನ್ಯಾಯವಾದ ಅರ್ಥದ ಆಧಾರದಮೇಲೆ ಬಹುಕಾಲದಿಂದ ಪರಂಪರೆಯಾಗಿ ಕ್ರಮವಾಗಿ ಬಂದಂಥ ದೇಶಾಚಾರವನ್ನು ಆಪಾತತಃ ತೋರುವ ಬೇರೆ ಅರ್ಥದ ಬಲದಿಂದ ಉಲ್ಲಂಘಿಸಬಾರದು. ಮತ್ತು ಅಂಥ ದೇಶಾಚಾರವು ಜನರಿಗೆಲ್ಲ ಬಹಳ ಹಿತವಾಗಿಯೂ ಕ್ಷೇಮಕರವಾಗಿಯೂ ಇದ್ದರೆ, ವಿರೋಧಾರ್ಥವುಳ್ಳ ಬೇರೆ ಶಾಸ್ತ್ರವಚನದ ಬಲದಿಂದ ಅದನ್ನು ಉಲ್ಲಂಘಿಸಬಾರದು. ಹೀಗೆಂದು ಆ ವಚನಗಳ ಅಭಿಪ್ರಾಯವೆಂದು ನಮಗೆ ತೋರುತ್ತದೆ. ಶಾಸ್ತ್ರವಿರುದ್ಧವಾದ ಆಚಾರವನ್ನು ಅನುಸರಿಸಬೇಕೆಂದು ಅವುಗಳ ತಾತ್ಪರ್ಯವಲ್ಲ.

ನ್ಯಾಯವಾದೀಅಭಿಪ್ರಾಯವನ್ನು ವಿಪಕ್ಷದವರು ಒಂದುವೇಳೆ ಒಪ್ಪದಿದ್ದರೆ, ನಾವು ಮೇಲೆ ತೋರಿಸಿರುವ ಪ್ರಕಾರ ಆಚಾರಕ್ಕಿಂತಲೂ ಶಾಸ್ತ್ರವೇ ಮುಖ್ಯಪ್ರಮಾಣವೆಂದು ಶಾಸ್ತ್ರವಚನಗಳಿರುವುದರಿಂದ, ಅವುಗಳನ್ನನುಸರಿಸಿ ಶಾಸ್ತ್ರಸಮ್ಮತವಾದ ಋತುಮತೀವಿವಾಹವನ್ನು ಶಾಸ್ತ್ರೈಕಶರಣರು ಮಾಡಬಹುದಾಗಿದೆ.

ಹೀಗೆ ಶಾಸ್ತ್ರಾನುಮತಿಯಿದ್ದಾಗ್ಯೂ ಅದನ್ನು ಏತಕ್ಕೆ ಆಚರಣೆಗೆ ತರಕೂಡದೆಂದು ನಾವೇ ವಿಪಕ್ಷದವರನ್ನು ಕೇಳುವೆವು. ಈರೀತಿಯಾಗಿ ಆಚಾರವಿಷಯದಲ್ಲಿಯೇ ನಮ್ಮ ಆಕ್ಷೇಪವಿರುತ್ತ, ಪುನಃ ಋತುಮತೀವಿವಾಹಕ್ಕೆ ಆಚಾರವಿಲ್ಲವೆಂದು ವಿಪಕ್ಷದವರ್ಗು ಹೇಳಲವಕಾಶವೇ ಇರುವುದಿಲ್ಲ.

ಆಕ್ಷೇಪ ೫.

ಕ್ಷತ್ರಿಯರ ಪರವಾಗಿ ಅನ್ವಯಿಸಬೇಕು.

ನೀವು ಕಾಣಿಸಿದ ಋತುಮತೀವಿವಾಹಪರವಾದ ವಚನಗಳನ್ನು ಕ್ಷತ್ರಿಯರ ಪರವಾಗಿ ಅನ್ವಯಿಸಬೇಕು. ಅವರಿಗೆ ಋತುಮತೀವಿವಾಹವು ವಿಹಿತವು, ಬ್ರಾಹ್ಮಣರಿಗೆ ಅದು ನಿಷಿದ್ಧವೆಂದು ಕೆಲವರು ಹೇಳುವರು.

ಉತ್ತರ.—ನಾವು ಉದಾಹರಿಸಿದ ವಚನಗಳು ದ್ವಿಜರಿಗೆಲ್ಲ ಸಾಮಾನ್ಯವಾದುವು. ದ್ವಿಜರೆಂದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯರು. ಆದುದರಿಂದ ಅವನ್ನು ಈ ಮೂರುವರ್ಣಗಳವರಿಗೂ ಅನ್ವಯಿಸಬೇಕು. ಬೇರೆ ಬೇರೆ ವರ್ಣಗಳವರಿಗೆ ವಿಶೇಷವಾದ ಧರ್ಮಗಳು ಆಯಾವರ್ಣಗಳವರಿಗೆ ವಿಶೇಷವಾದವುಗಳೆಂದು ಶಾಸ್ತ್ರಗಳಲ್ಲಿ ಉಕ್ತವಾಗಿದೆ. ಋತುಮತೀವಿವಾಹಾನುಮೋದಕವಚನಗಳು ಕ್ಷತ್ರಿಯರಿಗೆ ಮಾತ್ರ ವಿಶೇಷವೆಂದೂ ಇತರರಿಗೆ ಕೂಡದೆಂದೂ ಕಂಡುಬಾರದೆಇರುವುದರಿಂದಲೂ ಎಲ್ಲರಿಗೂ ಸಾಮಾನ್ಯವೆಂದು ತೋರುವುದರಿಂದಲೂ ಅವನ್ನು ಮೂರು ವರ್ಣಗಳವರಿಗೂ ಅನ್ವಯಿಸಬೇಕಾಗಿರುವುದು. ಕೆಳಗೆ ಉದಾಹರಿಸಲ್ಪಟ್ಟ ಗೋಭಿಲಪುತ್ರವಚನವು ಇದೇ ಅರ್ಥವನ್ನು ದೃಢೀಕರಿಸುವುದು. ಇವರು ಋತುಮತೀವಿವಾಹವನ್ನು ಅಂಗೀಕರಿಸಿರುವರೆಂದು ಮೊದಲೇ ತೋರಿಸಿರುವೆವು.

ಗೋಭಿಲಪುತ್ರಗೃಹ್ಯಾಸಂಗ್ರಹ, ಪ್ರಪಾಠಕ ೨.

ವಿವಾಹೇ ಯೋ ವಿಧಿಃ ಪ್ರೋಕ್ತೋ ಮಂತ್ರಾದಾಂಪತ್ಯವಾಚಕಾಃ ।
ವರಸ್ತು ತಾನ್ ಜಪೇತ್ ಸರ್ವಾನ್ ಋತ್ವಿಗ್ರಾಜನ್ಯವೈಶ್ಯಯೋಃ ॥೨೪॥

ಚಂದ್ರಕಾಂತ ತರ್ಕಾಲಂಕಾರ ಭಾಷ್ಯಂ—ವಿವಾಹೇ ಯೋ ವಿಧಿರಗ್ನಿಸ್ಥಾಪನಾದಿಃ ಪ್ರೋಕ್ತಃ, ತಂ ವಿಧಿಂ ವರಃ ಕುರ್ಯಾತ್, ಯೇ ಚ ದಾಂಪತ್ಯವಾಚಕಾಮಂತ್ರಾಃ, ತಾನ್ ವರೋ ಜಪೇತ್, ಏವಂ ವಾ—ವಿವಾಹೇ ಯೋ ವಿಧಿರಾಚಾರ್ಯೇಣೋಕ್ತಃ ತತ್ರ ದಾಂಪತ್ಯವಾಚಕಾಯೇ ಮಂತ್ರಾಃ ತಾನ್ ಸರ್ವಾನ್ ವರೋಜಪೇತ್, ಕ್ಷತ್ರಿಯವೈಶ್ಯಯೋಃ ಪುನಸ್ತಾನ್ ಮಂತ್ರಾನ್ ಋತ್ವಿಕ್ ಜಪೇತ್ ॥

ಅರ್ಥ—ವಿವಾಹದಲ್ಲಿ ಯಾವ ವಿಧಿಯು ಹೇಳಲ್ಪಟ್ಟಿರುವುದೋ ಅದನ್ನು ವರನು ಮಾಡಬೇಕು. ಮತ್ತು ದಾಂಪತ್ಯವಾಚಕವಾದ ಎಲ್ಲಾ ಮಂತ್ರಗಳನ್ನೂ ವರನು ಜಪಿಸಬೇಕು. ಕ್ಷತ್ರವೈಶ್ಯರ ವಿವಾಹಗಳಲ್ಲಿ ಪುರೋಹಿತನು ಮಂತ್ರಗಳನ್ನು ಜಪಿಸಬೇಕು.

ಭಾಷ್ಯಂ—ವಿವಾಹದಲ್ಲಿ ಹೇಳಲ್ಪಟ್ಟ ಅಗ್ನಿಸ್ಥಾಪನಾದಿ ವಿಧಿಯನ್ನು ವರನು ಮಾಡಬೇಕು, ಮತ್ತು ದಾಂಪತ್ಯವಾಚಕವಾದ ಮಂತ್ರಗಳನ್ನೂ ವರನು ಜಪಿಸಬೇಕು. ಅಥವಾ ಹೀಗೂ ಅರ್ಥಮಾಡಬಹುದು. ಹೇಗೆಂದರೆ—ವಿವಾಹದಲ್ಲಿ ಆಚಾರ್ಯನಿಂದ ಹೇಳಲ್ಪಟ್ಟ ವಿಧಿಯಲ್ಲಿ ದಾಂಪತ್ಯವಾಚಕವಾದ ಎಲ್ಲ ಮಂತ್ರಗಳನ್ನೂ ವರನು ಜಪಿಸಬೇಕು. ಕ್ಷತ್ರವೈಶ್ಯರ ವಿವಾಹಗಳಲ್ಲಿ ಆ ಮಂತ್ರಗಳನ್ನು ಪುರೋಹಿತನು ಜಪಿಸಬೇಕು.

ಇಲ್ಲಿ ವರನು ಎಂದರೆ ಬ್ರಾಹ್ಮಣನಾದ ವರನು. ಹಾಗೆಯೇ ಋತ್ವಿಕ್ ಅಥವಾ ಪುರೋಹಿತನೂ ಬ್ರಾಹ್ಮಣನಾಗಿರಬೇಕೆಂದು ಹೇಳಬೇಕಾದ ಆವಶ್ಯಕವಿಲ್ಲ.

ಆಕ್ಷೇಪ ೬.

ಋತುಮತೀ ವಿವಾಹದಿಂದ ಸ್ವಪ್ರಯೋಜನಕ್ಕೆ ಹಾನಿ.

ರಜಸ್ವಲೆಯ ದಾನದಿಂದ ರೌರವನರಕವೆಂದು ಉಕ್ತವಾಗಿದೆ. ಒಂದುವೇಳೆ ಅನುಮೋದಕವಚನಪ್ರಕಾರ ದೋಷವಿಲ್ಲವೆಂದು ಹೇಳುವದಾದರೂ, ಋತುಮತೀ ದಾನದಿಂದ ಉತ್ತಮಫಲವಿಲ್ಲ. ಆದರೆ ಋತುಮತಿಗಳಲ್ಲದ ಗೌರಿ ರೋಹಿಣಿ ಕನ್ಯೆಯರನ್ನು ದಾನಮಾಡಿದವರಿಗೆ ಕ್ರಮವಾಗಿ ಸ್ವರ್ಗ ವೈಕುಂಠ ಬ್ರಹ್ಮಲೋಕಗಳು ದೊರೆಯುವುವೆಂದು ಫಲವು ಹೇಳಲ್ಪಟ್ಟಿದೆ. ಹೀಗಿರುತ್ತಾ ತಂದೆತಾಯಿಗಳು ಅನೃತುಮತಿಗಳ ದಾನವನ್ನು ಬಿಟ್ಟು ಸ್ವಪ್ರಯೋಜನವನ್ನು ಏತಕ್ಕೆ ಕಳೆದುಕೊಳ್ಳಬೇಕು ?

ಉತ್ತರ—ಸ್ವರ್ಗಾದಿ ಲೋಕಗಳನ್ನು ಅಪೇಕ್ಷಿಸುವವರಿಗೆ ನಮ್ಮ ಶಾಸ್ತ್ರಕಾರರು ಅನೇಕ ಮಾರ್ಗಗಳನ್ನು ತೋರಿಸಿರುವರು. ಅನೃತುಮತಿಗಳ ದಾನದಿಂದ ಮಾತ್ರ ಆ ಲೋಕಗಳು ದೊರಕುವುವೆಂದಲ್ಲ. ಲೋಕಗಳ ಪ್ರಾಪ್ತಿಗೆ ಸುಲಭೋಪಾಯಗಳು ಬಹಳವಾಗಿರುವುವು. ಅವುಗಳಲ್ಲಿ ಕೆಲವನ್ನು ಇಲ್ಲಿ ಕಾಣಿಸುವೆವು.

ಸಂವರ್ತಸ್ಮೃತಿ.

ಧರ್ಮಶಾಸ್ತ್ರಮಿದಂ ಪುಣ್ಯಂ ಸಂವರ್ತೇನ ತು ಭಾಷಿತಂ ।
ಅಧೀತ್ಯ ಬ್ರಾಹ್ಮಣೋ ಗಚ್ಛೇದ್ಬ್ರಹ್ಮಣಃ ಸದ್ಮ ಶಾಶ್ವತಂ ॥೨೩೦॥

ಅರ್ಥ.—ಸಂವರ್ತನಿಂದ ಹೇಳಲ್ಪಟ್ಟ ಪುಣ್ಯಕರವಾದ ಈ ಧರ್ಮಶಾಸ್ತ್ರವನ್ನು ಅಧ್ಯಯನ ಮಾಡಿದಂಥ ಬ್ರಾಹ್ಮಣನು ಶಾಶ್ವತವಾದ ಬ್ರಹ್ಮಸದ್ಮಕ್ಕೆ ಹೋಗುವನು.

ವಿಷ್ಣುಸ್ಮೃತಿ, ಅಧ್ಯಾಯ ೯೦.

ಗೋಪ್ರದಾನೇನ ಸ್ವರ್ಗಲೋಕಮಾಪ್ನೋತಿ ॥೫॥
ಛತ್ರಪ್ರದಾನೇನ ಸ್ವರ್ಗಂ ॥೨೯॥

ಅರ್ಥ.—ಗೋದಾನದಿಂದ ಸ್ವರ್ಗಲೋಕವನ್ನು ಹೊಂದುವನು. ಕೊಡೆಯನ್ನು ದಾನಮಾಡುವುದರಿಂದ ಸ್ವರ್ಗವು ಪ್ರಾಪ್ತವಾಗುವುದು.

ಬ್ರಹ್ಮಾಂಡಪುರಾಣ, ಇಂದ್ರನಾರದ ಸಂವಾದ.

ಯಸ್ತ್ವಿದಂ ಪಠತೇ ಸ್ತೋತ್ರಂ ವಿಷ್ಣುಪಂಜರಮುತ್ತಮಂ !
ಮುಚ್ಯತೇ ಸರ್ವಪಾಪೇಭ್ಯೋ ವಿಷ್ಣುಲೋಕಂ ಸ ಗಚ್ಛತಿ ॥

ಅರ್ಥ.—ಯಾವಾತನು ಉತ್ತಮವಾದ ಈ ವಿಷ್ಣುಪಂಜರಸ್ತೋತ್ರವನು ಪಠಿಸುವನೋ, ಆತನು ಸರ್ವಪಾಪಗಳಿಂದಲೂ ವಿಮುಕ್ತನಾಗಿ ವಿಷ್ಣುಲೋಕ ವನ್ನು ಹೊಂದುವನು.

ವಿಷ್ಣೋರಷ್ಟವಿಂಶತಿನಾಮಸ್ತೋತ್ರ, ಕೃಷ್ಣಾರ್ಜುನ ಸಂವಾದ.

ಅನಂತಂ ಕೃಷ್ಣಗೋಪಾಲಂ ಜಪತೋ ನಾಸ್ತಿ ಪಾತಕಂ ।
ಗವಾಂ ಕೋಟಿಪ್ರದಾನಸ್ಯ ಅಶ್ವಮೇಧಶತಸ್ಯ ಚ ॥
ಕನ್ಯಾದಾನಸಹಸ್ರಾಣಾಂ ಫಲಂ ಪ್ರಾಪ್ನೋತಿ ಮಾನವಃ ॥

ಅರ್ಥ.—ಅನಂತನಾದ ಕೃಷ್ಣಗೋಪಾಲನನ್ನು ಜಪಿಸುವ ಮನುಷ್ಯನಿಗೆ ಪಾತಕವಿಲ್ಲ; ಮತ್ತು ಆತನು ಕೋಟಿ ಗೋದಾನಫಲವನ್ನೂ ನೂರು ಅಶ್ವಮೇಧ ಫಲವನ್ನೂ ಸಹಸ್ರಕನ್ಯಾದಾನಫಲವನ್ನೂ ಹೊಂದುವನು.

ವಿಷ್ಣುಪುರಾಣ, ವಿಷ್ಣುಶತನಾಮಸ್ತೋತ್ರ.

ನಾರದ ಉವಾಚ—

ವ್ಯಾಸೇನ ಕಥಿತಂ ಪೂರ್ವಂ ಸರ್ವಪಾಪಪ್ರಣಾಶನಂ ।
ಯಃ ಪಠೇತ್ಪ್ರಾತರುತ್ಥಾಯ ಸ ಭವೇದ್ವೈಷ್ಣವೋ ನರಃ ।
ಸರ್ವಪಾಪವಿಶುದ್ಧಾತ್ಮಾ ವಿಷ್ಣುಸಾಯುಜ್ಯಮಾಪ್ನುಯಾತ್ ॥

ಅರ್ಥ.—ನಾರದಋಷಿಯು ಹೇಳಿದನು.—ಪೂರ್ವದಲ್ಲಿ ವ್ಯಾಸನಿಂದ ಹೇಳ ಲ್ಪಟ್ಟಂಥ ಮತ್ತು ಸರ್ವಪಾಪವನ್ನೂ ನಾಶಮಾಡುವಂಥ ಈ ಸ್ತೋತ್ರವನ್ನು ಯಾವ ಮನುಷ್ಯನು ಬೆಳಗ್ಗೆ ಎದ್ದು ಪಠಿಸುವನೋ ಆತನು ವೈಷ್ಣವನಾಗುವನು; ಮತ್ತು ಸರ್ವಪಾಪಗಳಿಂದ ವಿಮುಕ್ತನಾಗಿ ಶುದ್ಧಾತ್ಮನಾಗಿ ವಿಷ್ಣುಸಾಯುಜ್ಯವನ್ನು ಹೊಂದುವನು.

ಹೀಗೆ ಮೇಲಿನ ವಚನಗಳಿಂದ, ಸ್ವರ್ಗಾದಿಲೋಕಗಳನ್ನು ಹೊಂದಲಿ ಕ್ಕೂ ಸಹಸ್ರ ಕನ್ಯಾದಾನ ಫಲವನ್ನು ಪಡೆಯಲಿಕ್ಕೂ ಸುಲಭೋಪಾಯಗಳಿರುವು ದು ವ್ಯಕ್ತವಾಗುವುದು. ಆದರೆ ವಿಪಕ್ಷದವರಲ್ಲಿ ಕೆಲವರು, ಇವು ಪ್ರರೋಚನಾ ರ್ಥವಾಗಿ ಮಾಡಿರುವ ಫಲಸ್ತುತಿಯಾಗಿರುವುವು. ಇವುಗಳಿಂದ ಸ್ವರ್ಗಾದಿ ಲೋ ಕಗಳು ದೊರಕುವುದಿಲ್ಲವೆಂದು ಹೇಳುವರು. ಹಾಗಾದರೆ ಗೌರಿ ಮುಂತಾದವರ ದಾನಗಳಿಂದ ಸ್ವರ್ಗಾದಿ ಲೋಕಗಳು ದೊರಕುವುವೆಂದು ಹೇಳುವುದೂ ಫಲಸ್ತುತಿ ಯಾಗಿರುವುದು, ಆ ದಾನಗಳಿಂದಲೂ ಆ ಲೋಕಗಳು ಸಿಕ್ಕುವುದಿಲ್ಲವೆಂದು ಹೇಳ ಬಹುದಲ್ಲವೆ?

ಹೀಗೆ ವಿಪಕ್ಷದವರು ಋಷಿವಚನಗಳಲ್ಲಿ ಕೆಲವನ್ನು ನಂಬುವುದನ್ನೂ ಕೆಲವನ್ನು ನಂಬದೇ ಇರುವುದನ್ನೂ ಪರ್ಯಾಲೋಚಿಸಿದರೆ ಪರಮಾಶ್ಚರ್ಯವುಂಟಾಗುತ್ತದೆ. ಋಷಿವಚನಗಳಿಗೆಲ್ಲ ನಾವು ಸಮವಾದ ಗೌರವವನ್ನು ಕೊಡಬೇಕಲ್ಲವೆ! ಹಾಗೆ ಎಲ್ಲವನ್ನೂ ನಂಬಬಾರದಾಗಿದ್ದ ಪಕ್ಷದಲ್ಲಿ, ಆ ವಚನಗಳಲ್ಲಿ ಸತ್ಯವಾದುವು ಯಾವುವು ಅಸತ್ಯವಾದುವು ಯಾವುವು ಎಂದು ಗೊತ್ತುಮಾಡಿಕೊಳ್ಳುವ ಬಗೆ ಹೇಗೆ? ವಿಪಕ್ಷದವರು ನಂಬಿರುವ ವಚನಗಳೇ ಅಸತ್ಯವಾಗಿಯೂ ಬೇರೆ ವಚನಗಳೇ ಸತ್ಯವಾಗಿಯೂ ಏತಕ್ಕೆ ಇರಕೂಡದು?

ಆಕ್ಷೇಪ ೭.

ಪ್ರಾಯಶ್ಚಿತ್ತಾರ್ಹವಾದುದರಿಂದ ಆಚರಿಸಬಾರದು.

ಋತುಮತೀವಿವಾಹವು ಪ್ರಾಯಶ್ಚಿತ್ತಾರ್ಹವೆಂದು ಹೇಳಿದೆ. ಪ್ರಾಯಶ್ಚಿತ್ತಾರ್ಹವಾದ ಕರ್ಮಗಳು ದೋಷಕರವಾದುವು; ಮತ್ತು ನಿಂದ್ಯವಾದುವು. ಆದುದರಿಂದ ಋತುಮತೀವಿವಾಹವು ಆಚರಣೆಗೆ ಯೋಗ್ಯವಲ್ಲವೆಂದು ಕೆಲವರು ಹೇಳುವರು.

ಉತ್ತರ.—ಕೆಲವರು ಶಾಸ್ತ್ರಕಾರರು ಋತುಮತೀವಿವಾಹಕ್ಕೆ ಪ್ರಾಯಶ್ಚಿತ್ತವನ್ನು ಹೇಳಿರುವರು. ಬೇರೆಯವರು ಪ್ರಾಯಶ್ಚಿತ್ತವನ್ನು ವಿಧಿಸಿಲ್ಲ. ಇವರ ಮತಪ್ರಕಾರ ಪ್ರಾಯಶ್ಚಿತ್ತವಿಲ್ಲದೆ ಋತುಮತೀವಿವಾಹವನ್ನು ಆಚರಿಸಬಹುದಾಗಿದೆ. ಆದರೆ ಪ್ರಾಯಶ್ಚಿತ್ತವನ್ನು ಹೇಳಿರುವ ಕರ್ಮಗಳನ್ನೆಲ್ಲ ಬಿಡಬೇಕೆಂದರೆ, ಸಂಧ್ಯಾವಂದನೆಯನ್ನೂ ಬಿಡಬೇಕಾಗುವುದು. ಸಂಧ್ಯಾವಂದನೆಯ ಅಂತ್ಯದಲ್ಲಿ ಮಂತ್ರ ತಂತ್ರ ಸ್ವರವರ್ಣ ಲೋಪದೋಷ ಪ್ರಾಯಶ್ಚಿತ್ತಾರ್ಥವಾಗಿ ನಾಮತ್ರಯ ಮಂತ್ರವನ್ನು ಸಾಮಾನ್ಯವಾಗಿ ದ್ವಿಜರೆಲ್ಲರೂ ಜಪಿಸಬೇಕಾಗಿರುವುದು. ಹೀಗೆ ಪ್ರಾಯಶ್ಚಿತ್ತಯುಕ್ತವಾದುದಾದಾಗ್ಯೂ ಸಂಧ್ಯಾವಂದನೆಯು ದ್ವಿಜರಿಗೆ ನಿತ್ಯಕರ್ಮವಾಗಿರುವುದು. ಅದನ್ನವರು ಬಿಡಕೂಡದು.

ಆದರೆ ಅರಿಯದೆ ಮಾಡಿದ ದೋಷಗಳಿಗೆ ಪ್ರಾಯಶ್ಚಿತ್ತವುಂಟೇ ಹೊರತು ತಿಳಿದು ಮನಃಪೂರ್ವಕವಾಗಿ ಮಾಡಿದ ದೋಷಗಳಿಗೆ ಪ್ರಾಯಶ್ಚಿತ್ತವಿಲ್ಲವೆಂದು ಬೇರೆ ಕೆಲವರು ಹೇಳುವರು. ಈ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ. ಮನಃಪೂರ್ವಕವಾಗಿ ಮಾಡಿದ ದೋಷಗಳಿಗೂ ಪ್ರಾಯಶ್ಚಿತ್ತವುಂಟೆಂದು ಕೆಲವರು ಶಾಸ್ತ್ರಕಾರರು ಅಪ್ಪಣೆ ಕೊಡಿಸಿರುವರು. ಹೇಗೆಂದರೆ:—

ವಾಸಿಷ್ಠಧರ್ಮಶಾಸ್ತ್ರ, ಅಧ್ಯಾಯ ೨೦.

ಅನಭಿಸಂಧಿಕೃತೇ ಪ್ರಾಯಶ್ಚಿತ್ತಮಪರಾಧೇ ॥೧॥ ಅಭಿಸಂಧಿಕೃತೇಪ್ಯೇಕೇ॥೨॥

ಅರ್ಥ.—ಅರಿಯದೆ ಮಾಡಿದ ಅಪರಾಧಕ್ಕೆ ಪ್ರಾಯಶ್ಚಿತ್ತವುಂಟು. ಮನಃಪೂರ್ವಕ ಮಾಡಿದ ಅಪರಾಧಕ್ಕೂ ಕೂಡ ಪ್ರಾಯಶ್ಚಿತ್ತವುಂಟೆಂದು ಕೆಲವರು ಶಾಸ್ತ್ರಕಾರರು ಹೇಳುವರು.

ಬೌಧಾಯನಧರ್ಮಶಾಸ್ತ್ರ, ಪ್ರಶ್ನೆ ೪, ಅಧ್ಯಾಯ ೨.

ಪ್ರತಿಷಿದ್ಧಾಂಸ್ತಥಾಚಾರಾನಭ್ಯಸ್ಯಾಪಿ ಪುನಃಪುನಃ ।
ವಾರುಣೀಭಿರುಪಸ್ಥಾಯ ಸರ್ವಪಾಪೈಃ ಪ್ರಮುಚ್ಯತೇ ॥೯॥
ಅನಾದ್ಯಪೇಯಪ್ರತಿಷಿದ್ಧಭೋಜನೇ ವಿರುದ್ಧಧರ್ಮಾಚರಿತೇಚ ಕರ್ಮಣಿ।
ಮತಿಪ್ರವೃತ್ತೇಪಿ ಚ ಪಾತಕೋಪಮೈರ್ವಿಶುಧ್ಯತೇಥಾಪಿಚ ಸರ್ವಪಾತಕೈಃ ॥೧೪

ಅರ್ಥ.—ಪ್ರತಿಷಿದ್ಧವಾದ ಆಚಾರಗಳನ್ನು ಪುನಃ ಪುನಃ ಮಾಡಿದಾಗ್ಯೂ, ವಾರುಣೀಮಂತ್ರೋಪಾಸನದಿಂದ ಸಕಲ ಪಾಪಗಳಿಂದಲೂ ವಿಮುಕ್ತನಾಗುವನು. ತಿನ್ನಬಾರದ್ದನ್ನು ತಿನ್ನುವುದು, ಕುಡಿಯಬಾರದ್ದನ್ನು ಕುಡಿಯುವುದು, ನಿಷಿದ್ಧಭೋಜನ, ವಿರುದ್ಧಧರ್ಮಾಚರಣೆ, ವಿರುದ್ಧಕಾರ್ಯ—ಇವುಗಳನ್ನು ಮನಃಪೂರ್ವಕವಾಗಿ ಮಾಡಿದಾಗ್ಯೂ (ಸ್ನಾನ ಮಾಡಿ ಅಬ್ಲಿಂಗ ಮತ್ತು ವಾರುಣೀಮಂತ್ರಗಳನ್ನು ಜಪಿಸಿದರೆ) ಈ ಸರ್ವಪಾತಕಗಳಿಂದಲೂ ಇವಕ್ಕೆ ಸಮವಾದ ಪಾಪಗಳಿಂದಲೂ ಸಹ ಶುದ್ಧನಾಗುವನು.

ಹೀಗೆ ಮನಃಪೂರ್ವಕವಾಗಿ ಮಾಡಿದ ಕಾರ್ಯಗಳಿಗೂ ಪ್ರಾಯಶ್ಚಿತ್ತಶುದ್ಧಿಯುಂಟೆಂದು ಇನ್ನೂ ಅನೇಕ ಶಾಸ್ತ್ರಕಾರರು ಅಪ್ಪಣೆಕೊಡಿಸಿರುವರು.

ಆದರೆ ಈಗಿನ ದ್ವಿಜಸಂಘದಲ್ಲಿ ಪ್ರಾಯಶ್ಚಿತ್ತಾರ್ಹವಾದ ಎಷ್ಟೋ ಕಾರ್ಯಗಳು ಪ್ರಾಯಶ್ಚಿತ್ತವಿಲ್ಲದೆಯೇ ಮಾಡಲ್ಪಡುತ್ತಿರುವುವು. ಅವಕ್ಕೆ ಇಲ್ಲಿ ಕೆಲವು ಉದಾಹರಣೆಗಳನ್ನು ಕೊಡುವೆವು.

ಹೇಮಾದ್ರಿಧರ್ಮಶಾಸ್ತ್ರ, ಪ್ರಾಯಶ್ಚಿತ್ತಾಧ್ಯಾಯ
ವಿಷಯಾನುಕ್ರಮಣಿಕೆ-

ಸುವರ್ಣಸ್ತೇಯ ಪ್ರಾಯಶ್ಚಿತ್ತಂ। ರಜತತಾಮ್ರಸ್ತೇಯ ಪ್ರಾಯಶ್ಚಿತ್ತಂ। ಅನಾಶ್ರಮವಾಸ ಪ್ರಾಯಶ್ಚಿತ್ತಂ। ಭೃತಕಾಧ್ಯಾಪನ ಪ್ರಾಯಶ್ಚಿತ್ತಂ । ತಂಡುಲಾದ್ಯಪಣ್ಯವಿಕ್ರಯ ಪ್ರಾಯಶ್ಚಿತ್ತಂ। ಘೃತ್ರೀವಿಕ್ರಯ ಪ್ರಾಯಶ್ಚಿತ್ತಂ। ಧೇನುಗಜವಿಕ್ರಯ ಪ್ರಾಯಶ್ಚಿತ್ತಂ। ಅನಡುನ್ಮಹಿಷೀವಿಕ್ರಯ ಪ್ರಾಯಶ್ಚಿತ್ತಂ । ಅಶ್ವದುಷ್ಟಮೃಗವಿಕ್ರಯ ಪ್ರಾಯಶ್ಚಿತ್ತಂ। ಗುಡಲವಣವಿಕ್ರಯ ಪ್ರಾಯಶ್ಚಿತ್ತಂ। ಕಾರ್ಪಾಸನೀಲೀವಿಕ್ರಯ ಪ್ರಾಯಶ್ಚಿತ್ತಂ । ಸಾಲಗ್ರಾಮಾದಿವಿಕ್ರಯ ಪ್ರಾಯಶ್ಚಿತ್ತಂ। ಪುಷ್ಪರತ್ನಾದಿವಿಕ್ರಯ ಪ್ರಾಯಶ್ಚಿತ್ತಂ। ರುದ್ರಾಕ್ಷಸುವರ್ಣವಿಕ್ರಯಪ್ರಾಯಶ್ಚಿತ್ತಂ।

ರಜತತಾಮ್ರಕಾಂಸ್ಯಾದಿವಿಕ್ರಯ ಪ್ರಾಯಶ್ಚಿತ್ತಂ। ವಸ್ತ್ರವಿಕ್ರಯ ಪ್ರಾಯಶ್ಚಿತ್ತಂ। ಶ್ರುತಿಸ್ಮೃತ್ಯಾದಿವಿಕ್ರಯಪ್ರಾಯಶ್ಚಿತ್ತಂ। ಕೂಟಸಾಕ್ಷಿ ಪ್ರಾಯಶ್ಚಿತ್ತಂ । ವೇಶ್ಯಾಗಮನ ಪ್ರಾಯಶ್ಚಿತ್ತಂ । ಋತುಕಾಲಪರಿತ್ಯಾಗ ಪ್ರಾಯಶ್ಚಿತ್ತಂ। ಕನ್ಯಾಗಮನ ಕನ್ಯಾ ದೂಷಣ ಪ್ರಾಯಶ್ಚಿತ್ತಂ । ಮಿಥ್ಯೋದಿತಪ್ರಾಯಶ್ಚಿತ್ತಂ । ಷೋಡಶಕರ್ಮಕಾಲಾತಿಕ್ರಮೇ ಪ್ರಾಯಶ್ಚಿತ್ತಂ। ಗರ್ಭಾಧಾನತ್ಯಾಗ ಪ್ರಾಯಶ್ಚಿತ್ತಂ। ಸೀಮಂತಪುಂಸವನನಾಮಕರಣಜಾತಕರ್ಮ್ಮ ಅನ್ನಪ್ರಾಶನ ಚೌಲಾಕ್ಷರಾಭ್ಯಾಸೋಪನಯನ ಕಾಲಾತೀತ ಪ್ರಾಯಶ್ಚಿತ್ತಂ। ಮೌಂಜ್ಯಜಿನದಂಡಾಭಾವೇ ಪ್ರಾಯಶ್ಚಿತ್ತಂ। ಬ್ರಹ್ಮಚರ್ಯವ್ರತಾಗ್ನಿಕಾರ್ಯ ಬ್ರಹ್ಮಯಜ್ಞತರ್ಪಣಲೋಪ ಪ್ರಾಯಶ್ಚಿತ್ತಂ। ವೇದಾಧ್ಯಯನ ಲೋಪ ಪ್ರಾಯಶ್ಚಿತ್ತಂ। ವೇದವ್ರತ ಗೌದಾನಿಕ ವ್ರತಲೋಪೇ ಪ್ರಾಯಶ್ಚಿತ್ತಂ। ಗೃಹಸ್ಥಾನಾಂ ಬ್ರಹ್ಮಯಜ್ಞಲೋಪೇ ಔಪಾಸನತ್ಯಾಗೇ ಪ್ರಾಯಶ್ಚಿತ್ತಂ। ದೇವತಾರ್ಚನತ್ಯಾಗೇ ಪ್ರಾಯಶ್ಚಿತ್ತಂ। ವೈಶ್ವದೇವತ್ಯಾಗೇ ಪ್ರಾಯಶ್ಚಿತಂ। ಪೃಥ್ವೀದಾನಪ್ರತಿಗ್ರಹೇ ಪ್ರಾಯಶ್ಚಿತ್ತಂ । ತಾಂಮ್ರಕಾಸ್ಯಪಾತ್ರಪ್ರತಿಗ್ರಹೇ ಪ್ರಾಯಶ್ಚಿತ್ತಂ। ಪುಸ್ತಕಪ್ರತಿಗ್ರಹೇ ಪ್ರಾಯಶ್ಚಿತ್ತಂ। ಮಹಿಷೀಧೇನುಪ್ರತಿಗ್ರಹೇಪ್ರಾಯಶ್ಚಿತ್ತಂ॥ ಸನ್ಯಾಸಿನಃ ಪ್ರತಿಗ್ರಹ ಪ್ರಾಯಶ್ಚಿತ್ತಂ । ಮಠಪತಿಸನ್ಯಾಸಿನಃ ಪ್ರತಿಗ್ರಹ ಪ್ರಾಯಶ್ಚಿತ್ತಂ ॥ ಇತ್ಯಾದಯಃ॥

ಹೀಗೆ ಮೇಲೆ ಕಾಣಿಸಲ್ಪಟ್ಟ ಅನೇಕ ಪ್ರಾಯಶ್ಚಿತ್ತಾರ್ಹವಾದ ಕಾರ್ಯಗಳನ್ನು ಈಗಿನ ಕಾಲದ ಬ್ರಾಹ್ಮಣಸಂಘದಲ್ಲಿ ಅನೇಕರು ಪ್ರಾಯಶ್ಚಿತ್ತವಿಲ್ಲದೆ ಮಾಡುತ್ತಿರುವುದು ವಾಡಿಕೆಯಾಗಿರುತ್ತದೆ. ಮತ್ತು ಇಂಥವರಿಗೆ ಬಹಿಷ್ಕಾರವೂ ಇಲ್ಲ. ಹೀಗಿರುತ್ತಾ ಋತುಮತೀವಿವಾಹಕ್ಕೆ ಕೆಲವರು ಶಾಸ್ತ್ರಕಾರರು ಪ್ರಾಯಶ್ಚಿತ್ತವನ್ನು ಹೇಳಿರುವ ಮಾತ್ರಕ್ಕೆ ಅದನ್ನು ಆಚರಿಸಕೂಡದೆಂದು ನಿಷೇಧಿಸಲು ಮಾರ್ಗವಿಲ್ಲ. ಬೇರೇ ಅನೇಕರು ಋತುಮತೀವಿವಾಹಕ್ಕೆ ಪ್ರಾಯಶ್ಚಿತ್ತವನ್ನು ಹೇಳಿಲ್ಲ. ಇದಲ್ಲದೆ ವಿವಾಹಕ್ಕೆ ಮುಖ್ಯಪ್ರಮಾಣಪುರುಷರಾದ ಅನೇಕ ಗೃಹ್ಯಸೂತ್ರಕಾರರೂ ಕೂಡ ಪ್ರಾಯಶ್ಚಿತ್ತವಿಲ್ಲದೆ ಋತುಮತೀವಿವಾಹವನ್ನಾಚರಿಸಲು ಅಪ್ಪಣೆಕೊಡಿಸಿರುವುದರಿಂದ, ಅಂಥ ವಿವಾಹವನ್ನು ನಾವೀಗ ಆಚರಣೆಗೆ ತಂದರೆ ಯಾವ ದೋಷವೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಬೇರೆ ಕೆಲವರು ಪ್ರಾಯಶ್ಚಿತ್ತವನ್ನು ಹೇಳಿರುವುದರಿಂದ, ಇಷ್ಟಪಡುವವರು ಬೇಕಾದರೆ ಪ್ರಾಯಶ್ಚಿತ್ತವನ್ನು ಮಾಡಿ ಋತುಮತೀವಿವಾಹವನ್ನಾಚರಿಸಬಹುದಾಗಿದೆ.

ಆಕ್ಷೇಪ ೮.

ಅನೃತುಮತಿಯಲ್ಲಿ ಅಕನ್ಯಾತ್ವ ಸಂಭವವುಂಟು.

ನೀವು ಹೇಳಿರುವ ಅಕನ್ಯಾತ್ವದೋಷವನ್ನು—ಎಂದರೆ ಮದುವೆಯಾಗುವುದಕ್ಕೆ ಮೊದಲೇ ಪುರುಷ ಸಂಭೋಗಮಾಡಿದ ದೋಷವನ್ನು—ನಮ್ಮ ಶಾಸ್ತ್ರ

ಕಾರರು ಋತುಮತಿಯರಾದ ಕನ್ಯೆಯರ ವಿಷಯದಲ್ಲಿ ಅನ್ವಯಿಸುತ್ತಾರೆಂದು ಹೇಳಲಾಗುವುದಿಲ್ಲ. ಹನ್ನೊಂದು ಹನ್ನೆರಡು ವರ್ಷ ವಯಸ್ಸಿನವರಾದ ಋತುವಾಗದ ಹುಡುಗಿಯರಿಗೆ ಅವನ್ನು ಅನ್ವಯ ಮಾಡಿರುವರು. ಹನ್ನೆರಡು ವರ್ಷಗಳಾದ ಬಳಿಕ ಕನ್ಯೆಯರಿಗೆ ವಿವಾಹಮಾಡುವುದು ದೋಷವೆಂತಲೂ ಅದರಿಂದ ಪಾತಿತ್ಯವುಂಟಾಗುವುದೆಂತಲೂ ಶಾಸ್ತ್ರಕಾರರು ಅಪ್ಪಣೆಕೊಡಿಸಿರುವುದರಿಂದಲೂ, ಹನ್ನೊಂದು ಹನ್ನೆರಡು ವರ್ಷ ವಯಸ್ಸುಳ್ಳ ಮೈನೆರೆಯದ ಹುಡುಗಿಯರೂ ಕೂಡ ಪುರುಷಸಂಭೋಗ ಮಾಡಬಹುದಾದುದರಿಂದಲೂ ಅಂಥವರಿಗೆ ಈ ದೋಷವು ಹೇಳಿದ್ದಾಗಿದೆ. ಆದುದರಿಂದ ಅಕನ್ಯಾತ್ವಸಂಬಂಧವಾದ ವಚನಗಳಿಂದ ಋತುಮತೀವಿವಾಹವು ಸಿದ್ಧವಾಗುವುದಿಲ್ಲವೆಂದು ವಿಪಕ್ಷದವರಲ್ಲಿ ಬೇರೆ ಕೆಲವರು ಹೇಳುವರು.

ಉತ್ತರ.—ನಾವು ಮೊದಲು ತೋರಿಸಿರುವ ಪ್ರಕಾರ, ಕೆಲವರು ಶಾಸ್ತ್ರಕಾರರು ಹನ್ನೆರಡು ವರ್ಷ ವಯಸ್ಸಾದ ಬಳಿಕ ವಿವಾಹವನ್ನು ನಿಷೇಧಿಸಿರುವರು; ಬೇರೆ ಕೆಲವರು ಋತುಮತಿಗಳಾದ ಬಳಿಕವೂ ವಿವಾಹಕ್ಕೆ ಅಪ್ಪಣೆ ಕೊಡಿಸಿರುವರು. ಹೀಗಿರುವುದರಿಂದ ಅಕನ್ಯಾತ್ವ ದೋಷವನ್ನು ಋತುಮತಿಗಳಾಗದ ಹನ್ನೆರಡುವರ್ಷದವರಿಗೂ ಋತುಮತಿಗಳಿಗೂ ಸಹ ಅನ್ವಯಿಸಬಹುದಾಗಿದೆ. ಇದಲ್ಲದೆ ಋತುವಾಗದ ಹನ್ನೊಂದು ಹನ್ನೆರಡು ವರ್ಷ ವಯಸ್ಸಿನ ಹುಡುಗಿಯರಿಗಿಂತಲೂ ಇನ್ನೂ ಹೆಚ್ಚು ವಯಸ್ಸಾದ ಋತುಮತಿಯರಲ್ಲಿ ಅಕನ್ಯಾತ್ವ ದೋಷಸಂಭವವು ಹೆಚ್ಚಾಗಿರುವುದು.

ಮತ್ತು ಮೈನೆರೆಯದ ಹನ್ನೆರಡು ವರ್ಷದ ಹುಡುಗಿಯರು ಪುರುಷ ಸಂಭೋಗ ಮಾಡಿದಾಗ್ಗೂ ಅವರು ಬಸುರಾಗಿ ಹೆರುವುದು ಅಪೂರ್ವ. ಆದರೆ ಋತುಮತಿಯರು ಪುರುಷ ಸಂಭೋಗ ಮಾಡಿದರೆ, ಅವರು ಒಂದುವೇಳೆ ಹನ್ನೆರಡುವರ್ಷದವರಾಗಿರಲಿ—ಅಥವಾ ಹೆಚ್ಚು ವಯಸ್ಸುಳ್ಳವರಾಗಿರಲಿ—ಅಂಥವರು ಬಸುರಿಯರಾಗಿ ಹೆರುವುದು ಸ್ವಾಭಾವಿಕವಾಗಿರುವುದು. ಆದುದರಿಂದ ಕಾನೀನಸಹೋಢಪುತ್ರರು ಋತುಮತಿಯರಾದ ಕನ್ಯೆಯರಲ್ಲಿ ಹುಟ್ಟಬಹುದೇ ಹೊರತು, ಋತುವಾಗದ ಹನ್ನೊಂದು ಹನ್ನೆರಡು ವರ್ಷದ ಹುಡುಗಿಯರಲ್ಲಿ ಪ್ರಾಯಕವಾಗಿ ಹುಟ್ಟಲಾರರು. ಹೀಗಿರುವುದರಿಂದ ಅಕನ್ಯಾತ್ವ ದೋಷವು ಋತುಮತಿಯರ ವಿಷಯದಲ್ಲಿ ಅನ್ವಯಿಸಲ್ಪಡುವ ಸಂಭವವೇ ಹೆಚ್ಚಾಗಿರುವುದು. ಆದಪ್ರಯುಕ್ತ ಋತುಮತೀವಿವಾಹವು ಪೂರ್ವದಲ್ಲಿ ಆಚರಣೆಯಲ್ಲಿತ್ತೆಂದು ಆ ಶಾಸ್ತ್ರವಚನಗಳಿಂದಲೇ ವ್ಯಕ್ತವಾಗುವುದು.

ಆಕ್ಷೇಪ ೯.

ಚಿಕ್ಕಹುಡುಗಿಯರ ನಡತೆ ವಿಷಯದಲ್ಲಿ ಗುಣದೋಷಗಳನ್ನು ತಿಳಿಯಬಹುದು.

ಚಿಕ್ಕ ಹುಡುಗಿಯರ ನಡತೆ ವಿಷಯವಾಗಿ ಗುಣದೋಷಗಳನ್ನು ಹೇಳಲಾಗುವುದಿಲ್ಲ, ಋತುಮತಿಯರಾದ ಯುವತಿಯರ ನಡತೆಯ ವಿಷಯವಾಗಿ ಗುಣದೋ

ಷಗಳನ್ನು ಹೇಳಬಹುದು, ಆದಪ್ರಯುಕ್ತ 'ಶೀಲಲಕ್ಷಣ ಸಂಪನ್ನಾ' ಇತ್ಯಾದಿ ವಿಶೇಷಣಗಳು ಋತುಮತೀವಿವಾಹವನ್ನು ಸೂಚಿಸುವುವೆಂದು ನೀವು ವಾದಿಸುತ್ತೀರಿ. ಇದು ಸರಿಯಲ್ಲ. ಅಶ್ವಲಾಯನನಿಂದ ಹೇಳಲ್ಪಟ್ಟ ಮೃತ್ಪಿಂಡ ಪರೀಕ್ಷೆಯಿಂದಾಗಲಿ ಜಾತಕಫಲದಿಂದಾಗಲಿ ಚಿಕ್ಕ ಹುಡುಗಿಯರ ನಡತೆಯ ವಿಷಯವಾಗಿ ಗುಣದೋಷಗಳನ್ನು ಗೊತ್ತುಮಾಡಿಕೊಳ್ಳಲು ಅವಕಾಶವಿರುವುದು. ಆದುದರಿಂದ ಆ ವಿಶೇಷಣಗಳು ಋತುಮತಿಗೆ ಅನ್ವಯಿಸುವುವೆಂದು ಹೇಳಲಾಗುವುದಿಲ್ಲ.

ಉತ್ತರ.—ಕನ್ಯೆಯರ ನಡತೆಯ ಗುಣದೋಷಗಳನ್ನು ಗೊತ್ತುಮಾಡಿಕೊಳ್ಳಲು ನೀವು ಹೇಳುವ ಎರಡುಮಾರ್ಗಗಳಲ್ಲದೆ ಮತ್ತೊಂದು ಮಾರ್ಗವೂ ಇರುವುದು. ಅದಾವುದೆಂದರೆ, ವಿಚಾರಮಾಡುವುದು. ನೀವು ಹೇಳುವ ಮಾರ್ಗಗಳು ಸೂಕ್ಷ್ಮಮಾರ್ಗಗಳಾಗಿರುವುವು. ವಿಚಾರಮಾಡುವುದು ವಾಡಿಕೆಯಾದ ಸ್ಥೂಲಮಾರ್ಗವಾಗಿರುವುದು. ಸೂಕ್ಷ್ಮಮಾರ್ಗವನ್ನೇ ಅನುಸರಿಸಬೇಕು, ಸ್ಥೂಲಮಾರ್ಗವನ್ನು ಕೂಡದು ಎಂದು ಶಾಸ್ತ್ರಕಾರರು ಹೇಳಲಿಲ್ಲವಾದಪ್ರಯುಕ್ತ, ಆಯೆರಡುವಿಧವಾದ ಮಾರ್ಗಗಳನ್ನೂ ನಾವು ಅನುಸರಿಸಬಹುದಾಗಿದೆ. ಹಾಗೆಯೇ ಸೂಕ್ಷ್ಮಮಾರ್ಗವನ್ನು ಅನೃತುಮತಿಗಳ ವಿಷಯದಲ್ಲಿ ಮಾತ್ರ ಅನುಸರಿಸಬೇಕೆಂದೂ ಋತುಮತಿಗಳ ವಿಷಯದಲ್ಲಿ ಕೂಡದೆಂದೂ ಶಾಸ್ತ್ರಕಾರರು ಹೇಳಲಿಲ್ಲವಾದುದರಿಂದ, ಆ ಮಾರ್ಗವನ್ನು ಋತುಮತಿಗಳ ವಿಷಯದಲ್ಲಿಯೂ ಉಪಯೋಗಿಸಬಹುದಾಗಿದೆ.

ಆದರೆ ಸ್ಥೂಲಮಾರ್ಗವು ಋತುಮತಿಗಳಿಗೆ ಮಾತ್ರ ಅನ್ವಯಿಸತಕ್ಕದಾಗಿರುವುದು. ಈ ಕನ್ಯೆಯು ಸ್ವೈರಿಣಿಯೋ ಬ್ರಹ್ಮಚಾರಿಣಿಯೋ ಎಂಬ ವಿಚಾರವು ಋತುಮತಿಯಾದ ಯುವತಿಗೆ ಅನ್ವಯಿಸುವುದೇ ಹೊರತು, ಸ್ವೈರಿಣಿಯಾಗಲು ಯೋಗ್ಯತೆಯಿಲ್ಲದ ಚಿಕ್ಕಹುಡುಗಿಗೆ ಅದು ಅನ್ವಯಿಸುವುದಿಲ್ಲ. ಈ ಕಾರಣಗಳ ದೆಸೆಯಿಂದ 'ಸುಶೀಲಾ' ಇತ್ಯಾದಿ ವಿಶೇಷಣಗಳು ಋತುಮತಿಯರಿಗೆ ಸಲ್ಲುವುದಿಲ್ಲವೆಂದು ಹೇಳಲವಕಾಶವಿಲ್ಲ.

ಆಕ್ಷೇಪ ೧೦.

ಬ್ರಾಹ್ಮಣರಿಗೆ ಗಾಂಧರ್ವ ವಿವಾಹವು ನಿಷಿದ್ಧವಾದುದು.

ಗಾಂಧರ್ವವಿವಾಹವು ಕ್ಷತ್ರಿಯ ವೈಶ್ಯ ಶೂದ್ರರಿಗೆ ಆಗಬಹುದೆಂದೂ ಬ್ರಾಹ್ಮಣರಿಗೆ ಕೂಡದೆಂದೂ ಅನೇಕ ಶಾಸ್ತ್ರಕಾರರು ಹೇಳಿರುವುದರಿಂದ, ಇವರ ವಚನಗಳ ಆಧಾರದ ಮೇಲೆ ಋತುಮತಿಯರಾದ ಬ್ರಾಹ್ಮಣಕನ್ಯೆಯರ ವಿವಾಹಕ್ಕೆ ಅವಕಾಶವು ತೋರುವುದಿಲ್ಲ.

ಉತ್ತರ.—ಕೆಲವರು ಶಾಸ್ತ್ರಕಾರರು ಬ್ರಾಹ್ಮಣರಿಗೆ ಗಾಂಧರ್ವವಿವಾಹವು ಕೂಡದೆಂದು ಹೇಳಿರುವುದೇನೋ ಸತ್ಯ. ಆದರೆ ನಾವು ವಿವಾಹಭೇದಪ್ರಕರಣದಲ್ಲಿ ತೋರಿಸಿರುವಂತೆ, ಬೇರೆ ಅನೇಕ ಶಾಸ್ತ್ರಕಾರರು ಆ ವಿವಾಹವು ಬ್ರಾಹ್ಮಣರಿಗೆ ಆಗಬಹುದೆಂದು ಅಪ್ಪಣೆಕೊಡಿಸಿರುವರು. ಹೀಗಿರುತ್ತಾ ಬ್ರಾಹ್ಮಣರಲ್ಲಿ ಋತುಮತೀವಿವಾಹವನ್ನಾಚರಿಸಲು ಅಭ್ಯಂತರವೇನು ? ಈ ವಚನಗಳಿಂದ ಋತುಮತೀವಿವಾಹವು ಸೂಚಿಸಲ್ಪಡುವುದಿಲ್ಲವೆ?

ಗಾಂಧರ್ವವಿವಾಹವು ಬ್ರಾಹ್ಮಣರಿಗೆ ಕೂಡದೆಂಬ ವಚನಗಳನ್ನು ಮಾತ್ರ ಪುರಸ್ಕರಿಸಿ, ಆಗಬಹುದೆಂಬ ವಚನಗಳನ್ನು ತಿರಸ್ಕರಿಸಲು ಕಾರಣವೇನು ? ಆಗಬಹುದೆಂಬ ವಚನಗಳನ್ನು ಪುರಸ್ಕರಿಸಿ, ಆಗಕೂಡದೆಂಬ ವಚನಗಳನ್ನೇ ಏತಕ್ಕೆ ತಿರಸ್ಕರಿಸಬಾರದು ? ಇಂಥಾ ಪಕ್ಷಪಾತವೇತಕ್ಕೆ ? ಸಮಪ್ರಮಾಣಗಳಾದ ಶಾಸ್ತ್ರವಚನಗಳಿಗೆ ಸಮವಾದ ಗೌರವವನ್ನು ಕೊಡಬೇಕಲ್ಲವೆ ? ಆದುದರಿಂದ ಇಷ್ಟವುಳ್ಳವರು ಋತುಮತಿಯರಾದ ಬ್ರಾಹ್ಮಣಕನ್ನೆಯರಿಗೆ ವಿವಾಹವನ್ನು ಮಾಡಬಹುದಾಗಿದೆ.

ಆಕ್ಷೇಪ ೧೧.

ಕಲಿಯುಗದಲ್ಲಿ ಕಾನೀನ ಸಹೋಢ ಸ್ವೀಕಾರವು ಕೂಡದು.

ಕಲಿಯುಗದಲ್ಲಿ ದತ್ತ ಮತ್ತು ಔರಸಪುತ್ರರ ಹೊರತು ಬೇರೆ ಪುತ್ರರನ್ನು ಸ್ವೀಕರಿಸಬಾರದು (ದತ್ತೌರಸೇತರೇಷಾಂ ತು ಪುತ್ರತ್ವೇನ ಪರಿಗ್ರಹಃ) ಎಂದು ಹೇಳಿರುವುದರಿಂದ, ಕಾನೀನ ಸಹೋಢ ಪುತ್ರರನ್ನು ಕಲಿಯುಗದಲ್ಲಿ ಸ್ವೀಕರಿಸಲಾಗುವುದಿಲ್ಲ. ಆದುದರಿಂದ ಕಲಿಯುಗದಲ್ಲಿ ಋತುಮತೀವಿವಾಹಕ್ಕೆ ಅವಕಾಶವಿಲ್ಲ.

ಉತ್ತರ.—ಕಲಿಯುಗಕ್ಕೆ ಪರಾಶರಸ್ಮೃತಿಯು ಮುಖ್ಯವಾದುದು (ಕಲೌ ಪಾರಾಶರಸ್ಮೃತಿಃ) ಎಂದು ಉಕ್ತವಾಗಿರುವುದರಿಂದಲೂ ಬೃಹತ್ಪರಾಶರ ಸ್ಮೃತಿಯಲ್ಲಿ ಆ ಯೆರಡುಬಗೆಯ ಪುತ್ರರೂ ಸ್ವೀಕೃತರಾಗಿರುವುದರಿಂದಲೂ, ಕಲಿಯುಗದಲ್ಲಿಯೂ ಕೂಡ ಅಂಥಾ ಪುತ್ರರನ್ನು ಸ್ವೀಕರಿಸಲು ಅವಕಾಶವುಂಟು. ಆದರೆ ಅಂಥ ಪುತ್ರರನ್ನು ಈಗಿನಕಾಲದಲ್ಲಿ ಸ್ವೀಕರಿಸಬೇಕೆಂದು ನಮ್ಮ ಮತವಲ್ಲ. ಮತ್ತು ನಮ್ಮ ಹುಡುಗಿಯರು ಮದಿವೆಯಾಗುವುದಕ್ಕೆ ಮೊದಲೇ ಪುರುಷಸಂಭೋಗ ಮಾಡಿ ಅಂಥಾ ಮಕ್ಕಳನ್ನು ಪಡೆಯಬೇಕೆಂದು ನಾವು ಅನುಮತಿಯನ್ನು ಕೊಡುವವರಾಗಿಲ್ಲ. ಋತುಮತೀವಿವಾಹವು ಪೂರ್ವದಲ್ಲಿ ನಡೆಯುತ್ತಿತ್ತು, ಮತ್ತು ಅದು ಶಾಸ್ತ್ರಸಮ್ಮತವಾಗಿರುವುದೆಂದು ತೋರಿಸುವ ಉದ್ದೇಶದಿಂದ ಮಾತ್ರ ನಾವು ಆ ಪುತ್ರರ ವಿಷಯವನ್ನು ಸೂಚಿಸಿರುವೆವು.

ಆಕ್ಷೇಪ ೧೨.

ದೇವಪರಿಗ್ರಹವು ಋತುಮತೀವಿವಾಹಸೂಚಕವಲ್ಲ.

ಸೋಮಾದಿದೇವತೆಗಳು ಹುಡುಗಿಯರನ್ನು ಜನ್ಮತಃ ಆರುವರ್ಷಗಳ ಪರ್ಯಂತ ಭೋಗಿಸುವರು. ಹೇಗೆಂದರೆ:—

ಚ್ಯವನವಚನ.

ಷಡಬ್ದಮಧ್ಯೇ ನೋದ್ವಾಹ್ಯಾ ಕನ್ಯಾ ವರ್ಷದ್ವಯಂ ಯತಃ ।
ಸೋಮೋ ಭುಂಕ್ತೇಥ ಗಂಧರ್ವಸ್ತತಃ ಪಶ್ಚಾದ್ಧುತಾಶನಃ ॥

ಅರ್ಥ.— ಕನ್ಯೆಯನ್ನು ಜನ್ಮತಃ ಎರಡುವರ್ಷಗಳ ಪರ್ಯಂತ ಸೋಮನೂ ಅನಂತರ ಎರಡುವರ್ಷಗಳ ಪರ್ಯಂತ ಗಂಧರ್ವನೂ, ಆಮೇಲೆ ಎರಡುವರ್ಷಗಳ ಪರ್ಯಂತ ಅಗ್ನಿಯೂ ಅನುಭವಿಸುವರಾದುದರಿಂದ, ಅವಳಿಗೆ ಆರುವರ್ಷಗಳೊಳಗೆ ವಿವಾಹಮಾಡಕೂಡದು.

ಜ್ಯೋತಿರ್ನಿಬಂಧ.

ಷಡಬ್ದಮಧ್ಯೇ ನೋದ್ವಾಹ್ಯಾ ಕನ್ಯಾ ವರ್ಷದ್ವಯಂ ಯತಃ ।
ಸೋಮೋ ಭುಂಕ್ತೇ ತತಸ್ತದ್ವದ್ಗಂಧರ್ವಶ್ಚ ತಥಾನಲಃ ॥

ಅರ್ಥ.—ಹುಡುಗಿಯನ್ನು ಹುಟ್ಟಿದ ಎರಡು ವರ್ಷಗಳ ಪರ್ಯಂತ ಸೋಮನೂ, ಆಮೇಲೆ ಎರಡುವರ್ಷಗಳ ಪರ್ಯಂತ ಗಂಧರ್ವನೂ ಬಳಿಕ ಎರಡುವರ್ಷಗಳ ಪರ್ಯಂತ ಅಗ್ನಿಯೂ ಭೋಗಿಸುತ್ತಾರಾದುದರಿಂದ ಆರುವರ್ಷಗಳೊಳಗೆ ಅವಳಿಗೆ ಮದಿವೆಮಾಡಬಾರದು.

ಇಂಥಾ ಭೋಗವು ರಕ್ಷಣೆಗೂ ಪವಿತ್ರತೆಗೂ ಆಗಿರುವುದರಿಂದ, ಅದಾದ ಬಳಿಕವೇ ಕನ್ನೆಯರಿಗೆ ವಿವಾಹಮಾಡತಕ್ಕದು. ಇದರಿಂದ ದೋಷವಿಲ್ಲ. ಆದರೆ ರಜೋದರ್ಶನಾದಿಗಳುಂಟಾದಬಳಿಕ ದೇವತೆಗಳು ಮಾಡುವ ಭೋಗವು ದೋಷಾವಹವಾಗಿರುವುದರಿಂದ ಋತುಮತಿಗಳಾಗುವ ಮೊದಲೇ ಸ್ತ್ರೀಯರಿಗೆ ವಿವಾಹ ಮಾಡಬೇಕು. ಹೀಗೆಂದು ಕೆಲವರು ಹೇಳುವರು.

ಉತ್ತರ:—ಗೃಹ್ಯಸೂತ್ರಕಾರರು ವಿವಾಹದ ನಾಲ್ಕನೆಯ ರಾತ್ರಿ ವಧೂವರರಿಗೆ ಸಂಭೋಗಕ್ಕೆ ಅಪ್ಪಣೆ ಕೊಟ್ಟಿರುವುದರಿಂದಲೂ ವೇದಮಂತ್ರಗಳು ಋತುಮತೀವಿವಾಹವನ್ನು ಸೂಚಿಸುವುದರಿಂದಲೂ, ವಿಪಕ್ಷದವರ ಇಂಥಾ ಸಿದ್ಧಾಂತವು ಸಮಂಜಸವಾಗಲಾರದು.

ಆಕ್ಷೇಪ ೧೩.

ವಿವಾಹಸಮಾವೇಶನವು ಋತುಮತೀವಿವಾಹ ಸೂಚಕವಲ್ಲ.

ಗೃಹ್ಯಸೂತ್ರಗಳಲ್ಲಿ ಹೇಳಿರುವ ವಿವಾಹದ ನಾಲ್ಕನೆಯ ರಾತ್ರಿಯ ಸಮಾವೇಶನದಲ್ಲಿ ವಧೂವರರಿಗೆ ಸಂಭೋಗವೇ ಆಗಬೇಕೆಂದಿಲ್ಲ.

ಆದರೆ ಮೈಥುನ ಅಷ್ಟಾಂಗಗಳಲ್ಲಿ ಯಾವುದಾದರೂ ಆಗಬಹುದು. ಅವು ಯಾವುವೆಂದರೆ :—

ಸ್ಮರಣಂ ಕೀರ್ತನಂ ಕೇಳಿಃ ಪ್ರೇಕ್ಷಣಂ ಗುಹ್ಯಭಾಷಣಂ |
ಸಂಕಲ್ಪೋಽಧ್ಯವಸಾಯಶ್ಚ ಕ್ರಿಯಾನಿರ್ವೃತ್ತಿರೇವ ಚ |
ಏತನ್ಮೈಥುನಮಷ್ಟಾಂಗಂ ಪ್ರವದಂತಿ ಮನೀಷಿಣಃ || ಬೃಹಸ್ಪತಿ.

ಅರ್ಥ.—ಸ್ಮರಣ, ಕೀರ್ತನ, ಆಟ, ನೋಟ, ಕಿವಿಮಾತು, ಸಂಕಲ್ಪ, ಪ್ರಯತ್ನ, ಸಂಭೋಗ—ಇವು ಮೈಥುನದ ಎಂಟು ಅಂಗಗಳೆಂದು ಪಂಡಿತರು ಹೇಳುವರು.

ಹೀಗೆಂದು ಬೃಹಸ್ಪತಿ ವಚನವಿರುವುದು. ಆದುದರಿಂದ ವಧೂವರರಿಗೆ ಪರಸ್ಪರ ಸ್ಮರಣವಾಗಲಿ ಕೀರ್ತನವಾಗಲಿ ಅವಲೋಕನವಾಗಲಿ ಆದರೆ ಸಾಕಾಗಿರುತ್ತದೆ. ಇಂಥ ಮೈಥುನವು ಮೈನೆರೆಯದ ಚಿಕ್ಕಹುಡುಗಿಯರಿಗೂ ಸಂಭಾವಿತವಾಗಬಹುದಾದುದರಿಂದ, ವಿವಾಹದ ನಾಲ್ಕನೆಯರಾತ್ರಿಯ ಸಮಾವೇಶನವು ಋತುಮತೀವಿವಾಹಸೂಚಿಯಲ್ಲ.

ಉತ್ತರ —ಮೈಥುನ ಅಷ್ಟಾಂಗಗಳಲ್ಲಿ ಇಂಥಾದ್ದೇ ಆಗಬೇಕೆಂದು ಗೃಹ್ಯಸೂತ್ರಗಳಲ್ಲಿ ಉಕ್ತವಾಗಿಲ್ಲವಾದಪ್ರಯುಕ್ತ, ಅವುಗಳೆಲ್ಲವೂ ಆಗಬಹುದೆಂದು ಹೇಳಬೇಕಾಗುತ್ತದೆ. ಅವುಗಳಲ್ಲಿ ಸಂಭೋಗವೂ ಸೇರಿರುತ್ತದೆ. ಒಂದುವೇಳೆ ಅವುಗಳಲ್ಲಿ ಯಾವುದಾದರೂ ಒಂದು ಆಗಬಹುದೆಂದು ಹೇಳುವುದಾದರೆ, ಆ ಒಂದು ಸಂಭೋಗವೇ ಆಗಬಹುದಾಗಿದೆ. ಗೃಹ್ಯಸೂತ್ರಗಳಲ್ಲಿ ಸಂಭೋಗವನ್ನು ಬಿಟ್ಟು ಮಿಕ್ಕವುಗಳು ಮಾತ್ರ ಆಗಬೇಕೆಂದು ಹೇಳಿಲ್ಲ. ಇದಲ್ಲದೆ ಇಂಥಿಂಥ ಮಕ್ಕಳು ಬೇಕಾದರೆ, ಇಷ್ಟಿಷ್ಟು ರಾತ್ರಿಗಳ ಪರ್ಯಂತ ಬ್ರಹ್ಮಚರ್ಯವನ್ನಾಶ್ರಯಿಸಿ, ಆ ಬಳಿಕ ಸಮಾವೇಶವನ್ನು ಮಾಡಬೇಕೆಂದು ಗೃಹ್ಯಸೂತ್ರಗಳಲ್ಲಿ ಉಕ್ತವಾಗಿದೆ. ಸಂಭೋಗದಿಂದಲೇ ಮಕ್ಕಳನ್ನು ಹುಟ್ಟಿಸಲು ಸಾಧ್ಯವಾಗಿರುವುದರಿಂದಲೂ, ಮಿಕ್ಕ ಏಳು ಮೈಥುನಾಂಗಗಳಿಂದ ಮಕ್ಕಳನ್ನು ಹುಟ್ಟಿಸಲು ಅಸಾಧ್ಯವಾಗಿರುವುದರಿಂದಲೂ, ಆ ವಿವಾಹದ ನಾಲ್ಕನೆಯ ರಾತ್ರಿಯ ಸಮಾವೇಶನದಲ್ಲಿ ವಧೂವರರು ಸಂಭೋಗವನ್ನೇ ಮಾಡಬೇಕಾಗಿರುವುದು. ಮೈನೆರೆಯದ ಚಿಕ್ಕಹುಡುಗಿಯರ ಸಂಭೋಗವು ಶಾಸ್ತ್ರನಿಷಿದ್ಧವಾದುದರಿಂದ, ಆ ಸಮಾವೇಶನಕ್ಕೆ ಯೋಗ್ಯರಾದವರು ಋತುಮತಿಗಳಾಗಿಯೇ ಇರಬೇಕಾಗುವುದು.

ಆಕ್ಷೇಪ ೧೩.

ಮಂತ್ರಾರ್ಥಗಳು ಋತುಮತೀವಿವಾಹಶಾಸಕಗಳಲ್ಲ.

ನೀವು ವೇದಮಂತ್ರಾರ್ಥಗಳಿಂದ ಋತುಮತೀವಿವಾಹವು ಸೂಚಿತವಾಗುವುದೆಂದು ಹೇಳುತ್ತೀರಿ. ಆ ಮಂತ್ರಗಳ ಅರ್ಥಗಳನ್ನು ತಿಳಿದು ಅವಕ್ಕನುಸಾರವಾಗಿ ನಡೆಯಬೇಕೆಂದಿಲ್ಲ. ಆಯಾ ಕರ್ಮಗಳಲ್ಲಿ ಆಯಾ ಮಂತ್ರಗಳನ್ನು ಹೇಳಬೇಕೆಂದು ವಿಧಿಯೇ ಹೊರತು, ಅವುಗಳ ಅರ್ಥಗಳನ್ನು ತಿಳಿದು ಅವುಗಳು ಸೂಚಿ

ಸುವಂತೆ ಮಾಡಬೇಕೆಂದಿಲ್ಲ. ಹುಟ್ಟಿದಕೂಡಲೆ ಶಿಶುವನ್ನುದ್ದೇಶಿಸಿ ಕೆಲವು ಮಂತ್ರಗಳನ್ನೂ ಹಾಗೆಯೇ ಶವವನ್ನು ಕುರಿತು ಕೆಲವು ಮಂತ್ರಗಳನ್ನೂ ಹೇಳಬೇಕೆಂದು ವಿಧಿಯಿರುವುದು. ಶಿಶುವೂ ಶವವೂ ಮಂತ್ರಾರ್ಥಗಳನ್ನು ತಿಳಿಯಬಲ್ಲವೆ? ಹಾಗೆಯೇ ವಿವಾಹಕರ್ಮದಲ್ಲಿ ಕೆಲವು ಮಂತ್ರಗಳನ್ನು ಹೇಳಬೇಕೆಂದು ವಿಧಿಯಿರುವುದು. ಆಪ್ರಕಾರ ಆ ಮಂತ್ರಗಳನ್ನು ಹೇಳತಕ್ಕದು. ಅವುಗಳ ಅರ್ಥಗಳನ್ನು ತಿಳಿದು ಅವುಗಳಿಗನುಸಾರವಾಗಿ ನಡೆಯಬೇಕೆಂದಿಲ್ಲ. ಹೀಗಿರುವುದರಿಂದ ಮಂತ್ರಾರ್ಥಗಳ ಆಧಾರದಮೇಲೆ ಋತುಮತೀವಿವಾಹವು ವೇದಸಮ್ಮತವೆಂದು ಹೇಳಲಾಗುವುದಿಲ್ಲ.

ಉತ್ತರ.—ಸಂಸ್ಕೃತಭಾಷೆಯು ದ್ವಿಜರಿಗೆ ಸ್ವಭಾಷೆಯಾಗಿರುವುದು. ಪೂರ್ವದಲ್ಲಿ ದ್ವಿಜರೆಲ್ಲರೂ—ಎಂದರೆ ಪುರುಷರೂ ಸ್ತ್ರೀಯರೂ ಸಹ—ಆ ಭಾಷೆಯನ್ನೇ ಆಡುತ್ತಿದ್ದರು. ಬರುತ್ತ ಬರುತ್ತ ದ್ವಿಜರು ತಮ್ಮ ಸ್ವಭಾಷೆಯನ್ನು ಮರೆಯುತ್ತ ಬೇರೆ ಭಾಷೆಗಳನ್ನಾಡಲಾರಂಭಿಸಿದರು. ಈಗಿನ ದ್ವಿಜರಲ್ಲಿ ಅನೇಕರಿಗೆ ಸಂಸ್ಕೃತ ಭಾಷೆಯ ಗಂಧಗಾಳಿಯೇ ತಪ್ಪಿಹೋಗಿದೆ. ಸಂಸ್ಕೃತವು ಸ್ವಭಾಷೆಯಾದುದರಿಂದ ಆ ಭಾಷೆಯಲ್ಲಿ ಹೇಳಿದ ಮಂತ್ರಗಳು ಪೂರ್ವದ ದ್ವಿಜರಿಗೆ ಸುಲಭವಾಗಿ ತಿಳಿಯುತ್ತಿದ್ದುವು. ಒಂದು ಅಭಿಪ್ರಾಯವನ್ನು ಒಂದು ಭಾಷೆಯಲ್ಲಿ ಬೇರೆ ಬೇರೆ ಮಾತುಗಳಿಂದ ಹೇಳಬಹುದಾಗಿದೆ. ಹೀಗೆ ಮಾಡಲು ಅವಕಾಶ ಕೊಡದಂತೆ ಎಲ್ಲರೂ ಏಕರೂಪವಾದ ವಾಕ್ಯಗಳನ್ನು ಹೇಳುವುದಕ್ಕಾಗಿ ಮಂತ್ರಗಳು ಏರ್ಪಡಿಸಲಟ್ಟಂತೆ ತೋರುತ್ತದೆ.

ಮೊದಲು ಅಪೇಕ್ಷೆಯು, ಅನಂತರ ಸಂಕಲ್ಪವು, ಆಮೇಲೆ ಆ ಸಂಬಂಧವಾದ ಮಾತಗಳನ್ನಾಡುವುದು, ಆಬಳಿಕ ಸಂಕಲ್ಪವನ್ನು ನೆರವೇರಿಸಿಕೊಳ್ಳಲು ಕಾರ್ಯಮಾಡುವುದು—ಇವು ಮನುಷ್ಯರಿಗೆ ಸ್ವಾಭಾವಿಕ ಪ್ರವರ್ತನವಾಗಿರುವುವು. ವೈವಾಹಿಕ ಸಮೀಕ್ಷಣ ಮಂತ್ರಗಳು ಇಂಥಾ ಪ್ರವರ್ತನವನ್ನೇ ಸೂಚಿಸುವುವು. ವಧೂವರರು ಪರಸ್ಪರ ಸಂಭೋಗಾಪೇಕ್ಷೆಯುಳ್ಳವರಾಗಿಯೂ ಸಂಭೋಗಮಾಡಿ ಸುಪ್ರಜೆಯನ್ನು ಪಡೆಯಬೇಕೆಂದು ಸಂಕಲ್ಪವುಳ್ಳವರಾಗಿಯೂ ಇರುವರು. ಆಮೇಲೆ ಸ್ವಲ್ಪ ಕಾಲದಲ್ಲಿಯೇ ತಮ್ಮ ಸಂಕಲ್ಪವನ್ನು ನೆರವೇರಿಸಿಕೊಳ್ಳಲು ಸಂಭೋಗವನೂ ಮಾಡುವರು. ಗೃಹ್ಯಸೂತ್ರಕಾರರೂ ಇದೇ ಅರ್ಥವನ್ನು ಪ್ರತಿಪಾದನಮಾಡಿರುವರು.

ಶವಶಿಶುಗಳ ಮುಂದೆ ಹೇಳುವ ಮಂತ್ರಗಳು ಆಶೀರ್ವಾದ ರೂಪವಾಗಿಯೂ ಮಂಗಳವನ್ನು ಕೋರುವ ವಚನಗಳಾಗಿಯೂ ಜೀವಾತ್ಮರನ್ನುದ್ದೇಶಿಸಿ ಹೇಳುವ ಮಾತುಗಳಾಗಿಯೂ ಇರುವುವು. ಪೂರ್ವದ ದ್ವಿಜರು ಇವುಗಳ ಅರ್ಥವನ್ನು ತಿಳಿದು ತದನುಸಾರವಾಗಿಯೇ ಆಚರಿಸುತ್ತಿದ್ದರು. ಹಾಗೆಯೇ ವೈವಾಹಿಕ ಮಂತ್ರಾರ್ಥ

ಗಳನ್ನೂ ತಿಳಿದು ತದನುಸಾರವಾಗಿಯೇ ಆಚರಿಸುತ್ತಿದ್ದರು. ಈ ಮಂತ್ರಾರ್ಥಗಳು ಸೂಚಿಸುವ ತಂತ್ರಗಳನ್ನೂ ಕಾರ್ಯಗಳನ್ನೂ ಪ್ರತಿಪಾದನಮಾಡುವುದಕ್ಕೋಸ್ಕರವಾಗಿಯೇ ಗೃಹ್ಯಸೂತ್ರಗಳು ಏರ್ಪಡಿಸಲ್ಪಟ್ಟಿರುವುವು. ಹೀಗಿರುತ್ತ ಮಂತ್ರಾರ್ಥಗಳನ್ನು ತಿಳಿದು ತದನುಸಾರವಾಗಿ ಆಚರಿಸಬೇಕೆಂದಿಲ್ಲವೆಂದು ವಿಪಕ್ಷದವರು ಹೇಳುವ ಮಾತು ಸಮಂಜಸವಾಗಿ ತೋರುವುದಿಲ್ಲ.

ಆಯಾ ಮಂತ್ರಗಳು ಆಯಾ ಅಭಿಪ್ರಾಯಗಳನ್ನೂ ಕಾರ್ಯಗಳನ್ನೂ ಸೂಚಿಸುವಂಥವಾಗಿರುವುವು. ಹಾಗಿಲ್ಲದ ಪಕ್ಷದಲ್ಲಿ ಕರ್ಮಾನುಷ್ಠಾನಮಾಡುವಾಗ ಮಂತ್ರಗಳನ್ನು ಹೇಳಬೇಕಾದ ಅವಶ್ಯಕವೇ ಇರಲಿಲ್ಲ. 'ಅನುಷ್ಠೇಯಾರ್ಥಸ್ಮಾರಕೋ ಮಂತ್ರಃ' ಎಂಬ ವಚನವು ಈ ಭಾವವನ್ನೇ ಸೂಚಿಸುವುದು. ಆದಪ್ರಯುಕ್ತ ವೈವಾಹಿಕ ಮಂತ್ರಗಳು ಸೂಚಿಸುವ ಕಾರ್ಯಾನುಷ್ಠಾನಗಳನ್ನು ಪರ್ಯಾಲೋಚಿಸಿದರೆ ಅವು ಋತುಮತೀವಿವಾಹವನ್ನು ಬೋಧಿಸುವುವೆಂಬುದು ವ್ಯಕ್ತವಾಗುವುದು. ಇವಲ್ಲದೆ ಮೇಲೆ ಉದಾಹರಿಸಿರುವ ಬೇರೆ ಕೆಲವು ವೇದವಚನಗಳೂಕೂಡ ಋತುಮತೀವಿವಾಹಬೋಧಕವಾಗಿಯೇ ಇರುವುವು. ಆದುದರಿಂದ ಋತುಮತೀವಿವಾಹವು ವೇದಸಮ್ಮತವಾಗಿರುವುದೆಂದು ಹೇಳುವುದರಲ್ಲಿ ಸಂದೇಹವಿಲ್ಲ.

ಆಕ್ಷೇಪ ೧೫.

ಪುತ್ರೋತ್ಪಾದನೆಯಿಂದ ಪಿತೃಗಳ ಋಣವನ್ನು ತೀರಿಸಬೇಕು.

ಶಾಸ್ತ್ರಗಳಲ್ಲಿ ವಿವಾಹವು ಉಕ್ತವಾಗಿರುವುದು, ಮತ್ತು ಪುತ್ರೋತ್ಪಾದನೆಯಿಂದ ಪಿತೃಗಳ ಋಣವನ್ನು ತೀರಿಸುವುದಕ್ಕೆ ಮೊದಲೇ ಮನಸ್ಸನ್ನು ಮೋಕ್ಷಮಾರ್ಗದಲ್ಲಿ ಪ್ರವೇಶಿಸುವವರಿಗೆ ಅಧೋಗತಿಯುಂಟಾಗುವುದೆಂದೂ ಹೇಳಲ್ಪಟ್ಟಿರುವುದು. ಆದಪ್ರಯುಕ್ತ ವಿವಾಹವು ನಿಯತವೇ ಹೊರತು ಐಚ್ಛಿಕವಲ್ಲ.

ಉತ್ತರ—ಈ ಮಾತು ಕಾಮುಕರಿಗೆ ಹೇಳಿದ್ದಾಗಿರುತ್ತದೆ. ಯಾರು ಸಂಸಾರಮಾರ್ಗದಲ್ಲಿ ಪ್ರವೇಶಿಸಿ ಆಮೇಲೆ ಮೋಕ್ಷವನ್ನಪೇಕ್ಷಿಸುವರೋ ಅಂಥವರು ಪುತ್ರೋತ್ಪಾದನೆಯಿಂದ ಪಿತೃಗಳ ಋಣವನ್ನು ತೀರಿಸಿದ ಬಳಿಕ ಮನಸ್ಸನ್ನು ಮೋಕ್ಷದಲ್ಲಿ ನಿವೇಶನಮಾಡತಕ್ಕದು. ಆದರೆ ನಾವು ಮೇಲೆ ಕಾಣಿಸಿರುವಂತೆ, ಶುದ್ಧ ವಿರಕ್ತರಾದವರು ಮದಿವೆಯಿಲ್ಲದೆಯೇ ಮನಸ್ಸನ್ನು ಮೋಕ್ಷಮಾರ್ಗದಲ್ಲಿ ಪ್ರವೇಶಿಸಬಹುದೆಂದು ಅನೇಕ ಶಾಸ್ತ್ರವಚನಗಳಿರುವುವು. ಹೀಗಿರುವುದರಿಂದ, ಕಾಮುಕರು ಮದಿವೆಯಾಗಬಹುದೆಂದೂ ಶುದ್ಧ ವಿರಕ್ತರು ಮದಿವೆಯಿಲ್ಲದೆ ಇರಬಹುದೆಂದೂ ಸ್ಪಷ್ಟವಾಗುತ್ತದೆ. ಸಂಸಾರವನ್ನಪೇಕ್ಷಿಸುವುದು ಅಥವಾ ಶುದ್ಧವಿರಕ್ತರಾಗಿರುವುದು ಸ್ತ್ರೀಯರಿಗೂ ಪುರುಷರಿಗೂ ಐಚ್ಛಿಕವೇ ಹೊರತು ಬಲವಂತವಲ್ಲ. ಆದುದರಿಂದ ವಿವಾಹವೂ ಐಚ್ಛಿಕವಾಗಿಯೇ ಇರುವುದು.

ಆಕ್ಷೇಪ ೧೬.

ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲ.

ಸ್ತ್ರೀಯರನ್ನು ಬಾಲ್ಯದಲ್ಲಿ ತಂದೆಯೂ ಯೌವನದಲ್ಲಿ ಗಂಡನೂ ಮುಪ್ಪಿನಲ್ಲಿ ಪುತ್ರರೂ ರಕ್ಷಿಸಬೇಕೆಂದೂ ಸ್ತ್ರೀಯರಿಗೆ ಸ್ವಾತಂತ್ರ್ಯವಿಲ್ಲವೆಂದೂ ಶಾಸ್ತ್ರವಚನಗಳಿರುವುದರಿಂದ, ಅವರಿಗೆ ವಿವಾಹವು ವೈಧವೇ ಹೊರತು ಐಚ್ಛಿಕವಲ್ಲ.

ಉತ್ತರ—ಈವಿಷಯವು ಅವಿರಕ್ತರಾದ ಸ್ತ್ರೀಯರಿಗೆ ಹೇಳಿದ್ದಾಗಿರುವುದು. ಯಾವಳು ಸಂಸಾರವನ್ನಪೇಕ್ಷಿಸುವಳೋ ಅಂಥವಳು ಮದುವೆಮಾಡಿಕೊಂಡು ಗಂಡನ ಅಧೀನದಲ್ಲಿರಬೇಕೇ ಹೊರತು ಸ್ವತಂತ್ರಳಾಗಿರಕೂಡದೆಂದೂ ಮತ್ತು ಸ್ತ್ರೀಯರು ಜೀವನಕ್ಕೋಸ್ಕರವಾಗಿ ಕಷ್ಟಪಡದಂತೆ ಅವರ ಸಂರಕ್ಷಣೆಯ ಭಾರವನ್ನು ಪುರುಷರು ವಹಿಸತಕ್ಕದೆಂದೂ ಈ ವಚನಗಳ ತಾತ್ಪರ್ಯವಾಗಿರುತ್ತದೆ. ಆದ ಪ್ರಯುಕ್ತ ಶುದ್ಧ ವಿರಕ್ತರಾದ ಸ್ತ್ರೀಯರೂಕೂಡ ಮದುವೆಮಾಡಿಕೊಳ್ಳಲೇಬೇಕೆಂದು ಬಲಾತ್ಕಾರವಿಲ್ಲ.

ಆಕ್ಷೇಪ ೧೭.

ವಿವಾಹವಿಲ್ಲದೆ ಸ್ತ್ರೀಯರಿಗೆ ಸದ್ಗತಿಯಿಲ್ಲ.

ಸ್ತ್ರೀಯರಿಗೆ ಉಪನಯನಕ್ಕೆ ಬದಲಾಗಿ ವಿವಾಹವೇ ವೈದಿಕಸಂಸ್ಕಾರವೆಂದು ಶಾಸ್ತ್ರವಚನಗಳಿರುವುದರಿಂದಲೂ ಸಂಸ್ಕಾರವಿಲ್ಲದವರಿಗೆ ಸದ್ಗತಿಯಿಲ್ಲವಾದುದರಿಂದಲೂ ಸ್ತ್ರೀಯರಿಗೆ ವಿವಾಹವು ಆವಶ್ಯಕವಾಗಿರುವುದು.

ಉತ್ತರ- ಇದೊಂದು ವೈಕಲ್ಪಿಕವಿಷಯವೇ ಹೊರತು ಇದರಿಂದ ಸ್ತ್ರೀಯರಿಗೆ ವಿವಾಹವು ಆವಶ್ಯಕವೆಂದು ಹೇಳಲಾಗುವುದಿಲ್ಲ. ಸ್ತ್ರೀಯರಿಗೆ ಉಪನಯನವಿಲ್ಲದೆ ವಿವಾಹಮಾಡುವುದು, ಉಪನಯನಮಾಡಿ ವಿವಾಹಮಾಡುವುದು, ಉಪನಯನವಾಗಿ ವಿವಾಹವಿಲ್ಲದೆಯಿರುವುದು—ಹೀಗೆ ಪಕ್ಷತ್ರಯವಾದ ಶಾಸ್ತ್ರವಚನಗಳಿರುವುವು. ಇದಲ್ಲದೆ ಸ್ತ್ರೀಯರಿಗೆ ವಿವಾಹವನ್ನು ಮಾತ್ರ ವೈದಿಕಮಂತ್ರಪೂರ್ವಕವಾಗಿ ಮಾಡುವುದೆಂದೂ ಮಿಕ್ಕ ಸಂಸ್ಕಾರಗಳನ್ನು ಮಂತ್ರಗಳಿಲ್ಲದೆ ಮಾಡುವುದೆಂದೂ ಕೆಲವು ಶಾಸ್ತ್ರವಚನಗಳಿರುವುವು. ಸ್ತ್ರೀಯರಿಗೆ ಸಕಲ ಸಂಸ್ಕಾರಗಳನ್ನೂ ಮಂತ್ರಪೂರ್ವಕವಾಗಿಯೇ ಮಾಡುವುದೆಂದು ಬೇರೆ ಕೆಲವು ಶಾಸ್ತ್ರವಚನಗಳೂ ಇರುವುವು. ಇವೆಲ್ಲ ವಿಕಲ್ಪವಿಷಯಗಳನ್ನು ಸೂಚಿಸುವುವಾದಪ್ರಯುಕ್ತ ಸ್ತ್ರೀಯರಿಗೆ ವಿವಾಹವು ಆವಶ್ಯಕವಾದುದೆಂದು ಹೇಳಲಾಸ್ಪದವಿಲ್ಲ.

ಇದಲ್ಲದೆ ಪರಮಗತಿಯನ್ನು ಎಂದರೆ ಮೋಕ್ಷವನ್ನು ಪಡೆಯಲು ಯೋಗವು ಉತ್ಕೃಷ್ಟವಾದ ಮಾರ್ಗವೆಂದೂ ಉತ್ತಮಜಾತಿಯವರು, ಹೀನಜಾತಿಯವರು, ಸಂಸ್ಕಾರವಿಲ್ಲದವರು, ಪುರುಷರು, ಸ್ತ್ರೀಯರು, ಸಕಲರೂ ಯೋಗಾಭ್ಯಾಸದಿಂದ ಪರ

ಮಗತಿಯನ್ನು ಹೊಂದಬಹುದೆಂದೂ ಅನೇಕ ಶಾಸ್ತ್ರವಚನಗಳು ಉದ್ಘೋಷಿಸುತ್ತಿರುವುವು. ಆದುದರಿಂದ ಸ್ತ್ರೀಯರು ಉಪನಯನವಿವಾಹಾದಿ ಸಂಸ್ಕಾರಗಳಿಲ್ಲದವರಾಗಿದ್ದರೂ ನಿರತಯೋಗಾಭ್ಯಾಸದಿಂದ ಪಾವನರಾಗಿ ಪರಮಗತಿಯನ್ನು ಪಡೆಯಬಹುದಾಗಿದೆ.

'ಏತೇನ ಯೋಗಃ ಪ್ರತ್ಯುಕ್ತಃ' ಎಂಬ ಬಾದರಾಯಣಸೂತ್ರಪ್ರಕಾರ ಯೋಗವು ನಿಷಿದ್ಧವೆಂದು ವಿಪಕ್ಷದವರಲ್ಲಿ ಕೆಲವರು ಹೇಳುವರು. ಆದರೆ ಈಸೂತ್ರದಿಂದ ವೇದವಿರುದ್ಧವಾದ ಯೋಗಮತವು ತಿರಸ್ಕರಿಸಲ್ಪಟ್ಟಿರುವುದೇ ಹೊರತು ವೇದಸಮ್ಮತವಾದ ಯೋಗವು ಎಂದಿಗೂ ನಿಷೇಧಿಸಲ್ಪಟ್ಟಿಲ್ಲ. ವೇದಸಮ್ಮತವಾದ ಯೋಗವನ್ನು ಶ್ರೀಬಾದರಾಯಣನೇ ಅನೇಕ ಕಡೆಗಳಲ್ಲಿ ಬಹಳವಾಗಿ ಶ್ಲಾಘಿಸಿರುವನು. ಇದಲ್ಲದೆ ಭಗವದ್ಗೀತೆಯಲ್ಲಿಯೂ ಅನೇಕ ಸ್ಮೃತಿಪುರಾಣೋಪನಿಷತ್ತುಗಳಲ್ಲಿಯೂ ಯೋಗವು ಮೋಕ್ಷಕ್ಕೆ ಮುಖ್ಯಸಾಧನೆಯೆಂದು ಹೇಳಲ್ಪಟ್ಟಿದೆ. ಆದಪ್ರಯುಕ್ತ ಮುಮುಕ್ಷುಗಳು ಯೋಗಾಭ್ಯಾಸವನ್ನು ಅವಶ್ಯಕವಾಗಿ ಮಾಡಬೇಕಾಗಿರುವುದು.

ಆಕ್ಷೇಪ ೧೮.

ಬೌದ್ಧಸನ್ಯಾಸಿನಿಯರ ವಿಷಯವು.

ನೀವು ಉದಾಹರಿಸಿದ ವಚನಗಳಲ್ಲಿ ಉಕ್ತವಾದ ಸನ್ಯಾಸಿನೀಸಂಗಮವಿಷಯವು ಬೌದ್ಧಸನ್ಯಾಸಿಗಳ ವಿಷಯವಾಗಿರುವುದು. ದ್ವಿಜಸ್ತ್ರೀಯರು ಸನ್ಯಾಸಿನಿಗಳಾಗಲು ಶಾಸ್ತ್ರದಲ್ಲಿ ಅಪ್ಪಣೆಯಿಲ್ಲ.

ಉತ್ತರಃ—ನಾವು ಉದಾಹರಿಸಿರುವ ವಚನಗಳಲ್ಲಿ ಆರ್ಯಧರ್ಮಪ್ರಸಕ್ತಿಯೇ ಹೊರತು ಬೌದ್ಧಧರ್ಮ ಪ್ರಸಕ್ತಿಯಿಲ್ಲ. ಮತ್ತು ಆ ವಚನಗಳಲ್ಲಿ ಆ ವಿಷಯವು ಬೌದ್ಧಸನ್ಯಾಸಿನಿಯರಿಗೆ ಸಂಬಂಧಪಟ್ಟುದೆಂದು ಉಕ್ತವಾಗಿಲ್ಲ. ಆದಪ್ರಯುಕ್ತ ಆವಿಷಯವು ದ್ವಿಜಸನ್ಯಾಸಿನಿಯರ ವಿಷಯವಾಗಿಯೇ ಇರಬೇಕು. ಇದಲ್ಲದೆ ದ್ವಿಜಸನ್ಯಾಸಿನಿಗಳ ಇತಿಹಾಸವನ್ನೂ ಕಾಣಿಸಿರುವೆವು.

ಆಕ್ಷೇಪ ೧೯.

ಕಲಿಯುಗದಲ್ಲಿ ಸ್ತ್ರೀಯರಿಗೆ ಬ್ರಹ್ಮಚರ್ಯವು ನಿಷಿದ್ಧ.

ಕಲಿಯುಗದಲ್ಲಿ ದೀರ್ಘಕಾಲ ಬ್ರಹ್ಮಚರ್ಯವು ಕೂಡದೆಂದು ಶಾಸ್ತ್ರವಚನಗಳಿರುವುದರಿಂದ, ಸ್ತ್ರೀಯರು ಮದುವೆಯಿಲ್ಲದೆ ಇರಬಾರದು.

ಉತ್ತರ:—ಈ ವಚನಗಳು ಅವಿರಕ್ತರಿಗೆ ಅನ್ವಯಿಸುವುವು. ಶುದ್ಧ ವಿರಕ್ತರಾದ ಸ್ತ್ರೀಯರೂ ಪುರುಷರೂ ಯಾವಜ್ಜೀವವೂ ಬ್ರಹ್ಮಚರ್ಯದಲ್ಲಿಯೇ ಇರಬಹುದು. ಈ ವಿಷಯದಲ್ಲಿ ಶಾಸ್ತ್ರವಚನಗಳನ್ನು ಮೊದಲೇ ಕಾಣಿಸಿರುವೆವು.

ಆಕ್ಷೇಪ ೨೨.

ಸ್ತ್ರೀಯರು ಅವಿವಾಹಿತರಾಗುವುದಕ್ಕೆ ಆಚಾರವಿಲ್ಲ.

ಉತ್ತರ:—ಆಚಾರಕ್ಕೆ ಆಚಾರತ್ವವು ಶಾಸ್ತ್ರದ್ವಾರವೇ ಬರುತ್ತದೆ. ಆದುದರಿಂದ ಆಚಾರಕ್ಕಿಂತ ಶಾಸ್ತ್ರವೇ ಶ್ರೇಷ್ಠಪ್ರಮಾಣವಾಗಿರುವುದು. ಶಾಸ್ತ್ರದಲ್ಲಾದರೋ ವಿರಕ್ತರಾದ ಸ್ತ್ರೀಯರು ವಿವಾಹವಿಲ್ಲದೆ ಇರುವುದಕ್ಕೆ ಅಪ್ಪಣೆಯಿರುವುದು. ಅದಪ್ರಯುಕ್ತ ವಿರಕ್ತಸ್ತ್ರೀಯರು ಮದಿವೆಇಲ್ಲದೆ ಯಿರಬಹುದು.

ಆಕ್ಷೇಪ ೨೩.

ಮಹಾತ್ಮರು ಆಚರಿಸಿದಂತೆ ಆಚರಿಸಲಾಗದು.

ನೀವು ಮಹಾತ್ಮರ ಇತಿಹಾಸಗಳನ್ನು ಉದಾಹರಿಸಿರುವಿರಿ. ಅವರು ತಪಃಪ್ರಭಾವವುಳ್ಳವರಾದುದರಿಂದ ಶಾಸ್ತ್ರೋಲ್ಲಂಘನ ಮಾಡಿದಾಗ್ಯೂ ಅವರಿಗೆ ದೋಷವಿಲ್ಲ. ಆದುದರಿಂದ ದುರ್ಬಲರಾದ ನಾವು ಅವರು ಆಚರಿಸದಂತೆ ಆಚರಿಸಬಾರದು. ಮಹಾತ್ಮರಾದ ಕೆಲವರು ಸ್ತ್ರೀಯರು ಋತುಮತಿಗಳಾದ ಬಳಿಕ ವಿವಾಹಿತರಾದರೆಂದೂ ಕೆಲವರು ಯಾವಜ್ಜೀವವೂ ವಿವಾಹವಿಲ್ಲದೆ ಇದ್ದರೆಂದೂ ಇತಿಹಾಸಗಳಿದ್ದಮಾತ್ರಕ್ಕೆ ನಮ್ಮ ಸ್ತ್ರೀಯರೂ ಹಾಗೆ ಆಚರಿಸಲಾದೀತೆ? ಅವರು ಹಾಗೆ ಋತುಮತಿಗಳಾದ ಬಳಿಕ ಮದುವೆಮಾಡಿಕೊಳ್ಳಬಾರದು. ಮತ್ತು ಯಾವಜ್ಜೀವವೂ ಮದಿವೆಯಿಲ್ಲದೆಯೂ ಇರಕೂಡದು. ಹೀಗೆಂದು ಕೆಲವರು ಹೇಳುವರು.

ಉತ್ತರ:—ಶಾಸ್ತ್ರೋಲ್ಲಂಘನ ವಿಷಯದಲ್ಲಿ ಮಹಾತ್ಮರು ಆಚರಿಸಿದಂತೆ ನಾವು ಆಚರಿಸಬಾರದು. ಆದರೆ ಶಾಸ್ತ್ರಸಮ್ಮತವಾದ ವಿಷಯದಲ್ಲಿ ಅವರು ಮಾಡಿದಂತೆ ಮಾಡುವುದು ನಮ್ಮ ಕರ್ತವ್ಯವಾಗಿಯೇ ಇರುವುದು. ಧರ್ಮಾಚರಣೆಯ ವಿಷಯದಲ್ಲಿ ಅವರೇ ನಮಗೆ ಮೇಲುಪಂಕ್ತಿಯಲ್ಲವೆ? ಶಾಸ್ತ್ರಸಮ್ಮತವಾದ ಕಾರ್ಯಗಳಲ್ಲಿ ಮಹಾತ್ಮರನ್ನು ಅನುಸರಿಸಿದರೆ ನಮಗೆ ಪುಣ್ಯವೇ ಹೊರತು ಪಾಪವಿಲ್ಲ. ಅದಪ್ರಯುಕ್ತ ಶಾಸ್ತ್ರಸಮ್ಮತವಾದ ಋತುಮತೀ ವಿವಾಹವನ್ನು ನಮ್ಮ ಸ್ತ್ರೀಯರೂ ಆಚರಿಸಬಹುದಾಗಿದೆ. ಹಾಗೆಯೇ ವಿರಕ್ತರಾದ ಸ್ತ್ರೀಯರು ಶಾಸ್ತ್ರಾನುಸಾರವಾಗಿ ಯಾವಜ್ಜೀವವೂ ಬ್ರಹ್ಮಚರ್ಯದಲ್ಲಿಯೇ ಕಾಲಕಳೆಯಬಹುದು.

ವಿಪಕ್ಷದವರು ಇನ್ನೂ ಕೆಲವು ಆಕ್ಷೇಪಗಳನ್ನು ಮಾಡುವರು. ಗ್ರಂಥವಿಸ್ತಾರಭಯದಿಂದ ಅವನ್ನು ಇಲ್ಲಿ ಕಾಣಿಸುವುದಿಲ್ಲ. ಅವು ಅಷ್ಟು ಪ್ರಬಲವಾದವಲ್ಲ. ಆದರೆ ನಾವೇ ಈಗ ವಿಪಕ್ಷದವರನ್ನು ಕುರಿತು ಕೆಲವು ಆಕ್ಷೇಪಗಳನ್ನು ಮಾಡುವೆವು.

೧ ನೀವು ಉದಾಹರಿಸಿದ ವಚನಗಳಲ್ಲಿ ಹತ್ತುವರ್ಷ ವಯಸ್ಸಿಗೆ ಮೇಲ್ಪಟ್ಟವಳು ರಜಸ್ವಲೆಯೆಂದೂ ರಜಸ್ವಲಾದಾನದಿಂದ ನರಕಪ್ರಾಪ್ತಿಯೆಂದೂ ಉಕ್ತವಾಗಿದೆ. ಈಗ ನಮ್ಮ ದ್ವಿಜಸಂಘದಲ್ಲಿ ಹತ್ತುವರ್ಷಗಳಿಗೆ ಮೇಲ್ಪಟ್ಟ ಹುಡುಗಿಯರಿಗೆ ವಿವಾ

ಹಮಾಡುವ ಶಿಷ್ಟಾಚಾರ ಸಂಪ್ರದಾಯವುಂಟು. ಇದರಿಂದ ನರಕಪ್ರಾಪ್ತಿಯಿಲ್ಲವೆ?

ವಿಪಕ್ಷದವರ ಉತ್ತರ:—'ಅನ್ಯತೋ ಗ್ರಾಹ್ಯಃ' ಎಂದು ಉಕ್ತವಾಗಿದೆಯೆಂದರೆ ಬೇರೇ ಶಾಸ್ತ್ರವಚನಗಳನ್ನು ಸ್ವೀಕರಿಸಬಹುದು. ಬೇರೆವಚನಗಳ ಪ್ರಕಾರ ಹನ್ನೆರಡು ವರ್ಷ ವಯಸ್ಸಿನ ಪರ್ಯಂತ ಅವಧಿಯುಂಟು. ಆ ಅವಧಿಯೊಳಗಾಗಿ ಮದಿವೆ ಮಾಡಿದರೆ ದೋಷವಿಲ್ಲ.

ಪ್ರಶ್ನೆ:—ಕೆಲವು ವಚನಗಳಲ್ಲಿ ಹನ್ನೆರಡು ವಯಸ್ಸಿನವಳು 'ವೃಷಲಿ' ಎಂದು ಉಕ್ತವಾಗಿದೆ. ಅಂಥಾ ವೃಷಲಿಗೂ ಅವಳನ್ನು ಮದಿವೆಮಾಡಿಕೊಟ್ಟವರಿಗೂ ಮದಿವೆ ಮಾಡಿಕೊಂಡವನಿಗೂ ದೋಷವು ಪ್ರಾಪ್ತವಾಗುವುದೆಂದೂ ಉಕ್ತವಾಗಿದೆ. ಇದಕ್ಕೇನುಮಾಡಬೇಕು? ಇದಲ್ಲದೆ ಈಗ ಕೆಲವರು ಹನ್ನೆರಡುವರ್ಷಗಳಿಗೆ ಮೇಲ್ಪಟ್ಟ ಹುಡುಗಿಯರಿಗೂ ಮದುವೆಮಾಡುವರು.

ಉತ್ತರ:— 'ಅನ್ಯತೋ ಗ್ರಾಹ್ಯಃ' ಎಂದಿದೆ. ಬೇರೆ ವಚನಗಳ ಪ್ರಕಾರ ಋತುವಾಗುವುದರೊಳಗಾಗಿ ಮದುವೆಮಾಡಬಹುದು. ಆದಪ್ರಯುಕ್ತ ದೋಷವಿಲ್ಲ.

ಹಾಗಾದರೆ ನಮಗೂ 'ಅನ್ಯತೋ ಗ್ರಾಹ್ಯಃ' ಎಂಬುದು ಅನ್ವಯಿಸುತ್ತದೆ. ಬೇರೆ ಕೆಲವು ವಚನಗಳ ಪ್ರಕಾರ ಋತುಮತಿಯಾದವಳಿಗೂ ವಿವಾಹವುಂಟು. ಅದಪ್ರಯುಕ್ತ ಋತುಮತೀವಿವಾಹವನ್ನಾಚರಿಸುವುದರಿಂದ ದೋಷವಿಲ್ಲ.

೨. ಸ್ತ್ರೀಯರಿಗೆ ಜನ್ಮತಃ ಸಮವರ್ಷಗಳಲ್ಲಿ ಮದಿವೆಮಾಡುವುದು ಶುಭವೆಂತಲೂ ವಿಷಮವರ್ಷಗಳಲ್ಲಿ ಮದಿವೆಮಾಡುವುದು ಅಶುಭವೆಂತಲೂ ನಾರದವಚನವಿರುವುದು. ಹೇಗೆಂದರೆ:—

ಯುಗ್ಮೇಬ್ದೇ ಜನ್ಮತಃ ಸ್ತ್ರೀಣಾಂ ಶುಭದಂ ಪಾಣಿಪೀಡನಂ ।
ಏತತ್ಪುಂಸಾಮಯುಗ್ಮೇಬ್ದೇ ವ್ಯತ್ಯಯೇನಾಶುಭಂ ತಯೋಃ॥

ಅರ್ಥ:—ಸ್ತ್ರೀಯರಿಗೆ ಜನ್ಮತಃ ಸಮವರ್ಷಗಳಲ್ಲಿಯೂ ಪುರುಷರಿಗೆ ವಿಷಮವರ್ಷಗಳಲ್ಲಿಯೂ ವಿವಾಹಮಾಡುವುದು ಶುಭಕರವು. ಇದಕ್ಕೆ ವ್ಯತ್ಯಾಸವಾಗಿ ಮಾಡಿದರೆ ಉಭಯರಿಗೂ ಅಶುಭವು.

ಹೀಗಿದ್ದಾಗ್ಯೂ ಸ್ತ್ರೀಯರಿಗೆ ವಿಷಮವರ್ಷಗಳಲ್ಲಿ ಅಶುಭವಾದ ವಿವಾಹವನ್ನು ಏತಕ್ಕೆ ಮಾಡುವರು?

ಉತ್ತರ:—'ಅನ್ಯತೋ 'ಗ್ರಾಹ್ಯ' ಎಂದಿದೆ. ಒಂಭತ್ತುವರ್ಷದವಳು ರೋಹಿಣಿಯು; ಆಕೆಯನ್ನು ದಾನಮಾಡಿದರೆ ವೈಕುಂಠಪ್ರಾಪ್ತಿಯೆಂದು ಬೇರೆ ವಚನವಿರುವುದು. ಈ ವಚನಪ್ರಕಾರ ವಿಷಮವರ್ಷದಲ್ಲಿ ಸ್ತ್ರೀಯರಿಗೆ ಮದುವೆಮಾಡಿದರೆ ಅಶುಭಕ್ಕೆ ಕಾರಣವಿಲ್ಲ.

ಸರಿ, ಹಾಗಾದರೆ ನಮಗೂ 'ಅನ್ಯತೋ ಗ್ರಾಹ್ಯಃ' ಎಂಬುದು ಅನ್ವಯಿಸುವುದು. ಋತುಮತಿಯಾಗಿ ಮೂರುವರ್ಷಗಳ ಮೇಲೆ ಸ್ತ್ರೀಯು ಮದಿವೆ ಮಾಡಿಕೊಳ್ಳಬಹುದೆಂದು ಬೇರೇ ವಚನಗಳಿವೆ. ಈ ವಚನಗಳ ಪ್ರಕಾರ ಋತುಮತೀ ವಿವಾಹವು ಉಚಿತವು.

೩. ಒಬ್ಬನಿಗೆ ವಾಚಾದತ್ತಳಾದವಳನ್ನು ಅಥವಾ ಮನೋದತ್ತಳಾದವನ್ನು ಮತ್ತೊಬ್ಬನು ಮದುವೆಯಾಗಬಾರದು, ತ್ಯಜಿಸಬೇಕು. ಎಂದು ಕಶ್ಯಪವಚನವಿರುವುದು. ಆದರೆ ಅಂಥವರನ್ನೂ ನಮ್ಮ ಈಗಿನ ಕಾಲದಲ್ಲಿ ಅನ್ಯರು ಮದಿವೆಮಾಡಿಕೊಳ್ಳುವರು. ಇದು ದೋಷವಲ್ಲವೆ ?

ಉತ್ತರ:—ಕೆಲವು ಸಂದರ್ಭಗಳಲ್ಲಿ ಅಂಥವರನ್ನೂ ಅನ್ಯರು ಮದಿವೆಮಾಡಿಕೊಳ್ಳಬಹುದೆಂದು ಬೇರೆ ವಚನಗಳಿರುವುದರಿಂದ, ಆ ವಚನಗಳ ಪ್ರಕಾರ ದೋಷವಿಲ್ಲ.

ಹಾಗಾದರೆ ನಮಗೂ ಇದೇ ನ್ಯಾಯವು ಅನ್ವಯಿಸುವುದು. ಕೆಲವು ಸಂದರ್ಭಗಳಲ್ಲಿ ಸ್ತ್ರೀಯರು ಋತುಮತಿಗಳಾದ ಬಳಿಕ ವಿವಾಹಮಾಡಿಕೊಳ್ಳಬಹುದೆಂದು ಅನೇಕ ವಚನಗಳಿರುವುದರಿಂದ, ಆ ವಚನಗಳ ಪ್ರಕಾರ ಋತುಮತೀವಿವಾಹವನ್ನಾಚರಿಸಿದರೆ ದೋಷವಿಲ್ಲ.

೪. ಸ್ತ್ರೀಯರಿಗೆ ಜನ್ಮತಃ ಆರುವರ್ಷಗಳೊಳಗಾಗಿ ವಿವಾಹವನ್ನು ಮಾಡಬಾರದೆಂದು ಚ್ಯವನವಚನವಿರುವದು. ಆದಾಗ್ಯೂ ಆರುವರ್ಷದೊಳಗಿನ ಹುಡುಗಿಯರಿಗೆ ಮದುವೆಮಾಡುವ ಸಂಪ್ರದಾಯವಿರುವುದು. ಇದು ದೋಷವಲ್ಲವೆ?

ಉತ್ತರ:—'ಅನ್ಯತೋ ಗ್ರಾಹ್ಯಃ' ಎಂದಿದೆ. ಅಂಥಾ ಆರುವರ್ಷಗಳೊಳಗಿನ ಹುಡುಗಿಯರಿಗೂ ವಿವಾಹಮಾಡಬಹುದೆಂದು ಬೇರೇ ವಚನಗಳಿರುವುದರಿಂದ ಆ ವಚನಗಳಪ್ರಕಾರ ಅಂಥಾ ಹುಡುಗಿಯರಿಗೆ ಮದುವೆಮಾಡಿದರೆ ದೋಷವೇನೂ ಇಲ್ಲ.

ಹಾಗಾದರೆ ನಮಗೂ 'ಅನ್ಯತೋ ಗ್ರಾಹ್ಯಃ' ಎಂಬುದುಂಟು. ಋತುಮತೀವಿವಾಹವಾಗಬಹುದೆಂದು ಅನೇಕ ವಚನಗಳಿರುವುದರಿಂದ, ಆ ವಚನಗಳ ಪ್ರಕಾರ ಋತುಮತೀವಿವಾಹವನ್ನಾಚರಿಸಿದರೆ ದೋಷವಿಲ್ಲ.

೫. ಕಲಿಯುಗದಲ್ಲಿ ಸನ್ಯಾಸವು ಕೂಡದೆಂದು ಅನೇಕ ಶಾಸ್ತ್ರವಚನಗಳಿವೆ. ಆದಾಗ್ಯೂ ಕಲಿಯುಗದಲ್ಲಿ ಸನ್ಯಾಸವನ್ನಾಚರಿಸುವ ಪದ್ಧತಿಯುಂಟು. ಇದು ದೋಷವಲ್ಲವೆ ?

ಉತ್ತರ:—ಕಲಿಯುಗದಲ್ಲಿಯೂ ಸನ್ಯಾಸವನ್ನಾಶ್ರಯಿಸಬಹುದೆಂದು ಬೇರೆ ವಚನಗಳಿರುವುವು. ಆ ವಚನಗಳ ಪ್ರಕಾರ ಅದನ್ನು ಸ್ವೀಕರಿಸಿದರೆ ದೋಷವಿಲ್ಲ.

ಹಾಗಾದರೆ ಸ್ತ್ರೀಯರೂ ಸನ್ಯಾಸಿಗಳಾಗಿರಬಹುದೆಂದು ವಚನಗಳಿರುವುವು. ಆ ವಚನಗಳ ಪ್ರಕಾರ ಅವರು ಮದಿವೆಯಿಲ್ಲದೆ ಸನ್ಯಾಸಿಯರಾಗಿರಬಹುದು.

೬. ಆಸುರವಿವಾಹವು ಕೂಡದೆಂದು ಅನೇಕ ಶಾಸ್ತ್ರವಚನಗಳಿರುವುವು. ಆದಾಗ್ಗೂ ಅದನ್ನು ಅನೇಕರು ಆಚರಿಸುತ್ತಿರುವರು. ಇದು ದೋಷವಲ್ಲವೆ?

ಉತ್ತರ:—ಬೇರೆ ಕೆಲವು ವಚನಗಳ ಪ್ರಕಾರ ಆಸುರವಿವಾಹವನ್ನಾಚರಿಸಬಹುದಾಗಿದೆ.

ಹಾಗಾದರೆ ಋತುಮತೀವಿವಾಹಾನುಮೋದಕಗಳಾದ ಅನೇಕ ವಚನಗಳಿರುವುದರಿಂದ, ಆ ವಚನಗಳ ಪ್ರಕಾರ ಅದನ್ನಾಚರಿಸಬಹುದಾಗಿದೆ.

೭. ಋತುಕಾಲದಲ್ಲಿ ಪತ್ನೀಗಮನ ಮಾಡದ ಪುರುಷನಿಗೂ ಪತಿಗಮನ ಮಾಡದ ಸ್ತ್ರೀಗೂ ಭ್ರೂಣಹತ್ಯಾದೋಷವು ಪ್ರಾಪ್ತವಾಗುವುದೆಂದು ಅನೇಕ ಶಾಸ್ತ್ರವಚನಗಳಲ್ಲಿ ಉಕ್ತವಾಗಿದೆ. ಹೀಗಿದ್ದಾಗ್ಗೂ ಈಗ ಅನೇಕರು ನಿಷೇಕವನ್ನು ಬಹುಕಾಲದವರೆಗೂ ಮಾಡಿಕೊಳ್ಳುವುದಿಲ್ಲ. ಇದರಿಂದ ಭ್ರೂಣಹತ್ಯಾದೋಷಕ್ಕೆ ಗುರಿಯಾಗುವುದಿಲ್ಲವೆ?

ಉತ್ತರ:—ಅನಿವಾರ್ಯದ ದೆಸೆಯಿಂದ ಬಿಟ್ಟರೆ ದೋಷವಿಲ್ಲ.

ಹಾಗಾದರೆ ಅನಿವಾರ್ಯದದೆಸೆಯಿಂದ ಹುಡುಗಿಯರು ಋತುಮತಿಯರಾಗುವುದರೊಳಗಾಗಿ ವಿವಾಹಮಾಡದೆ ಇದ್ದಾಗ್ಗೂ ದೋಷವಿಲ್ಲ. ಋತುವಾದಬಳಿಕ ಅನುಕೂಲವಾದಾಗ ಅವರಿಗೆ ಮದುವೆಮಾಡಬಹುದಾಗಿದೆ.

ಪ್ರಕರಣ ೧೬.

ನಿರ್ಣಯ.

ಇದುವರೆಗೂ ಮಾಡಿದ ವಿಚಾರದಿಂದ ಋತುಮತೀ ವಿವಾಹವು ಶಾಸ್ತ್ರಸಮ್ಮತವೆಂಬುದು ವ್ಯಕ್ತವಾಗುವುದು. ಆದರೆ ಕೆಲವು ಶಾಸ್ತ್ರವಚನಗಳು ಋತುಮತೀ ವಿವಾಹವನ್ನು ನಿಷೇಧಿಸುವಂತೆ ತೋರುವುವು. ಹೀಗೆ ಶಾಸ್ತ್ರವಚನಗಳಿಗೆ ಪರಸ್ಪರ ವಿರೋಧವು ಕಂಡುಬರುವುದು.

ಶಾಸ್ತ್ರವಚನಗಳಿಗೆ ವಿರೋಧಬಾರದಂತೆ ಅರ್ಥಮಾಡಬೇಕೆಂದು ಕೆಲವರು ಹೇಳುವರು. ಶಾಸ್ತ್ರಕಾರರು ನಮಗಿಂತಲೂ ಗಟ್ಟಿಗರು, ಜ್ಞಾನಿಗಳು, ಮತ್ತು ಮಹಾಪಂಡಿತರು. ಅವರೆಲ್ಲರೂ ಸಾಮಾನ್ಯವಾಗಿ ಏಕರೀತಿಯಲ್ಲಿ ಧರ್ಮಗಳನ್ನು ಬೋಧಿಸಿರುವರು. ನಾವು ಅಲ್ಪಮತಿಗಳಾದಪ್ರಯುಕ್ತ ಸಮಂಜಸವಾಗಿ ಅರ್ಥಮಾಡುವ ಯೋಗ್ಯತೆಯು ನಮಗಿಲ್ಲ. ಆದುದರಿಂದಲೇ ಶಾಸ್ತ್ರಕಾರರಿಗೆ ಪರಸ್ಪರ ವಿರೋಧವಿದೆಯೆಂದು ನಮಗೆ ತೋರುತ್ತದೆ. ನಾವು ಸಾಧ್ಯವಾದಮಟ್ಟಿಗೂ ವಿರೋಧವಿಲ್ಲದಂತೆ ಶಾಸ್ತ್ರವಚನಗಳಿಗೆ ಅರ್ಥಮಾಡಬೇಕೆಂದು ಹೇಳುವರು.

ಆದರೆ ಅನೇಕ ವಿಷಯಗಳಲ್ಲಿ ಶಾಸ್ತ್ರಕಾರರಿಗೆ ವಿರೋಧವಿರುವುದೇನೋ ಸತ್ಯವಾಗಿದೆ. ಅದನ್ನು ತಪ್ಪಿಸುವಂತೆ ಅರ್ಥವನ್ನು ಕಲ್ಪಿಸಲು ಸಾಧ್ಯವಿಲ್ಲ. ಆದರೆ ಪ್ರಕೃತದಲ್ಲಿ ಮೇಲೆ ಉದಾಹರಿಸಿದ ನಿಷೇಧಕವಚನಗಳಿಗೂ ಅನುಮೋದಕ ವಚನಗಳಿಗೂ ವಿರೋಧವಿಲ್ಲದಂತೆ ತಕ್ಕಮಟ್ಟಿಗೆ ಅರ್ಥವನ್ನು ಕಲ್ಪಿಸಬಹುದೆಂದು ಕೆಲವರು ಹೇಳುವರು. ಹೇಗೆಂದರೆ:—ನಿಷೇಧಕವಚನಗಳು ಸರ್ವತ್ರವ್ಯಾಪಿಸುವುದಿಲ್ಲ. ಏಕದೇಶದಲ್ಲಿ ಅನ್ವಯಿಸುವುವು. ಯಾರು ಕನ್ಯಾದಾನ ಮಾಡಬೇಕೆಂದು ಸಂಕಲ್ಪವುಳ್ಳವರಾಗಿರುವರೋ ಯಾರು ಕನ್ಯಾದಾನಫಲವನ್ನಪೇಕ್ಷಿಸುವರೋ ಅಂಥವರಿಗೆ ಈ ನಿಷೇಧಕವಚನಗಳು ಅನ್ವಯಿಸುವುವೇ ಹೊರತು ಇತರರಿಗಿಲ್ಲ. ಕನ್ಯಾದಾನಸಂಕಲ್ಪವಿಲ್ಲದವರಿಗೂ ಕನ್ಯಾದಾನಫಲವನ್ನಪೇಕ್ಷಿಸದವರಿಗೂ ಈ ವಚನಗಳು ಅನ್ವಯಿಸುವುದಿಲ್ಲ.

ಅನೃತುಮತಿ ಕನ್ಯಾದಾನಕ್ಕೆ ಸ್ವರ್ಗಾದಿ ಲೋಕಗಳ ಪ್ರಾಪ್ತಿಯು ಹೇಳಲ್ಪಟ್ಟಿರುವುದು. ಇಂಥಾ ಫಲವನ್ನು ಹೊಂದಬೇಕಾದರೆ ದಾನವಸ್ತುವು ಶುದ್ಧವಾಗಿರಬೇಕು. ಯಾವ ದಾನದ ಫಲವನ್ನು ಹೊಂದಬೇಕಾದರೂ, ಅಶುದ್ಧವಾದ ವಸ್ತುವಿನ ದಾನದಿಂದ ಹೊಂದಲಾಗುವುದಿಲ್ಲ. ಕನ್ಯೆಯು ಋತುಮತಿಯಾದಬಳಿಕ ಅಶುದ್ಧಳಾಗುವ ಸಂಭವವುಂಟು. ಆಕೆಯ ಮನಸ್ಸಿನಲ್ಲಿ ಕಾಮವಿಕಾರವು ಹುಟ್ಟಬಹುದು.

ಆಕೆಯು ಮನಸ್ಸಿನಲ್ಲಿಯೇ ಒಬ್ಬನನ್ನು ವರಿಸಬಹುದು, ನಿನ್ನನ್ನು ಬಿಟ್ಟು ಅನ್ಯನನ್ನು ಮದಿವೆಮಾಡಿಕೊಳ್ಳುವುದಿಲ್ಲವೆಂದು ವಾಗ್ದಾನ ಮಾಡಬಹುದು, ಅಥವಾ ಪುರುಷ ಸಂಭೋಗವನ್ನೇ ಮಾಡಬಹುದು. ಇಂಥಾವಳನ್ನು ತಂದೆಯು ಅನ್ಯನಿಗೆ ದಾನಮಾ ಡುವುದು ಸರಿಯಲ್ಲ. ಆಕೆಯು ಅನ್ಯನ ವಿಷಯದಲ್ಲಿ ಅಶುದ್ಧಳಾಗುವಳು ಇಂಥಾ ಅಶುದ್ಧವಾದ ವಸ್ತುವಿನ ದಾನವೂ ಪರಿಗ್ರಹವೂ ದೋಷಹೇತುವಾಗಿರುವುವು.

ತಂದೆಯು ತನ್ನ ಮಗಳನ್ನು ಮನಸಾ ಅಥವಾ ವಾಚಾ ಒಬ್ಬ ಪುರುಷನಿಗೆ ದಾನಮಾಡುವನು. ಆದರೆ ಯುವತಿಯಾದ ಕನ್ಯೆಯು ಅವನನ್ನು ಮದಿವೆಯಾ ಗಲು ಒಪ್ಪದೆ ಇರಬಹುದು. ಆಕೆಯು ವಾಚಾ ಅಥವಾ ಮನಸಾ ಇನ್ನೊಬ್ಬನನ್ನು ವರಿಸಬಹುದು. ತಂದೆಯು ಉದ್ದೇಶಿಸಿರುವ ವರನ ವಿಷಯದಲ್ಲಿ ಇಂಥಾವಳು ದಾನಕ್ಕೆ ಅಯೋಗ್ಯಳಾಗುವಳು. ಇದಲ್ಲದೆ ತಂದೆಯು ತಾನು ಕುರಿತಿರುವ ವರನಿಗೆ ಅವಳನ್ನು ಮದಿವೆಮಾಡಿಕೊಡದಿದ್ದರೆ, ತಂದೆಗೆ ಕನ್ಯಾಪಹಾರದೋಷವು ಬರು ವುದು. ಒಂದುವೇಳೆ ಬಲವಂತದಿಂದ ಆಕೆಯನ್ನು ಅವಳು ಇಷ್ಟಪಡದ ವರನಿಗೆ ಕೊಟ್ಟಾಗ್ಯೂ ತಂದೆಗೆ ಪಾಪವು ಸಂಭವಿಸುವುದು. ಇಂಥಾ ಸಂಕಟಗಳ ದೆಸೆಯಿಂದ ಕನ್ಯಾದಾನಫಲವನ್ನಪೇಕ್ಷಿಸುವವರು ಋತವಾಗದ ಚಿಕ್ಕ ಹುಡುಗಿಯರನ್ನೇ ತಮ್ಮ ಇಷ್ಟಬಂದವರಿಗೆ ಮದಿವೆಮಾಡಿಕೊಡಬೇಕೆಂದು ಶಾಸ್ತ್ರಕಾರರು ಅಪ್ಪಣೆ ಕೊಡಿಸಿ ರುವರೆಂದು ತೋರುತ್ತದೆ.

ಚಿಕ್ಕವಯಸ್ಸಿನಲ್ಲೇ ಕನ್ಯೆಯನ್ನು ದಾನಮಾಡಿದರೆ ಇಂಥಾ ತೊಂದರೆಗಳಿಗೆ ಅವಕಾಶವಿರುವುದಿಲ್ಲ. ಬುದ್ಧಿವಿಕಾಶವು ಕಡಿಮೆಯಾಗಿರುವುದರಿಂದ, ಅವಳು ತಾಯಿ ತಂದೆಗಳು ಹೇಳುವಂತೆ ಕೇಳುವಳೇ ಹೊರತು ಅವರ ಮಾತಿಗೆ ವಿರೋಧವಾಗಿ ನಡೆ ಯಳು. ಅವಳಿಗೆ ಇನ್ನೂ ಕಾಮವಿಕಾರವಿಲ್ಲವಾದುದರಿಂದ ಶುದ್ಧಳಾಗಿಯೂ ದಾನ ಯೋಗ್ಯಳಾಗಿಯೂ ಇರುವಳು. ಹೀಗೆ ಕಾಯೇನ ವಾಚಾ ಮನಸಾ ಅಶುದ್ಧವಾಗ ಲವಕಾಶವಿಲ್ಲವಾದುದರಿಂದ, ಕನ್ಯಾದಾನಫಲವನ್ನಪೇಕ್ಷಿಸುವವರು ಹುಡುಗಿಯರಿಗೆ ಹತ್ತುವರ್ಷಗಳು ತುಂಬುವುದರೊಳಗಾಗಿ ದಾನವನ್ನು ಮಾಡಬೇಕೆಂದು ಅನೇಕ ಶಾಸ್ತ್ರಕಾರರು ವಿಧಿಸಿರುವಂತೆ ತೋರುತ್ತದೆ. ನಿಷೇಧಕವಚನಗಳು ಇಂಥವರಿಗೆ ಅನ್ವಯಿಸುವುವೇ ಹೊರತು ಕನ್ಯಾದಾನಫಲವನ್ನಪೇಕ್ಷಿಸದವರಿಗೆ ಅವು ಅನ್ವಯಿಸು ವುದಿಲ್ಲ.

ಆದರೆ ಅನೇಕ ಕನ್ಯೆಯರು ಹನ್ನೊಂದುವರ್ಷದವರಾದಬಳಿಕವೂ ಋತುಮತಿ ಗಳಾದಬಳಿಕವೂ ತಾಯಿತಂದೆಗಳಿಗೆ ವಿಧೇಯರಾಗಿಯೂ ಕಾಮವಿಕಾರವಿಲ್ಲದವ ರಾಗಿಯೂ ಇರುವರು. ಇಂಥವರನ್ನು ದಾನಮಾಡಬಹುದಾಗಿದೆ. ಆದುದರಿಂದ ಕೆಲವರು ಶಾಸ್ತ್ರಕಾರರು ಹನ್ನೆರಡುವರ್ಷ ವಯಸ್ಸಿನ ಪರ್ಯಂತವೂ ಋತುವಾದಬಳಿಕ ಮೂರುವರ್ಷಗಳ ಪರ್ಯಂತವೂ ಕನ್ಯಾದಾನಕ್ಕೆ ಅಪ್ಪಣೆಕೊಟ್ಟಿರುವರು. ಋತುವಾಗಿ ಮೂರುವರ್ಷಗಳಾದಬಳಿಕ ಕನ್ಯೆಯಲ್ಲಿ ತಂದೆಗಿರುವ ಸ್ವಾಮಿತ್ವವು ಹೋಗುವುದೆಂದು

ಕೆಲವು ಶಾಸ್ತ್ರಕಾರರ ಅಭಿಪ್ರಾಯವಾಗಿರುವದು. ಸ್ವಾಮಿತ್ವವು ಹೋದಬಳಿಕ ದಾನಮಾಡುವ ಅಧಿಕಾರವೇ ತಪ್ಪಿಹೋಗುವುದು. ಋತುಮತಿಯಾದ ಕನ್ಯೆಯು ಮೂರುವರ್ಷದೊಳಗಾಗಿ ವಿವಾಹವನ್ನಪೇಕ್ಷಿಸಿದರೆ ಆಗ ತಾಯಿತಂದೆಗಳು ಆಕೆಗೆ ಮದಿವೆಮಾಡದಿದ್ದರೂ ಅಥವಾ ಸ್ವಯಂವರಕ್ಕೆ ಅಪ್ಪಣೆ ಕೊಡದಿದ್ದರೂ ಅವರಿಗೆ ದೋಷವು ಬರುವುದೆಂದು ಕೆಲವು ಶಾಸ್ತ್ರವಚನಗಳಿಂದ ಗೊತ್ತಾಗುತ್ತದೆ. ಆದರೆ ಋತುಮತಿಯೂ ಮೂರುವರ್ಷಗಳೊಳಗಾಗಿ ವಿವಾಹವನ್ನಪೇಕ್ಷಿಸದಿದ್ದರೆ ತಂದೆತಾಯಿಗಳಿಗೆ ಯಾವ ದೋಷಕ್ಕೂ ಅವಕಾಶವಿಲ್ಲ. ಆಮೇಲೆ ಆಕೆಯು ತನಗೆ ಇಷ್ಟಬಂದಾಗ ಮದಿವೆಮಾಡಿಕೊಳ್ಳಬಹುದು. ಆಗ ತಂದೆತಾಯಿ ಮುಂತಾದ ಪೋಷಕರ ಅಪ್ಪಣೆಯನ್ನೂ ಆಕೆಯು ಕೇಳಬೇಕಾದ ಅವಶ್ಯಕವೂ ಇರುವುದಿಲ್ಲ. ಇದಲ್ಲದೆ ಸ್ತ್ರೀಯು ತನಗೆ ಇಷ್ಟವಿದ್ದರೆ ಯಾವಜ್ಜೀವವೂ ಮದಿವೆಯಿಲ್ಲದೆ ವಿರಕ್ತಳಾಗಿಯೂ ಇರಬಹುದು. ಹೀಗೆ ನಮ್ಮ ಶಾಸ್ತ್ರಕಾರರ ಮತವಾಗಿರುವುದೆಂದು ಹೇಳುವರು; ಮತ್ತು ಈ ವಿಷಯದಲ್ಲಿ ಕೆಲವು ಶಾಸ್ತ್ರವಚನಗಳನ್ನು ಉದಾಹರಿಸುವರು.—

ಭಟ್ಟನೀಲಕಂಠಕೃತಪ್ರಾಯಶ್ಚಿತ್ತಮಯೂಖ.

ಪರಾಶರಃ.

ದಾನಂ ಪುಣ್ಯಮಕೃತ್ವಾ ವಾ ಪ್ರಾಯಶ್ಚಿತ್ತಂ ದಿನತ್ರಯಂ ।
ಉಪಸ್ಪೃಶೇತ್ತ್ರಿಷವಣಂ ಮಹಾನದ್ಯುಪಸಂಗಮಂ ॥
ಚೀರ್ಣಾಂತೇ ಚೈವ ಗಾಂ ದದ್ಯಾದ್ಬ್ರಾಹ್ಮಣಾನ್ಭೋಜಯೇದ್ದಶ ।
ವ್ಯಾಖ್ಯಾ —ಸಂಕಲ್ಪಿತದಾನಾದ್ಯಕೃತ್ವೇತ್ಯರ್ಥಃ ॥

ಅರ್ಥ:—ಪರಾಶರವಚನ. ಪುಣ್ಯಕರವಾದ ದಾನವನ್ನು ಮಾಡದೆ ಇರುವವನು ಮೂರುದಿವಸಗಳ ಪ್ರಾಯಶ್ಚಿತ್ತವನ್ನು ಮಾಡಬೇಕು. ಮಹಾನದೀ ಸಂಗಮದಲ್ಲಿ ತ್ರಿಷವಣಸ್ನಾನವನ್ನೂ ಮಾಡಬೇಕು. ಪ್ರಾಯಶ್ಚಿತ್ತಮಾಡಿಕೊಂಡಬಳಿಕ ಗೋದಾನವನ್ನು ಕೊಡಬೇಕು. ಹತ್ತುಜನ ಬ್ರಾಹ್ಮಣರಿಗೂ ಭೋಜನ ಮಾಡಿಸಬೇಕು. ವ್ಯಾಖ್ಯೆ.— ಸಂಕಲ್ಪಿತವಾದ ದಾನಾದಿಗಳನ್ನು ಮಾಡದಿದ್ದರೆ ಎಂದು ಇಲ್ಲಿ ಅರ್ಥವು.

ಹೀಗೆ ದಾನಯೋಗ್ಯವಾದ ಯಾವವಸ್ತುವನ್ನಾದರೂ ದಾನಮಾಡಬೇಕೆಂದು ಸಂಕಲ್ಪಿಸಿಕೊಂಡವನು ಸಕಾಲದಲ್ಲಿ ಅದನ್ನು ದಾನಮಾಡದಿದ್ದರೆ ದೋಷಬರುವುದರಿಂದ, ಅದರ ಪರಿಹಾರಾರ್ಥವಾಗಿ ಆತನು ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂದು ಇದರಿಂದ ತೋರುತ್ತದೆ. ಈ ವಚನವು ಕನ್ಯಾದಾನ ಸಂಕಲ್ಪವುಳ್ಳವನಿಗೂ ಅನ್ವಯಿಸುತ್ತದೆ.

ಕಾಶೀಖಂಡ, ಅಧ್ಯಾಯ ೩೯.

ಕನ್ಯಾಂ ಭುಂಕ್ತೇ ರಜಃಕಾಲೇಽಗ್ನಿಃ ಶಶೀ ರೋಮದರ್ಶನೇ ।
ಸ್ತನೋದ್ಭೇದೇ ಚ ಗಂಧರ್ವಸ್ತತ್ಪ್ರಾಗೇವ ಪ್ರದೀಯತೇ ॥೧॥

ಕನ್ಯಾದಾನಫಲೇಪ್ಸುಸ್ತುಸ್ಮಾದ್ದದ್ಯಾದ್ಧಿನಗ್ನಿಕಾಂ ।
ಅನ್ಯಥಾ ನ ಫಲಂ ದಾತುಃ ಪ್ರತಿಗ್ರಾಹೀ ಪತೇದಧಃ ॥೩॥
ಕನ್ಯಾಮಭುಕ್ತಾಂ ಸೋಮಾದ್ಯೈರ್ದದದ್ದಾನಫಲಂ ಲಭೇತ್ ।
ದೈವಭುಕ್ತಾಂ ದದದ್ದಾತಾ ನ ಸ್ವರ್ಗಮಧಿಗಚ್ಛತಿ ॥೪॥

ಪರಾಶರಸಂಹಿತೆ, ಅಧ್ಯಾಯ ೭.

ಅಷ್ಟವರ್ಷಾ ಭವೇದ್ಗೌರೀ ನವವರ್ಷಾತು ರೋಹಿಣೀ ।
ದಶವರ್ಷಾ ಭವೇತ್ಕನ್ಯಾ ಅತಊರ್ಧ್ವಂ ರಜಸ್ವಲಾ ॥೪॥
ಪ್ರಾಪ್ತೇ ತು ದ್ವಾದಶೇ ವರ್ಷೇ ಯಃ ಕನ್ಯಾಂ ನ ಪ್ರಯಚ್ಛತಿ ।
ಮಾಸಿಮಾಸಿ ರಜಸ್ತಸ್ಯಾಃ ಪಿಬಂತಿ ಪಿತರಃ ಸ್ವಯಂ ॥೫॥
ಮಾತಾ ಚೈವ ಪಿತಾ ಚೈವ ಜ್ಯೇಷ್ಠೋ ಭ್ರಾತಾ ತಥೈವಚ ।
ತ್ರಯಸ್ತೇ ನರಕಂ ಯಾಂತಿ ದೃಷ್ಟ್ವಾ ಕನ್ಯಾಂ ರಜಸ್ವಲಾಂ ॥೬॥
ಯಸ್ತಾಂ ಸಮುದ್ವಹೇತ್ ಕನ್ಯಾಂ ಬ್ರಾಹ್ಮಣೋಽಜ್ಞಾನಮೋಹಿತಃ ।
ಅಸಂಭಾಷ್ಯೋ ಹ್ಯಪಾಂಕ್ತೇಯಃ ಸ ವಿಪ್ರೋ ವೃಷಲೀಪತಿಃ ॥೭॥

ಮರೀಚಿ.

ಗೌರೀಂ ದದನ್ನಾಕಪೃಷ್ಠಂ ವೈಕುಂಠಂ ರೋಹಿಣೀಂ ದದತ್ ।
ಕನ್ಯಾಂ ದದದ್ಬ್ರಹ್ಮಲೋಕಂ ರೌರವಂ ತು ರಜಸ್ವಲಾಂ ॥

ಅರ್ಥ.—ಕಾಶೀಖಂಡ.—ಋತುಕಾಲದಲ್ಲಿ ಕನ್ಯೆಯನ್ನು ಅಗ್ನಿಯೂ ರೋ
ಮೋತ್ಪತ್ತಿಯಾದ ಬಳಿಕ ಸೋಮನೂ ಸ್ತನೋತ್ಪತ್ತಿಯನಂತರ ಗಂಧರ್ವನೂ
ಭೋಗಿಸುವರು. ಆದುದರಿಂದ ಇವರು ಭೋಗಿಸುವುದಕ್ಕೆ ಮೊದಲೇ ಕನ್ಯೆಯು
ದಾನಮಾಡಲ್ಪಡಬೇಕು. ಕನ್ಯಾದಾನಫಲವನ್ನಪೇಕ್ಷಿಸುವವನು ಋತುವಾಗದ
ಕನ್ಯೆಯನ್ನೇ ದಾನಮಾಡಬೇಕು. ಋತುವಾದ ಬಳಿಕ ದಾನಮಾಡಿದರೆ ದಾತೃವಿಗೆ
ಫಲವಿಲ್ಲ; ಮತ್ತು ಪ್ರತಿಗ್ರಾಹಕನೂ ಅಧೋಗತಿಯನ್ನು ಹೊಂದುವನು.
ಸೋಮಾದಿಗಳಿಂದ ಭೋಗಿಸಲ್ಪಡದ ಕನ್ಯೆಯನ್ನು ದಾನಮಾಡುವವನು ಆ ದಾ
ನದ ಫಲವನ್ನು ಪಡೆಯುವನು. ಅವರಿಂದ ಭೋಗಿಸಲ್ಪಟ್ಟವಳನ್ನು ದಾನಮಾಡು
ವವನು ಸ್ವರ್ಗವನ್ನು ಪಡೆಯನು. ಪರಾಶರಸಂಹಿತೆ.—ಎಂಟುವರ್ಷ ವಯಸ್ಸಿನ
ವಳು ಗೌರಿಯು, ಒಂಭತ್ತು ವರ್ಷದವಳು ರೋಹಿಣಿಯು, ಹತ್ತು ವರ್ಷದವಳು
ಕನ್ಯೆಯು, ಅದಕ್ಕೆ ಮೇಲ್ಪಟ್ಟ ವಯಸ್ಸಿನವಳು ರಜಸ್ವಲೆಯು. ಹನ್ನೆರಡನೆಯ
ವರ್ಷವಾದಾಗ್ಯೂ ಯಾವನು ಕನ್ಯೆಗೆ ಮದಿವೆಮಾಡುವುದಿಲ್ಲವೋ ಅವನ ಪಿತೃ
ಗಳು ಪ್ರತಿತಿಂಗಳಲ್ಲಿಯೂ ಅವಳ ರಜಸ್ಸನ್ನು ತಾವೇ ಕುಡಿಯುವರು. ತಾಯಿ
ತಂದೆ ಅಣ್ಣ—ಈ ಮೂರುಜನರೂ ರಜಸ್ವಲೆಯಾದ ಕನ್ಯೆಯನ್ನು ನೋಡಿ ನರಕ
ವನ್ನು ಹೊಂದುವರು. ಯಾವ ಬ್ರಾಹ್ಮಣನು ಅಜ್ಞಾನಮೋಹಿತನಾಗಿ ಆ ಕನ್ಯೆ

ಯನ್ನು ಮದಿವೆಯಾಗುವನೋ ಅವನು ಸಂಭಾಷಣೆಗೂ ಪಂಕ್ತಿಗೂ ಯೋಗ್ಯನಲ್ಲ. ಮತ್ತು ಆ ವಿಪ್ರನು ವೃಷಲೀಪತಿಯೆನ್ನಿಸುವನು. ಮರೀಚಿವಚನ.— ಗೌರಿಯನ್ನು ದಾನಮಾಡಿದವನು ಸ್ವರ್ಗವನ್ನೂ, ರೋಹಿಣಿಯನ್ನು ದಾನಮಾಡಿದವನು ವೈಕುಂಠವನ್ನೂ, ಕನ್ಯೆಯನ್ನು ದಾನಮಾಡಿದವನು ಬ್ರಹ್ಮಲೋಕವನ್ನೂ, ರಜಸ್ವಲೆಯನ್ನು ದಾನಮಾಡಿದವನು ರೌರವನರಕವನ್ನೂ, ಹೊಂದುವರು."

ಈ ಮೇಲಿನ ವಚನಗಳಿಂದ, ಕನ್ಯಾದಾನ ಫಲವಾದ ಸ್ವರ್ಗಾದಿಲೋಕಗಳನ್ನು ಹೊಂದಲಪೇಕ್ಷಿಸುವವರು, ಋತುವಾಗುವುದಕ್ಕೆ ಮೊದಲೇ ಆಕೆಯನ್ನು ದಾನಮಾಡಬೇಕು, ಋತುವಾದ ಬಳಿಕ ದಾನಮಾಡಿದರೆ ಉತ್ತಮಲೋಕಗಳಿಗೆ ಬದಲಾಗಿ ನರಕಪ್ರಾಪ್ತಿಯುಂಟಾಗುವುದು. ಮತ್ತು ಅಂಥ ಋತುಮತಿಯು ದಾನವನ್ನು ಪರಿಗ್ರಹಿಸಿದವನೂ ಅಧೋಗತಿಯನ್ನು ಹೊಂದುವನೆಂದು ವ್ಯಕ್ತವಾಗುವುದು.

ಸ್ಕಂದಪುರಾಣ, ಸನತ್ಕುಮಾರಸಂಹಿತೆ, ಅಧ್ಯಾಯ ೪೩.

ರತ್ನವತೀ ।
ನೋ ಚೇತ್ತಪಃ ಕರಿಷ್ಯಾಮಿ ಕುಮಾರೀ ಬ್ರಹ್ಮಚಾರಿಣೀ ।
ನಾನ್ಯಂ ಪತಿಂ ವರಿಷ್ಯಾಮಿ ನಿಶ್ಚಯೋಽಯಂ ಮಯಾ ಕೃತಃ ॥

ಮಹಾಭಾರತ, ವನಪರ್ವ, ಅಧ್ಯಾಯ ೨೯೩.

ಸಾವಿತ್ರ್ಯುವಾಚ । ಸತ್ಯವಾನನುರೂಪೋ ಮೇ ಭರ್ತೇತಿ ಮನಸಾವೃತಃ ॥೧೦
ರಾಜೋವಾಚ । ಏಹಿ ಸಾವಿತ್ರಿ ಗಚ್ಛಸ್ವ ಅನ್ಯಂ ವರಯ ಶೋಭನೇ ॥೨೪॥
ಸಾವಿತ್ರ್ಯುವಾಚ । ಸಕೃದ್ವೃತೋ ಮಯಾ ಭರ್ತಾ ನ ದ್ವಿತೀಯಂ ವೃಣೋಮ್ಯಹಂ ॥೨೭॥

ವಿಷ್ಣುಸ್ಮೃತಿ, ಅಧ್ಯಾಯ ೫.

ಯಃ ಕನ್ಯಾಂ ಪೂರ್ವದತ್ತಾಮನ್ಯಸ್ಮೈ ದದ್ಯಾತ್ಸ ಚೌರವಚ್ಛಾಸ್ಯಃ ॥೧೬೦॥

ಅಗ್ನಿಪುರಾಣ, ಅಧ್ಯಾಯ ೧೫೪.

ಸಕೃತ್ಕನ್ಯಾ ಪ್ರದಾತವ್ಯಾ ಹರಂಸ್ತಾಂ ಚೌರದಂಡಭಾಕ್ ॥೩॥

ಕಶ್ಯಪ.

ಸಪ್ತ ಪೌನರ್ಭವಾಃ ಕನ್ಯಾಃ ವರ್ಜನೀಯಾಃ ಕುಲಾಧಮಾಃ ।
ವಾಚಾ ದತ್ತಾ ಮನೋದತ್ತಾ ಕೃತಕೌತುಕಮಂಗಲಾ ।
ಉದಕಸ್ಪರ್ಶಿತಾ ಯಾ ಚ ಯಾ ಚ ಪಾಣಿಗೃಹೀತಿಕಾ ।
ಅಗ್ನಿಂ ಪರಿಗತಾ ಯಾ ಚ ಪುನರ್ಭೂಪ್ರಭವಾ ಚ ಯಾ ।
ಇತ್ಯೇತಾಃ ಕಾಶ್ಯಪೇನೋಕ್ತಾಃ ದಹಂತಿ ಕುಲಮಗ್ನಿವತ್ ॥

ಬ್ರಹ್ಮಪುರಾಣ.

ಆಶಾಪಹರ್ತಾ ತು ನರಃ ಕ್ರಿಮಿಯೋನೌ ಪ್ರಜಾಯತೇ ।
ಪ್ರತಿಶ್ರುತ್ಯ ದ್ವಿಜೇಭ್ಯಶ್ಚಾದತ್ವಾ ಮಧುವೃಕೋಭವೇತ್ ॥

ಪರಾಶರಮಾಧವೀಯ, ಉಮಾಮಾಹೇಶ್ವರ ಸಂವಾದ.

ಯೋನಿಕಾರ್ಯಂ ಚ ಯೋ ದೇವಿ ಅಹಿತೇನ ತು ಕಾರಯೇತ್ ।
ಸೋಪಿ ಯಾತಿ ಪಿಶಾಚತ್ವಂ ಸ್ವಾಮಿದ್ರೋಹೇಣ ಮಾನವಃ ॥

ಅರ್ಥ. — ಸ್ಕಂದಪುರಾಣ.—ರತ್ನವತಿಯು ಹೇಳುವಳು : — ಹಾಗಲ್ಲದಿದ್ದರೆ ಮದಿವೆಯಿಲ್ಲದೆ ಬ್ರಹ್ಮಚಾರಿಣಿಯಾಗಿ ತಪಸ್ಸನ್ನು ಮಾಡುವೆನು. ಇನ್ನೊಬ್ಬನನ್ನು ವರಿಸುವುದಿಲ್ಲವೆಂದು ನಿಶ್ಚಯಮಾಡಿಕೊಂಡಿರುವೆನು. ಮಹಾಭಾರತ.—ಸತ್ಯವಂತನು ನನಗೆ ಅನುರೂಪನಾದ ಪತಿಯೆಂದು ಮನಸಾವರಿಸಲ್ಪಟ್ಟಿರುವನೆಂದು ಸಾವಿತ್ರಿಯು ಹೇಳಿದಳು. ಎಲ್ಲೆ ಮಗಳೆ, ಸಾವಿತ್ರಿ, ಬಾ, ಅನ್ಯನನ್ನು ವರಿಸು, ಎಂದು ರಾಜನು ಹೇಳಿದನು. ಅವನನ್ನು ಒಂದಾವರ್ತಿ ಗಂಡನಾಗಿ ವರಿಸಿರುವೆನು, ಎರಡನೆಯವನನ್ನು ವರಿಸುವುದಿಲ್ಲವೆಂದು ಪುನಃ ಸಾವಿತ್ರಿಯು ಹೇಳಿದಳು. ವಿಷ್ಣುಸ್ಮೃತಿ.—ಪೂರ್ವದಲ್ಲಿ ಒಬ್ಬನಿಗೆ ವಾಗ್ದತ್ತಳಾದ ಕನ್ಯೆಯನ್ನು ಯಾವನು ಮತ್ತೊಬ್ಬನಿಗೆ ಕೊಡುವನೋ ಅವನು ಕಳ್ಳನೋಪಾದಿಯಲ್ಲಿ ಶಿಕ್ಷೆಗೆ ಗುರಿಯಾಗುವನು. ಅಗ್ನಿಪುರಾಣ.—ಕನ್ಯೆಯು ಒಂದಾವರ್ತಿ ದಾನಮಾಡಲ್ಪಡತಕ್ಕವಳು. ದಾನಮಾಡಿದವಳನ್ನು ಪುನಃ ತೆಗೆದುಕೊಂಡವನು ಕಳ್ಳತನದ ಶಿಕ್ಷೆಗೆ ಗುರಿಯಾಗುವನು ಕಶ್ಯಪವಚನ.— ವಾಗ್ದತ್ತಳು, ಮನೋದತ್ತಳು, ಕೃತಕೌತುಕಮಂಗಳೆಯು, ಉದಕಸ್ಪರ್ಶಿತೆ, ಪಾಣಿಗೃಹೀತಳು, ಅಗ್ನಿಪರಿಗತಳು, ಮತ್ತು ಪುನರ್ಭೂವಿನ ಮಗಳು—ಈ ಕುಲಾಧಮರಾದ ಏಳು ಪೌನರ್ಭವ ಕನ್ಯೆಯರನ್ನು ತ್ಯಜಿಸತಕ್ಕದು. ಕಶ್ಯಪನಿಂದ ಹೇಳಲ್ಪಟ್ಟ ಇವರನ್ನು ಮದಿವೆಮಾಡಿಕೊಂಡರೆ ಅಗ್ನಿಯೋಪಾದಿಯಲ್ಲಿ ಕುಲವನ್ನೇ ಸುಟ್ಟುಬಿಡುವರು. ಬ್ರಹ್ಮಪುರಾಣ.—ಆಶಾಭಂಗ ಮಾಡುವ ಮನುಷ್ಯನು ಕ್ರಿಮಿಯಾಗಿ ಹುಟ್ಟುವನು. ದ್ವಿಜರಿಗೆ ವಾಗ್ದಾನಮಾಡಿಯೂ ಕೊಡದವನು ಮಧುವೃಕನಾಗಿ ಹುಟ್ಟುವನು. ಪರಾಶರಮಾಧವೀಯ.—ಇಷ್ಟರಲ್ಲದವರಲ್ಲಿ ವಿವಾಹಸಂಬಂಧಮಾಡುವುದರಿಂದಲೂ ಸ್ವಾಮಿದ್ರೋಹದಿಂದಲೂ ಮನುಷ್ಯನು ಪಿಶಾಚಜನ್ಮವನ್ನು ಹೊಂದುವನು.

ಮೇಲೆ ಕಾಣಿಸಿದ ರತ್ನವತಿಯೂ ಸಾವಿತ್ರಿಯೂ ವಿವಾಹಕ್ಕೆ ಮೊದಲು ಯುವತಿಯರಾಗಿದ್ದರೆಂದೂ ತಂದೆತಾಯಿಗಳು ಒಪ್ಪಿದ ವರರನ್ನು ಬಿಟ್ಟು ತಾವು ಅಪೇಕ್ಷಿಸಿದ್ದ ಪುರುಷರನ್ನೇ ಮದಿವೆಯಾದರೆಂದೂ ಅವರ ಇತಿಹಾಸಗಳಿಂದ ವ್ಯಕ್ತವಾಗುತ್ತದೆ. ಇವರಂತೆಯೇ ಆಚರಿಸಿದ ಇನ್ನೂ ಅನೇಕ ಯುವತಿಯರಾದ ಕನ್ಯೆಯರ ಇತಿಹಾಸಗಳೂ ಇರುವುವು. ಮತ್ತು ಮೇಲಿನ ವಚನಗಳಿಂದ, ಒಬ್ಬ

ನಿಗೆ ಮನಸಾ ಅಥವಾ ವಾಚಾದತ್ತಳಾದ ಕನ್ಯೆಯನ್ನು ಇನ್ನೊಬ್ಬನಿಗೆ ವಿವಾಹ ಮಾಡಿದರೆ ದೋಷವೆಂಬುದೂ ವ್ಯಕ್ತವಾಗುವುದು.

ತಂದೆಯು ವಾಗ್ದಾನಮಾಡಿದವನಿಗೆ ಅನ್ಯನನ್ನು ವರಿಸಿರುವ ಕನ್ಯೆಯನ್ನು ಕೊಟ್ಟು ಬಲಾತ್ಕಾರದಿಂದ ವಿವಾಹಮಾಡಿದರೂ, ತಂದೆಯು ವಾಗ್ದಾನಮಾಡಿರುವ ವರನನ್ನು ಬಿಟ್ಟು ಕನ್ಯೆಯು ವರಿಸಿರುವ ವರನಿಗೆ ಆಕೆಯನ್ನು ಕೊಟ್ಟು ವಿವಾಹಮಾಡಿದರೂ ದೋಷವು ಬರುವುದೇ ಹೊರತು ಅದರಿಂದ ಕನ್ಯಾದಾನ ಫಲವು ಪ್ರಾಪ್ತವಾಗುವುದಿಲ್ಲ. ಹೀಗೆ ಉಭಯಸಂಕಟಗಳು ಒದಗುವುವು. ಚಿಕ್ಕವಳಾಗಿರುವಾಗಲೇ ಕನ್ಯೆಯನ್ನು ದಾನಮಾಡಿದರೆ ಇಂಥಾ ಸಂಕಟಗಳಿಗೆ ಅವಕಾಶವಿಲ್ಲ. ಮತ್ತು ಕನ್ಯಾದಾನಫಲವೂ ಲಭಿಸುವುದು. ತಾಯಿತಂದೆಗಳು ದಾನಫಲವನ್ನಪೇಕ್ಷಿಸದೆ ಇನ್ನೊಬ್ಬ ವರನಿಗೂ ಕನ್ಯೆಯನ್ನು ವಾಚಾ ಮನಸಾ ದಾನಮಾಡದೆ, ಅವಳು ಇಷ್ಟಪಟ್ಟಿರುವ ವರನಿಗೆ ಯುವತಿಯನ್ನು ಕೊಟ್ಟು ಮದಿವೆಮಾಡಿದರೆ ದೋಷಕ್ಕೆ ಅವಕಾಶವಿಲ್ಲ.

ಆದಪ್ರಯುಕ್ತ ನಮ್ಮ ಶಾಸ್ತ್ರಕಾರರು ಕನ್ಯಾದಾನ ಸಂಕಲ್ಪವುಳ್ಳವರೂ ಕನ್ಯಾದಾನಫಲವನ್ನಪೇಕ್ಷಿಸುವವರೂ ಹುಡುಗಿಯರಿಗೆ ಹತ್ತುವರ್ಷ ವಯಸ್ಸು ತುಂಬುವುದರೊಳಗಾಗಿ ವಿವಾಹಮಾಡಬೇಕೆಂದೂ ಅಂಥಾ ಸಂಕಲ್ಪವೂ ಫಲಾಪೇಕ್ಷೆಯೂ ಇಲ್ಲದವರು ಋತುಮತಿಗಳಾದ ಕನ್ಯೆಯರಿಗೆ ವಿವಾಹ ಮಾಡಬಹುದೆಂದೂ ಅಪ್ಪಣೆ ಕೊಡಿಸಿರುವರು. ಈ ವಿಧದಲ್ಲಿ ಶಾಸ್ತ್ರಕಾರರಿಗೆ ಅನೃತುಮತೀವಿವಾಹವೂ ಋತುಮತೀವಿವಾಹವೂ ಸಮ್ಮತವಾಗಿವೆ. ಆದುದರಿಂದ ಶಾಸ್ತ್ರವಚನಗಳಿಗೆ ಪರಸ್ಪರ ವಿರೋಧವಿಲ್ಲವೆಂದು ಕೆಲವರ ಮತವಾಗಿರುವುದು.

ಆದರೆ ಈ ರೀತಿಯಲ್ಲಿ ವ್ಯಾಖ್ಯಾನಮಾಡುವುದರಿಂದ ವಿರೋಧವು ಸಂಪೂರ್ಣವಾಗಿ ಪರಿಹಾರವಾಗುವುದಿಲ್ಲ. ಅದು ಇದ್ದೇಯಿರುವುದು. ಸೋಮಾದಿದೇವತೆಗಳು ಪರಿಗ್ರಹಿಸುವುದಕ್ಕೆ ಮೊದಲೇ ಕನ್ಯೆಯರಿಗೆ ವಿವಾಹ ಮಾಡಬೇಕೆಂದು ಕಾಶೀಖಂಡ ಸಂವರ್ತಾದಿಗಳ ವಚನಗಳು ಅಪ್ಪಣೆಕೊಡಿಸುವುವು. ಆದರೆ ವೇದವಚನಗಳೂ ಚ್ಯವನಾದಿಗಳ ವಚನಗಳೂ ಆ ದೇವತೆಗಳು ಪರಿಗ್ರಹಿಸಿದ ಬಳಿಕವೇ ಕನ್ಯೆಯರಿಗೆ ವಿವಾಹವಾಗಬೇಕೆಂದು ಅಪ್ಪಣೆಕೊಡಿಸುವುವು. ಇದಲ್ಲದೆ ಕಾಶೀಖಂಡಾದಿಗಳ ವಚನಗಳು ರೋಮಕುಚೋದ್ಗಮರಜಸ್ಸು ಇವುಗಳು ಕಂಡಬಳಿಕ ಕನ್ಯೆಯರನ್ನು ದೇವತೆಗಳು ಪರಿಗ್ರಹಿಸುವರೆಂದು ಹೇಳುವುವು. ಹುಟ್ಟಿದ ಆರುವರ್ಷಗಳಲ್ಲಿ ಕನ್ಯೆಯರನ್ನು ದೇವತೆಗಳು ಪರಿಗ್ರಹಿಸುವರೆಂದು ಚ್ಯವನವಾಕ್ಯವು ತಿಳಿಸುವುದು. ಹೀಗೆ ಶಾಸ್ತ್ರವಚನಗಳಿಗೆ ವಿರೋಧವು ಇದ್ದೇ ಇರುವುದು.

ಹಾಗಾದರೆ ಶಾಸ್ತ್ರವಚನಗಳಿಗೆ ವಿರೋಧಬಂದಾಗ ನಾವೇನುಮಾಡಬೇಕು? ವಿಕಲ್ಪಾಚರಣೆಗಳನ್ನು ಸ್ವೀಕರಿಸಬೇಕು. ನಮ್ಮ ಶಾಸ್ತ್ರಕಾರರೂ ಹಾಗೆಯೇ ಅಪ್ಪಣೆ

ಕೊಡಿಸಿರುವುರೆಂದು ಬೇರೇ ಕೆಲವರುಹೇಳುವರು. ಈ ವಿಷಯದಲ್ಲಿ ಕೆಲವು ಶಾಸ್ತ್ರ ವಚನಗಳನ್ನೂ ಉದಾಹರಿಸಿರುವರು.

ಮನುಸ್ಮೃತಿ, ಅಧ್ಯಾಯ ೨.

ಶ್ರುತಿದ್ವೈಧಂ ತು ಯತ್ರ ಸ್ಯಾತ್ತತ್ರ ಧರ್ಮಾವುಭೌ ಸ್ಮೃತೌ ।
ಉಭಾವಪಿ ಹಿ ತೌ ಧರ್ಮೌ ಸಮ್ಯಗುಕ್ತೌ ಮನೀಷಿಭಿಃ ॥೧೪॥
ಕುಲ್ಲೂಕವ್ಯಾಖ್ಯಾ ಯತ್ರ ಪುನಃ ಶ್ರುತ್ಯೋರೇವ ದ್ವೈಧಂ ಪರಸ್ಪರ ।
ವಿರುದ್ಧಾರ್ಥಪ್ರತಿಪಾದನಂ ತತ್ರ ದ್ವಾವಪಿ ಧರ್ಮೌ ಮನುನಾ ಸ್ಮೃತೌ ।
ಸಮಾನನ್ಯಾಯತಯಾ ಸ್ಮೃತ್ಯೋರಪಿ ವಿರೋಧೇ ವಿಕಲ್ಪಃ ॥

ಗೌತಮಸ್ಮೃತಿ, ಅಧ್ಯಾಯ ೧.

ತುಲ್ಯಬಲವಿರೋಧೇ ವಿಕಲ್ಪಃ ॥

ವೈದ್ಯನಾಥದೀಕ್ಷಿತೀಯ.

ತುಲ್ಯಬಲವಿರೋಧೇ ವಿಕಲ್ಪಃ ॥

ಹೇಮಾದ್ರಿದಾನಖಂಡ, ಅಧ್ಯಾಯ ೫.

ತುಲ್ಯಬಲವಿರೋಧೇ ಅನುಷ್ಠಾನವಿಕಲ್ಪಃ ॥

ದೇವೀಭಾಗವತ, ಸ್ಕಂಧ ೧೧, ಅಧ್ಯಾಯ ೧.

ನಾರಾಯಣಉವಾಚ.

ಶ್ರುತಿದ್ವೈಧಂ ಭವೇದ್ಯತ್ರ ತತ್ರಧರ್ಮಾವುಭೌ ಸ್ಮೃತೌ ।
ಸ್ಮೃತಿದ್ವೈಧಂ ತು ಯತ್ರ ಸ್ಯಾದ್ವಿಷಯಃ ಕಲ್ಪತಾಂ ಪೃಥಕ್ ॥೨೩॥
ಗರ್ಗಃ ನೈಕಲ್ಪಿಕೇ ಆತ್ಮತುಷ್ಟಿಃ ಪ್ರಮಾಣಂ ॥

ಮನುಸ್ಮೃತಿ, ಅಧ್ಯಾಯ ೨.

ಆತ್ಮನಸ್ತುಷ್ಟಿರೇವ ಚ ॥೬॥ ಸ್ವಸ್ಯ ಚ ಪ್ರಿಯಮಾತ್ಮನಃ ॥೧೨॥

ಯಜ್ಞವಲ್ಕ್ಯಸ್ಮೃತಿ, ಆಚಾರಾಧ್ಯಾಯ.

ಸ್ವಸ್ಯ ಚ ಪ್ರಿಯಮಾತ್ಮನಃ ॥೭॥

ಅರ್ಥ :—ಮನುಸ್ಮೃತಿ—ವೇದವಾಕ್ಯಗಳು ಒಂದಕ್ಕೆ ಮತ್ತೊಂದು ವಿರುದ್ಧವಾದಲ್ಲಿ ಅವೆರಡೂ ಧರ್ಮಗಳೆಂದು ಎಣಿಸಲ್ಪಡುವುವು. ಅವೆರಡೂ ಧರ್ಮಗಳೆಂದು ವಿದ್ವಾಂಸರಿಂದ ಸ್ಪಷ್ಟವಾಗಿ ಹೇಳಲ್ಪಟ್ಟಿರುವುವು. ಕುಲ್ಲೂಕವ್ಯಾಖ್ಯೆ:—ಎಲ್ಲಿ ಪುನಃ ಶ್ರುತಿಗಳಿಗೆ ಪರಸ್ಪರ ವಿರೋಧಾರ್ಥಗಳು ಬರುವುವೋ ಅಲ್ಲಿ ಅವೆರಡೂ ಧರ್ಮಗಳೆಂದು ಮನುವಿನಿಂದ ಎಣಿಸಲ್ಪಟ್ಟಿರುವುದು. ಸ್ಮೃತಿಗಳಿಗೂಕೂಡ ವಿರೋಧಬಂದಲ್ಲಿ ಸಮಾನನ್ಯಾಯದಿಂದ ವಿಕಲ್ಪವು ಆಚರಿಸಲ್ಪಡತಕ್ಕದು. ಗೌತಮಸ್ಮೃತಿ:—ಸಮಬಲವಾದ ಪ್ರಮಾಣಗಳಿಗೆ ವಿರೋಧಬಂದಲ್ಲಿ ವಿಕಲ್ಪವು ಮಾಡಲ್ಪಡತಕ್ಕದು. ವೈದ್ಯನಾಥದೀಕ್ಷಿತೀಯ :—ಸಮಬಲಪ್ರಮಾಣಗಳಿಗೆ ವಿರೋಧಬಂದಲ್ಲಿವಿಕಲ್ಪವು ಮಾಡಲ್ಪಡತಕ್ಕದು. ಹೇಮಾದ್ರಿ ದಾನಖಂಡ :—ಸಮಬಲವಾದ

ಶಾಸ್ತ್ರಗಳಿಗೆ ವಿರೋಧಬಂದಲ್ಲಿ ವಿಕಲ್ಪವು ಆಚರಿಸಲ್ಪಡತಕ್ಕದು. ದೇವೀಭಾಗವತ—ಎಲ್ಲಿ ಶ್ರುತಿಯು ಎರಡುಪ್ರಕಾರವಾಗಿದೆಯೋ ಅಲ್ಲಿ ಆ ಎರಡು ಧರ್ಮಗಳೂ ವಿಧಿಸಲ್ಪಡುವವು. ಸ್ಮೃತಿಯೂ ಎರಡುಪ್ರಕಾರವಾಗಿರುವಲ್ಲಿ ವಿಷಯವು ಪ್ರತ್ಯೇಕವಾಗಿಮಾಡಲ್ಪಡತಕ್ಕದು. ಗರ್ಗವಚನ:—ವಿಕಲ್ಪಧರ್ಮಗಳವಿಷಯದಲ್ಲಿ ಆತ್ಮತುಷ್ಟಿಯು ಪ್ರಮಾಣವು. ಮನುಸ್ಮೃತಿ:—ಆತ್ಮತುಷ್ಟಿಯೂ ಧರ್ಮಮೂಲವಾಗಿರುವುದು. ಆತ್ಮಪ್ರಿಯವು ಧರ್ಮಕ್ಕೆ ನಾಲ್ಕನೆಯ ಲಕ್ಷಣವಾಗಿರುವುದು. ಯಾಜ್ಞವಲ್ಕ್ಯಸ್ಮೃತಿ:—ಆತ್ಮಪ್ರಿಯವೂ ಧರ್ಮಮೂಲವಾಗಿರುವುದು.

ಹೀಗೆ ಮೇಲಿನ ವಚನಗಳ ಪ್ರಕಾರ, ಶಾಸ್ತ್ರವಾಕ್ಯಗಳಿಗೆ ಪರಸ್ಪರ ವಿರೋಧಬಂದರೆ, ಆ ವಿರುದ್ಧವಾಕ್ಯಗಳು ವೈಕಲ್ಪಿಕ ಧರ್ಮಗಳಾಗುವುವು. ಜನರು ಅವರವರ ಇಷ್ಟಾನುಸಾರವಾಗಿ ಅವುಗಳಲ್ಲಿ ಬೇಕಾದವನ್ನು ಆಚರಿಸಬಹುದು. ಬೇರೆಬೇರೆ ವಾಕ್ಯಗಳಿಗೆ ಮಾತ್ರ ವಿರೋಧವಲ್ಲದೆ, ಒಂದೇ ವಾಕ್ಯಕ್ಕೂ ಸಮಂಜಸವಾದ ಬೇರೇ ಬೇರೆ ಅರ್ಥಗಳು ತೋರಿದರೆ, ಆಭಿನ್ನಾರ್ಥಗಳಿಗನುಸಾರವಾಗಿಯೂ ವೈಕಲ್ಪಿಕಧರ್ಮಗಳನ್ನಾಚರಿಸಬಹುದು. ಇಂಥಾ ಭಿನ್ನಾರ್ಥಗಳ ಆಧಾರದಮೇಲೆ ದ್ವೈತ ಅದ್ವೈತ ವಿಶಿಷ್ಟಾದ್ವೈತಮತಗಳುಂಟಾಗಿ ಜನರಿಂದ ವೈಕಲ್ಪಿಕವಾಗಿ ಅವಲಂಬಿಸಲ್ಪಡುತ್ತಿರುವುವು. ಹೀಗೆ ಇನ್ನೂ ಬೇರೆ ಅನೇಕ ವೈಕಲ್ಪಿಕ ಧರ್ಮಗಳೂ ಆಚರಿಸಲ್ಪಡುತ್ತಿರುವುವು. ಆದ ಪ್ರಯುಕ್ತ, ಋತುಮತೀವಿವಾಹಪರವಾಗಿಯೂ ಅನೃತುಮತೀವಿವಾಹಪರವಾಗಿಯೂ ಶಾಸ್ತ್ರವಚನಗಳಿರುವುದರಿಂದಲೂ, ಅವು ವೈಕಲ್ಪಿಕ ಧರ್ಮಗಳಾಗಿರುವುದರಿಂದಲೂ, ದ್ವಿಜರು ತಮ್ಮ ತಮ್ಮ ಇಷ್ಟಾನುಸಾರವಾಗಿ ಋತುಮತೀವಿವಾಹವನ್ನಾಗಲೀ ಬಾಲ್ಯವಿವಾಹವನ್ನಾಗಲಿ ಆಚರಿಸಬಹುದೆಂದು ಬೇರೆ ಕೆಲವರು ಹೇಳುವರು.

ಈವಿಷಯದಲ್ಲಿ ಇನ್ನೂ ವಿಶೇಷವಾದ ವಿಚಾರವು ಆವಶ್ಯಕವಾಗಿರುವುದು. ಸ್ಮೃತಿಪುರಾಣಗಳು ವೈವಾಹಿಕವಿಷಯದಲ್ಲಿ ದ್ವೈಧವಾಗಿರುವುದು ಕಂಡುಬಂದಿರುವುದು. ಆದರೆ ವೇದಗಳು ದ್ವೈಧವಾಗಿರುವುದು ವ್ಯಕ್ತವಾಗಿಲ್ಲ. ಅವು ಋತುಮತೀವಿವಾಹವನ್ನು ಮಾತ್ರ ಸೂಚಿಸುವುದು ಕಂಡು ಬಂದಿದೆ. ವೈವಾಹಿಕ ಮಂತ್ರಗಳೂ ಬೇರೆ ಕೆಲವು ವೇದವಾಕ್ಯಗಳೂ ಋತುಮತೀವಿವಾಹವನ್ನು ನಿಸ್ಸಂದೇಹವಾಗಿ ಬೋಧಿಸುವುವು. ವೇದಮಂತ್ರಗಳ ಪ್ರಯೋಗವನ್ನು ತಿಳಿಸುವ ಗೃಹ್ಯಸೂತ್ರಕಾರರೂಕೂಡ ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ವಧೂವರರ ಸಂಭೋಗಸಮಯದಲ್ಲಿ ಕೆಲವು ವೇದಮಂತ್ರಗಳನ್ನು ಹೇಳಬೇಕೆಂದು ವಿಧಿಸಿರುವರು. ಆದಪ್ರಯುಕ್ತ ಋತುಮತೀವಿವಾಹವು ವೇದಸಮ್ಮತವೆಂದು ವ್ಯಕ್ತವಾಗುವುದು.

ಆದರೆ ವೇದಗಳು ಬಾಲ್ಯವಿವಾಹವನ್ನು ಸೂಚಿಸುವುದು ಕಂಡುಬಂದಿಲ್ಲ. ಮೇಲೆ ಕಾಣಿಸಲ್ಪಟ್ಟ ಛಾಂದೋಗ್ಯೋಪನಿಷತ್ತಿನಲ್ಲಿ ಉಕ್ತವಾದ ಉಷಸ್ತಿಚಾಕ್ರಾ

ಯಣನ ಇತಿಹಾಸದಿಂದ ಅನೃತುಮತೀವಿವಾಹವು ವೇದಸಮ್ಮತವೆಂದು ಸಿದ್ಧವಾಗುವುದಿಲ್ಲ. ಅಲ್ಲಿ ಆತನ ಹೆಂಡತಿಯ ವಿಷಯದಲ್ಲಿ ಪ್ರಯೋಗಿಸಲ್ಪಟ್ಟ ಆಟಿಕಿ ಎಂಬ ಪದಕ್ಕೆ ಮೈನೆರೆಯದ ಚಿಕ್ಕ ಹುಡುಗಿಯೆಂದು ಕೆಲವರೂ ಸಂಚಾರಯೋಗ್ಯಳೆಂದು ಬೇರೆಯವರೂ ಅರ್ಥಮಾಡುವರು. ಇದಲ್ಲದೆ ಆತನ ಹೆಂಡತಿಯ ಹೆಸರೇ ಆಟಿಕಿಯೆಂದು ಬೇರೆ ಕೆಲವರು ಹೇಳುವರು. ಹೀಗಿರುವುದರಿಂದ ಆತನ ಹೆಂಡತಿಯು ಚಿಕ್ಕ ಹುಡುಗಿಯಾಗಿದ್ದಳೋ ಅಥವಾ ಋತುಮತಿಯಾಗಿದ್ದಳೋ ಎಂಬುದು ಸ್ಪಷ್ಟವಾಗುವುದಿಲ್ಲ.

ಆಕೆಗೆ ಹಸಿವೆಯಿಲ್ಲದಿದ್ದಾಗ್ಯೂ ಗಂಡನಿಗೆ ತಿರಸ್ಕಾರವಾಗಬಾರದೆಂದು ಆತನು ಕೊಟ್ಟ ಅವರೆ ಕಾಳುಗಳನ್ನು ಸ್ವೀಕರಿಸಿ, ಆಮೇಲೆ ಆತನು ಹಸಿವೆಂದು ಹೇಳಿದಾಗ ಪುನಃ ಆ ಕಾಳುಗಳನ್ನು ಆತನಿಗೆ ತಿನ್ನಲಿಕ್ಕೆ ಕೊಟ್ಟಳೆಂದು ಆ ಕಥೆಯಿಂದ ಗೊತ್ತಾಗುತ್ತದೆ. ಇಂಥಾ ಕಾರ್ಯವನ್ನು ಚಿಕ್ಕ ಹುಡುಗಿಯು ಮಾಡುವುದಕ್ಕಿಂತಲೂ ಬುದ್ಧಿಬಂದ ಯುವತಿಯು ಮಾಡುವ ಸಂಭವವು ಹೆಚ್ಚು. ಇದಲ್ಲದೆ ಗಂಡನ ಜತೆಯಲ್ಲಿ ಕ್ಷಾಮಕಾಲದಲ್ಲಿ ದೂರದೇಶಕ್ಕೆ ನಡೆದುಕೊಂಡುಹೋಗಲು ಚಿಕ್ಕ ಹುಡುಗಿಗಿಂತಲೂ ಯುವತಿಯು ಹೆಚ್ಚಾಗಿ ಸಮರ್ಥಳಾಗಿರುವಳು. ಈಕಾರಣಗಳಿಂದ ಆಕೆಯು ಯುವತಿಯಾಗಿದ್ದಳೆಂದು ಹೇಳಬಹುದು.

ಒಂದುವೇಳೆ ಆಕೆಯು ಚಿಕ್ಕ ಹುಡುಗಿಯಾಗಿದ್ದಳೆಂದು ಇಟ್ಟುಕೊಂಡಾಗೂ ಅದರಿಂದ ಋತುಮತೀವಿವಾಹವು ವೇದಸಮ್ಮತವೆಂದು ಸಿದ್ಧವಾಗುವುದಿಲ್ಲ. ಪೂರ್ವದಲ್ಲಿ ಅನೇಕ ದೊಡ್ಡವರು ಶಾಸ್ತ್ರೋಲ್ಲಂಘನಮಾಡಿರುವುದೂ ಸಾಹಸಮಾಡಿರುವುದೂ ಕಂಡುಬಂದಿದೆಯೆಂದು ಗೌತಮಾದಿಗಳ ವಚನದಿಂದ ಗೊತ್ತಾಗುತ್ತದೆ. ಹೇಗಂದರೆ.--

ಗೌತಮ ಧರ್ಮಶಾಸ್ತ್ರ, ಅಧ್ಯಾಯ ೧.

ದೃಷ್ಟೋ ಧರ್ಮವ್ಯತಿಕ್ರಮಃ ಸಾಹಸಂ ಚ ಮಹತಾಂ ನ ತು ದೃಷ್ಟಾರ್ಥೇ ಅವರ ದೌರ್ಬಲ್ಯಾತ್ ॥೩॥

ಅರ್ಥ.—ಮಹಾತ್ಮರ ಸಾಹಸವೂ ಧರ್ಮವ್ಯತಿಕ್ರಮವೂ ಕಂಡುಬಂದಿವೆ. ಅಧುನಿಕರ ದೌರ್ಬಲ್ಯದೆಶೆಯಿಂದ ಅವೆರಡನ್ನೂ ಮಾಡಕೂಡದು.

ಇದಲ್ಲದೆ ಬ್ರಹ್ಮನು ತನ್ನ ಮಗಳನ್ನೇ ವರಿಸಿದನೆಂದೂ ಇಂದ್ರನು ಅಹಲ್ಯೆಯಲ್ಲಿ ವ್ಯಭಿಚಾರ ಮಾಡಿದನೆಂದೂ ವೇದದಲ್ಲಿಯೇ ಉಕ್ತವಾಗಿದೆ. ಇಂಥಾ ಕಾರ್ಯಗಳು ಶಾಸ್ತ್ರಸಮ್ಮತವಾಗಲಾರವು. ಆದಪ್ರಯುಕ್ತ ಒಂದುವೇಳೆ ಉಷಸ್ತಿಚಾಕ್ರಾಯಣನು ಮದಿವೆಯಾಗಿದ್ದವಳು ಅನೃತುಮತಿಯಾಗಿದ್ದಾಗ್ಯೂ, ಅದರಿಂದ ಬಾಲ್ಯವಿವಾಹವು ವೇದಸಮ್ಮತವೆಂದು ಹೇಳಲಾಗುವುದಿಲ್ಲ. ಬ್ರಹ್ಮೇಂದ್ರರ ಇತಿಹಾಸಗಳಿಂದ, ತಂದೆಯು ಮಗಳನ್ನು ಮದಿವೆಮಾಡಿಕೊಳ್ಳುವದೂ ಜಾರತ್ವವೂ ವೇದಶಾಸ್ತ್ರಸಮ್ಮತವೆಂದು ಹೇಗೆ ಸಿದ್ಧವಾಗುವುದಿಲ್ಲವೋ ಹಾಗೆಯೇ ಉಷಸ್ತಿಚಾಕ್ರಾಯಣನ

ಇತಿಹಾಸದಿಂದ ಬಾಲ್ಯವಿವಾಹವು ವೇದಶಾಸ್ತ್ರಸಮ್ಮತವೆಂಬುದು ಸಿದ್ಧವಾಗುವುದಿಲ್ಲ.

ಋತುಮತೀವಿವಾಹಪರವಾದ ವಚನಗಳಂತೆ ಅನೃತುಮತೀವಿವಾಹಪರವಾದ ವಚನಗಳೂ ವೇದಗಳಲ್ಲಿ ಕಂಡುಬಂದಿದ್ದರೆ ಆಗ ವೇದಗಳಿಗೆ ಎರಡುಬಗೆಯ ವಿವಾಹಗಳೂ ಸಮ್ಮತವೆಂದು ಹೇಳಬಹುದು. ಅನೃತುಮತೀವಿವಾಹಪರವಾದ ವೇದವಚನಗಳನ್ನು ನಾವು ಕಾಣಲಿಲ್ಲ. ಬಾಲ್ಯವಿವಾಹಪಕ್ಷದವರೂ ಅವನ್ನು ಉದಾಹರಿಸುವುದಿಲ್ಲ. ಆದಪ್ರಯುಕ್ತ, ವೇದವು ಸಕಲ ಧರ್ಮಗಳಿಗೂ ಮೂಲವಾಗಿಯೂ ಅತ್ಯಂತ ಶ್ರೇಷ್ಠಪ್ರಮಾಣವಾಗಿಯೂ ಇರುವುದರಿಂದಲೂ, ಅದಕ್ಕೆ ಋತುಮತೀವಿವಾಹವು ಸಮ್ಮತವೆಂದು ಕಂಡುಬಂದಿರುವುದರಿಂದಲೂ, ಬಾಲ್ಯವಿವಾಹವುಸಮ್ಮತವೆಂದು ಕಂಡುಬಾರದೇಯಿರುವುದರಿಂದಲೂ ನಾವು ಬಾಲ್ಯವಿವಾಹವನ್ನು ತ್ಯಜಿಸಿ ಋತುಮತೀವಿವಾಹವನ್ನೇ ಆಚರಿಸತಕ್ಕುದೆಂದು ಬೇರೇ ಕೆಲವರುಹೇಳುವರು.

ಆದರೆ ವೇದವಚನಗಳು ಅನಂತವಾಗಿರುವುವು.—'ಅನಂತಾವೈವೇದಾಃ' ಅವುಗಳನ್ನೆಲ್ಲಾ ಯಾರುಬಲ್ಲವರು? ಅವೆಲ್ಲಾ ನಮಗೆ ಸಿಕ್ಕಿಲ್ಲ. ಆ ಪ್ರಚ್ಛನ್ನವಾದ ವೇದವಾಕ್ಯಗಳಲ್ಲಿ ಅನೃತುಮತೀಪರವಾದ ವಚನಗಳೂ ಇರಬಹುದು. ಸ್ಮೃತಿಪುರಾಣಕಾರರು ನಮಗಿಂತಲೂ ಅಧಿಕಜ್ಞಾನಿಗಳು. ಅವು ಅವರಿಗೆ ಗೋಚರಬಹುದು. ಆದುದರಿಂದ ಅವರು ಬಾಲ್ಯವಿವಾಹವನ್ನು ಅನುಮೋದಿಸಿರುವರು. ಇದಲ್ಲದೆ ಬಾಲ್ಯವಿವಾಹವು ಆಚರಣೆಯಲ್ಲಿಯೂ ಇರುವುದು. ಆದುದರಿಂದ ಬಾಲ್ಯವಿವಾಹಪರವಾದ ಸ್ಮೃತಿವಚನಗಳಿಗೂ ಅವನ್ನನುಸರಿಸಿರುವ ಆಚಾರಕ್ಕೂ ವೇದಮೂಲವಿರಬಹುದೆಂದು ಊಹಿಸಲು ಅವಕಾಶವುಂಟು. ನಮ್ಮ ಶಾಸ್ತ್ರಕಾರರೂ ಹೀಗೆಯೇ ಅಪ್ಪಣೆ ಕೊಡಿಸಿರುವರು.

ಇದಲ್ಲದೆ ವೇದಗಳಲ್ಲಿ ಬಾಲ್ಯವಿವಾಹಾನುಮೋದಕಗಳಾದ ವಚನಗಳು ಹೇಗೆ ಸಿಕ್ಕುವುದಿಲ್ಲವೋ ಹಾಗೆಯೇ ಅವುಗಳಲ್ಲಿ ನಿಷೇಧಕವಚನಗಳೂ ಸಿಕ್ಕುವುದಿಲ್ಲ. ಆದಕಾರಣ ವೇದಗಳು ಬಾಲ್ಯವಿವಾಹವನ್ನು ನಿಷೇಧಿಸುವುವೆಂದು ಹೇಳಲಾಗುವುದಿಲ್ಲ. ಹೀಗೆ ಬಾಲ್ಯವಿವಾಹವು ನಿಷೇಧಕ್ಕೆ ಒಳಪಡದಿರುವುದರಿಂದ, ಅದು ವೇದಕ್ಕೆ ಅವಿರೋಧವಾದುದೆಂದು ಹೇಳಬೇಕಾಗುವುದು. ಹೀಗೆ ಅವಿರೋಧವಾಗಿರುವುದರಿಂದಲೂ ಮನ್ವಾದಿ ಋಷಿಗಳು ಪ್ರಾಯಿಕವಾಗಿ ಬಾಲ್ಯವಿವಾಹವನ್ನು ಅಂಗೀಕರಿಸಿರುವರೆಂದು ಸಹ ಊಹಿಸಬೇಕಾಗಿದೆ.

ಕೆಳಗೆ ಕಾಣಿಸಿರುವ ಶಾಸ್ತ್ರವಚನಗಳು ಈ ಅರ್ಥಗಳನ್ನೇ ದೃಢೀಕರಿಸುವುವು.

ಆಪಸ್ತಂಬಧರ್ಮಸೂತ್ರ.

ಬ್ರಾಹ್ಮಣೋಕ್ತಾವಿಧಯಸ್ತೇಷಾಮುತ್ಸನ್ನಾಃ ಪಾಠಾಃ ಪ್ರಯೋಗಾದನುಮೀಯಂತೇ ॥ ೧—೪ ——೧೩—೧೦.

ಕೃಚ್ಛ್ರಾಧರ್ಮಸಮಾಪ್ತಿಸ್ಸಮಾಮ್ನಾನೇನ ಲಕ್ಷಣಕರ್ಮಣಾತು ಸಮಾಪ್ಯತೇ ॥ ೨—೧೧—೧೯—೧೩.

ಜೈಮಿನಿ ಮೀಮಾಂಸಾದರ್ಶನ, ಶ್ರುತಿ ಪ್ರಾಬಲ್ಯಾಧಿಕರಣ.
ವಿರೋಧೇ ತ್ವನಪೇಕ್ಷ್ಯಂ ಸ್ಯಾತ್ ಅಸತಿ ಹ್ಯನುಮಾನಂ ॥ ೧—೩-೩.

ಅರ್ಥ:—ಆಪಸ್ತಂಬ ಧರ್ಮಸೂತ್ರ.—ವಿಧಿಗಳು ವೇದಗಳಿಂದ ಹೇಳಲ್ಪಟ್ಟಿರುವುವು. ಅವುಗಳಲ್ಲಿ ಕಳೆದುಹೋದ ಪಾಠಗಳು ಪ್ರಯೋಗದ ದೆಸೆಯಿಂದ ಊಹಿಸಲ್ಪಡುವುವು. ಧರ್ಮಸಮಾಪ್ತಿಯು ವೇದಪಠನದಿಂದಲೇ ಆಗುವುದು ಕಷ್ಟ, ಆದರೆ ಆಚಾರಾನುಷ್ಠಾನದಿಂದ ಧರ್ಮವು ಸಮಾಪ್ತವಾಗುತ್ತದೆ. ಜೈಮಿನಿ ಮೀಮಾಂಸ—ಶ್ರುತಿಗೆ ವಿರುದ್ಧವಾದಾಗ ಸ್ಮೃತಿಯು ತಿರಸ್ಕರಿಸಲ್ಪಡುವುದು. ಅವಿರೋಧವಾದಾಗ ಸ್ಮೃತಿಯು ಅನುಮೇಯಶ್ರುತಿಮೂಲವುಳ್ಳದ್ದಾಗುವುದು.

ತಾತ್ಪರ್ಯ.—ಅನಂತವಾದ ವೇದಗಳಲ್ಲಿ ನಮಗೆ ಕೆಲವು ಮಾತ್ರ ಸಿಕ್ಕಿವೆ. ಸಿಕ್ಕಿರುವ ವೇದಗಳು ಪ್ರತ್ಯಕ್ಷವೇದಗಳೆನಿಸುವುವು. ಸಿಕ್ಕದ ವೇದಗಳು ಪ್ರಚ್ಛನ್ನ ವೇದಗಳೆನಿಸುವುವು. ಪ್ರಯೋಗದಲ್ಲಿರುವ ವಿಧಿಗಳಿಗೆ ಪ್ರತ್ಯಕ್ಷ ವೇದಮೂಲವು ಸಿಕ್ಕದಿದ್ದರೆ ಪ್ರಚ್ಛನ್ನವೇದದಲ್ಲಿ ಮೂಲವಿದೆಯೆಂದು ಊಹಿಸಲ್ಪಡುತ್ತದೆ. ಪ್ರತ್ಯಕ್ಷ ವೇದಪಠನದಿಂದಲೇ ಸಕಲ ಧರ್ಮಗಳೂ ಗೊತ್ತಾಗುವುದಿಲ್ಲ. ಹಾಗೆ ತಿಳಿಯಲಾಗದವನ್ನು ಆಚಾರಾನುಷ್ಠಾನಗಳಿಂದ ಗೊತ್ತುಮಾಡಿಕೊಳ್ಳಬೇಕು. ಪ್ರತ್ಯಕ್ಷ ಶ್ರುತಿಗೆ ವಿರೋಧವಾದ ಸ್ಮೃತಿಯನ್ನು ತಿರಸ್ಕರಿಸಬೇಕು. ಪ್ರತ್ಯಕ್ಷ ಶ್ರುತಿಗೆ ವಿರೋಧವಲ್ಲದ ಸ್ಮೃತಿಗೆ ಪ್ರತ್ಯಕ್ಷಸ್ಮೃತಿಯಲ್ಲಿ ಮೂಲವು ಸಿಕ್ಕದಿದ್ದರೆ, ಪ್ರಚ್ಛನ್ನ ಶ್ರುತಿಯಲ್ಲಿ ಅದಕ್ಕೆ ಮೂಲವಿದೆಯೆಂದು ಊಹಿಸಬಹುದು.

ಶಾಸ್ತ್ರವಚನಗಳು ಹೀಗಿರುವುದರಿಂದ, ನಾವು ಬಾಲ್ಯವಿವಾಹವನ್ನೂ ಋತುಮತೀವಿವಾಹವನ್ನೂ ಸಹ ಆಚರಿಸಬಹುದಾಗಿದೆಯೆಂದು ಬೇರೇ ಕೆಲವರಮತವಾಗಿರುವುದು.

ಆದರೆ ವೇದರಾಶಿಗಳಲ್ಲಿ ಬಾಲ್ಯವಿವಾಹಾನುಮೋದಕಗಳಾದ ವಚನಗಳು ಅಲ್ಪವಾಗಿಯಾದರೂ ಸಿಕ್ಕದೆ ಅವೆಲ್ಲವೂ ಪ್ರಚ್ಛನ್ನವಾಗಿವೆಯೆಂದು ಹೇಳುವ ಮಾತು ಪರಮಾಶ್ಚರ್ಯಕರವಾಗಿರುವುದು. ವೇದವಿಧಿಗಳನ್ನೇ ಅವಲಂಬಿಸಿ ಗೃಹ್ಯಸೂತ್ರಗಳನ್ನು ರಚಿಸಿರುವ ಸೂತ್ರಕಾರರು ವಿವಾಹದ ನಾಲ್ಕನೆಯ ರಾತ್ರಿಯಲ್ಲಿ ವಧೂವರರಿಗೆ ಸಂಭೋಗವನ್ನು ವಿಧಿಸಿರುವುದರಿಂದಲೂ, ಅನೃತುಮತಿಯ ಸಂಭೋಗವು ವೇದನಿಷಿದ್ಧವಾದುದರಿಂದಲೂ ಬಾಲ್ಯವಿವಾಹವು ವೇದನಿಷಿದ್ಧವೆಂದೇ ಹೇಳಬೇಕಾಗುವುದು. ಬಾಲ್ಯವಿವಾಹಕ್ಕೆ ಪ್ರತ್ಯಕ್ಷ ಶ್ರುತಿಮೂಲವು ಸಿಕ್ಕದವರೆಗೂ ಅದನ್ನಾಚರಿಸದೆ ವೇದೈಕಶರಣರು ಋತುಮತೀವಿವಾಹವನ್ನೆ ಆಚರಿಸತಕ್ಕದೆಂದು ಬೇರೆಕೆಲವರು ಹೇಳುವರು.

ಉಷಸ್ತಿ ಚಕ್ರಾಯಣನ ಹೆಂಡತಿಯು ಅನೃತುಮತಿಯಾಗಿದ್ದಳೆಂದು ಕೆಲವರು ಅರ್ಥಮಾಡಿರುವುದರಿಂದಲೂ ಆತನು ಚಿಕ್ಕವಳನ್ನು ಮದುವೆಯಾದುದರಿಂದ ಧರ್ಮೋಲ್ಲಂಘನ ಮಾಡಿದನೆಂದು ಇತಿಹಾಸದಲ್ಲಿ ಕಂಡುಬಾರದೆ ಇರುವುದರಿಂದಲೂ ಅನೃತುಮತೀವಿವಾಹವು ವೇದಸಮ್ಮತವೆಂದು ಹೇಳಬಹುದಾಗಿದೆ. ಇದಲ್ಲದೆ ಸ್ಮೃತಿ

ಪುರಾಣಗಳಲ್ಲಿ ಅನೃತುಮತೀವಿವಾಹವು ವಿಧಿಸಲ್ಪಟ್ಟಿರುವುದರಿಂದಲೂ ಪರಂಪರಾ ಪ್ರಾಪ್ತವಾದ ನಮ್ಮ ಆಚಾರದಲ್ಲಿ ಅದು ಕಂಡುಬಂದಿರುವುದರಿಂದಲೂ ವೇದಗಳಲ್ಲಿ ಆ ವಿವಾಹ ನಿಷೇಧಕ ವಚನಗಳು ಕಂಡುಬಾರದೆ ಇರುವುದರಿಂದಲೂ, ಅನೃತುಮತೀವಿವಾಹಕ್ಕೆ ನಾವು ಅನುಮೇಯಶ್ರುತಿಮೂಲವನ್ನು ಕಲ್ಪಿಸಬಹುದಾಗಿದೆ. ಹೀಗೆ ಅನುಮೇಯ ಮತ್ತು ಪ್ರತ್ಯಕ್ಷಶ್ರುತಿಗಳಿಗೆ ಅನೃತುಮತೀವಿವಾಹವುಸಮ್ಮತವಾಗಿರುವುದರಿಂದಲೂ ನಮ್ಮ ಆಚರಣೆಯಲ್ಲಿ ಇರುವುದರಿಂದಲೂ ಆ ವಿವಾಹವು ಮುಖ್ಯವಾದುದೆಂದೂ ಶಾಸ್ತ್ರದಲ್ಲಿ ಮಾತ್ರ ಕಂಡುಬಂದಿರುವ ಋತುಮತೀವಿವಾಹವು ಗೌಣವೆಂದೂ ಸಿದ್ಧಾಂತವಾಗುವುದೆಂದು ಕೆಲವರು ಹೇಳುವರು.

ಒಂದುವೇಳೆ ಚಾಕ್ರಾಯಣನ ಹೆಂಡತಿಯು ಅನೃತುಮತಿಯಾಗಿದ್ದಳೆಂದು ಒಪ್ಪಿಕೊಂಡರೆ, ಅದೊಂದೇ ವಚನವು ವೇದಸಮ್ಮತವಾಗುವುದು. ಆದರೆ ಋತುಮತೀವಿವಾಹಪರವಾದ ವೇದವಾಕ್ಯಗಳು ಬಹಳವಾಗಿರುವುವು. ಹೀಗೆ ಭೂಯೋನುಗ್ರಹನ್ಯಾಯವು ಋತುಮತೀವಿವಾಹಪರವಾಗಿರುವುದು. ಇದಲ್ಲದೆ ಅನುಮೇಯಶ್ರುತಿಗಿಂತಲೂ ಪ್ರತ್ಯಕ್ಷಶ್ರುತಿಯು ಶ್ರೇಷ್ಠಪ್ರಮಾಣವಾಗಿರುವುದು. ಪೂರ್ವದಲ್ಲಿ ಋತುಮತೀವಿವಾಹವು ಆಚರಣೆಯಲ್ಲಿದ್ದಿತೆಂದು ಅನೇಕ ಶಾಸ್ತ್ರವಚನಗಳಿಂದಲೂ ಇತಿಹಾಸಗಳಿಂದಲೂ ವ್ಯಕ್ತವಾಗುತ್ತದೆ. ಈಗಲೂ ಯಾವ ಕಾರಣದಿಂದಲಾದರೂ ಋತುಮತೀವಿವಾಹವು ಕೇರಳದೇಶದ ಮತ್ತು ಕನ್ಯಾಕುಬ್ಜದ ಬ್ರಾಹ್ಮಣರಲ್ಲಿಯೂ ಆಚರಣೆಯಲ್ಲಿದೆ. ಅನೇಕ ಕ್ಷತ್ರಿಯರೂ ಕೆಲವು ವೈಶ್ಯರೂ ಈಗಲೂ ಅದನ್ನು ಆಚರಣೆಯಲ್ಲಿಟ್ಟಿರುವರು. ಹೀಗೆ ಭೂಯೋನುಗ್ರಹನ್ಯಾಯದಿಂದಲೂ ಪ್ರತ್ಯಕ್ಷ ಶ್ರುತಿ ಶ್ರೇಷ್ಠತ್ವದಿಂದಲೂ ಈಗಲೂ ಋತುಮತೀವಿವಾಹವು ಕೆಲವರ ಆಚರಣೆಯಲ್ಲಿ ಕಂಡುಬರುವುದರಿಂದಲೂ ಋತುಮತೀವಿವಾಹವೇ ಮುಖ್ಯವೆಂದೂ ಅನೃತುಮತೀವಿವಾಹವು ಗೌಣವೆಂದೂ ನಿರ್ಣಯಿಸತಕ್ಕುದೆಂದು ಬೇರೆ ಕೆಲವರು ಹೇಳುವರು.

ಮೇಲಿನ ವಿಚಾರಗಳಿಂದ ವಿವಾಹ ವಿಷಯದಲ್ಲಿ ಭಿನ್ನಾಭಿಪ್ರಾಯವುಳ್ಳ ಮೂರುಗುಂಪಿನವರಿರುವುದು ವ್ಯಕ್ತವಾಗುವುದು.—

೧. ಋತುಮತೀವಿವಾಹವು ಶಾಸ್ತ್ರನಿಷಿದ್ಧ ಅನೃತುಮತೀವಿವಾಹವೇ ಶಾಸ್ತ್ರಸಮ್ಮತವೆಂದು ಹೇಳುವವರು.

೨. ಋತುಮತೀವಿವಾಹವೇ ಶಾಸ್ತ್ರಸಮ್ಮತ ಅನೃತುಮತೀವಿವಾಹವು ಶಾಸ್ತ್ರಸಮ್ಮತವಲ್ಲವೆಂದು ಹೇಳುವವರು.

೩. ಎರಡುಬಗೆಯ ವಿವಾಹಗಳೂ ಶಾಸ್ತ್ರಸಮ್ಮತವೆಂದು ಹೇಳುವವರು.

ಈ ಮೂರನೆಯ ಗುಂಪಿನಲ್ಲಿ ಪುನಃ ಮೂರುಪ್ರಕಾರವಾಗಿ ಅಭಿಪ್ರಾಯವುಳ್ಳ ಜನರಿರುವರು.—(೧) ಅನೃತುಮತೀವಿವಾಹವು ಮುಖ್ಯವಾದುದು, ಋತುಮತೀವಿವಾಹವು ಗೌಣವಾದುದು ಎಂದು ಹೇಳುವವರು; (೨)ಋತುಮತೀವಿವಾಹವೇ

ಮುಖ್ಯ ಅನೃತುಮತೀವಿವಾಹವು ಗೌಣವೆಂದು ಹೇಳುವವರು; (೩) ಎರಡುಬಗೆಯ ವಿವಾಹಗಳೂ ಸಮಾನವೆಂದು ಹೇಳುವವರು. ಹೀಗೆ ಒಟ್ಟಿನಮೇಲೆ ಐದು ಪಂಗಡದವರಿರುವರು.

ಸ್ವಸಿದ್ಧಾಂತ.

ನಾವೀಗ ಈ ವಿಷಯದಲ್ಲಿ ನಿಷ್ಪಕ್ಷಪಾತವಾಗಿ ನಮಗೆ ತಿಳಿದಮಟ್ಟಿಗೆ ನಿರ್ಣಯಮಾಡಬೇಕಾಗಿರುವುದು. ಶಾಸ್ತ್ರದ ಕಟ್ಟಿಗೆ ಒಳಪಟ್ಟಿರುವಾಗ ಶಾಸ್ತ್ರವಚನಗಳನ್ನನುಸರಿಸಿಯೇ ಸಿದ್ಧಾಂತ ಮಾಡಬೇಕು. ಮೇಲಿನ ಸಕಲವಾದ ವಿಚಾರಗಳಿಂದ ಎರಡುಬಗೆಯ ವಿವಾಹಗಳೂ ಶಾಸ್ತ್ರಸಮ್ಮತವೆಂದು ನಮಗೆ ತೋರುತ್ತದೆ. ಅನೃತುಮತೀವಿವಾಹಪರವಾಗಿ ತಕ್ಕಷ್ಟು ವೇದವಚನಗಳು ಸಿಕ್ಕುವವರೆಗೂ ಋತುಮತೀವಿವಾಹವು ಮುಖ್ಯವೆಂದೂ ಅನೃತುಮತೀ ವಿವಾಹವು ಗೌಣವೆಂದೂ ನಮ್ಮ ಅಭಿಪ್ರಾಯವಾಗಿದೆ. ಅಂಥಾ ವಚನಗಳು ಸಿಕ್ಕಿದ ಬಳಿಕ ಆ ಎರಡು ಬಗೆಯ ವಿವಾಹಗಳೂ ಸಮಾನವೆಂದು ಒಪ್ಪಬಹುದಾಗಿದೆ. ಅನೃತುಮತೀವಿವಾಹವಾಗಲಿ ಅಥವಾ ಋತುಮತೀವಿವಾಹವಾಗಲಿ ಶಾಸ್ತ್ರನಿಷಿದ್ಧವೆಂದು ಹೇಳಲಾಸ್ಪದವಿಲ್ಲ. ಹೀಗೆಂದು ನಮ್ಮ ಸಿದ್ಧಾಂತವಾಗಿರುವುದು.

ಪ್ರಾರ್ಥನೆ.

ಬಾಲ್ಯವಿವಾಹಾಚರಣೆಯಿಂದ ನಮಗೆ ಪ್ರಾಪ್ತವಾಗುತ್ತಿರುವ ಕೇಡುಗಳನ್ನು ನಾವು ಮೊದಲೇ ತಿಳಿಸಿರುವೆವು. ಋತುಮತೀವಿವಾಹವು ಶಾಸ್ತ್ರನಿಷಿದ್ಧವೆಂದು ಹೇಳುವ ಮಾತಿಗೆ ಆಧಾರವೇನೂ ಇಲ್ಲವೆಂದೂ ಅದು ಶಾಸ್ತ್ರಸಮ್ಮತವಾಗಿಯೇ ಇರುವುದೆಂದೂ ಅದನ್ನು ಆಚರಣೆಗೆ ತರಲು ಬಾಧಕವಿಲ್ಲವೆಂದೂ ಮೇಲೆ ಮಾಡಲ್ಪಟ್ಟ ಶಾಸ್ತ್ರವಿಚಾರದಿಂದ ವ್ಯಕ್ತಪಡಿಸಿರುವೆವು. ಈಗಿನಕಾಲಕ್ಕೆ ಋತುಮತೀವಿವಾಹವು ಲಾಭಕರವಾಗಿಯೂ ಕ್ಷೇಮಕರವಾಗಿಯೂ ಇರುವುದರಿಂದ, ಆರ್ಯಮಂಡಲಿಗೆ ಮಂಗಳವನ್ನಪೇಕ್ಷಿಸುವವರೆಲ್ಲರೂ ಋತುಮತೀವಿವಾಹವನ್ನಾಚರಣೆಗೆ ತರಲು ಸಹಾಯಮಾಡಬೇಕಾಗಿ ಪ್ರಾರ್ಥಿಸುವೆವು.

ನಮ್ಮವರಲ್ಲಿ ಈಗ ಎಷ್ಟೋ ಜನರಿಗೆ ಋತುಮತೀವಿವಾಹವನ್ನು ಆಚರಿಸಬೇಕೆಂದು ಮನಸ್ಸಿದ್ದಾಗ್ಯೂ ಹಾಗೆ ಮಾಡಲು ಧೈರ್ಯವಿಲ್ಲದೆ ಹಿಂಜರಿಯುತ್ತಿರುವರು. ಯಾರಾದರೂ ಮುಂದರಿದು ಅದನ್ನು ಮಾಡಿದರೆ ಆಮೇಲೆ ನಾವೂ ಹಾಗೆಮಾಡೋಣವೆಂದು ಹೇಳುತ್ತಿರುವರು. ಹಾಗೆ ಮಾಡಿದರೆ ಸಮಾಜದವರ ದೂಷಣೆಗೆ ಗುರಿಯಾಗುವೆವೆಂದೂ ಬಹಿಷ್ಕೃತರಾಗುವೆವೆಂದೂ ಬಂಧುಮಿತ್ರರಿಂದ ತ್ಯಜಿಸಲ್ಪಡುವುವೆಂದೂ ಅನೇಕರು ಭಯಪಡುವರು. ಇಂಥ ಭೀತಿಯು ಸ್ವಾಭಾವಿಕವಾದುದು. ಇದನ್ನಾಚರಿಸುವವರಿಗೆ ಪ್ರಾರಂಭದಲ್ಲಿ ತೊಂದರೆಗಳು ಇದ್ದೇ ಇರುವುವು.

ಒಂದೊಂದು ಊರಿನಲ್ಲಿಯೂ ಎಂಟು ಹತ್ತು ಮನೆತನದವರು ಒಗ್ಗಟ್ಟಾಗಿ ಸೇರಿಕೊಂಡು ಋತುಮತೀವಿವಾಹವನ್ನಾಚರಿಸಲು ಪ್ರಾರಂಭಿಸಬೇಕು. ಅಂಥ ವಿವಾಹವನ್ನು ಮಾಡಿದವರನ್ನು ನಿಂದಿಸುವುದಿಲ್ಲವೆಂದೂ ಹವ್ಯಕವ್ಯಗಳಲ್ಲಿ ಅವರನ್ನು ತ್ಯಜಿಸುವುದಿಲ್ಲವೆಂದೂ ಒಪ್ಪಂದ ಮಾಡಿಕೊಳ್ಳಬೇಕು. ಹೀಗೆ ಕೆಲವರು ಅದನ್ನು ಪ್ರಾರಂಭಿಸಿದರೆ, ಬೇರೆಯವರು ಅದರಿಂದಾಗುವ ಲಾಭವನ್ನು ಕಂಡು ತಾವೂ ಹಾಗೆಯೇ ಮಾಡಲಾರಂಭಿಸುವರು. ಕ್ರಮೇಣ ಆರ್ಯರೆಲ್ಲರೂ ಸ್ವಾಭಾವಿಕವಾದ ಕ್ಷೇಮಕರವಾದ ಶುಭಕರವಾದ ಋತುಮತೀವಿವಾಹವನ್ನು ಆಚರಿಸುವರೆಂದು ಹಾರೈಸುವೆವು.

ಓಂ ತತ್ ಸತ್.

PRINTED BY J. M. MYSOREVALLA AT THE G. T. A. PRESS, MYSORE.